ಶುಕ್ರವಾರ, ಅಕ್ಟೋಬರ್ 27, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೃತ್ಯ ಪ್ರದರ್ಶನ
ಶ್ರೀನಗರದಲ್ಲಿ ಗುರುವಾರ ನಡೆದ 'ಅಮೃತ ಕಲಶ ಯಾತ್ರೆ'ಯಲ್ಲಿ ಸಾಂಪ್ರದಾಯಿಕ ದಿರಿಸು ಧರಿಸಿ ಯುವತಿಯರು ನೃತ್ಯ ಪ್ರದರ್ಶಿಸಿದರು



ವರ್ಗಾವಣೆಯಲ್ಲಿ ಹಣ ಪಡೆದಿಲ್ಲವೆಂದು ಧರ್ಮಸ್ಥಳಕ್ಕೆ ಬಂದು ಪ್ರಮಾಣ ಮಾಡಲಿ: ಎಚ್‌.ಡಿ. ಕುಮಾರಸ್ವಾಮಿ

ಸಿಎಂ, ಡಿಸಿಎಂಗೆ ಆಣೆ ಪ್ರಮಾಣದ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ನೌಕರರ ವರ್ಗಾವಣೆ, ನೇಮಕಾತಿಯಲ್ಲಿ ಹಣ ಪಡೆದಿಲ್ಲ ಎಂದು ಧರ್ಮಸ್ಥಳ ಅಥವಾ ಚಾಮುಂಡಿ ಸನ್ನಿಧಿಯಲ್ಲಿ ಪ್ರಮಾಣ ಮಾಡಲು ಸಿದ್ಧ. ಹಾಗೆಯೇ, ಕಳೆದ ಐದು ತಿಂಗಳಿನಲ್ಲಿ ಹಣ ಪಡೆದಿಲ್ಲ ಎಂದು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯೂ ಪ್ರಮಾಣ ಮಾಡಲಿ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಮರುಸವಾಲು ಹಾಕಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ‘ಧರ್ಮಸ್ಥಳಕ್ಕೆ ಬಂದು ಪ್ರಮಾಣ ಮಾಡಲಿ ಎಂದು ಸವಾಲು ಹಾಕಿರುವ ಮಾಗಡಿ ಶಾಸಕ ಬಾಲಕೃಷ್ಣ ಅವರ ಸವಾಲು ಸ್ವೀಕರಿಸಿದ್ದೇನೆ’ ಎಂದರು.

‘ರಾಮನಗರ ಬೆಂಗಳೂರಿನ ಭಾಗ ಎನ್ನುವುದೂ ಸೇರಿದಂತೆ ಎಲ್ಲ ವಿಷಯ ಕುರಿತು ಬಹಿರಂಗ ಚರ್ಚೆಗೆ ಸಿದ್ಧ. ಆಡಳಿತದ ಒತ್ತಡದ ಮಧ್ಯೆ ಬಿಡುವಿಲ್ಲದೇ ಇರುವ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಸಮಯ ನಿಗದಿಮಾಡಲಿ. ಅಂದೇ ಬಹಿರಂಗ ಚರ್ಚೆಗೆ ಬರುತ್ತೇನೆ. ಅಧಿವೇಶನದಲ್ಲೂ ಸುದೀರ್ಘ ಚರ್ಚೆ ನಡೆಯಲಿ’ ಎಂದರು.

‘ಅವರೇನು ಆಸ್ತಿ ಮಾಡಿಲ್ಲವಾ ಎಂದು ಶಾಸಕ ಬಾಲಕೃಷ್ಣ ಪ್ರಶ್ನಿಸಿದ್ದಾರೆ. ಹೌದು ಹಿಂದೆ ಎಕರೆಗೆ ₹4 ಸಾವಿರದಿಂದ ₹12 ಸಾವಿರ ಕೊಟ್ಟು ಜಮೀನು ಖರೀದಿಸಿದ್ದೆ. ಇಷ್ಟು ವರ್ಷ ರಾಜಕೀಯ ಮಾಡಿ ನಾವು ಭಿಕಾರಿಗಳಾಗಿ ಬದುಕಬೇಕಾ? ಹಾಗಂತ ನಾವು ಸರ್ಕಾರದ ದುಡ್ಡು ಹೊಡೆದು ಆಸ್ತಿ ಮಾಡಿಲ್ಲ. ಜೀವನಕ್ಕೆ ಎಷ್ಟು ಬೇಕೋ ಅಷ್ಟು ಮಾಡಿದ್ದೇವೆ. ನಮ್ಮ ನಡವಳಿಕೆ ನೋಡಿ ಚುನಾವಣಾ ಸಮಯದಲ್ಲಿ ಜನರು ದೇಣಿಗೆ ಕೊಟ್ಟಿದ್ದಾರೆ’ ಎಂದರು.

‘ರಾಮನಗರ ಜಿಲ್ಲೆಯಲ್ಲಿ ಎಷ್ಟು ಕೈಗಾರಿಕೆಗಳಿವೆ ಎನ್ನುವ ಮಾಹಿತಿಯೇ ಅವರ ಬಳಿ ಇಲ್ಲ. ತಲಾ ಆದಾಯದಲ್ಲಿ ರಾಜ್ಯದಲ್ಲೇ ಜಿಲ್ಲೆ ಮೊದಲ ಸ್ಥಾನದಲ್ಲಿದೆ. ಯಾರದೋ ಹಿತಾಸಕ್ತಿಗಾಗಿ ರಾಮನಗರವನ್ನು ಬೆಂಗಳೂರು ದಕ್ಷಿಣ ಜಿಲ್ಲೆಯಾಗಿ ಬದಲಿಸಲು ಅವಕಾಶ ನೀಡುವುದಿಲ್ಲ. ದಕ್ಷಿಣ ಜಿಲ್ಲೆ ಮಾಡಿ ಯಾರಿಗೆ ದಕ್ಷಿಣೆ ಕೊಡುತ್ತಾರೆ? ನನಗೆ ರಾಮನಗರದ ಜತೆ ಭಾವನಾತ್ಮಕ ಸಂಬಂಧವಿದೆ. ಉಪ ಮುಖ್ಯಮಂತ್ರಿ ತಮ್ಮ ನಿರ್ಧಾರದಿಂದ ಹಿಂದೆ ಸರಿಯದೇ ಇದ್ದರೆ ಆಮರಣಾಂತ ಉಪವಾಸ ಕೈಗೊಳ್ಳುವೆ. ಅರೋಗ್ಯ ಕೈಕೊಟ್ಟರೂ ಹೆದರುವುದಿಲ್ಲ’ ಎಂದರು.

ನಾನು ಸಿದ್ದರಾಮಯ್ಯಗೆ ರಾಜಕೀಯವಾಗಿ ವಿಲನ್. ಇಲ್ಲ ಎಂದವರು ಯಾರು? ಅವರಿಗೆ ನಾನು ವಿಲನ್ ಆಗದೇ ಸ್ನೇಹಿತನಾಗಲು ಸಾಧ್ಯವೇ?
ಎಚ್‌.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

8 ಎಕರೆಯಲ್ಲಿ ಅಪಾರ್ಟ್‌ಮೆಂಟ್

ನೈಸ್ ರಸ್ತೆಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ನೋಟಿಫಿಕೇಶನ್ ಮಾಡಿದ್ದ ಹೊಸಕೆರೆ ಹಳ್ಳಿ ವ್ಯಾಪ್ತಿಯ ಎಂಟು ಎಕರೆಯನ್ನು ಎನ್‌ಒಸಿ ಮೂಲಕ ಮರಳಿ ಪಡೆದ ಸಂಸದ ಡಿ.ಕೆ. ಸುರೇಶ್ ಕುಟುಂಬ ಶೋಭಾ ಡೆವಲಪರ್ಸ್ ಸಹಯೋಗದಲ್ಲಿ ವಿಲಾಸಿ ಅಪಾರ್ಟ್‌ಮೆಂಟ್ ನಿರ್ಮಿಸಿದೆ. ಬಡ ರೈತರ ಭೂಮಿಯಲ್ಲಿ ಕೋಟ್ಯಂತರ ಲಾಭ ಮಾಡಿಕೊಂಡಿದ್ದಾರೆ ಎಂದು ದೂರಿದ ಕುಮಾರಸ್ವಾಮಿ ದಾಖಲೆಗಳನ್ನು ಬಿಡುಗಡೆ ಮಾಡಿದರು.

ತಾವರೆಕೆರೆ ಬಳಿಯ ಒಂದೇ ಬೌಂಡರಿಯ 900 ಎಕರೆಯಲ್ಲಿ 350 ಎಕರೆ ಕಬಳಿಸಿದ್ದಾರೆ. ನೈಸ್ ರಸ್ತೆಯ ವ್ಯಾಪ್ತಿಯ ತಮ್ಮ ಸಾವಿರಾರು ಆಸ್ತಿಯ ಹಿತಾಸಕ್ತಿಗಾಗಿಯೇ ಅವರ ಬೆಂಬಲಕ್ಕೆ ನಿಂತಿದ್ದಾರೆ. ರಾಮನಗರ ಜಿಲ್ಲೆಯಲ್ಲಿ ಹಾಲು ಒಕ್ಕೂಟದ ಘಟಕ ಸ್ಥಾಪನೆಗೆ ರೈತರಿಂದ ಖರೀದಿಸಿದ 50 ಎಕರೆ ಭೂಮಿಯಲ್ಲೂ ಅವರ ಪಟಾಲಂ ಲೂಟಿ ಹೊಡೆದಿದೆ ಎಂದು ದೂರಿದರು.

ಅಧಿವೇಶನದಲ್ಲಿ ಚರ್ಚೆಗೆ ಸಿದ್ಧ: ಡಿಕೆಶಿ

ಬೆಂಗಳೂರು: ‘ನಾನು ಏನು ಮಾಡಿದ್ದೇನೆ? ಕುಮಾರಸ್ವಾಮಿ ಏನು ಮಾಡಿದ್ದಾರೆ? ಎಂಬ ವಿಷಯದ ಬಗ್ಗೆ ಗಾಳಿಯಲ್ಲಿ ಗುಂಡು ಹೊಡೆಯುವುದು ಬೇಡ. ದಾಖಲೆ ಸಹಿತ ಅಧಿವೇಶನದಲ್ಲಿ ಚರ್ಚೆ ಮಾಡೋಣ. ಕುಮಾರಸ್ವಾಮಿಯ ಸವಾಲು ಸ್ವೀಕರಿಸಿದ್ದೇನೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತೊಮ್ಮೆ ಸವಾಲು ಹಾಕಿದರು.

ಕುಮಾರಸ್ವಾಮಿ ಅವರು ಸವಾಲು ಸ್ವೀಕರಿಸಿರುವ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗಳಿಗೆ ಗುರುವಾರ ಉತ್ತರಿಸಿದ ಅವರು, ‘ಎಲ್ಲವನ್ನೂ ಅಧಿವೇಶನದಲ್ಲಿ ಬಿಚ್ಚಿಡೋಣ. ಅವರ ಬಳಿ ಇರುವ ಸರಕುಗಳನ್ನು ತಂದು ಅವರು ಮಾತನಾಡಲಿ. ನನ್ನ ಬಳಿ ಇರುವ ದಾಖಲೆಗಳನ್ನು ಮುಂದಿಟ್ಟು ನಾನು ಮಾತನಾಡುತ್ತೇನೆ’ ಎಂದರು.

‘ಈ ಹಿಂದೆಯೂ ನಾನು ಇಂಥ ಬಹಿರಂಗ ಸವಾಲು ಸ್ವೀಕರಿಸಿ, ಉತ್ತರ ಕೊಟ್ಟಿದ್ದೇನೆ. ಬಳಿಕ ನನ್ನ ಬಳಿ ಬಂದು ಕ್ಷಮೆ ಕೇಳಿದ್ದೂ ಇದೆ’ ಎಂದರು.

‘ಕುಮಾರಸ್ವಾಮಿ ಕೊಡುಗೆ: ದಾಖಲೆ ನೋಡಿ’

ಹಾಸನ: ‘ರಾಮನಗರಕ್ಕೆ ಎಚ್‌.ಡಿ. ಕುಮಾರಸ್ವಾಮಿ ಅವರು ಏನೇನು ಮಾಡಿದ್ದಾರೆ ಎಂಬುದನ್ನು ದಾಖಲೆ ತೆಗೆದು ನೋಡಿದರೆ ಕಾಂಗ್ರೆಸ್‌ನವರಿಗೆ ಗೊತ್ತಾಗುತ್ತದೆ’ ಎಂದು ಶಾಸಕ ಎಚ್‌.ಡಿ. ರೇವಣ್ಣ ತಿರುಗೇಟು ನೀಡಿದರು.

‘ಸ್ವಹಿತಕ್ಕಾಗಿ ರಾಮನಗರ ಜಿಲ್ಲೆ ಮಾಡಿದರು’ ಎಂಬ ಡಿ.ಕೆ. ಶಿವಕುಮಾರ್ ಹೇಳಿಕೆಗೆ ಹೊಳೆನರಸೀಪುರ ತಾಲ್ಲೂಕಿನ ಹಂಗರಹಳ್ಳಿಯಲ್ಲಿ ಗುರುವಾರ ಪ್ರತಿಕ್ರಿಯಿಸಿದ ಅವರು, ‘ರಾಮನಗರ ಜಿಲ್ಲೆ ಮಾಡಿದ್ದಲ್ಲದೇ, ₹120 ಕೋಟಿ ವೆಚ್ಚದಲ್ಲಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ನಿರ್ಮಿಸಿದ್ದಾರೆ. ಅದರಲ್ಲಿ ಕುಮಾರಸ್ವಾಮಿ ಮಕ್ಕಳು ಓದುತ್ತಿದ್ದಾರಾ’ ಎಂದು ಪ್ರಶ್ನಿಸಿದರು.

‘ರಾಮನಗರವನ್ನು ಜಿಲ್ಲಾ ಕೇಂದ್ರ ಮಾಡಿ, ಕೆಂಪೇಗೌಡರ ಹೆಸರಿಡಬೇಕು ಎಂದು ಕುಮಾರಸ್ವಾಮಿ ತೀರ್ಮಾನ ಕೈಗೊಂಡಿದ್ದರು. ಕೆಲವರು ರಾಮನಗರ ಜಿಲ್ಲೆ ಎಂದು ಹೆಸರಿಡಬೇಕು ಎಂದು ಹೇಳಿದ್ದರಿಂದ, ಅದೇ ನಿರ್ಧಾರ ಮಾಡಿದ್ದರು’ ಎಂದರು.

‘ರಾಮನಗರದಲ್ಲಿ ವೈದ್ಯಕೀಯ ಕಾಲೇಜು, ರಾಜೀವ್ ಗಾಂಧಿ ಅರೋಗ್ಯ ವಿಶ್ವವಿದ್ಯಾಲಯ ನಿರ್ಮಾಣಕ್ಕೆ 10 ವರ್ಷದಿಂದ ಯಾರು ತಡೆಯೊಡ್ಡಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಕಾಲ ಬಂದಾಗ ಉತ್ತರ ನೀಡುತ್ತೇನೆ. ರಾಮನಗರ ಜಿಲ್ಲೆ ತೆಗೆಯಲಿ ನೋಡೋಣ. ಆಗ ಎಲ್ಲವನ್ನೂ ಮಾತನಾಡುತ್ತೇನೆ’ ಎಂದು ಪ್ರತಿಕ್ರಿಯೆ ನೀಡಿದರು.

ಸುದ್ದಿ 2 ನಿಮಿಷ

ವಿಧಾನಸೌಧದ ಕೊಠಡಿ ನವೀಕರಣ ಸಮರ್ಥಿಸಿಕೊಂಡ ಸಚಿವ ಡಿ.ಕೆ.ಶಿ

ಬೆಂಗಳೂರು: ವಿಧಾನಸೌಧದ ತಮ್ಮ ಕಚೇರಿ ನವೀಕರಣವನ್ನು ಸಚಿವ ಡಿ.ಕೆ. ಶಿವಕುಮಾರ್ ಸಮರ್ಥಿಸಿಕೊಂಡರು.

ಗುರುವಾರ ಕೊಠಡಿ ನವೀಕರಣ ಅಗತ್ಯದ ಬಗ್ಗೆ ಬಿಜೆಪಿ ಮಾಡಿರುವ ಟೀಕೆ ಬಗ್ಗೆ ಕೇಳಿದಾಗ,



‘ಕಚೇರಿಯಲ್ಲಿ ನಾನು ಅನೇಕ ಗಣ್ಯರನ್ನು ಭೇಟಿ ಮಾಡಬೇಕಾಗುತ್ತದೆ. ವಿಧಾನಸೌಧಕ್ಕೆ ನೆದರ್‌ಲ್ಯಾಂಡ್ಸ್ ಪ್ರಧಾನಿ ಬಂದಿದ್ದಾಗ ಸಚಿವ ಎಂ.ಬಿ. ಪಾಟೀಲರ ಕೊಠಡಿಗೆ ತೆರಳಿ ನಾನು ಭೇಟಿ ಮಾಡಬೇಕಾಯಿತು. ಗಣ್ಯರು ಭೇಟಿಗೆ ಬಂದಾಗ ಗೌರವ ನೀಡಲು ಅಚ್ಚುಕಟ್ಟಾದ ಕೊಠಡಿ, ಸೂಕ್ತ ಸ್ಥಳಾವಕಾಶ ಇರಬೇಕು. ನಾವು ನಮ್ಮ ಮಣ್ಣಿನ ಸಂಸ್ಕೃತಿ ಪಾಲಿಸಬೇಕು. ಬೆಂಗಳೂರು ಹಾಗೂ ಇಂಡಿಯಾವನ್ನು ಉತ್ತಮವಾಗಿ ಬಿಂಬಿಸಬೇಕು. ಅದಕ್ಕಾಗಿ ನವೀಕರಿಸುತ್ತಿದ್ದೇನೆ. ಬಿಜೆಪಿಯವರಿಗೆ ಸಾಮಾನ್ಯ ಜ್ಞಾನ ಇಲ್ಲ’ ಎಂದರು.

ನವಿಲು ಮಾಂಸ ತಿಂದ ಮೂವರ ಬಂಧನ

ತುಮಕೂರು: ತಾಲ್ಲೂಕಿನ ಪಂಡಿತನಹಳ್ಳಿ ಗ್ರಾಮದ ಹೊರ ವಲಯದಲ್ಲಿ ಬುಧವಾರ ರಾತ್ರಿ ನವಿಲು ಮಾಂಸ ತಿನ್ನುತ್ತಿದ್ದ ಮೂವರನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಒಡಿಶಾದ ಬಿಟ್ಟಿಂಗ್ ನಾಯಕ್, ಬೈಷಾಕ್‌ದಾವು, ದುಬಾ ಕಾಪತ್ ಬಂಧಿತ ಆರೋಪಿಗಳು. ಪಂಡಿತನಹಳ್ಳಿ ಹತ್ತಿರದ ಇಟ್ಟಿಗೆ ಕಾರ್ಖಾನೆಯಲ್ಲಿ ಆರೋಪಿಗಳು ಕೆಲಸ ಮಾಡುತ್ತಿದ್ದರು.

ಗ್ರಾಮೀಣ ಭಾಗದ ವಿವಿಧ ಕಡೆಗಳಲ್ಲಿ ಹಲವು ದಿನಗಳಿಂದ ನವಿಲುಗಳನ್ನು ಕೊಂದು ಮಾಂಸ ತಿನ್ನುತ್ತಿದ್ದರು. ಮಾಹಿತಿ ಮೇರೆಗೆ ದಾಳಿ ನಡೆಸಿದ ಅರಣ್ಯ ಅಧಿಕಾರಿಗಳು ಆರೋಪಿಗಳನ್ನು ಬಂಧಿಸಿ 1.5 ಕೆ.ಜಿ ಬೇಯಿಸಿದ ನವಿಲು ಮಾಂಸ, 500 ಗ್ರಾಂ ಹಸಿ ಮಾಂಸ ವಶಕ್ಕೆ ಪಡೆದಿದ್ದಾರೆ.

ಹುಲಿ ಉಗುರಿನ ಲಾಕೆಟ್: ಇಬ್ಬರು ಅರ್ಚಕರ ಬಂಧನ

ಬಾಳೆಹೊನ್ನೂರು (ಚಿಕ್ಕಮಗಳೂರು): ಹುಲಿ ಉಗುರಿನ ಲಾಕೆಟ್ ಹೊಂದಿದ್ದ ಇಬ್ಬರು ಅರ್ಚಕರನ್ನು ಅರಣ್ಯ ಇಲಾಖೆ ಅಧಿಕಾರಿಗಳು ಗುರುವಾರ ಬಂಧಿಸಿದ್ದಾರೆ.



ಕೃಷ್ಣಾನಂದ ಹೊಳ್ಳ

ಖಾಂಡ್ಯ ಗ್ರಾಮದ ಮಾರ್ಕಂಡೇಶ್ವರ ದೇವಾಲಯದ ಅರ್ಚಕರಾದ ಕೃಷ್ಣಾನಂದ ಹೊಳ್ಳ, ನಾಗೇಂದ್ರ ಜೋಯಿಸ್ ಬಂಧಿತರು. ಅವರಿಂದ ಹುಲಿ ಉಗುರಿನ ಮೂರು ಲಾಕೆಟ್ ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಬ್ಬರು ಅರ್ಚಕರ ಬಳಿ ಹುಲಿ ಉಗುರಿನ ಲಾಕೆಟ್ ಇರುವುದಾಗಿ ವ್ಯಕ್ತಿಯೊಬ್ಬರು ದೂರು ನೀಡಿದ್ದರು. ಇಬ್ಬರ ಮನೆಗೂ ಭೇಟಿ ನೀಡಿ ತಪಾಸಣೆ ನಡೆಸಿದಾಗ ಹುಲಿ ಉಗುರಿರುವ ಮೂರು ಲಾಕೆಟ್‌ಗಳು ದೊರೆತಿವೆ. ಇಬ್ಬರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಕೃಷ್ಣಾನಂದ ಹೊಳ್ಳ ಅವರನ್ನು ನ.6ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಸಚಿವೆ ಪುತ್ರನ ಕೊರಳಲ್ಲಿ ಹುಲಿ ಉಗುರಿನ ಸರ

ಬೆಳಗಾವಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರ ಪುತ್ರ ಮೃಣಾಲ್ ಮತ್ತು ಸಂಬಂಧಿ ರಜತ್ ಉಳ್ಳಾಗಡ್ಡಿಮಠ ಅವರ ಕೊರಳಲ್ಲಿ ಹುಲಿ ಉಗುರಿನ ಸರ ಇರುವ ಚಿತ್ರ ಸಾಮಾಜಿಕ ಜಾಲ ತಾಣಗಳಲ್ಲಿ ಹರಿದಾಡುತ್ತಿದೆ. ಮೃಣಾಲ್ ಮದುವೆ ಸಮಾರಂಭದಲ್ಲಿ ಧರಿಸಿದ ಚಿನ್ನದ ಸರಗಳಲ್ಲಿ ಒಂದೊಂದು ಹುಲಿ ಉಗುರು ಇವೆ. ತಮ್ಮ ಫೇಸ್‌ಬುಕ್ ಪುಟದಲ್ಲಿ ಹಾಕಿದ ಫೋಟೊಗಳು ಎಲ್ಲೆಡೆ ಹರಿದಾಡುತ್ತಿವೆ. ‘ಸರವನ್ನು ತಪಾಸಣೆ ಮಾಡಿದ ಬಳಿಕ, ನೈಜತೆ ಆಧರಿಸಿ ಮುಂದಿನ ಕ್ರಮ ತಗೆದುಕೊಳ್ಳಲಾಗುವುದು’ ಎಂದಿದ್ದಾರೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಶಂಕರ ಕಲ್ಲೋಳಿಕರ.



ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಚಾಮುಂಡೇಶ್ವರಿ ರಥೋತ್ಸವ ಅಪಾರ ಜನಸ್ತೋಮದ ನಡುವೆ ಗುರುವಾರ ಸಂಭ್ರಮದಿಂದ ನೆರವೇರಿತು ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.

ಬಿಜೆಪಿ ಮುಖಂಡನ ಮನೆಯಲ್ಲಿ ಶೋಧ

ವಿಜಯಪುರ: ಬಿಜೆಪಿ ಮುಖಂಡ ಹಾಗೂ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆ ಮಾಜಿ ಅಧ್ಯಕ್ಷ ವಿಜುಗೌಡ ಪಾಟೀಲ ಪುತ್ರ ಶಾಶ್ವತಗೌಡ ಪಾಟೀಲ ಅವರು ಪೆಂಡೆಂಟ್‌ನಲ್ಲಿ ಹುಲಿ ಉಗುರು ಹಾಕಿದ ಚಿತ್ರ ಜಾಲತಾಣದಲ್ಲಿ ಹರಿದಾಡುತ್ತಿದ್ದಂತೆ ಬಬಲೇಶ್ವರ ನಾಕಾ ಬಳಿ ಇರುವ ಅವರ ಮನೆಯ ಮೇಲೆ ಗುರುವಾರ ಬೆಳಿಗ್ಗೆ ಅರಣ್ಯ ಅಧಿಕಾರಿಗಳು ದಾಳಿ ನಡೆಸಿ, ಪರಿಶೀಲಿಸಿದರು.

‘ವಿಜುಗೌಡರ ಮನೆಯಲ್ಲಿ ಪರಿಶೀಲಿಸಿದಾಗ ಎರಡು ಹುಲಿ ಉಗುರು ಪತ್ತೆಯಾಗಿವೆ. ಅವುಗಳನ್ನು ವಶಕ್ಕೆ ಪಡೆದು, ಅಸಲಿ ಅಥವಾ ನಕಲಿ ಎಂಬುದನ್ನು ಖಚಿತ ಪಡಿಸಿಕೊಳ್ಳಲು ಹೈದರಾಬಾದ್‌ನಲ್ಲಿರುವ ಅರಣ್ಯ ಇಲಾಖೆಯ ಸಿಸಿಎಂಬಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿ ಬಂದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಶಿವಶರಣಯ್ಯ ತಿಳಿಸಿದರು.

‘ಹುಲಿ ಉಗುರು ಮಾದರಿಯನ್ನು ಏಳು ವರ್ಷಗಳ ಹಿಂದೆ ನಾನೇ ಖರೀದಿಸಿ, ಚಿನ್ನದಲ್ಲಿ ಪೆಂಡೆಂಟ್ ಮಾಡಿಸಿ, ನನ್ನ ಮಗ ಶಾಶ್ವತಗೌಡ ಪಾಟೀಲನಿಗೆ ನೀಡಿದ್ದೆ. ಅದು ಹುಲಿಯ ಅಸಲಿ ಉಗುರು ಅಲ್ಲ’ ಎಂದು ವಿಜುಗೌಡ ಪಾಟೀಲ ತಿಳಿಸಿದರು.

‘ಅರಣ್ಯ ಇಲಾಖೆಯ ಯಾವುದೇ ತನಿಖೆಗೆ ನಾವು ಸಿದ್ಧ. ನಮ್ಮ ಮಗನ ಫೋಟೋ ಇಟ್ಟುಕೊಂಡು ಕೆಲವರು ಚಿಲ್ಲರೆ ರಾಜಕಾರಣ ನಡೆಸಿದ್ದಾರೆ. ಅವರದ್ದು ನನ್ನ ಬಳಿ ಬಹಳ ಇದೆ’ ಎಂದರು.



ಕುಮಟಾದ ನುಸಿಕೋಟೆಯಲ್ಲಿ ಪತ್ತೆಯಾದ ಏಡಿ ಕಲ್ಲು

ಅಪರೂಪದ ಏಡಿ ಕಲ್ಲು ಪತ್ತೆ

ಕಾರವಾರ: ಕುಮಟಾ ತಾಲ್ಲೂಕಿನ ನುಸಿಕೋಟೆ ಬಳಿ ಮೀನುಗಾರರೊಬ್ಬರಿಗೆ ಕಲ್ಲಾಗಿ ರೂಪುಗೊಂಡ ಏಡಿಯ ದೇಹ ಪತ್ತೆಯಾಗಿದ್ದು, ಇದು ನೂರಾರು ವರ್ಷಗಳ ಹಳೆಯ ಪಳೆಯುಳಿಕೆ ಇರಬಹುದು ಎಂದು ಅಂದಾಜಿಸಲಾಗಿದೆ.

ಮೀನುಗಾರಿಕೆ ವೇಳೆ ಅಘನಾಶಿನಿ ನದಿಯಲ್ಲಿ ಮೀನುಗಾರ ಈಶ್ವರ ಹರಿಕಂತ್ರ ಎಂಬವರಿಗೆ ಏಡಿ ಕಲ್ಲು ಸಿಕ್ಕಿದ್ದು, ಅದನ್ನು ಅವರು ಕಾರವಾರದ ವಿನಾಯಕ ಹರಿಕಂತ್ರ ಎಂಬವರಿಗೆ ನೀಡಿದರು. ಅವರು ಕಡಲಜೀವಶಾಸ್ತ್ರಜ್ಞರ ಗಮನಕ್ಕೆ ತಂದರು.

‘ಏಡಿ ಕಲ್ಲುಗಳು ಸಮಾನ್ಯವಾಗಿ ಬಂಡೆಕಲ್ಲುಗಳಿರುವ ಕಡಲತೀರದಲ್ಲಿ ಪತ್ತೆಯಾಗುತ್ತವೆ. ಅಘನಾಶಿನಿ ನದಿಯಲ್ಲಿ ಕಾಣಸಿಕ್ಕಿದ್ದು ಅಪರೂಪ’ ಎಂದು ಕಡಲಜೀವಶಾಸ್ತ್ರಜ್ಞ ವಿ.ಎನ್. ನಾಯಕ ತಿಳಿಸಿದರು.

‘ಏಡಿ ಕಲ್ಲು ಏಡಿಯ ಪಳೆಯುಳಿಕೆ. ನೂರು ವರ್ಷಗಳದ್ದು ಇರಬಹುದು. ಆದರೆ, ಕಾರ್ಬನ್ ಡೇಟಿಂಗ್‌ಗೆ ಒಳಪಡಿಸದೇ, ಅದರ ನಿಖರ ಆಯಸ್ಸು ಹೇಳಲು ಆಗದು’ ಎಂದು ಪುರಾತತ್ವಶಾಸ್ತ್ರಜ್ಞ ಪ್ರೊ.ರವಿ ಕೋರೆಶೆಟ್ಟರ್ ಮಾಹಿತಿ ನೀಡಿದರು.

ವನ್ಯಜೀವಿ ಉತ್ಪನ್ನ ವಾಪಸಿಗೆ ಅವಕಾಶ: ಚಿಂತನೆ

ಉಗುರಿರುವ ಆಭರಣ ತಯಾರಿಕೆಯೂ ಶಿಕ್ಷಾರ್ಹ ಅಪರಾಧ: ಸಚಿವ ಈಶ್ವರ್ ಖಂಡ್ರೆ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಲಿ ಉಗುರೂ ಸೇರಿ ಅಕ್ರಮವಾಗಿ ವನ್ಯಜೀವಿ ಉತ್ಪನ್ನಗಳನ್ನು ಇಟ್ಟುಕೊಂಡಿರುವವರು ಅವುಗಳನ್ನು ಸರ್ಕಾರಕ್ಕೆ ಮರಳಿಸಲು ಕೊನೆಯ ಅವಕಾಶ ನೀಡುವ ಕಾನೂನು ಸಾಧ್ಯತೆಗಳನ್ನು ಪರಾಮರ್ಶೆ ನಡೆಸಲಾಗುತ್ತಿದೆ ಎಂದು ಅರಣ್ಯ, ವನ್ಯಜೀವಿ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಹೇಳಿದರು.

ಗುರುವಾರ ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ತಮ್ಮ ಪೂರ್ವಜರು ಹೊಂದಿದ್ದ ವನ್ಯಜೀವಿ ಅಂಗಾಂಗದಿಂದ ಮಾಡಿದ ಟ್ರೋಫಿ, ಫಲಕ, ಪೆಂಡೆಂಟ್ ಸೇರಿ ಯಾವುದೇ ಉತ್ಪನ್ನವನ್ನು ಅರಣ್ಯ ಇಲಾಖೆಯಿಂದ ದೃಢೀಕರಿಸಿಕೊಂಡು ಮಾಲೀಕತ್ವದ ಹಕ್ಕು ಪಡೆದುಕೊಳ್ಳಲು 2003ರವರೆಗೆ ಹಲವು ಅವಕಾಶಗಳನ್ನು ನೀಡಲಾಗಿತ್ತು. ಹಲವರು ತಮ್ಮ ಬಳಿ ಇದ್ದ ವನ್ಯಜೀವಿ ಉತ್ಪನ್ನಗಳಿಗೆ ಮಾಲೀಕತ್ವದ ಹಕ್ಕು ಪಡೆದಿದ್ದಾರೆ. ಇನ್ನೂ ಅನೇಕರು ದೃಢೀಕರಣ ಮತ್ತು ಪ್ರಮಾಣ ಪತ್ರ ಪಡೆದಿಲ್ಲ ಎಂದು ಹೇಳಿದರು.

‘ಗ್ರಾಮೀಣ ಪ್ರದೇಶದ ಕೆಲವರ ಮನೆಗಳಲ್ಲಿ ಜಿಂಕೆ ಚರ್ಮ, ಆನೆದಂತದಿಂದ ಮಾಡಿದ ಕಲಾಕೃತಿಗಳು, ಜಿಂಕೆ ಮತ್ತು ಸಾರಂಗದ ಕೊಂಬು ಇತ್ಯಾದಿಗಳನ್ನು ಇಟ್ಟುಕೊಂಡಿರುತ್ತಾರೆ. ಇದು ಅಪರಾಧ ಎಂಬುದೂ ಅವರಿಗೆ ತಿಳಿದಿಲ್ಲ. ವರ್ತೂರು ಸಂತೋಷ್ ಪ್ರಕರಣ ವರದಿಯಾದ ಬಳಿಕ, ವನ್ಯಜೀವಿ ಉತ್ಪನ್ನಗಳ ಅಕ್ರಮ ದಾಸ್ತಾನಿನ ಬಗ್ಗೆ ಹೆಚ್ಚಾಗಿ ದೂರುಗಳು ಬರುತ್ತಿವೆ. ಕಾನೂನಿನ ಅರಿವು ಇಲ್ಲದ ಜನ ಸಾಮಾನ್ಯರಿಗೆ ಆಗುವ ತೊಂದರೆ ತಪ್ಪಿಸಲು ಕೊನೆಯ ಒಂದು ಬಾರಿ ಅವಕಾಶ ನೀಡಲು ಚಿಂತನೆ ನಡೆಸಿದ್ದೇವೆ. ಈ ಮೂಲಕ ಈ ವಿಚಾರಕ್ಕೆ ಇತಿಶ್ರೀ ಹಾಡಲು ತೀರ್ಮಾನಿಸಲಾಗಿದೆ’ ಎಂದರು.

ಅಳಿವಿನಂಚಿನಲ್ಲಿರುವ ಹುಲಿ, ಚಿರತೆ, ಚಿಂಕಾರ, ಕೃಷ್ಣಮೃಗ, ಸಾಂಬಾರ್, ಕರಡಿ ಸೇರಿ ಹಲವು ವನ್ಯಜೀವಿಗಳನ್ನು ಪರಿಚ್ಛೇದ 1 ರಲ್ಲಿ ಪಟ್ಟಿ ಮಾಡಲಾಗಿದ್ದು, ಇಂತಹ ಪ್ರಾಣಿಗಳನ್ನು ಕೊಲ್ಲುವುದು, ಬೇಟೆ ಆಡುವುದು, ಅಂತಹ ಪ್ರಾಣಿಗಳ ದೇಹದ ಯಾವುದೇ ಭಾಗದಿಂದ ತಯಾರಿಸಿದ ವಸ್ತುಗಳನ್ನು ಆಲಂಕಾರಿಕವಾಗಿ ಮನೆಯಲ್ಲಿಡುವುದು, ಧರಿಸುವುದು ಕೂಡ ಅಪರಾಧ ಎಂದರು.

ಹುಲಿ ಬೇಟೆಗಾರನ ಸೆರೆ: ಇತ್ತೀಚೆಗೆ ಬೆಳಗಾವಿ ವಿಭಾಗದಲ್ಲಿ ಖಾನಾಪುರ ಬಳಿಯ ಜಳಗಾ ಅರಣ್ಯದ ವ್ಯಾಪ್ತಿಯಲ್ಲಿ ಮಧ್ಯಪ್ರದೇಶದ ಚಿಕ್ಕಾ ಅಲಿಯಾಸ್ ಕೃಷ್ಣಾ ಪಾಟ್ಲೆ ಪವಾರ್ ಎಂಬ ಹುಲಿ ಬೇಟೆಗಾರನನ್ನು ಬಂಧಿಸಲಾಗಿದೆ. ಆತನ ವಿರುದ್ಧ ಹಲವು ರಾಜ್ಯಗಳಲ್ಲಿ ದೂರು ದಾಖಲಾಗಿದೆ. ಕಳ್ಳಬೇಟೆ ನಿಗ್ರಹಕ್ಕೂ ಕ್ರಮಕೈಗೊಂಡಿದೆ ಎಂದರು.

ಚಿನ್ನಾಭರಣ ತಯಾರಕರಿಗೂ ಸೂಚನೆ: ಎಲ್ಲ ಚಿನ್ನಾಭರಣ ಮಳಿಗೆಗಳಲ್ಲಿ ತಮ್ಮಲ್ಲಿ ವನ್ಯಜೀವಿಯ ಯಾವುದೇ ಆಭರಣ ತಯಾರಿಸುವುದಿಲ್ಲ ಮತ್ತು ಮಾರಾಟ ಮಾಡುವುದಿಲ್ಲ. ಇದು ಶಿಕ್ಷಾರ್ಹ ಅಪರಾಧ ಎಂಬ ಫಲಕ ಹಾಕುವಂತೆ ಸೂಚಿಸಲಾಗುವುದು ಎಂದು ಹೇಳಿದರು.

ಮುಖ್ಯಾಂಶಗಳು

- ಅರಣ್ಯ ಇಲಾಖೆಯಲ್ಲಿ 4 ಸಾವಿರ ಹುದ್ದೆ ಖಾಲಿ ಇದ್ದು, 800 ಹುದ್ದೆ ಭರ್ತಿಗೆ ಅನುಮತಿ
- ಅರಣ್ಯಕ್ಕೆ ಸಂಬಂಧಿಸಿದ ದೂರು, ಮಾಹಿತಿ ಪಡೆಯಲು 1926 ಸಹಾಯವಾಣಿ
- ಹುಲಿ ಉಗುರಿನ ಲಾಕೆಟ್ ಇರುವ ಸರ ಧರಿಸಿರುವವರ ವಿರುದ್ಧ ನಿತ್ಯವೂ ದೂರು

ಕಾನೂನಿನ ಮುಂದೆ ಯಾರೂ ದೊಡ್ಡವರಲ್ಲ. ಕಾನೂನು ಎಲ್ಲರಿಗೂ ಸಮಾನ. ಈ ಹಿನ್ನೆಲೆಯಲ್ಲಿ ಗಣ್ಯರೂ ಸೇರಿದಂತೆ ಹಲವರಿಗೆ ನೋಟಿಸ್ ನೀಡಲಾಗಿದೆ
ಈಶ್ವರ ಖಂಡ್ರೆ, ಅರಣ್ಯ ಸಚಿವ

ಹಿಂದೂಗಳನ್ನೇ ಗುರಿಯಾಗಿಸಿ ಕ್ರಮ: ಬೆಲ್ಲದ ಟೀಕೆ

ಹುಲಿ ಉಗುರು ಹೊಂದಿರುವ ಆರೋಪದ ಮೇಲೆ ಕೇವಲ ಹಿಂದೂಗಳನ್ನೇ ಗುರಿ ಮಾಡಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ದರ್ಗಾಗಳಲ್ಲಿ ಬಳಸುವ ನವಿಲುಗರಿಗಳ ವಿರುದ್ಧ ಯಾವುದೇ ಕ್ರಮ ಯಾಕೆ ಕೈಗೊಂಡಿಲ್ಲ ಎಂದು ಬಿಜೆಪಿ ಶಾಸಕ ಅರವಿಂದ ಬೆಲ್ಲದ ಪ್ರಶ್ನಿಸಿದ್ದಾರೆ.

ಕಾನೂನು ಎಲ್ಲರಿಗೂ ಸಮಾನವಾಗಿರಬೇಕು. ದರ್ಗಾಗಳಲ್ಲಿ ನವಿಲು ಗರಿಗಳನ್ನು ಬಳಸಲಾಗುತ್ತದೆ. ಇದೂ ಕೂಡಾ ಕಾನೂನಿಗೆ ವಿರುದ್ಧ ಅಲ್ಲವೇ? ದರ್ಗಾಗಳ ಮೇಲೆ ಏಕೆ ಕ್ರಮ ಕೈಗೊಳ್ಳುವುದಿಲ್ಲ ಎಂದವರು ಕೇಳಿದ್ದಾರೆ.

ಸತ್ತ ಪ್ರಾಣಿಗಳ ಚರ್ಮವನ್ನು ಸಾಧು–ಸಂತರು ಬಹಳ ಕಾಲದಿಂದಲೂ ಬಳಸುತ್ತಾ ಬಂದಿದ್ದಾರೆ. ಸಾಧು–ಸಂತರನ್ನು ಹೋಗಿ ಪ್ರಶ್ನಿಸಲಾರಂಭಿಸಿದ್ದಾರೆ. ಸರ್ಕಾರ ಕಾನೂನು ಪಾಲಿಸುವುದಾದರೆ, ಶೇ 100ರಷ್ಟು ಪಾಲಿಸಬೇಕು. ತಾರತಮ್ಯ ಏಕೆ ಮಾಡಬೇಕು ಎಂದಿದ್ದಾರೆ.

ಚಿತ್ರ ನಟರಿಗೆ ಸಚಿವರ ಮನವಿ

ಸಾಮಾಜಿಕ ಬದ್ಧತೆಯ ದೃಷ್ಟಿಯಿಂದ ಚಲನಚಿತ್ರ ನಟರು, ಗಣ್ಯರು ಹುಲಿ ಉಗುರಿನ ನಕಲಿ ಪೆಂಡೆಂಟ್ ಧರಿಸಬಾರದು ಎಂದು ಸಚಿವ ಖಂಡ್ರೆ ಮನವಿ ಮಾಡಿದರು.

ಅವರು ನಕಲಿ ಹುಲಿ ಉಗುರಿನ ಲಾಕೆಟ್ ಧರಿಸಿದರೆ ಇತರರಿಗೂ ಪ್ರೇರಣೆ ನೀಡಿದಂತಾಗುತ್ತದೆ. ಅವರಿಗೆ ಸಾವಿರಾರು ಅಭಿಮಾನಿಗಳು ಇರುತ್ತಾರೆ. ಅವರು ಕೂಡಾ ತಮ್ಮ ನಾಯಕನಂತೆ ಹುಲಿ ಉಗುರಿನ ಲಾಕೆಟ್ ಧರಿಸಲು ಬಯಸುತ್ತಾರೆ. ಆಗ ಅಂತಹ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚುತ್ತದೆ. ವನ್ಯಜೀವಿಗಳ ಹತ್ಯೆ ಆಗುತ್ತದೆ ಎಂದರು.

ಹುಲಿ ಉಗುರಿನ ಪೆಂಡೆಂಟ್: ನೋಟಿಸ್

ಲೋಕಾಪುರ (ಬಾಗಲಕೋಟೆ ಜಿಲ್ಲೆ): ಸಮೀಪದ ಜಂಬಗಿ ಕೆ.ಡಿ. ಗ್ರಾಮದ ನಿವಾಸಿ ಕಾಂಗ್ರೆಸ್ ಮುಖಂಡ, ವಿಜಯಪುರ–ಬಾಗಲಕೋಟೆ ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ನಿರ್ದೇಶಕ ಸಂಜಯ ತಳೆವಾಡ ಧರಸಿದ್ದ ಹುಲಿ ಉಗುರಿನ ಮಾದರಿ ಪೆಂಡೆಂಟ್ ಮಾಹಿತಿ ನೀಡುವಂತೆ ಮುಧೋಳ ವಲಯ ಅರಣ್ಯಾಧಿಕಾರಿ ಶಿವಪುತ್ರಪ್ಪ ತಳವಾರ ನೋಟಿಸ್ ನೀಡಿದ್ದಾರೆ.

‘ಸಂಜಯ ಫೇಸ್‌ಬುಕ್‌ನಲ್ಲಿರುವ ಫೋಟೊ ಆಧರಿಸಿ ವಿವರ ಕೇಳಿ ನೋಟಿಸ್ ಜಾರಿಗೊಳಿಸಲಾಗಿದೆ’ ಎಂದು ವಲಯ ಅರಣ್ಯಾಧಿಕಾರಿ ಶಿವಪುತ್ರಪ್ಪ ತಿಳಿಸಿದರು.

ಡಿಆರ್‌ಎಫ್‌ಒ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಆಲ್ದೂರು (ಚಿಕ್ಕಮಗಳೂರು): ಹುಲಿ ಉಗುರಿನ ಲಾಕೆಟ್ ಹೊಂದಿರುವ ಆರೋಪದಲ್ಲಿ ಕಳಸ ಉಪ ವಲಯ ಅರಣ್ಯಾಧಿಕಾರಿ ದರ್ಶನ್ ಕುಮಾರ್ ಎಂ. ವಿರುದ್ಧ ಅರಣ್ಯ ಇಲಾಖೆಗೆ ದೂರು ಸಲ್ಲಿಕೆಯಾಗಿದೆ.



ದರ್ಶನ್ ಕುಮಾರ್

ಅರೇನೂರಿನ ಸುಪ್ರಿತ್ ಮತ್ತು ಅಬ್ದುಲ್ ಖಾದರ್ ಎಂಬವರು ಆಲ್ದೂರು ವಲಯ ಅರಣ್ಯಾಧಿಕಾರಿಗೆ ಗುರುವಾರ ದೂರು ನೀಡಿದ್ದಾರೆ.

‘ಹುಲಿ ಉಗುರು ಒಳಗೊಂಡ ಚಿನ್ನದ ಸರ ಧರಿಸಿರುವ ಚಿತ್ರವನ್ನು ದರ್ಶನ್‌ಕುಮಾರ್ ಅವರು ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಂಡಿದ್ದರು. ಎಲ್ಲರ ವಿರುದ್ಧ ದೂರು ದಾಖಲಾಗುತ್ತಿರುವುದರಿಂದ ಚಿತ್ರವನ್ನು ತಮ್ಮ ಖಾತೆಗಳಿಂದ ಅಳಿಸಿದ್ದಾರೆ. ಸೈಬರ್ ಅಪರಾಧ ಪೊಲೀಸರ ಮೂಲಕ ಚಿತ್ರವನ್ನು ಮತ್ತೆ ಪಡೆದು ದರ್ಶನ್‌ಕುಮಾರ್ ವಿರುದ್ಧ ಪ್ರಕರಣ ದಾಖಲಿಸಬೇಕು’ ಎಂದು ದೂರಿನಲ್ಲಿ ತಿಳಿಸಿದ್ದಾರೆ. ‘ಹುಲಿ ಉಗುರು ಧರಿಸಿರುವ ಆರೋಪದ ಪ್ರಕರಣದಲ್ಲಿ ನಿಷ್ಪಕ್ಷಪಾತ ತನಿಖೆ ನಡೆಸಲಾಗುವುದು. ದರ್ಶನ್‌ಕುಮಾರ್ ಅವರನ್ನು ಸಂಪರ್ಕಿಸಲು ಪ್ರಯತ್ನಿಸಲಾಗಿದ್ದು, ಬೇರೆ ಊರಿನಲ್ಲಿ ಇರುವುದಾಗಿ ಮಾಹಿತಿ ನೀಡಿದ್ದಾರೆ. ಅವರು ಹುಲಿ ಉಗುರಿನ ಲಾಕೆಟ್ ಹೊಂದಿರುವುದು ಖಚಿತವಾದರೆ ಪ್ರಕರಣ ದಾಖಲಿಸಿ ಶಿಸ್ತು ಕ್ರಮ ಜರುಗಿಸಲಾಗುವುದು’ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ರಮೇಶ್‌ಬಾಬು ‘ಪ್ರಜಾವಾಣಿ’ಗೆ ತಿಳಿಸಿದರು.

ಆನೆ ದವಡೆ ವಶ: ಬಂಧನ

ಮೈಸೂರು: ಆನೆಯ ದವಡೆ ಹಲ್ಲನ್ನು ಅಕ್ರಮವಾಗಿ ಸಂಗ್ರಹಿಸಿದ್ದ ಇಲ್ಲಿನ ಉದಯಗಿರಿಯ ಅಭಿರಾಮ ಸುಂದರಂ ಎಂಬವರನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬುಧವಾರ ಬಂಧಿಸಿ, ಹಲ್ಲನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಎಸಿಎಫ್ ಲಕ್ಷ್ಮಿಕಾಂತ್ ನೇತೃತ್ವದಲ್ಲಿ ಆರ್‌ಎಫ್‌ಒ ಸುರೇಂದ್ರ ಕಾರ್ಯಾಚರಣೆ ನಡೆಸಿದರು. ವನ್ಯಜೀವಿ ಸಂರಕ್ಷಣಾ ಕಾಯ್ದೆ–1972 ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ನಡೆಸಲಾಗಿದೆ ಎಂದು ಡಿಸಿಎಫ್ ಬಸವರಾಜ ತಿಳಿಸಿದ್ದಾರೆ.



ವಶಪಡಿಸಿಕೊಂಡ ಆನೆ ದವಡೆ

ಕಾಂಗ್ರೆಸ್ ಅಧ್ಯಕ್ಷರ ನಿವಾಸದಲ್ಲಿ ಇ.ಡಿ ಶೋಧ

ಪ್ರಜಾವಾಣಿ ವಾರ್ತೆ

ಜೈಪುರ: ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹಣ ಅಕ್ರಮ ವರ್ಗಾವಣೆ ತನಿಖೆ ಭಾಗವಾಗಿ ಜಾರಿ ನಿರ್ದೇಶನಾಲಯ (ಇ.ಡಿ) ಗುರುವಾರ ರಾಜಸ್ಥಾನ ಕಾಂಗ್ರೆಸ್ ಅಧ್ಯಕ್ಷ ಗೋವಿಂದ್ ಸಿಂಗ್ ದೊತಸ್ರ ಅವರ ಜೈಪುರ ಮತ್ತು ಸಿಕಾರ್ ನಿವಾಸಗಳ ಮೇಲೆ ದಾಳಿ ನಡೆಸಿದೆ.

ಟ್ರೈಟನ್ ಹೋಟೆಲ್ ಮತ್ತು ರೆಸಾರ್ಟ್ಸ್ ಪ್ರೈವೇಟ್ ಲಿಮಿಟೆಡ್ ಪ್ರಕರಣದಲ್ಲಿ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರ ಪುತ್ರ ವೈಭವ್ ಗೆಹಲೋತ್ ಅವರಿಗೆ ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ಅಡಿ ಜಾರಿ ನಿರ್ದೇಶನಾಲಯ ಸಮನ್ಸ್ ನೀಡಿದೆ.

ಮಾಜಿ ಶಿಕ್ಷಣ ಸಚಿವ ದೋತಸ್ರ ಅವರ ನಿವಾಸ ಹೊರತಾಗಿ, ದೌಸಾದ ಮಹುವಾ ಕ್ಷೇತ್ರದ ಪಕ್ಷದ ಅಭ್ಯರ್ಥಿ ಓಂಪ್ರಕಾಶ್ ಹುಡ್ಲಾ ಮತ್ತು ಇತರರ ನಿವಾಸಗಳಲ್ಲಿಯೂ ತನಿಖಾ ಸಂಸ್ಥೆ ಶೋಧ ಕೈಗೊಂಡಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ನಿಬಂಧನೆ ಅಡಿ ಈ ದಾಳಿ ನಡೆಸಲಾಗಿದೆ. ದೋತಸ್ರ ಅವರು ಸಿಕಾರ್‌ನ ಲಕ್ಷ್ಮಣಗಢ ಕ್ಷೇತ್ರದಿಂದ ಬಿಜೆಪಿಯ ಸುಭಾಷ್ ಮಹಾರಿಯಾ ವಿರುದ್ಧ ಸ್ಪರ್ಧಿಸಿದ್ದಾರೆ. ಪಕ್ಷೇತರ ಶಾಸಕ ಹುಡ್ಲಾ ಅವರನ್ನು ಕಾಂಗ್ರೆಸ್ ಈ ಬಾರಿ ಮಹುವಾ ಕ್ಷೇತ್ರದಿಂದ ಕಣಕ್ಕಿಳಿಸಿದೆ.

ಈ ನಡುವೆ ದೊತಸ್ರ ಅವರು ‘ಸತ್ಯಮೇವ ಜಯತೇ’ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಆರೋಪಿಗಳು 2022ರ ಡಿ.21, ಡಿ.22 ಮತ್ತು 24ರಂದು ಆರ್‌ಪಿಎಸ್‌ಸಿ (ರಾಜಸ್ಥಾನ ಲೋಕಸೇವಾ ಆಯೋಗ) ನಡೆಸಲು ನಿರ್ಧರಿಸಿದ್ದ ಹಿರಿಯ ಶಿಕ್ಷಕರ ಗ್ರೇಡ್ 2 ಸ್ಪರ್ಧಾತ್ಮಕ ಪರೀಕ್ಷೆ, 2022ರ ಸಾಮಾನ್ಯ ಜ್ಞಾನದ ಪ್ರಶ್ನೆ ಪತ್ರಿಕೆಯನ್ನು ಸೋರಿಕೆ ಮಾಡಿದ್ದಾರೆ. ಅವುಗಳನ್ನು ಅಭ್ಯರ್ಥಿಗಳಿಗೆ ₹8-10 ಲಕ್ಷಕ್ಕೆ ನೀಡಲಾಗಿದೆ ಎಂದು ಇ.ಡಿ ಆರೋಪಿಸಿದೆ.

ಈ ಪ್ರಕರಣದಲ್ಲಿ ಆರ್‌ಪಿಎಸ್‌ಸಿ ಮಾಜಿ ಸದಸ್ಯ ಬಾಬುಲಾಲ್ ಕಟಾರಾ ಮತ್ತು ಅನಿಲ್ ಕುಮಾರ್ ಮೀನಾ, ಭೂಪೇಂದ್ರ ಸರನ್ ಅವರನ್ನು ಜಾರಿ ನಿರ್ದೇಶನಾಲಯ ಬಂಧಿಸಿದೆ. ‘ವೈಭವ್ ಮತ್ತು ಟ್ರೈಟನ್ ನ ರತನ್ ಶರ್ಮಾ ಈ ಹಿಂದೆ ಪಾಲುದಾರರಾಗಿದ್ದರು ಮತ್ತು ತಲಾ ₹ 25 ಲಕ್ಷ ಹೂಡಿಕೆ ಮಾಡಿದ್ದರು. ಈಗ ಅವರು ಪ್ರತ್ಯೇಕವಾಗಿದ್ದಾರೆ ಮತ್ತು ವಿಭಿನ್ನ ಕಂಪನಿಗಳಾಗಿವೆ’ ಎಂದು ಅಶೋಕ್ ಗೆಹಲೋತ್ ತಿಳಿಸಿದ್ದಾರೆ.

ವೈಭವ್ ಗೆಹಲೋತ್ ವಿಚಾರದಲ್ಲಿ ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ಮುಖ್ಯಮಂತ್ರಿ ಬೆಂಬಲಕ್ಕೆ ನಿಂತಿದ್ದಾರೆ. ಆದರೆ, ಸಿ.ಎಂ ಗಾದಿಗಾಗಿ ನಡೆಯುತ್ತಿರುವ ಪೈಪೋಟಿಯಿಂದ ಹಿಂದೆ ಸರಿಯುವುದಿಲ್ಲ ಎಂಬ ನಿಲುವನ್ನೂ ಸ್ಪಷ್ಟಪಡಿಸಿದ್ದಾರೆ.

ಇದು 12 ವರ್ಷದ ಹಿಂದಿನ ಪ್ರಕರಣ. ಈಗಾಗಲೇ ಉತ್ತರಗಳನ್ನು ನೀಡಿದ್ದೇನೆ. ಫೇರ್ ಮಾಂಟ್ ಹೋಟೆಲ್‌ನಲ್ಲಿ ಟ್ಯಾಕ್ಸಿ ವ್ಯವಹಾರ ನಡೆಸುತ್ತಿದ್ದೇನೆ ಮತ್ತು ಪ್ರಕರಣ ಆ ಹೋಟೆಲ್‌ಗೆ ಸಂಬಂಧಿಸಿದೆ
ವೈಭವ್ ಗೆಹಲೋತ್ ಸಿ.ಎಂ ಅಶೋಕ್ ಗೆಹಲೋತ್ ಪುತ್ರ

ಕೇಂದ್ರ ಸರ್ಕಾರದಿಂದ ಮಾಸಿಕ 2 ಲಕ್ಷ ಟನ್ ಕಲ್ಲಿದ್ದಲು: ಸಚಿವ ಕೆ.ಜೆ. ಜಾರ್ಜ್

ರಾಜ್ಯಕ್ಕೆ ಹೆಚ್ಚುವರಿ ಕಲ್ಲಿದ್ದಲು ಪೂರೈಕೆಗೆ ಕೇಂದ್ರ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ರಾಜ್ಯಕ್ಕೆ ತಿಂಗಳಿಗೆ ಹೆಚ್ಚುವರಿಯಾಗಿ 2 ಲಕ್ಷ ಟನ್ ಕಲ್ಲಿದ್ದಲು ನೀಡಲು ಕೇಂದ್ರ ಸರ್ಕಾರ ಒಪ್ಪಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ಗುರುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಈ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈ ವರ್ಷ ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಭಾರೀ ಪ್ರಮಾಣದಲ್ಲಿ ಏರಿಕೆಯಾಗಿದ್ದು, ಅದಕ್ಕೆ ಅನುಗುಣವಾಗಿ ಅಗತ್ಯ ವಿದ್ಯುತ್ ಪೂರೈಸಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ’ ಎಂದರು.

‘ಕುಸುಮ್ ಬಿ ಹಾಗೂ ಕುಸುಮ್ ಸಿ ಯೋಜನೆಯಡಿ ರಾಜ್ಯದ 200 ಉಪ ಕೇಂದ್ರಗಳಲ್ಲಿ ಸೌರವಿದ್ಯುತ್ ಉತ್ಪಾದನೆಗೆ ಟೆಂಡರ್ ಕರೆಯಲಾಗಿದೆ. ವಾರದಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ರೈತರಿಗೆ ಈ ಉಪಕೇಂದ್ರಗಳ ಮೂಲಕ ಸೌರವಿದ್ಯುತ್ ಒದಗಿಸಲಾಗುತ್ತದೆ’ ಎಂದು ಹೇಳಿದರು.

‘ಕೂಡ್ಲಿಯ ಎನ್‌ಟಿಪಿಸಿ ಶಾಖೋತ್ಪನ್ನ ವಿದ್ಯುತ್ ಸ್ಥಾವರದ ಸಾಮರ್ಥ್ಯ 2400 ಮೆಗಾವಾಟ್. ಇದರಲ್ಲಿ ರಾಜ್ಯದ ಪಾಲು 1250 ಮೆಗಾವಾಟ್ ಇದೆ. ಈ ಪೈಕಿ, ರಾಜ್ಯಕ್ಕೆ 1100 ಮೆಗಾವಾಟ್ ಸರಬರಾಜು ಆಗುತ್ತಿದೆ. ಉಳಿದ 150 ಮೆಗಾವಾಟ್ ಅನ್ನು ದೆಹಲಿಗೆ ವರ್ಗಾಯಿಸಲಾಗಿದೆ. ಈ ಸಂಬಂಧ ಕೇಂದ್ರ ಸಚಿವರೊಂದಿಗೆ ಸಮಾಲೋಚಿಸಲಾಗಿದೆ. ಡಿಸೆಂಬರ್‌ನಿಂದ 150 ಮೆಗಾವಾಟ್ ವಿದ್ಯುತ್ ರಾಜ್ಯಕ್ಕೆ ಲಭ್ಯವಾಗಲಿದೆ’ ಎಂದರು.

‘ಕೇಂದ್ರ ಗ್ರಿಡ್‌ನಿಂದ ವಿದ್ಯುತ್ ಖರೀದಿಸಲಾಗುತ್ತದೆ. ಜತೆಗೆ, ಇಂಧನ ವಿನಿಮಯದ ಅಡಿಯಲ್ಲಿ ಪಂಜಾಬ್ (300 ಮೆಗಾವಾಟ್) ಹಾಗೂ ಉತ್ತರ ಪ್ರದೇಶದಿಂದ (500 ಮೆಗಾವಾಟ್) ವಿದ್ಯುತ್ ಪಡೆಯಲಾಗುತ್ತದೆ. ಹಿಮಾಚಲ ಪ್ರದೇಶದಿಂದ 200 ಮೆಗಾವಾಟ್ ವಿದ್ಯುತ್ ಖರೀದಿ ಮಾಡಲಾಗುತ್ತದೆ’ ಎಂದು ಹೇಳಿದರು.

‘ನಿಯಮದ ಪ್ರಕಾರವೇ ವಿದ್ಯುತ್ ಖರೀದಿ ಮತ್ತು ಕಲ್ಲಿದ್ದಲು ಆಮದು ಪ್ರಕ್ರಿಯೆ ನಡೆಯುತ್ತಿದ್ದು, ಇದರಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ. ಈ ಬಗ್ಗೆ ಜೆಡಿಎಸ್ ಮುಖಂಡ ಎಚ್‌.ಡಿ ಕುಮಾರಸ್ವಾಮಿ ಮಾಡಿರುವ ಆರೋಪ ಸತ್ಯಕ್ಕೆ ದೂರ. ಮಾಹಿತಿ ಕೊರತೆಯಿಂದ ಅವರು ಈ ಆರೋಪ ಮಾಡಿದ್ದಾರೆ. ಇಂಧನ ಖರೀದಿ ಪ್ರಕ್ರಿಯೆ ಹೇಗೆ ನಡೆಯುತ್ತದೆ ಎಂಬ ಬಗ್ಗೆ ಎಚ್‌.ಡಿ.ರೇವಣ್ಣ ಅವರಲ್ಲಿ ಕುಮಾರಸ್ವಾಮಿ ಮಾಹಿತಿ ಪಡೆಯಲಿ’ ಎಂದರು.

ರಾಜ್ಯದ ಬೇರೆ ಬೇರೆ ಭಾಗಗಳಲ್ಲಿನ ಬೆಳೆ ಮಾದರಿ ಮತ್ತು ವಿದ್ಯುತ್ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಕಬ್ಬು ಮತ್ತು ಭತ್ತ ಬೆಳೆಯುವ ಭಾಗಗಳಲ್ಲಿ 7 ಗಂಟೆಗಳ ನಿರಂತರ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. ರಾಜ್ಯದಲ್ಲಿ ಲೋಡ್ ಶೆಡ್ಡಿಂಗ್ ಮಾಡುತ್ತಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

‘ಎಚ್‌.ಡಿ.ಕೆ ಅಭಿವೃದ್ಧಿ ಮಾಡಿಲ್ಲ’

‘ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಎಚ್‌.ಡಿ.ಕುಮಾರಸ್ವಾಮಿ ಅವರು ರಾಜ್ಯದ ಅಭಿವೃದ್ಧಿ ಮಾಡಿಲ್ಲ. ಗ್ರಾಮ ವಾಸ್ತವ್ಯ ಮಾಡಿದ್ದರು ಅಷ್ಟೇ. ಆದರೆ, ಆ ಗ್ರಾಮಗಳೇನು ಅಭಿವೃದ್ಧಿಯಾಗಿವೆಯೇ’ ಎಂದು ಜಾರ್ಜ್ ಪ್ರಶ್ನಿಸಿದರು.

‘ನಾನು 1989ರಿಂದ ಸಚಿವನಾಗಿದ್ದೇನೆ. ವರ್ಗಾವಣೆ ಮಾಡಿಸಲು ಈವರೆಗೆ ಯಾರಿಂದಲೂ ನಯಾಪೈಸೆ ಹಣ ಪಡೆದಿಲ್ಲ. ಪ್ರಮಾಣ ಮಾಡಲು ನಾನು ಸಿದ್ಧನಿದ್ದೇನೆ. ನಾನು ಆಣೆ ಪ್ರಮಾಣ ಮಾಡಿದರೆ ಅವರು ನಂಬುತ್ತಾರಾ’ ಎಂದು ಅವರು ಕೇಳಿದರು.

ಬರ: ₹17,901 ಕೋಟಿ ಕೋರಿಕೆ

ನವದೆಹಲಿ: ಕರ್ನಾಟಕದಲ್ಲಿ ಬರಗಾಲದಿಂದ ತೀವ್ರ ಸಂಕಷ್ಟಕ್ಕೆ ಸಿಲುಕಿದ ರೈತರಿಗೆ ಪರಿಹಾರ ನೀಡಲು ₹17,901.73 ಕೋಟಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಕರ್ನಾಟಕ ಸರ್ಕಾರ ಪ್ರಸ್ತಾವನೆ ಸಲ್ಲಿಸಿದೆ.

ಕೇಂದ್ರ ಕೃಷಿ ಕಾರ್ಯದರ್ಶಿ ಮನೋಜ್ ಕುಮಾರ್ ಅಹುಜಾ, ಗೃಹ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಾ ಅವರನ್ನು ಭೇಟಿ ಮಾಡಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಕರ್ನಾಟಕದ ಬರ ಪರಿಸ್ಥಿತಿಯ ಕುರಿತು ಮನವರಿಕೆ ಮಾಡಿದರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಕೃಷ್ಣ ಬೈರೇಗೌಡ, ‘ಎನ್‌ಡಿಆರ್‌ಎಫ್ ಮಾರ್ಗಸೂಚಿಗಳ ಪ್ರಕಾರ ರಾಜ್ಯಕ್ಕೆ ₹17,901.73 ಕೋಟಿ ಪರಿಹಾರ ನೀಡುವಂತೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಆದಷ್ಟು ಶೀಘ್ರದಲ್ಲಿ ಹಣ ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದೇವೆ’ ಎಂದರು.

ಶುಕ್ರವಾರ, ಅಕ್ಟೋಬರ್ 27, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 297 | ಪುಟ 20

• www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

‘ನಗುವಿಗಿದೆ ಇಲ್ಲಿ ಜಾಗ’ ಇಂದು ತೆರೆ ಕಾಣುತ್ತಿರುವ ‘ಟಗರು ಪಲ್ಯ’ ಚಿತ್ರದ ನಾಯಕ ನಾಗಭೂಷಣ್ ಸಂದರ್ಶನ



ಆಳ–ಅಗಲ ಚಂಡವ್ಯಾಘ್ರನ ದಿಗಿಲು ದುಮ್ಮಾನ

ಪೇಟೆಯಲ್ಲಿ ಕರಡಿ ಕುಣಿತ ಜೋರು 10

ಕಲಿಕಾ ಸಾಮರ್ಥ್ಯ ಒರೆಗೆ: ನ.3ಕ್ಕೆ ಸಮೀಕ್ಷೆ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
63,148 ▼	18,857 ▼	₹62,900 (ಬೆಂಗಳೂರು)	₹73,500 (ಬೆಂಗಳೂರು)	83.25 ▼

ಪಟ್ಟಿ ಬಿಡುಗಡೆ ಬೆನ್ನಲ್ಲೇ ಪ್ರತಿಭಟನೆ

ಜೈಪುರ(ರಾಜಸ್ಥಾನ): ವಿಧಾನಸಭೆ ಚುನಾವಣೆಗೆ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿದ ಬಳಿಕ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳಲ್ಲಿ ಭಿನ್ನಾಭಿಪ್ರಾಯ ಕಾಣಿಸಿಕೊಂಡಿದೆ. ಟಿಕೆಟ್ ಸಿಗದವರು ಪ್ರತಿಭಟನೆ ನಡೆಸಿದ್ದಾರೆ. 9

ಒಳ ಪುಟ

ಚಿನಕುರಳಿ

ಪ್ರಕಾಶ್ ಶೆಟ್ಟಿ



ನೋಂದಣಿ ಮುಗಿದ 8 ತಿಂಗಳ ಬಳಿಕ ಹೆಸರು ಬದಲು! • ಹಣದ ಆಸೆಗಾಗಿ ಸಿಬ್ಬಂದಿ ಶಾಮೀಲು

ನರ್ಸಿಂಗ್: ವಿದ್ಯಾರ್ಥಿಗಳೇ ‘ನಕಲಿ’

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ನರ್ಸಿಂಗ್ ಕೋರ್ಸ್‌ನ ಪ್ರವೇಶ ಪ್ರಕ್ರಿಯೆಯಲ್ಲಿ ರಾಜ್ಯ ಶುಶ್ರೂಷಾ ಪರೀಕ್ಷಾ ಮಂಡಳಿಯು ‘ನಕಲಿ’ ವಿದ್ಯಾರ್ಥಿಗಳನ್ನು ಸೃಷ್ಟಿಸಿದ ಪ್ರಕರಣ ಪತ್ತೆಯಾಗಿದೆ. ಹಾಗೆ ಸೃಷ್ಟಿಯಾದ ಸೀಟುಗಳಿಗೆ ನರ್ಸಿಂಗ್ ಶಾಲೆ ನಡೆಸುವವರು, ಪ್ರವೇಶ ಪ್ರಕ್ರಿಯೆ ಮುಗಿದ ಬಳಿಕ, ಅಸಲಿ ವಿದ್ಯಾರ್ಥಿಗಳನ್ನು ಅಕ್ರಮವಾಗಿ ನೋಂದಣಿ ಮಾಡಿಕೊಂಡಿದ್ದು, ಈ ಕುರಿತು ತನಿಖೆಗೆ ಆದೇಶಿಸಲಾಗಿದೆ.

ಜನರಲ್ ನರ್ಸಿಂಗ್ ಮಿಡ್‌ವೈಫರಿ (ಜಿಎನ್‌ಎಂ) ಡಿಪ್ಲೊಮಾ ಕೋರ್ಸ್‌ಗೆ 2022 ಡಿ. 31ರಂದೇ ವಿದ್ಯಾರ್ಥಿಗಳ ನೋಂದಣಿ ಪ್ರಕ್ರಿಯೆ ಮುಕ್ತಾಯವಾಗಿದೆ. ಆದರೆ, ನೋಂದಣಿಯಾದ 236 ವಿದ್ಯಾರ್ಥಿಗಳ (ನಕಲಿ ಹೆಸರು) ಬದಲು, ಬೇರೆ ವಿದ್ಯಾರ್ಥಿಗಳನ್ನು ಇದೇ ಆಗಸ್ಟ್, ಸೆಪ್ಟೆಂಬರ್‌ನಲ್ಲಿ ನೋಂದಣಿ ಮಾಡಿರುವುದು ಗೊತ್ತಾಗಿದೆ. ನಕಲಿ ಹೆಸರುಗಳಲ್ಲಿ ನೋಂದಣಿ ಸಂಖ್ಯೆ ಸೃಷ್ಟಿಸಿ, ಬಳಿಕ ಹೆಸರು ಸೇರಿಸಿರುವುದನ್ನು ಪತ್ತೆ ಮಾಡಲಾಗಿದೆ.

ಮೂರು ವರ್ಷದ ಡಿಪ್ಲೊಮಾ ಕೋರ್ಸ್‌ಗೆ ಅಕ್ರಮವಾಗಿ ನೋಂದಣಿ ಮಾಡಿಕೊಳ್ಳುವ ಪ್ರತಿ ವಿದ್ಯಾರ್ಥಿಯಿಂದ ನರ್ಸಿಂಗ್ ಶಾಲೆಯವರು ವರ್ಷಕ್ಕೆ ₹1 ಲಕ್ಷದಂತೆ ಹೆಚ್ಚುವರಿಯಾಗಿ ಒಟ್ಟು ₹3 ಲಕ್ಷ ವಸೂಲಿ ಮಾಡುತ್ತಾರೆ. ಹೀಗೆ ನೋಂದಣಿ ಮಾಡಲು ಮಂಡಳಿಯ ಸಿಬ್ಬಂದಿ ಪ್ರತಿ ವಿದ್ಯಾರ್ಥಿಯಿಂದ ₹50 ಸಾವಿರದಿಂದ ₹1 ಲಕ್ಷದವರೆಗೆ ವಸೂಲು ಮಾಡಿ ಹಂಚಿಕೊಳ್ಳುತ್ತಾರೆ ಎಂದು ಆರೋಪಿಸಲಾಗಿದೆ.

ಅಸ್ತಿತ್ವದಲ್ಲಿ ಇಲ್ಲದೇ ಇರುವ ವಿದ್ಯಾರ್ಥಿಗಳ ಹೆಸರಿನಲ್ಲಿ ನೋಂದಾಯಿಸಿ, ಬಳಿಕ ಹೆಸರು ಬದಲಾವಣೆ ಮಾಡಿರುವುದು ಗಮನಕ್ಕೆ ಬರುತ್ತಿದ್ದಂತೆ ಮಂಡಳಿಯ ಅಧ್ಯಕ್ಷರೂ ಆಗಿರುವ ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕಿ ಡಾ.ಬಿ.ಎಲ್. ಸುಜಾತಾ ರಾಥೋಡ್ ಅವರು ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಮಂಡಳಿಯ ವಿಶೇಷ ಅಧಿಕಾರಿ ಡಾ. ವಿಜಯಕುಮಾರ್ ಕೆ.ಆರ್ (ಕರ್ನಾಟಕ ನರ್ಸಿಂಗ್ ಮತ್ತು ಅರೆವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ) ಅವರಿಗೆ ಸೂಚಿಸಿದ್ದಾರೆ.

ಈ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಡಾ. ವಿಜಯಕುಮಾರ್, ‘ವಿದ್ಯಾರ್ಥಿಗಳ ಹೆಸರು ಬದಲಾಗಿರುವುದು ನಿಜ. ಈ ಬಗ್ಗೆ ಸಂಬಂಧಪಟ್ಟ ನರ್ಸಿಂಗ್ ಶಾಲೆಗಳಿಂದ ವಿವರಣೆ ಪಡೆಯುವಂತೆ ಮಂಡಳಿಯ ಕಾರ್ಯದರ್ಶಿಗೆ ಸೂಚನೆ ನೀಡಲಾಗಿದೆ’ ಎಂದಿದ್ದಾರೆ.

8ನೇ ಪುಟ ನೋಡಿ

‘ಬೈ ಮಿಸ್ಟೇಕ್’ ಹೆಸರಿನಲ್ಲಿ ನೋಂದಣಿ!



ಜಿಎನ್‌ಎಂ ಕೋರ್ಸ್‌ಗೆ ನೋಂದಣಿ ಪ್ರಕ್ರಿಯೆ ವೇಳೆ ನಕಲಿ ಹೆಸರು ನೀಡಿ, ನೋಂದಣಿ ಅವಧಿ ಮುಗಿದ ಬಳಿಕ ಹೆಸರು ಬದಲಿಸುವ ‘ಅಕ್ರಮ’, ಕೋರ್ಸ್‌ನ ಮೊದಲ ವರ್ಷದ ಪರೀಕ್ಷೆವರೆಗೂ ನಡೆಯುತ್ತದೆ. ಪ್ರತಿವರ್ಷ ಎಗ್ಗಿಲ್ಲದೆ ಈ ದಂಧೆ ನಡೆಯುತ್ತಿದೆ ಎನ್ನಲಾಗಿದೆ. 2019–20ನೇ ಸಾಲಿನಲ್ಲಿ ನರ್ಸಿಂಗ್ ಶಾಲೆಯೊಂದು ‘ಬೈ ಮಿಸ್ಟೇಕ್’, ‘ಪ್ಲೀಸ್ ಸಾರಿ ಬೈ ಮಿಸ್ಟೇಕ್’, ‘ಸಾರಿ ಪ್ಲೀಸ್’ ಎಂಬ ಹೆಸರುಗಳಲ್ಲಿ, ಮತ್ತೊಂದು ಸಂಸ್ಥೆ ‘XXXXXXX’ ಎಂಬ ಹೆಸರಿನಲ್ಲಿ ನೋಂದಣಿ ಮಾಡಿಕೊಂಡಿರುವುದು ಮಂಡಳಿಯ ದಾಖಲೆಗಳಿಂದ ಗೊತ್ತಾಗಿದೆ!

> **ಮಂಡಳಿಯಲ್ಲಿ ಹೆಸರು ಬದಲಾಗಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಸಂಬಂಧಪಟ್ಟ ನರ್ಸಿಂಗ್ ಶಾಲೆಯವರು ಹೆಸರು ಬದಲಾಗಿರುವುದಕ್ಕೆ ಸೂಕ್ತ ಸಮಜಾಯಿಷಿ ನೀಡದೇ ಇದ್ದರೆ ನೋಂದಣಿ ತಡೆಹಿಡಿಯಲಾಗುವುದು**
>
> **ಡಾ. ವಿಜಯಕುಮಾರ್ ಕೆ.ಆರ್**
> ವಿಶೇಷ ಅಧಿಕಾರಿ, ನರ್ಸಿಂಗ್ ಪರೀಕ್ಷಾ ಮಂಡಳಿ

ಅಂಕಿ–ಅಂಶಗಳು

787 ಮಾನ್ಯತೆ ಪಡೆದ ನರ್ಸಿಂಗ್ ಶಾಲೆಗಳು

18 ಸರ್ಕಾರಿ ನರ್ಸಿಂಗ್ ಶಾಲೆಗಳು

769 ಖಾಸಗಿ ನರ್ಸಿಂಗ್ ಶಾಲೆಗಳು



ಚಿಕ್ಕಬಳ್ಳಾಪುರ ಜಿಲ್ಲಾ ಆಸ್ಪತ್ರೆಯ ಶವಾಗಾರದ ಮುಂದೆ ಮೃತರ ಕುಟುಂಬ ಸದಸ್ಯರ ರೋದನ

ಅಪಘಾತ: 13 ಸಾವು

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ನಗರ ಹೊರವಲಯದ ಚಿತ್ರಾವತಿ ಬಳಿ ಗುರುವಾರ ಬೆಳಿಗ್ಗೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ 13 ಕೂಲಿಕಾರ್ಮಿಕರು ಮೃತಪಟ್ಟಿದ್ದಾರೆ.

ಆ ಪೈಕಿ ಮೂವರು ರಾಜ್ಯದವರಾದರೆ, ಉಳಿದ ಹತ್ತು ಮಂದಿ ನೆರೆಯ ಆಂಧ್ರಪ್ರದೇಶದ ಗಡಿ ಗ್ರಾಮದವರು. ಮೃತರಲ್ಲಿ ನಾಲ್ವರು ಮಹಿಳೆಯರು, ಎಂಟು ಮಂದಿ ಪುರುಷರಿದ್ದರೆ, ಆರು ವರ್ಷದ ಬಾಲಕ ಸಹ ಸೇರಿದ್ದಾನೆ.

ಆಂಧ್ರ ಪ್ರದೇಶದ ಸತ್ಯಸಾಯಿ ಜಿಲ್ಲೆಯ ಗೊರಂಟ್ಲದಿಂದ ಬೆಳಿಗ್ಗೆ ಹೊರಟ ವಾಹನ (ಟಾಟಾ ಸುಮೊ) ಚಿತ್ರಾವತಿ ಬಳಿಯ ರಾಷ್ಟ್ರೀಯ ಹೆದ್ದಾರಿ 44ರ ಬದಿ ನಿಂತಿದ್ದ ಸಿಮೆಂಟ್ ಬಲ್ಕರ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಅಪಘಾತದ ವೇಳೆ ದಟ್ಟ ಮಂಜು ಆವರಿಸಿತ್ತು.

ಬೆಂಗಳೂರಿಗೆ ಹೊರಟಿದ್ದ ವಾಹನಕ್ಕೆ ಮಾರ್ಗ ಮಧ್ಯೆ ವಿವಿಧ ಕಡೆ ಪ್ರಯಾಣಿಕರು ಹತ್ತಿದ್ದಾರೆ. ಚಾಲಕ ಸೇರಿದಂತೆ 13 ಮಂದಿ ಈ ವಾಹನದಲ್ಲಿದ್ದರು. ಅಪಘಾತದ ಸ್ಥಳದಲ್ಲಿಯೇ 12 ಮಂದಿ ಕೊನೆಯುಸಿರೆಳೆದರು. ತೀವ್ರವಾಗಿ ಗಾಯಗೊಂಡಿದ್ದ ಮಹಿಳೆ ಆಸ್ಪತ್ರೆಯಲ್ಲಿ ಮೃತಪಟ್ಟರು.

ಮೃತರಲ್ಲಿ ಹೆಚ್ಚಿನವರು ಬೆಂಗಳೂರಿನಲ್ಲಿ ಕೂಲಿ ಕೆಲಸ, ಗಾರ್ಮೆಂಟ್, ಸೆಕ್ಯುರಿಟಿ ಕೆಲಸ ಸೇರಿದಂತೆ ವಿವಿಧ ವೃತ್ತಿ ಮಾಡುತ್ತಿದ್ದರು. ದಸರಾ ರಜೆ ಅಂಗವಾಗಿ ಕುಟುಂಬ ಸಮೇತ ಸ್ವಗ್ರಾಮಗಳಿಗೆ ಹೋಗಿದ್ದವರು ವಾಪಸ್ ಬೆಂಗಳೂರಿಗೆ ಮರಳುತ್ತಿದ್ದರು. ಸಿಮೆಂಟ್ ಬಲ್ಕರ್ ವಾಹನದ ಚಾಲಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ಮಹಿಳೆ ಮತ್ತು ಆರು ವರ್ಷದ ಮಗ, ಆಂಧ್ರಪ್ರದೇಶದ ಪೆನುಗೊಂಡ ತಾಲ್ಲೂಕಿನ ಗೌನಿಪೆಂಟ ಗ್ರಾಮದ ತಾಯಿ–ಮಗ, ಗೊರಂಟ್ಲ ಪಂಚಾಯಿತಿಯ ವಾನವೋಲು ಗ್ರಾಮದ ದಂಪತಿ, ಕದಿರಿ ತಾಲ್ಲೂಕಿನ ನವಾಬ್‌ಕೋಟೆಯ ದಂಪತಿ ಮೃತಪಟ್ಟವರಲ್ಲಿ ಸೇರಿದ್ದಾರೆ. ಮೃತರ ಸಂಬಂಧಿಕರು ಶವಾಗಾರದ ಬಳಿ ಬರುತ್ತಲೇ ಕುಸಿದು ಬಿದ್ದರು. ಬದುಕೇ ನಾಶವಾಯಿತು ಎಂದು ಎದೆ ಬಡಿದುಕೊಂಡು ಕಣ್ಣೀರು ಹಾಕಿದರು. ಮರಣೋತ್ತರ ಪರೀಕ್ಷೆ ನಡೆಸಿ ಶವಗಳನ್ನು ಕೊಂಡೊಯ್ಯುವಾಗ ಆಸ್ಪತ್ರೆಯ ಆವರಣದ ತುಂಬ ಸಂಬಂಧಿಕರ ಅಳು ಪ್ರತಿಧ್ವನಿಸುತ್ತಿತ್ತು.

₹2 ಲಕ್ಷ ಪರಿಹಾರ

ಮುಖ್ಯಮಂತ್ರಿ ಸಿದ್ದರಾಮಯ್ಯ ಮೃತರ ಕುಟುಂಬಗಳಿಗೆ ತಲಾ ₹2 ಲಕ್ಷ ಪರಿಹಾರ ಘೋಷಿಸಿದ್ದಾರೆ. ಸ್ಥಳಕ್ಕೆ ಬಂದ ಪೆನುಗೊಂಡ ಶಾಸಕ ಶಂಕರನಾರಾಯಣ ಮೃತರ ಕುಟುಂಬ ಸದಸ್ಯರಿಗೆ ವೈಯಕ್ತಿಕವಾಗಿ ₹10 ಸಾವಿರ ನೀಡಿದರು. ಆಂಧ್ರ ಪ್ರದೇಶ ಸರ್ಕಾರದಿಂದ ಹೆಚ್ಚಿನ ಪರಿಹಾರ ದೊರಕಿಸಿಕೊಡಲಾಗುವುದು ಎಂದು ಭರವಸೆ ನೀಡಿದರು.

ಕತಾರ್: ಭಾರತದ ನೌಕಾಪಡೆಯ 8 ಮಾಜಿ ಸಿಬ್ಬಂದಿಗೆ ಮರಣದಂಡನೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಭಾರತೀಯ ನೌಕಾಪಡೆಯ ಎಂಟು ಮಂದಿ ಮಾಜಿ ಸಿಬ್ಬಂದಿಗೆ ಕತಾರ್‌ನ ನ್ಯಾಯಾಲಯವೊಂದು ಮರಣದಂಡನೆ ವಿಧಿಸಿದೆ. ಈ ಶಿಕ್ಷೆಗೆ ಭಾರತವು ಆಘಾತ ವ್ಯಕ್ತಪಡಿಸಿದೆ.

ಈ ಎಂಟೂ ಮಂದಿ ಅಲ್ ದಹ್ರಾ ಕಂಪನಿಯ ನೌಕರರಾಗಿದ್ದರು. ಕಳೆದ ವರ್ಷದ ಆಗಸ್ಟ್‌ನಲ್ಲಿ ಇವರನ್ನು ಬೇಹುಗಾರಿಕೆ ಆರೋಪದ ಅಡಿಯಲ್ಲಿ ವಶಕ್ಕೆ ಪಡೆಯಲಾಗಿತ್ತು. ಭಾರತೀಯ ಪ್ರಜೆಗಳ ಮೇಲಿನ ಆರೋಪಗಳು ಏನಿದ್ದವು ಎಂಬುದನ್ನು ಕತಾರ್ ಬಹಿರಂಗಪಡಿಸಿಲ್ಲ.

ಕತಾರ್‌ಗಾಗಿ ಜಲಾಂತರ್ಗಾಮಿ ನೌಕೆಯೊಂದನ್ನು ನಿರ್ಮಿಸುವ ಯೋಜನೆಯೊಂದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಇಸ್ರೇಲ್‌ಗೆ ರವಾನಿಸಿದ ಆರೋಪವನ್ನು ಇವರ ಮೇಲೆ ಹೊರಿಸಲಾಗಿತ್ತು ಎಂದು ಮೂಲಗಳು ಹೇಳಿವೆ.

9ನೇ ಪುಟ ನೋಡಿ

ಮರಣ ದಂಡನೆಗೆ ಗುರಿಯಾದವರು

ಕ್ಯಾಪ್ಟನ್ ನವತೇಜ್ ಸಿಂಗ್ ಗಿಲ್, ಕ್ಯಾಪ್ಟನ್ ಬೀರೇಂದ್ರ ಕುಮಾರ್ ವರ್ಮ, ಕ್ಯಾಪ್ಟನ್ ಸೌರಭ್ ವಸಿಷ್ಠ, ಕಮಾಂಡರ್ ಅಮಿತ್ ನಾಗಪಾಲ್, ಕಮಾಂಡರ್ ಪೂರ್ಣೇಂದು ತಿವಾರಿ, ಕಮಾಂಡರ್ ಸುಗುಣಾಕರ್ ಪಾಕಲ, ಕಮಾಂಡರ್ ಸಂಜೀವ್ ಗುಪ್ತ ಮತ್ತು ರಾಗೇಶ್.

ಪೂರ್ಣೇಂದು ಅವರಿಗೆ 2019ರಲ್ಲಿ ಕೇಂದ್ರ ಸರ್ಕಾರವು ಪ್ರವಾಸಿ ಭಾರತೀಯ ಸಮ್ಮಾನ್ ನೀಡಿ ಗೌರವಿಸಿತ್ತು. ಕತಾರ್‌ನ ನೌಕಾಪಡೆಯ ಸಿಬ್ಬಂದಿಗೆ ತರಬೇತಿ ನೀಡಿ, ಭಾರತ ಮತ್ತು ಕತಾರ್ ಸಂಬಂಧವನ್ನು ಉತ್ತಮಪಡಿಸಲು ನೆರವು ನೀಡಿದ್ದಕ್ಕಾಗಿ ಈ ಗೌರವ ಪ್ರದಾನ ಮಾಡಲಾಗಿತ್ತು.

‘ಹಮಾಸ್ ದಾಳಿಗೆ ಭಾರತವನ್ನು ಒಳಗೊಂಡ ಕಾರಿಡಾರ್ ಕಾರಣ’



ವಾಷಿಂಗ್ಟನ್ (ಪಿಟಿಐ): ‘ಭಾರತ–ಮಧ್ಯಪ್ರಾಚ್ಯ–ಯುರೋಪ್ ಆರ್ಥಿಕ ಕಾರಿಡಾರ್’ನ ಘೋಷಣೆಯು ಇಸ್ರೇಲ್ ಮೇಲೆ ಹಮಾಸ್ ಬಂಡುಕೋರರು ಈಚೆಗೆ ನಡೆಸಿದ ಭಯೋತ್ಪಾದಕ ದಾಳಿಗೆ ಒಂದು ಕಾರಣ ಎಂದು ತಮಗೆ ಬಲವಾಗಿ ಅನಿಸಿರುವುದಾಗಿ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.

ನವದೆಹಲಿಯಲ್ಲಿ ಈಚೆಗೆ ನಡೆದ ಜಿ20 ಶೃಂಗಸಭೆಯಲ್ಲಿ ಈ ಕಾರಿಡಾರ್ ಯೋಜನೆಯ ಘೋಷಣೆ ಆಗಿದೆ.

9ನೇ ಪುಟ ನೋಡಿ

ಯಶವಂತಪುರ–ಚನ್ನಸಂದ್ರ, ಬೈಯಪ್ಪನಹಳ್ಳಿ–ಹೊಸೂರು ಮಾರ್ಗದಲ್ಲಿ ನಡೆಯುತ್ತಿರುವ ಕಾಮಗಾರಿ

ಇನ್ನೊಂದು ವರ್ಷದಲ್ಲಿ ದ್ವಿಪಥ ಕಾಮಗಾರಿ ಪೂರ್ಣ

• ಬಾಲಕೃಷ್ಣ ಪಿ.ಎಚ್.



ಬೈಯಪ್ಪನಹಳ್ಳಿ–ಹೊಸೂರು ಮಾರ್ಗದಲ್ಲಿ ರೈಲು ಹಳಿ ದ್ವಿಪಥಗೊಳಿಸುವ ಕಾಮಗಾರಿ ನಡೆಯುತ್ತಿದೆ

ಬೆಂಗಳೂರು: ಮೂರು ವರ್ಷಗಳಿಂದ ನಡೆಯುತ್ತಿರುವ ನೈರುತ್ಯ ರೈಲ್ವೆಯ ಎರಡು ಪ್ರದೇಶಗಳಲ್ಲಿನ ದ್ವಿಪಥ (ಡಬ್ಬಲ್ ಲೈನ್) ಕಾಮಗಾರಿ ಇನ್ನು ಒಂದು ವರ್ಷದೊಳಗೆ ಪೂರ್ಣಗೊಳ್ಳಲಿದೆ.

ನೈರುತ್ಯ ರೈಲ್ವೆಯೇ ಎಲ್ಲ ಕಡೆಗಳಲ್ಲೂ ದ್ವಿಪಥ ಕಾಮಗಾರಿಗಳನ್ನು ನಡೆಸುತ್ತಿತ್ತು. ಬೆಂಗಳೂರು ನಗರದೊಳಗೆ ಹಾದು ಹೋಗುವ ಬೈಯಪ್ಪನಹಳ್ಳಿ-ಹೊಸೂರು ಮತ್ತು ಯಶವಂತಪುರ-ಚನ್ನಸಂದ್ರ (ಬೈಯಪ್ಪನಹಳ್ಳಿವರೆಗೆ ಮಾತ್ರ) ಮಾರ್ಗಗಳನ್ನು ದ್ವಿಪಥಗೊಳಿಸುವ ಜವಾಬ್ದಾರಿಯನ್ನು ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಯಮಿತಕ್ಕೆ (ಕೆ–ರೈಡ್) ವಹಿಸಿದೆ.

ಏಕಪಥದಿಂದಾಗಿ ಸಿಗ್ನಲ್‌ಗಳಿಗಾಗಿ ರೈಲು ಕಾಯುವಂತಾಗಿತ್ತು. ಎದುರಿನಿಂದ ಬರುವ ರೈಲು ದಾಟುವವರೆಗೆ ಸಮಯ ವ್ಯರ್ಥವಾಗುತ್ತಿತ್ತು. ಈ ಎರಡು ಮಾರ್ಗಗಳ ಕಾಮಗಾರಿ ಪೂರ್ಣಗೊಂಡರೆ ನೈರುತ್ಯ ರೈಲ್ವೆಯ ಪ್ರಮುಖ ಮಾರ್ಗಗಳೆಲ್ಲ ದ್ವಿಪಥವಾಗಲಿವೆ. ಕಾಯುವಿಕೆ ತಪ್ಪಲಿದೆ.

ಯಶವಂತಪುರ-ಚನ್ನಸಂದ್ರ ಮಾರ್ಗವನ್ನು ನಾಲ್ಕು ಹಂತಗಳಲ್ಲಿ ಕೆ-ರೈಡ್ ದ್ವಿಪಥಗೊಳಿಸಲಿದೆ. ಯಶವಂತಪುರ–ಲೊಟ್ಟೆಗೊಲ್ಲಹಳ್ಳಿ, ಲೊಟ್ಟೆಗೊಲ್ಲಹಳ್ಳಿ- ಹೆಬ್ಬಾಳ, ಅಲ್ಲಿಂದ ಬಾಣಸವಾಡಿ, ಬಾಣಸವಾಡಿಯಿಂದ ಬೈಯಪ್ಪನಹಳ್ಳಿ 'ಎ' ಕ್ಯಾಬಿನ್‌ವರೆಗೆ ಕಾಮಗಾರಿ ಪ್ರಗತಿಯಲ್ಲಿದೆ. ಬೈಯಪ್ಪನಹಳ್ಳಿ-ಚನ್ನಸಂದ್ರವರೆಗಿನ 2 ಕಿ.ಮೀ. ಕಾಮಗಾರಿಯನ್ನು ನೈರುತ್ಯ ರೈಲ್ವೆಯೇ ಕೈಗೊಳ್ಳಲಿದೆ ಎಂದು ಕೆ-ರೈಡ್ ಅಧಿಕಾರಿಗಳು ತಿಳಿಸಿದ್ದಾರೆ.

ಬೈಯಪ್ಪನಹಳ್ಳಿ-ಹೊಸೂರು 48 ಕಿ.ಮೀ. ಮಾರ್ಗದಲ್ಲಿ ಕಾರ್ಮೆಲರಾಂ-ಹುಸ್ಕೂರು-ಹೀಲಲಿಗೆವರೆಗೆ 10.3 ಕಿ.ಮೀ. ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿವೆ. ಬೆಳ್ಳಂದೂರು-ಕಾರ್ಮೆಲರಾಂ ಸಿವಿಲ್ ಕೆಲಸಗಳು ನಡೆಯುತ್ತಿದ್ದು, 2024ರ ಮಾರ್ಚ್ ಒಳಗೆ ಪೂರ್ಣಗೊಳ್ಳಲಿದೆ. ಬೈಯಪ್ಪನಹಳ್ಳಿ- ಬೆಳ್ಳಂದೂರು, ಹೀಲಲಿಗೆ-ಆನೆಕಲ್, ಅಲ್ಲಿಂದ ಮಾರನಾಯಕನಹಳ್ಳಿ-ಹೊಸೂರು ವರೆಗಿನ ಕಾಮಗಾರಿಗಳು 2024ರ ಡಿಸೆಂಬರ್ ಒಳಗೆ ಹಂತ ಹಂತವಾಗಿ ಪೂರ್ಣಗೊಳ್ಳಲಿವೆ ಎಂದು ವಿವರಿಸಿದರು.

ಏಕಪಥ ಕೆಲವೇ ಮಾರ್ಗಗಳು: ಚಿಕ್ಕಬಾಣಾವರ–ಹಾಸನ ರೈಲ್ವೆ ಮಾರ್ಗ, ಯಲಹಂಕ-ದೇವನಹಳ್ಳಿ-ಚಿಕ್ಕಬಳ್ಳಾಪುರ - ಕೋಲಾರ ಮಾರ್ಗಗಳು ಏಕಪಥವನ್ನೇ ಹೊಂದಿವೆ. ಬೆಂಗಳೂರು–ಮೀರಜ್ ಮಾರ್ಗದಲ್ಲಿ ಬೆಂಗಳೂರು ಕಡೆಯಿಂದ ದ್ವಿಪಥಗಳಾಗಿವೆ. ಮೀರಜ್ ಸಮೀಪ 6 ಕಿಲೋಮೀಟರ್ ಏಕಪಥ ಇದೆ. ಮಂಗಳೂರಿನಿಂದ ಅಡುಗೆ ಅನಿಲವನ್ನು ಗೂಡ್ಸ್ ಟ್ಯಾಂಕ್ ರೈಲಿನಲ್ಲಿ ತರುತ್ತಿದ್ದ ಕಾಲದಲ್ಲಿ ದ್ವಿಪಥ ಬೇಕು ಎಂಬ ಕೂಗು ಇತ್ತು. ಈಗ ಪೈಪ್‌ಲೈನ್ ಮೂಲಕ ಗ್ಯಾಸ್ ಪೂರೈಕೆಯಾಗುತ್ತಿರುವುದರಿಂದ ದ್ವಿಪಥದ ಬೇಡಿಕೆ ಅಷ್ಟಿಲ್ಲ. ಆದರೂ ಎಲ್ಲ ಕಡೆಗಳಲ್ಲಿ ದ್ವಿಪಥವಾದರೆ ಕಾಯುವುದು ತಪ್ಪುತ್ತದೆ. ತಾಂತ್ರಿಕ ಸಮಸ್ಯೆಯಿಂದ ಉಂಟಾಗುವ ಅಪಘಾತ ಸಂಭವವೂ ಇರುವುದಿಲ್ಲ ಎಂದು ರೈಲ್ವೆ ಹೋರಾಟಗಾರ ಕೆ.ಎನ್. ಕೃಷ್ಣಪ್ರಸಾದ್ ಮಾಹಿತಿ ನೀಡಿದರು.

ಅಂಕಿ ಅಂಶ

₹498 ಕೋಟಿ ಬೈಯಪ್ಪನಹಳ್ಳಿ–ಹೊಸೂರು ದ್ವಿಪಥ ಯೋಜನೆಯ ಅಂದಾಜು ವೆಚ್ಚ

₹314 ಕೋಟಿ ಯಶವಂತಪುರ–ಚನ್ನಸಂದ್ರ ದ್ವಿಪಥ ಯೋಜನೆಯ ಅಂದಾಜು ವೆಚ್ಚ

2024ರ ಡಿಸೆಂಬರ್ ಒಳಗೆ ಎರಡೂ ಪ್ರದೇಶಗಳಲ್ಲಿ ದ್ವಿಪಥ ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ

ದಟ್ಟಣೆ ಕಡಿಮೆಗೊಳಿಸಲು ಅನುಕೂಲ



ಯಶವಂತಪುರ–ಬೈಯಪ್ಪನಹಳ್ಳಿ ಮತ್ತು ಬೈಯಪ್ಪನಹಳ್ಳಿ– ಹೊಸೂರು ನಡುವಿನ ಹಳಿಗಳ ದ್ವಿಪಥ ಕಾಮಗಾರಿಗಳು ನಿಗದಿತ ರೀತಿಯಲ್ಲಿ ಪ್ರಗತಿಯಲ್ಲಿವೆ. ಕಾಮಗಾರಿ ಪೂರ್ಣಗೊಳಿಸಲು 2024ರ ಡಿಸೆಂಬರ್‌ವರೆಗೆ ಅವಕಾಶವಿದೆ. ಅದರ ಒಳಗೆ ಕಾಮಗಾರಿ ಪೂರ್ಣಗೊಳ್ಳಲಿದೆ. ಇದರಿಂದ ರೈಲ್ವೆ ಪ್ರಯಾಣಿಕರಿಗೆ ಅನುಕೂಲವಾಗಲಿದೆ. ಅಲ್ಲದೇ ಬೈಯಪ್ಪನಹಳ್ಳಿ, ಬೆಳ್ಳಂದೂರು ಐಟಿ ಕಾರಿಡಾರ್‌ನಲ್ಲಿ ವಾಹನದಟ್ಟಣೆ ಕಡಿಮೆ ಮಾಡಲು ಕೂಡ ಪ್ರಯೋಜನವಾಗಲಿದೆ.

ರಾಜೇಶ್ ಕುಮಾರ್ ಸಿಂಗ್, ಕೆ–ರೈಡ್ ನಿರ್ದೇಶಕ (ಪ್ರಾಜೆಕ್ಟ್ ಆ್ಯಂಡ್ ಪ್ಲಾನಿಂಗ್)



ಮಂಜುನಾಥ ನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ ವಿಭಾಗ ಮಟ್ಟದ 14 ಮತ್ತು 17ರ ವಯೋಮಿತಿಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಬಾಲಕ, ಬಾಲಕಿಯರ ಥ್ರೋಬಾಲ್ ಪಂದ್ಯಾವಳಿಗೆ ಶಾಸಕ ಎಸ್. ಮುನಿರಾಜು ಚಾಲನೆ ನೀಡಿದರು.

ಥ್ರೋಬಾಲ್ ಪಂದ್ಯಾವಳಿಗೆ ಚಾಲನೆ

ಪೀಣ್ಯ ದಾಸರಹಳ್ಳಿ: ವಿದ್ಯಾರ್ಥಿಗಳ ಪ್ರತಿಭೆಯನ್ನು ಶಿಕ್ಷಕರು ಗುರುತಿಸಿ ಪ್ರೋತ್ಸಾಹಿಸಬೇಕು. ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗೂ ಬೆಂಬಲ ನೀಡಬೇಕು ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ಮಂಜುನಾಥ ನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ ವಿಭಾಗ ಮಟ್ಟದ 14 ಮತ್ತು 17ರ ವಯೋಮಿತಿಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಬಾಲಕ, ಬಾಲಕಿಯರ ಥ್ರೋಬಾಲ್ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದರು.

ಈ ಸ್ಪರ್ಧೆಗೆ 11 ಜಿಲ್ಲೆಗಳಿಂದ ವಿದ್ಯಾರ್ಥಿಗಳು ಬಂದಿದ್ದಾರೆ. ವಿಜೇತರಾದವರು ರಾಜ್ಯ ಮತ್ತು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಲಿದ್ದಾರೆ. ಕ್ಷೇತ್ರ ಶಿಕ್ಷಣಾಧಿಕಾರಿ ರಮೇಶ್, ಸಮಾಜ ಸೇವಕ ಮಂಜುನಾಥ್ (ಎಬಿಬಿ), ದೈಹಿಕ ಶಿಕ್ಷಣಾಧಿಕಾರಿ ಮಂಜುನಾಥ್, ದೈಹಿಕ ಶಿಕ್ಷಣ ಶಿಕ್ಷಕ ಸುಬ್ಬಯ್ಯ, ಹನುಮಯ್ಯ ಇದ್ದರು.

ಗುಣಮಟ್ಟದ ಶಿಕ್ಷಣದಿಂದ ಉನ್ನತಿ: ವರಾಳೆ

ಪ್ರಜಾವಾಣಿ ವಾರ್ತೆ



ಹೈಕೋರ್ಟ್‌ನ ನೂತನ ನ್ಯಾಯಮೂರ್ತಿ ಕೆ.ವಿ.ಅರವಿಂದ (ಮಧ್ಯದಲ್ಲಿ ಪೇಟ ಧರಿಸಿದವರು) ಅವರನ್ನು ಬೆಂಗಳೂರು ವಕೀಲರ ಸಂಘದ ವತಿಯಿಂದ ಗುರುವಾರ ಹೈಕೋರ್ಟ್ ವಕೀಲರ ಸಭಾಂಗಣದಲ್ಲಿ ಸ್ವಾಗತ ಕೋರಿ ಸನ್ಮಾನಿಸಲಾಯಿತು. ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್, ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ, ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ, ಹೈಕೋರ್ಟ್ ಘಟಕದ ಉಪಾಧ್ಯಕ್ಷ ಎ.ಎಸ್.ಹರೀಶ್, ಖಜಾಂಚಿ ಎಂ.ಟಿ.ಹರೀಶ್ ಇದ್ದರು.

ಮುಖ್ಯಾಂಶಗಳು

- ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಕೆ.ವಿ. ಅರವಿಂದ್‌ಗೆ ಸನ್ಮಾನ
- ಆದಾಯ ತೆರಿಗೆ ವ್ಯಾಜ್ಯಗಳಲ್ಲಿ ಪರಿಣತಿ
- ಅರ್ಜಿಗಳ ವಿಲೇವಾರಿ ತ್ವರಿತವಾಗಿ ಆಗಲಿ

ಬೆಂಗಳೂರು: 'ಮೃದು ಭಾಷಿಯಾಗಿ, ಸಮರ್ಥ ವಕೀಲರೆನಿಸಿರುವ, ಕೃಷಿ ಕುಟುಂಬದ ಹಿನ್ನೆಲೆಯಿಂದ ಬಂದಿರುವ ಉತ್ತಮ ಮನುಷ್ಯ ಪ್ರೇಮದ ಪ್ರತಿರೂಪವಾದ ಕೆ.ವಿ.ಅರವಿಂದ ಅವರು ರಾಜ್ಯ ಹೈಕೋರ್ಟ್‌ಗೆ ನ್ಯಾಯಮೂರ್ತಿಯಾಗಿ ನೇಮಕಗೊಳ್ಳುವ ಮೂಲಕ ನಮ್ಮ ಕುಟುಂಬಕ್ಕೆ ಸೇರ್ಪಡೆಯಾಗುತ್ತಿದ್ದಾರೆ' ಎಂದು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹೇಳಿದರು.

ರಾಜ್ಯ ಹೈಕೋರ್ಟ್‌ಗೆ ನೂತನ ನ್ಯಾಯಮೂರ್ತಿಯಾಗಿ ನೇಮಕಗೊಂಡಿರುವ ಕೆ.ವಿ.ಅರವಿಂದ ಅವರಿಗೆ ಬೆಂಗಳೂರು ವಕೀಲರ ಸಂಘದ ವತಿಯಿಂದ ಗುರುವಾರ ನೀಡಲಾದ ಸ್ವಾಗತ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, 'ಗುಣಮಟ್ಟದ ಶಿಕ್ಷಣ ನಮ್ಮನ್ನು ಎತ್ತರಕ್ಕೆ ಕೊಂಡೊಯ್ಯುತ್ತದೆ' ಎಂದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಅರವಿಂದ ಅವರು ಭವಿಷ್ಯದಲ್ಲಿ ನ್ಯಾಯಾಂಗದ ಆಸ್ತಿಯಾಗುತ್ತಾರೆ ಎಂಬುದರಲ್ಲಿ ಸಂಶಯವಿಲ್ಲ' ಎಂದು ವಿಶ್ವಾಸ ವ್ಯಕ್ತಪಡಿಸಿದರು. 'ಆದಾಯ ತೆರಿಗೆ ವ್ಯಾಜ್ಯಗಳಲ್ಲಿ ಪರಿಣತಿ ಹೊಂದಿದ್ದು, ಉತ್ತಮ ವ್ಯಕ್ತಿತ್ವ ಉಳ್ಳವರಾಗಿದ್ದಾರೆ. ಅವರಿಂದ ಅನ್ಯಾಯಕ್ಕೊಳಗಾದ ಕಕ್ಷಿದಾರರಿಗೆ ಪರಿಹಾರ ದೊರೆಯುತ್ತದೆ. ಆದರೆ, ಅರ್ಜಿಗಳು ಬೇಗ ವಿಲೇವಾರಿಯಾಗುವಂತೆ ನೋಡಿಕೊಳ್ಳಬೇಕಿದೆ' ಎಂದರು.

ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್ ಮಾತನಾಡಿ, 'ಅರವಿಂದ ಅವರು ತೆರಿಗೆ ವಿಭಾಗದ ವಕೀಲ ವೃಂದದಿಂದ ಬಂದವರು. ಕೇಂದ್ರದ ಮೌಲ್ಯಯುತ ಆದಾಯ ತೆರಿಗೆ ಮತ್ತು ನೇರ ತೆರಿಗೆ ರಕ್ಷಣೆ ವಿಷಯದಲ್ಲಿ ಅವರು ಹರಿತ ದೃಷ್ಟಿಕೋನ ಹೊಂದಿದ್ದಾರೆ. ಅವರಿಂದ ಹೈಕೋರ್ಟ್ ಉತ್ತಮ ತೀರ್ಪುಗಳನ್ನು ನಿರೀಕ್ಷಿಸುತ್ತದೆ' ಎಂದರು.

ಸುದ್ದಿ 2 ನಿಮಿಷ

ಬಿಎಸ್‌ವೈಗೆ 'ಝಡ್' ಶ್ರೇಣಿ ಭದ್ರತೆ

ಬೆಂಗಳೂರು: ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರಿಗೆ ಬೆದರಿಕೆ ಇರುವ ಕಾರಣ ಅವರಿಗೆ 'ಝಡ್' ಶ್ರೇಣಿಯ ಭದ್ರತೆ ನೀಡುವ ಸಂಬಂಧ ಕೇಂದ್ರ ಗೃಹ ಸಚಿವಾಲಯ ಆದೇಶ ಹೊರಡಿಸಿದೆ.



ಯಡಿಯೂರಪ್ಪ ಅವರಿಗೆ ಮೂಲಭೂತವಾದಿ ಸಂಘಟನೆಗಳಿಂದ ಬೆದರಿಕೆ ಇರುವ ಮಾಹಿತಿಯನ್ನು ಗುಪ್ತಚರ ಇಲಾಖೆಯು ಗೃಹ ಇಲಾಖೆ ಜತೆ ಹಂಚಿಕೊಂಡಿದೆ. ಹೀಗಾಗಿ ಸಿಆರ್‌ಪಿಎಫ್ ಕಮಾಂಡೋಗಳಿಂದ ಭದ್ರತೆ ನೀಡಲು ಗೃಹ ಇಲಾಖೆ ತೀರ್ಮಾನಿಸಿದೆ ಎಂದು ಮೂಲಗಳು ಹೇಳಿವೆ.

ಸಿಆರ್‌ಪಿಎಫ್ ಸಿಬ್ಬಂದಿ ಶೀಘ್ರವೇ ಭದ್ರತೆಯ ಜವಾಬ್ದಾರಿಯನ್ನು ವಹಿಸಿಕೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ.

ಬ್ಯಾಗ್‌ನಲ್ಲಿ ಮಗು ಕದ್ದೊಯ್ದ ಮಹಿಳೆಯರು!

ಕೋಲಾರ: ಎಸ್‌ಎನ್‌ಆರ್ ಜಿಲ್ಲಾ ಆಸ್ಪತ್ರೆಯ ಹೆರಿಗೆ ವಾರ್ಡ್‌ನಿಂದ ಗುರುವಾರ ಸಂಜೆ ಮೂವರು ಅಪರಿಚಿತ ಮಹಿಳೆಯರು ಆರು ದಿನದ ಹಸುಳೆಯೊಂದನ್ನು ಬ್ಯಾಗ್‌ನಲ್ಲಿಟ್ಟುಕೊಂಡು ಕದ್ದೊಯ್ದಿದ್ದಾರೆ. ಈ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ವಾರ್ಡ್‌ನಲ್ಲಿ ತಾಯಿ ನಿದ್ದೆ ಹೋದ ಸಂದರ್ಭದಲ್ಲಿ ಹೊಂಚು ಹಾಕಿ ಮಗುವನ್ನು ಕದ್ದೊಯ್ದಿದಿದ್ದಾರೆ. ಮೂವರು ಮಹಿಳೆಯರು ನವಜಾತ ಗಂಡು ಶಿಶುವನ್ನು ಯಾರಿಗೂ ಗೊತ್ತಾಗದಂತೆ ಕಾಲೇಜು ಬ್ಯಾಗಿನಲ್ಲಿ ಬಚ್ಚಿಟ್ಟುಕೊಂಡು ಪರಾರಿಯಾಗಿದ್ದಾರೆ. ಆಸ್ಪತ್ರೆಯಿಂದ ಹೊರ ಬಂದು ಆಟೊ ಹತ್ತುತ್ತಿರುವ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಮಗುವಿಗೆ ಹೃದಯ ಸಂಬಂಧಿ ಕಾಯಿಲೆ ಇದ್ದ ಕಾರಣ ಹೆಚ್ಚಿನ ಚಿಕಿತ್ಸೆಗಾಗಿ ಶುಕ್ರವಾರ ಬೆಂಗಳೂರಿಗೆ ನಂದಿನಿ–ಪೂವರಸನ್ ದಂಪತಿ ತೆರಳಬೇಕಿತ್ತು. ಅಷ್ಟರಲ್ಲಿ ಶಿಶು ಅಪಹರಣವಾಗಿದೆ.

ಶಿಶು ಅಪಹರಣಕ್ಕೆ ಜಿಲ್ಲಾಸ್ಪತ್ರೆಯಲ್ಲಿ ಭದ್ರತೆ ಲೋಪವೇ ಕಾರಣ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಹಿಂದೆಯೂ ಮಕ್ಕಳ ಅಪಹರಣ ನಡೆದಿತ್ತು. ಆದರೂ ಸಿಬ್ಬಂದಿ ಎಚ್ಚೆತ್ತುಕೊಂಡಿಲ್ಲ ಎಂದು ಹರಿಹಾಯ್ದಿದ್ದಾರೆ.

ನಗರದಲ್ಲಿ ಇಂದು

'ಫೆಸ್ಟಿವ್ ಎಡಿಟ್' ಕೈಮಗ್ಗ ಉತ್ಪನ್ನ ಪ್ರದರ್ಶನ: ಆಯೋಜನೆ: ಡಿಸೈನ್ ಕ್ರಾಫ್ಟ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, ದೊಮ್ಮಲೂರು, ಬೆಳಿಗ್ಗೆ 10ರಿಂದ

ಚೈತನ್ಯ ಸಂಜೆ 881: ಅಧ್ಯಕ್ಷತೆ: ಪ್ರಮೀಳಾ ಗರಡಿ, 'ವಚನ ಸಾಹಿತ್ಯದಲ್ಲಿ ಮಹಿಳಾ ಸಂವೇದನೆ' ಉಪನ್ಯಾಸ: ಕೆ. ವಿ. ನಾಗರಾಜಮೂರ್ತಿ, ಉಪಸ್ಥಿತಿ: ಮಂಜುಳಾ ಶಿವಾನಂದ, ಪ್ರಮೀಳಾ ಪಾಲನೇತ್ರ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆಎಸ್‌ಎಸ್ ಕಾಲೇಜು ಸಭಾಂಗಣ, 1ನೇ ಮುಖ್ಯರಸ್ತೆ, 8ನೇ ವಿಭಾಗ, ಜಯನಗರ, ಸಂಜೆ 5.30

ಹರಿದಾಸ ಮಂಜರಿ: ರಮ್ಯಾ ಸುಧೀರ್, ರಂಜಿತಾ ವಿನಯ್, ವಾದ್ಯ ಸಹಕಾರ: ಅಮಿತ್ ಶರ್ಮಾ, ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ ಹಾಗೂ ಸ್ಥಳ: ಅಭಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, #152/1, 6ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, 3ನೇ ಬ್ಲಾಕ್ ತ್ಯಾಗರಾಜನಗರ, ಸಂಜೆ 7

ವಿಶೇಷ ಉಪನ್ಯಾಸ: 'ರಾಮಾಯಣ ಪಾತ್ರ ಪ್ರಪಂಚ; ರಾಮಾಯಣದಲ್ಲಿ ಬರುವ ಪಾತ್ರಗಳ ಒಂದು ಚಿಂತನೆ', ಉಪನ್ಯಾಸಕರು: ವಿನಾಯಕಾಚಾರ್ಯ ನಾಮಣ್ಣ, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರಸ್ವಾಮಿ ಮಠ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 7

ಶಾರದಾ ಮಹಾಭಿಷೇಕ ಮತ್ತು ಶಾರದಾ ಶರನ್ನವರಾತ್ರಿ ಮಹೋತ್ಸವ: ವೀಣಾ ವಾದನ: ಆರ್.ಕೆ. ಪ್ರಕಾಶ್, ಆಯೋಜನೆ ಹಾಗೂ ಸ್ಥಳ: ಶೃಂಗೇರಿ ಶಂಕರಮಠ, ಶಂಕರಪುರ, ಸಂಜೆ 7

ಕನ್ನಡದ ಧ್ರುವತಾರೆ ಸಾಧಕರೊಂದಿಗೆ ಮಾತು–ಕತೆ: ಮಾಲತಿ ಪಟ್ಟಣಶೆಟ್ಟಿ, ಅಧ್ಯಕ್ಷತೆ: ಮಹೇಶ ಜೋಶಿ, ಆಯೋಜನೆ ಹಾಗೂ ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5



ಮಾಲತಿ ಪಟ್ಟಣಶೆಟ್ಟಿ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

30 ಡಿವೈಎಸ್ಪಿಗಳ ಹುದ್ದೆ ಮೇಲ್ದರ್ಜೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿರುವ 30 ಡಿವೈಎಸ್‌ಪಿ ಹುದ್ದೆಗಳನ್ನು 'ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ' (ಎಎಸ್‌ಪಿ) ಹುದ್ದೆಗಳಿಗೆ ಮೇಲ್ದರ್ಜೆಗೇರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. 'ಎಸ್‌ಪಿಗಳ ಕೆಲಸದ ಒತ್ತಡ ಕಡಿಮೆ ಮಾಡಲು ಹಾಗೂ ಆಡಳಿತವನ್ನು ಪರಿಣಾಮಕಾರಿಯಾಗಿ ನಿರ್ವಹಣೆ ಮಾಡಲು ಡಿವೈಎಸ್‌ಪಿ ಹುದ್ದೆಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ' ಎಂದು ತಿಳಿಸಲಾಗಿದೆ.

ಮೇಲ್ದರ್ಜೆಗೇರಿದ ಹುದ್ದೆ: ಬೆಂಗಳೂರು, ತುಮಕೂರು, ಮೈಸೂರು, ಚಾಮರಾಜನಗರ, ದಾವಣಗೆರೆ, ಹಾವೇರಿ, ಶಿವಮೊಗ್ಗ, ಚಿತ್ರದುರ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಚಿಕ್ಕಮಗಳೂರು, ಬೆಳಗಾವಿ, ಗದಗ, ವಿಜಯಪುರ, ಧಾರವಾಡ, ಬಾಗಲಕೋಟೆ, ಕಲಬುರ್ಗಿ, ಬಳ್ಳಾರಿ, ವಿಜಯನಗರ ಡಿಸಿಆರ್‌ಬಿಗಳ ಡಿವೈಎಸ್‌ಪಿಗಳು, ಬೆಂಗಳೂರು ಕೇಂದ್ರ ವಲಯ, ಮೈಸೂರು ದಕ್ಷಿಣ ವಲಯ, ಬೆಳಗಾವಿ ಉತ್ತರ ವಲಯ, ಕಲಬುರ್ಗಿ ಈಶಾನ್ಯ ವಲಯ, ದಾವಣಗೆರೆ ಪೂರ್ವ ವಲಯ, ಬಳ್ಳಾರಿ ವಲಯ, ಮಂಗಳೂರು ಪಶ್ಚಿಮ ವಲಯದ ಆಡಳಿತ ವಿಭಾಗದ ಡಿವೈಎಸ್‌ಪಿಗಳು ಹಾಗೂ ಸಿಐಡಿಯ ನಾಲ್ವರು ಡಿವೈಎಸ್‌ಪಿಗಳು.

ಲಕ್ಕಸಂದ್ರ–ಲ್ಯಾಂಗ್‌ಫೋರ್ಡ್ ನಿಲ್ದಾಣದವರೆಗೆ 718 ಮೀಟರ್ ಪೂರ್ಣ

ಸುರಂಗದಿಂದ ಹೊರಬಂದ 'ರುದ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಕ್ಕಸಂದ್ರದಿಂದ ಲ್ಯಾಂಗ್‌ಫೋರ್ಡ್ ನಿಲ್ದಾಣದವರೆಗಿನ 718 ಮೀಟರ್ ಮೆಟ್ರೊ ಸುರಂಗ ಮಾರ್ಗ ಕೊರೆಯುವ ಕಾರ್ಯವನ್ನು 'ರುದ್ರ' ಯಂತ್ರ ಪೂರ್ಣಗೊಳಿಸಿದೆ.

ಲಕ್ಕಸಂದ್ರ–ಲ್ಯಾಂಗ್‌ಫೋರ್ಡ್ ಮೆಟ್ರೊ ನಿಲ್ದಾಣಗಳ ನಡುವೆ ಅವಳಿ ಸುರಂಗಗಳನ್ನು ಕೊರೆಯಬೇಕಿತ್ತು. ಅದರಲ್ಲಿ ಒಂದು ಸುರಂಗ ಮಾರ್ಗವನ್ನು 'ವಮಿಕ' ಯಂತ್ರವು ಆಗಸ್ಟ್ 30ಕ್ಕೆ ಪೂರ್ಣಗೊಳಿಸಿತ್ತು. ಎರಡನೇ ಸುರಂಗವನ್ನು 'ರುದ್ರ' ಯಂತ್ರವು ಜುಲೈ 14ಕ್ಕೆ ಆರಂಭಿಸಿತ್ತು. ಗುರುವಾರ (ಅ.26) ಪೂರ್ಣಗೊಳಿಸಿತು.

ಹಂತ– 2ರ ಯೋಜನೆಯಡಿ ರೀಚ್–6 ಮಾರ್ಗ ಇದಾಗಿದ್ದು, 20.99 ಕಿಲೋಮೀಟರ್ ಸುರಂಗ ನಿರ್ಮಾಣವಾಗಬೇಕು. ಅದರಲ್ಲಿ ಈಗ 18.44 ಕಿ.ಮೀ. ಉದ್ದದ ಸುರಂಗ ನಿರ್ಮಾಣ ಪೂರ್ಣಗೊಂಡಿದ್ದು. 2.55 ಕಿ.ಮೀ. ಉದ್ದದ ಕಾಮಗಾರಿ ನಡೆಯುತ್ತಿದೆ.



ಲಕ್ಕಸಂದ್ರದಿಂದ ಲ್ಯಾಂಗ್‌ಫೋರ್ಡ್ ನಿಲ್ದಾಣದವರೆಗಿನ ಮೆಟ್ರೊ ಸುರಂಗ ಮಾರ್ಗ ಕೊರೆಯುವ ಕಾರ್ಯವನ್ನು ಸುರಂಗ ಕೊರೆಯುವ ಯಂತ್ರ 'ರುದ್ರ' ಪೂರ್ಣಗೊಳಿಸಿತು

ಕಾಳೇನ ಅಗ್ರಹಾರದಿಂದ ನಾಗವಾರದವರೆಗಿನ ಒಂಬತ್ತು ಸುರಂಗಗಳಿರುವ ಮಾರ್ಗದಲ್ಲಿ 'ವರದ', 'ಅವನಿ', 'ಊರ್ಜ್ವಾ', 'ವಿಂಧ್ಯಾ', 'ಲವಿ' ಯಂತ್ರಗಳು ಸುರಂಗ ಕೊರೆಯುವ ಕಾರ್ಯವನ್ನು ಈಗಾಗಲೇ ಪೂರ್ಣಗೊಳಿಸಿವೆ.

'ವಮಿಕ' ಕೆಲಸ ಮುಗಿಸಿದ್ದು, 'ರುದ್ರ' ಕೂಡ ಅದಕ್ಕೆ ಸೇರ್ಪಡೆಯಾಗಿದೆ. ವೆಂಕಟೇಶಪುರದಿಂದ ಕಾಡಗೊಂಡನಹಳ್ಳಿವರೆಗೆ ಹಾಗೂ ಸೌತ್ ರ್‍ಯಾಂಪ್ ನಿಲ್ದಾಣದಿಂದ ಲ್ಯಾಂಗ್‌ಫೋರ್ಡ್ ಟೌನ್ ನಿಲ್ದಾಣದವರೆಗಿನ ಸುರಂಗ ಕೊರೆಯುವ ಎರಡು ಕಾಮಗಾರಿಗಳನ್ನು 'ತುಂಗಾ', 'ಭದ್ರಾ' ಯಂತ್ರಗಳು ನಡೆಸುತ್ತಿದ್ದು, ಇನ್ನೆರಡು ತಿಂಗಳಲ್ಲಿ ಪೂರ್ಣಗೊಳ್ಳಲಿವೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

27 ಎಂಜಿನಿಯರ್‌ಗಳ ಅಮಾನತು

ಬೆಂಗಳೂರು: ವರ್ಗಾವಣೆ ಮಾಡಿದ ಹುದ್ದೆಗಳಿಗೆ ವರದಿ ಮಾಡಿಕೊಳ್ಳದೆ ಕರ್ತವ್ಯಲೋಪ ಎಸಗಿದ ಆರೋಪದಲ್ಲಿ 27 ಎಂಜಿನಿಯರ್‌ಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಮಾನತು ಮಾಡಿದೆ.

ಅಮಾನತುಗೊಂಡವರಲ್ಲಿ ಐವರು ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳು (ಎಇಇ), ಏಳು ಸಹಾಯಕ ಎಂಜಿನಿಯರ್‌ಗಳು (ಎಇ) ಹಾಗೂ 15 ಕಿರಿಯ ಎಂಜಿನಿಯರ್‌ಗಳು (ಜೆಇ). ಅಮಾನತುಗೊಂಡಿರುವ ಎಲ್ಲರನ್ನೂ ತಕ್ಷಣವೇ ಹುದ್ದೆಯಿಂದ ಬಿಡುಗಡೆಗೊಳಿಸುವಂತೆ ಆದೇಶದಲ್ಲಿ ಸೂಚಿಸಲಾಗಿದೆ.

ಇಲಾಖಾ ತನಿಖೆ ಕಾದಿರಿಸಿ ಮುಂದಿನ ಆದೇಶದವರೆಗೆ ಈ ಎಂಜಿನಿಯರ್‌ಗಳನ್ನು ಅಮಾನತುಗೊಳಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರ ಕಚೇರಿ ಮೂಲಗಳು ತಿಳಿಸಿವೆ.

9 ತಿಂಗಳಲ್ಲಿ ಸಂಚಾರ ನಿಯಮ ಉಲ್ಲಂಘನೆ: ದ್ವಿಚಕ್ರ ವಾಹನ ಸವಾರರ ವಿರುದ್ಧ ಹೆಚ್ಚು ಪ್ರಕರಣ

68.31 ಲಕ್ಷ ಪ್ರಕರಣ, ₹173ಕೋಟಿ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆಗೆ ಸಂಬಂಧಪಟ್ಟಂತೆ 2023ರ ಜನವರಿಯಿಂದ ಸೆಪ್ಟೆಂಬರ್‌ವರೆಗೆ 68.31 ಲಕ್ಷ ಪ್ರಕರಣಗಳು ದಾಖಲಾಗಿದ್ದು, ಒಟ್ಟು ₹ 173.16 ಕೋಟಿ ದಂಡ ವಿಧಿಸಲಾಗಿದೆ.

ನಗರದ ಬಹುತೇಕ ವೃತ್ತಗಳು ಹಾಗೂ ರಸ್ತೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಅವುಗಳು ತೆಗೆಯುವ ಫೋಟೊ ಆಧರಿಸಿ ದಂಡ ವಿಧಿಸಲಾಗುತ್ತಿದೆ. ಜೊತೆಗೆ, ಪೊಲೀಸರೂ ತಮ್ಮ ಕ್ಯಾಮೆರಾಗಳಲ್ಲಿ ಫೋಟೊ ಕ್ಲಿಕ್ಕಿಸಿ ದಂಡ ಹಾಕುತ್ತಿದ್ದಾರೆ. ಇತ್ತೀಚೆಗೆ ದಂಡ ಪಾವತಿಗೆ ಸಂಬಂಧಿಸಿ ಶೇ 50ರಷ್ಟು ರಿಯಾಯಿತಿ ಘೋಷಿಸಲಾಗಿತ್ತು. ಈ ಸಂದರ್ಭದಲ್ಲೂ ಹಲವರು ದಂಡ ಪಾವತಿಸಿದ್ದಾರೆ.

ನಗರದಲ್ಲಿ ದ್ವಿಚಕ್ರ ವಾಹನಗಳ ಸವಾರರು ಹೆಚ್ಚಿನ ಸಂಖ್ಯೆಯಲ್ಲಿ ನಿಯಮ ಉಲ್ಲಂಘನೆ ಮಾಡಿದ್ದು, ಅವರ ವಿರುದ್ಧವೇ ಹೆಚ್ಚು ಪ್ರಕರಣಗಳು ದಾಖಲಾಗಿವೆ. 9 ತಿಂಗಳಿನಲ್ಲಿ ದಾಖಲಾದ ಪ್ರಕರಣಗಳ ಅಂಕಿ– ಅಂಶ ಇಲ್ಲಿದೆ.

ಅಂಕಿ-ಅಂಶಗಳು

68.30 ಲಕ್ಷ — ಮೋಟಾರು ವಾಹನಗಳ ಕಾಯ್ದೆಯಡಿ ದಾಖಲಾದ ಪ್ರಕರಣ

₹173.15 ಕೋಟಿ — ಮೋಟಾರು ವಾಹನಗಳ ಕಾಯ್ದೆಯಡಿ ವಿಧಿಸಿದ ದಂಡ

932 — ಕರ್ನಾಟಕ ಪೊಲೀಸ್ ಕಾಯ್ದೆಯಡಿ ದಾಖಲಾದ ಪ್ರಕರಣಗಳು

₹81,910 — ಕರ್ನಾಟಕ ಪೊಲೀಸ್ ಕಾಯ್ದೆಯಡಿ ವಿಧಿಸಿದ ದಂಡ

₹1.09 ಕೋಟಿ — ಬೆಂಗಳೂರಿನಲ್ಲಿ ನೋಂದಣಿಯಾಗಿರುವ ಒಟ್ಟು ವಾಹನಗಳ ಸಂಖ್ಯೆ


ನಿಯಮ ಉಲ್ಲಂಘಿಸಿರುವ ಪ್ರಕರಣಗಳು

ಯಾವ ನಿಯಮ ಉಲ್ಲಂಘನೆ	ಪ್ರಕರಣಗಳ ಸಂಖ್ಯೆ
ಹೆಲ್ಮೆಟ್ ರಹಿತ ಚಾಲನೆ(ಸವಾರ)	31.49 ಲಕ್ಷ
ಹೆಲ್ಮೆಟ್ ರಹಿತ ಚಾಲನೆ(ಹಿಂಬದಿ ಸವಾರ)	8.97 ಲಕ್ಷ
ತಪ್ಪು ಜಾಗದಲ್ಲಿ ವಾಹನ ನಿಲುಗಡೆ	8.91 ಲಕ್ಷ
ಸಿಗ್ನಲ್ ಜಂಪ್	8.46 ಲಕ್ಷ
ಸಿಲ್ಟ್ ಬೆಲ್ಟ್ ಧರಿಸದಿದ್ದಕ್ಕೆ	6,15 ಲಕ್ಷ
ನಿರ್ಬಂಧಿತ ರಸ್ತೆಯಲ್ಲಿ ವಾಹನ ಸಂಚಾರ	1.15 ಲಕ್ಷ
ದ್ವಿಚಕ್ರ ವಾಹನದಲ್ಲಿ ಮೂರು ಮಂದಿ ಸವಾರಿ	82,975
ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ	58,131
ಚಾಲನೆ ವೇಳೆ ಮೊಬೈಲ್ ಬಳಕೆ	42,738
ಮದ್ಯ ಕುಡಿದು ವಾಹನ ಚಾಲನೆ	3,754
ಪರವಾನಗಿ ಇಲ್ಲದೇ ವಾಹನ ಚಾಲನೆ	2,713
ಅತೀ ವೇಗದ ಚಾಲನೆ	1,883
ಇತರೆ	13,618



ನಿಯಮ ಉಲ್ಲಂಘನೆ ಪ್ರಕರಣಗಳನ್ನು ಬೆಂಗಳೂರು ಸಂಚಾರ ಪೊಲೀಸರು ಉಪಕರಣದ ಸಹಾಯದಿಂದ ಪರಿಶೀಲಿಸಿದರು

10 ವರ್ಷದ ಪ್ರಕರಣಗಳ ವಿವರ



ವಾಹನ ಮೇಲಿನ ದಂಡ ತಿಳಿಯಿರಿ

ಸಂಚಾರ ನಿಯಮ ಉಲ್ಲಂಘನೆಗೆ ಸಂಬಂಧಪಟ್ಟಂತೆ ವಾಹನಗಳ ಮೇಲೆ ದಾಖಲಿಸಿರುವ ಪ್ರಕರಣ ಹಾಗೂ ದಂಡದ ಮಾಹಿತಿ ತಿಳಿಯಲು ಆನ್‌ಲೈನ್ ವ್ಯವಸ್ಥೆ ಇದೆ.

'https://btp.gov.in/' ಜಾಲತಾಣದಲ್ಲಿ 'ನಿಮ್ಮ ದಂಡವನ್ನು ಪಾವತಿಸಿ' ಆಯ್ಕೆಯಲ್ಲಿರುವ 'ವಾಹನ ಸಂಖ್ಯೆಯ ಮೂಲಕ ಹುಡುಕಾಟ ಮತ್ತು ಪಾವತಿಸುವ ಉಲ್ಲಂಘನೆ' ಕ್ಲಿಕ್ ಮಾಡಬೇಕು. ನಂತರ, ಕರ್ನಾಟಕ ಒನ್ ಲಿಂಕ್ ತೆರೆದುಕೊಳ್ಳುತ್ತದೆ. ಇದರಲ್ಲಿ ವಾಹನಗಳ ನೋಂದಣಿ ಸಂಖ್ಯೆ ನಮೂದಿಸಿದರೆ, ಪ್ರಕರಣ ಹಾಗೂ ದಂಡದ ವಿವರ ಲಭ್ಯವಾಗುತ್ತದೆ. ಆನ್‌ಲೈನ್ ಮೂಲಕ ದಂಡ ಪಾವತಿಗೂ ಅವಕಾಶವಿದೆ.

ಯಾವ ವಾಹನಕ್ಕೆ ಎಷ್ಟು ಪ್ರಕರಣ

ವಾಹನ ಬಗೆಗಳು	ಪ್ರಕರಣ
ದ್ವಿಚಕ್ರ ವಾಹನಗಳು	52.24 ಲಕ್ಷ
ಬಸ್‌ಗಳು	58,916
ಸರಕು ವಾಹನಗಳು	7,694
ಆಟೊಗಳು	11,622
ಲಘು ವಾಹನಗಳು	14.93 ಲಕ್ಷ
ಟೆಂಪೊಗಳು	34,278

ನಗರದಲ್ಲಿ ನೋಂದಣಿಯಾಗಿರುವ ವಾಹನಗಳ ಸಂಖ್ಯೆ (31–03–2023ರ ಮಾಹಿತಿ)

ವಾಹನ ಬಗೆ	ಒಟ್ಟು ವಾಹನಗಳು
ದ್ವಿಚಕ್ರ ವಾಹನಗಳು	73.32 ಲಕ್ಷ
ಲಘು ವಾಹನಗಳು	22.33 ಲಕ್ಷ
ಆಟೊಗಳು	3 ಲಕ್ಷ
ಭಾರಿ ಸಾರಿಗೆ ವಾಹನಗಳು	2 ಲಕ್ಷ
ಭಾರಿ ಸರಕು ವಾಹನಗಳು	2 ಲಕ್ಷ
ಇತರೆ	5.74 ಲಕ್ಷ

ಅಂಕಿ-ಅಂಶಗಳು

3706 — 2023ರ ಜನವರಿ–ಸೆಪ್ಟೆಂಬರ್‌ನವರೆಗಿನ ಅಪಘಾತ ಪ್ರಕರಣ

651 — ಮೃತರು

3,155 — ಗಾಯಗೊಂಡವರು

ಬಸ್ ಜಾಗದಲ್ಲಿ ಖಾಸಗಿ ವಾಹನ

ಬಿಎಂಟಿಸಿ ಬಸ್‌ಗಳನ್ನು ನಿಲ್ಲಿಸಲು ನಿಗದಿಪಡಿಸಲಾಗಿರುವ ನಿಲ್ದಾಣ ಹಾಗೂ ತಂಗುದಾಣದ ಜಾಗದಲ್ಲಿ ಖಾಸಗಿ ವಾಹನಗಳನ್ನು ನಿಲ್ಲಿಸಿದ್ದಕ್ಕೆ ಸಂಬಂಧಪಟ್ಟಂತೆ **4,479** ದಾಖಲಿಸಲಾಗಿದೆ.

ಕೆಲಸ ಮಾಡದ ಹೆದ್ದಾರಿ ಎಐ ಕ್ಯಾಮೆರಾ

• ಓದೇಶ ಸಕಲೇಶಪುರ

ರಾಮನಗರ: ಬೆಂಗಳೂರು– ಮೈಸೂರು ಹೆದ್ದಾರಿಯಲ್ಲಿ ಮಿತಿ ಮೀರಿ ವೇಗವಾಗಿ ಚಲಿಸುವ ವಾಹನಗಳ ಮೇಲೆ ನಿಗಾ ಇಡಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಅಳವಡಿಸಿರುವ ಎಐ (ಕೃತಕ ಬುದ್ಧಿಮತ್ತೆ) ಕ್ಯಾಮೆರಾ ತನ್ನ ಕೆಲಸ ನಿಲ್ಲಿಸಿದೆ.

ತಾಲ್ಲೂಕಿನ ಬಿಡದಿ ಹೊರವಲಯದ ತಿರುವಿನ ಬಳಿ ಕ್ಯಾಮೆರಾ ಅಳವಡಿಸಲಾಗಿತ್ತು. ಮೈಸೂರು ಕಡೆಯಿಂದ ಬರುವ ವಾಹನಗಳು ತಿರುವು ಹಾದು ಹೋದಾಗ, ಅವುಗಳ ವೇಗ ಎಷ್ಟಿದೆ ಎಂಬುದು ಕ್ಯಾಮೆರಾ ದಲ್ಲಿ ದಾಖಲಾಗಿ, ನಂತರ ಸಾರ್ವಜನಿಕವಾಗಿ ಡಿಸ್‌ಪ್ಲೇ ಆಗುತ್ತಿತ್ತು. ಜೊತೆಗೆ, ವಾಹನದ ನಂಬರ್ ಪ್ಲೇಟ್ ಚಿತ್ರವೂ ಸೆರೆಯಾಗುತ್ತಿತ್ತು.

ಕ್ಯಾಮೆರಾದಲ್ಲಿ ದಾಖಲಾಗುವ ಮಾಹಿತಿ ಮೇರೆಗೆ ವಾಹನದ ವಿವರವನ್ನು ಪೊಲೀಸರು ಸುಲಭವಾಗಿ ಕಲೆ ಹಾಕುತ್ತಾರೆ. ನಿಯಮ ಮೀರಿ ವೇಗವಾಗಿ ಸಂಚರಿಸುವವರ ವಿರುದ್ಧ ಪ್ರಕರಣ ದಾಖಲಿಸಿ ದಂಡ ಸಂಗ್ರಹಿಸುತ್ತಾರೆ. ಇದು ಸಂಚಾರ ಪೊಲೀಸರನ್ನು ರಸ್ತೆಗಿಳಿಸದೆ ಎಐ ಕ್ಯಾಮೆರಾ ಮೂಲಕವೇ ನಿಯಮ ಉಲ್ಲಂಘಿಸುವವರ ಮೇಲೆ ನಿಗಾ ಇಟ್ಟು, ಸವಾರರು ನಿಯಮ ಪಾಲಿಸುವಂತೆ ಮಾಡಲು ಸುಲಭ ಮಾರ್ಗವಾಗಿತ್ತು.

ವೇಗಕ್ಕಿಲ್ಲ ಮಿತಿ: ಎಐ ಕ್ಯಾಮೆರಾ ಕೈ ಕೊಟ್ಟಿರುವುದರಿಂದ ವಾಹನ ಸವಾರರು ಹೆದ್ದಾರಿಯಲ್ಲಿ ಸದ್ಯ ನಿಗದಿಪಡಿಸಿರುವ ಪ್ರತಿ ಗಂಟೆಗೆ 100 ಕಿ.ಮೀ. ವೇಗದ ಮಿತಿ ಮೀರಿ ಸಂಚರಿಸುತ್ತಿದ್ದಾರೆ. ಮುಂಚೆ ಕ್ಯಾಮೆರಾ ಭಯದಿಂದ ವೇಗದ ಮಿತಿಯೊಳಗೆ ಸಂಚರಿಸುತ್ತಿದ್ದವರಿಗೆ ಈಗ ಲಗಾಮು ಇಲ್ಲದಂತಾಗಿದೆ.

ಬೆಂಗಳೂರು ಮೈಸೂರು ಹೆದ್ದಾರಿ

ಹೆದ್ದಾರಿ ಸಂಚಾರಕ್ಕೆ ಮುಕ್ತವಾದ 9 ತಿಂಗಳಲ್ಲಿ ಸಂಭವಿಸಿದ ಅಪಘಾತಗಳಲ್ಲಿ 158 ಜನ ಮೃತಪಟ್ಟಿದ್ದರು. ಈ ಬಗ್ಗೆ, 'ಪ್ರಜಾವಾಣಿ'ಯ ವಿಶೇಷ ವರದಿ ಗಮನ ಸೆಳೆದಿತ್ತು. ಆಗ ಹೆದ್ದಾರಿ ಸುರಕ್ಷತೆಗೆ ಬಗ್ಗೆ ವ್ಯಾಪಕ ಟೀಕೆಗಳು ಕೇಳಿ ಬಂದಿದ್ದವು. ಅದರ ಬೆನ್ನಲ್ಲೇ, ಸಂಚಾರ ಮತ್ತು ರಸ್ತೆ ಸುರಕ್ಷತೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಅವರು ಹೆದ್ದಾರಿ ಪರಿಶೀಲನೆ ನಡೆಸಿದ್ದರು.

ಹೆದ್ದಾರಿ ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸರೊಂದಿಗೂ ಎಡಿಜಿಪಿ ಸಭೆ ನಡೆಸಿದ್ದರು. ಆಗ ಜಿಲ್ಲಾ ಪೊಲೀಸರು ಅಪಘಾತಗಳಿಗೆ ಕಾರಣ ಮತ್ತು ನಿಯಂತ್ರಣಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರಕ್ಕೆ ನೀಡಿದ್ದ ವರದಿ ಬಗ್ಗೆ ಗಮನ ಸೆಳೆದಿದ್ದರು. ಅಪಘಾತ ತಡೆಗಾಗಿ ಎಐ ಕ್ಯಾಮೆರಾ ಅಳವಡಿಕೆ ಸೇರಿದಂತೆ ವಿವಿಧ ಕ್ರಮಗಳನ್ನು ಸೂಚಿಸಿದ್ದರು.

ಆಗ ಪ್ರಾಧಿಕಾರದವರು ರಾಮನಗರ, ಮಂಡ್ಯ ಹಾಗೂ ಮೈಸೂರಿನಲ್ಲಿ ಪ್ರಾಯೋಗಿಕವಾಗಿ ಕ್ಯಾಮೆರಾ ಅಳವಡಿಸಿದ್ದರು. ಜೊತೆಗೆ ಹೆದ್ದಾರಿಯುದ್ದಕ್ಕೂ ಕ್ಯಾಮೆರಾ ಅಳವಡಿಸಲು ಟೆಂಡರ್ ಕರೆದು ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದರು. ಆದರೆ, ಇನ್ನೂ ಆ ಕೆಲಸವಾಗಿಲ್ಲ.

ಕ್ಯಾಮೆರಾ ಕಾರ್ಯಾಚರಣೆ ಸ್ಥಗಿತ ಕುರಿತು ಪ್ರತಿಕ್ರಿಯೆ ಪಡೆಯಲು 'ಪ್ರಜಾವಾಣಿ'ಯು ಪ್ರಾಧಿಕಾರದ ಯೋಜನಾ ನಿರ್ದೇಶಕ ರಾಹುಲ್ ಗುಪ್ತಾ ಅವರಿಗೆ ಕರೆ ಮಾಡಿದಾಗ ಸ್ವೀಕರಿಸಲಿಲ್ಲ.

ಅತಿ ವೇಗ: 1,807 ಪ್ರಕರಣ

ಹೆದ್ದಾರಿಯಲ್ಲಿ ನಿಯಮ ಉಲ್ಲಂಘಿಸಿ ಅತಿ ವೇಗವಾಗಿ ಸಂಚರಿಸುವ ವಾಹನಗಳ ವಿರುದ್ಧ ಕಾರ್ಯಾಚರಣೆ ಕೈಗೊಂಡಿರುವ ರಾಮನಗರ ಸಂಚಾರ ಠಾಣೆ ಪೊಲೀಸರು ಕಳೆದ ಮೂರೂವರೆ ತಿಂಗಳಲ್ಲಿ 1,807 ಪ್ರಕರಣಗಳನ್ನು ದಾಖಲಿಸಿದ್ದಾರೆ. ಉಲ್ಲಂಘನೆ ಮಾಡುವವರಿಗೆ ₹1 ಸಾವಿರ ದಂಡ ಸಹ ವಿಧಿಸುತ್ತಿದ್ದಾರೆ. ಅತಿ ವೇಗದ ಮೇಲೆ ನಿಗಾ ಇಡಲು ಮೂರು ಇಂಟರ್‌ಸೆಪ್ಟರ್ ವಾಹನಗಳಿವೆ. ಹೆದ್ದಾರಿ ಪ್ರಾಧಿಕಾರದವರು ಸರಿಯಾಗಿ ಎಐ ಕ್ಯಾಮೆರಾ ಹಾಕಿಲ್ಲದಿರುವುದರಿಂದ ನಮ್ಮ ವಾಹನಗಳ ಮೂಲಕವೇ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಸಂಚಾರ ಪೊಲೀಸರು ತಿಳಿಸಿದರು.

'ಲಾಂಛನದಲ್ಲಿ ಕನ್ನಡ ಅಂಕಿಗೆ ಅಪಮಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಸುವರ್ಣ ಸಂಭ್ರಮ ಲಾಂಛನದಲ್ಲಿ ಕನ್ನಡ ಅಂಕಿಗೆ ಅಪಮಾನ ಮಾಡಲಾಗಿದೆ' ಎಂದು ಕರ್ನಾಟಕ ವಿಕಾಸ ರಂಗ ಆಕ್ಷೇಪ ವ್ಯಕ್ತಪಡಿಸಿದೆ.

'ಮೈಸೂರು ರಾಜ್ಯವೆಂದು ಇದ್ದ ಹೆಸರನ್ನು 1973ರಲ್ಲಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ಕರ್ನಾಟಕ ಎಂದು ಮರು ನಾಮಕರಣ ಮಾಡಿದರು. ಆ ಹೆಸರು ನಾಮಕರಣ ಮಾಡಿ 50 ವರ್ಷಗಳು ತುಂಬಿದ ಸಂದರ್ಭದಲ್ಲಿ ರಾಜ್ಯ ಸರ್ಕಾರ ಕರ್ನಾಟಕ ಸುವರ್ಣ ಸಂಭ್ರಮ ಆಚರಿಸುತ್ತಿದೆ. ಈ ಸಂಬಂಧ ರೂಪಿಸಲಾಗಿರುವ ಲಾಂಛನದಲ್ಲಿ ಇಂಡೋ-ಅರೇಬಿಕ್ ಅಂಕಿ ಮೇಲ್ಭಾಗದಲ್ಲಿಯೇ ದೊಡ್ಡದಾಗಿ ರಾರಾಜಿಸುತ್ತಿದೆ. ಕನ್ನಡ ಅಂಕಿ ಕೆಳಭಾಗದಲ್ಲಿ ತುಳಿತಕ್ಕೊಳಗಾಗಿ ನರಳುತ್ತಿದೆ' ಎಂದು ವಿಕಾಸ ರಂಗದ ಅಧ್ಯಕ್ಷ ವ.ಚ.ಚನ್ನೇಗೌಡ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಕನ್ನಡವನ್ನು ಉಳಿಸಿ ಬೆಳೆಸಬೇಕಾದ ರಾಜ್ಯ ಸರ್ಕಾರವೇ ಕನ್ನಡ ಅಂಕಿಗೆ ಈ ರೀತಿ ಅಪಮಾನ ಮಾಡಿದರೆ ಹೇಗೆ? ಕನ್ನಡ ವಿರೋಧಿ ಧೋರಣೆ ಖಂಡನೀಯ. ಲಾಂಛನದಲ್ಲಿ ಕನ್ನಡ ಅಂಕಿಯನ್ನು ಮಾತ್ರ ಹಾಕಬೇಕು. ಇಲ್ಲದಿದ್ದರೆ ಸರ್ಕಾರ ನವೆಂಬರ್ 1ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳುವ ರಾಜ್ಯೋತ್ಸವ ಸಮಾರಂಭದಲ್ಲಿ ಪ್ರತಿಭಟನೆ ನಡೆಸಲಾಗುವುದು' ಎಂದು ಎಚ್ಚರಿಕೆ ನೀಡಿದ್ದಾರೆ.

'ರಾಜ್ಯ ಸರ್ಕಾರವೂ ಸಮಿತಿ ರಚಿಸಲಿ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಪಠ್ಯಕ್ರಮದಲ್ಲಿ 'ಇಂಡಿಯಾ' ಬದಲು 'ಭಾರತ' ಎಂದು ಬದಲಾಯಿಸುವ ಕುರಿತು ರಾಜ್ಯ ಸರ್ಕಾರವೂ ಸಮಿತಿ ರಚಿಸಿ, ತೀರ್ಮಾನ ಕೈಗೊಳ್ಳಬೇಕು' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಆಗ್ರಹಿಸಿದರು.

ಕೇಂದ್ರದ ಅಜೆಂಡಾಕ್ಕೆ ಮಣೆ ಹಾಕಲು 'ಭಾರತ': ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಂಡಿಯಾ' ಮತ್ತು 'ಭಾರತ' ಹೆಸರುಗಳು ಜನಮಾನಸದಲ್ಲಿ ಬೆರೆತು ಹೋಗಿವೆ. ಆದರೂ ಅಂಥ ರಾಷ್ಟ್ರೀಯ ಭಾವವನ್ನು ಪ್ರಚೋದಿಸಲು ಶಾಲಾ ಪಠ್ಯದಲ್ಲಿ 'ಇಂಡಿಯಾ'ವನ್ನು 'ಭಾರತ' ಎಂದು ಬದಲಾಯಿಸಲು ಎನ್‌ಸಿಇಆರ್‌ಟಿ ಶಿಫಾರಸು ಮಾಡಿರುವುದು ಕೇಂದ್ರ ಸರ್ಕಾರದ ಅಜೆಂಡಾಕ್ಕೆ ಮಣೆ ಹಾಕುವಂತಿದೆ ಎಂದು ಎಐಡಿಎಸ್‌ಒ ಟೀಕಿಸಿದೆ.

ಈಗಾಗಲೇ ದೇಶದ ಸಂವಿಧಾನದಲ್ಲಿ 'ಭಾರತ' ಮತ್ತು 'ಇಂಡಿಯಾ' ಎರಡೂ ಹೆಸರುಗಳನ್ನು ಸ್ವೀಕರಿಸಲಾಗಿದೆ. ಹಾಗಾಗಿ ಕೇಂದ್ರದ ಅಜೆಂಡಾದ ವಿರುದ್ಧ ಎಲ್ಲರೂ ಧ್ವನಿ ಎತ್ತಬೇಕು ಎಂದು ಆಗ್ರಹಿಸಿದೆ.

ಒಂದೇ ಭಾಷೆ ಹೇರುವ ಮೂಲಕ ಕೇಂದ್ರ ಶಿಕ್ಷಣದ ಪ್ರಜಾತಾಂತ್ರಿಕ ಮೌಲ್ಯಗಳಿಗೆ ವಿರುದ್ಧವಾದ ಶಿಕ್ಷಣದ ಕೇಂದ್ರೀಕರಣಕ್ಕೆ ಮುಂದಾಗಿದೆ. ಶಿಕ್ಷಣದ ವೈಜ್ಞಾನಿಕ ಮತ್ತು ಧರ್ಮನಿರಪೇಕ್ಷ ಆಶಯಗಳಿಗೆ ವಿರುದ್ಧವಾಗಿ ಭಾರತೀಯ ಜ್ಞಾನ ವ್ಯವಸ್ಥೆಯನ್ನು ಅಳವಡಿಸುವ ಶಿಫಾರಸು ಕೂಡ ಸಮಿತಿ ಮಾಡಿದೆ. ಇದು ದೇಶದ ಶಿಕ್ಷಣ ವ್ಯವಸ್ಥೆಯನ್ನು ಬಾಧಿಸುತ್ತಿರುವ ವಾಸ್ತವ ಸಮಸ್ಯೆಗಳಿಂದ ಗಮನವನ್ನು ವಿಚಲಿತಗೊಳಿಸುವ ಕ್ರಿಯೆ ಎಂದು ಅಖಿಲ ಭಾರತ ಡೆಮಾಕ್ರಟಿಕ್ ಸ್ಟೂಡೆಂಟ್ ಅಸೋಸಿಯೇಶನ್ (ಎಐಡಿಎಒ) ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ತಿಳಿಸಿದ್ದಾರೆ.









ರಸ್ತೆ ನಿರ್ಮಿಸದಂತೆ ಜೀವ ಬೆದರಿಕೆ: ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಿಡಿಎ ಬಡಾವಣೆಯಲ್ಲಿ ರಸ್ತೆ ನಿರ್ಮಿಸದಂತೆ ಎ.ಎಂ. ಹನುಮಂತೇಗೌಡ ಅವರು ಬಿಡಿಎ ಎಂಜಿನಿಯರ್‌ಗೆ ಜೀವ ಬೆದರಿಕೆ ಹಾಕಿರುವ ಬಗ್ಗೆ ಎಫ್‌ಐಆರ್ ದಾಖಲಾಗಿದೆ.

ನಾಡಪ್ರಭು ಕೆಂಪೇಗೌಡ ಬಿಡಿಎ ಬಡಾವಣೆ ನಿರ್ಮಾಣ ಕಾಮಗಾರಿಯ ನಿರ್ವಹಣೆ ಮಾಡುತ್ತಿರುವ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅಶೋಕ್ ಎಚ್. ಭಾಗಿ ಅವರು ಕುಂಬಳಗೋಡು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

‘ಹನುಮಂತೇಗೌಡ ಎರಡು ಮೂರು ಬಾರಿ ರಸ್ತೆ ನಿರ್ಮಾಣ ಸ್ಥಳಕ್ಕೆ ಬಂದು ಕಾಮಗಾರಿಯನ್ನು ಸ್ಥಗಿತಗೊಳಿಸಿದ್ದರು. ಪ್ರತಿ ದಿನವೂ ಕಾಮಗಾರಿ ನಿಲ್ಲಿಸುವಂತೆ ಮೊಬೈಲ್ ಕರೆ ಮಾಡಿ ಧಮಕಿ ಹಾಕುತ್ತಾರೆ. ಅ.25ರಂದೂ ಮಧ್ಯಾಹ್ನ ಕರೆ ಮಾಡಿ ಜೀವ ಬೆದರಿಕೆ ಹಾಕಿದರು’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ಸೂಲಿಕೆರೆ ಗ್ರಾಮದ ಸರ್ವೆ ನಂ. 43ರ ಭೂ ಮಾಲೀಕರು ಬೇರೆಯವರಾಗಿದ್ದು, ಕಾಯ್ದೆ ಪ್ರಕಾರ ಜಮೀನು ಸ್ವಾಧೀನಪಡಿಸಿಕೊಂಡು ಐ–ತೀರ್ಪು ರಚಿಸಿ, ತಾಂತ್ರಿಕ ವಿಭಾಗಕ್ಕೆ ರಸ್ತೆ ನಿರ್ಮಿಸಲು ಹಸ್ತಾಂತರಿಸಲಾಗಿದೆ. ಈ ಭೂ ಮಾಲೀಕರಿಗೂ ಹನುಮಂತೇಗೌಡ ಅವರಿಗೂ ಸಂಬಂಧವಿಲ್ಲ. ಮಧ್ಯವರ್ತಿಯಾಗಿ ಕೆಲಸ ಮಾಡುತ್ತಿದ್ದೇನೆ, ನಾನೇ ಈ ಭೂಮಿಗೆ ಬಂಡವಾಳ ಹಾಕಿದ್ದೇನೆ ಎಂದು ಹೇಳಿದ್ದಾರೆ. ಅವರು ಬೆದರಿಕೆ ಹಾಕಿರುವ ಸಂಭಾಷಣೆಯ ರೆಕಾರ್ಡ್ ಅನ್ನು ಪೆನ್‌ಡ್ರೈವ್ ಮೂಲಕ ನೀಡುತ್ತಿದ್ದೇನೆ’ ಎಂದು ಅಶೋಕ್ ದೂರಿನಲ್ಲಿ ವಿವರಿಸಿದ್ದಾರೆ.

29ಕ್ಕೆ ಕಲಾ ಸೇವಾ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ರಿದಮ್ಸ್ ಕಾಲೇಜ್ ಆಫ್ ಫೈನ್ ಆರ್ಟ್‌ನ ಘಟಕವಾದ ‘ಹಜಾರಿ ಪ್ರಸಾದ್ ಫೌಂಡೇಷನ್’ ನೀಡುವ ‘ಕಲಾ ಸೇವಾ ಪುರಸ್ಕಾರಕ್ಕೆ ತಬಲಾ ವಾದಕ ಪಂಡಿತ್ ರವೀಂದ್ರ ಯಾವಗಲ್, ಗಾಯಕ–ಸಾರಂಗಿ ವಾದಕ ಉಸ್ತಾದ್ ಫೈಯಾಜ್ ಖಾನ್, ಮೃದಂಗ ವಾದಕ ಆನೂರು ಅನಂತ ಕೃಷ್ಣ ಶರ್ಮ ಅವರನ್ನು ಆಯ್ಕೆ ಮಾಡಲಾಗಿದೆ.

ಅ.29ರಂದು ಮಧ್ಯಾಹ್ನ 12.30ಕ್ಕೆ ವೈಯಾಲಿಕಾವಲ್‌ನಲ್ಲಿರುವ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ. ಎಸ್‌–ವ್ಯಾಸ ವಿಶ್ವವಿದ್ಯಾಲಯದ ಕುಲಪತಿ ಎಚ್. ಆರ್. ನಾಗೇಂದ್ರ, ರಿದಮ್ಸ್ ಕಾಲೇಜ್ ಆಫ್ ಫೈನ್ ಆರ್ಟ್ಸ್ ಸಂಸ್ಥಾಪಕ ಅಧ್ಯಕ್ಷ ವಿಶ್ವನಾಥ ಪ್ರಸಾದ್ ಎಚ್. ಭಾಗವಹಿಸುವರು.

ಸುಧಾ, ಮಯೂರ ಓದಿರಿ

‘ಹಣ ಕೊಳ್ಳೆಹೊಡೆಯಲು ಕೆಎಂಇಆರ್‌ಸಿ ನಿರ್ದೇಶಕ ಮಂಡಳಿ ಪುನರ್‌ರಚನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ‘ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮವನ್ನು(ಕೆ-ಎಂಇಆರ್‌ಸಿ) ಪುನರ್ ರಚಿಸುವ ಮೂಲಕ, ಅದನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳಲು ಮುಂದಾಗಿದ್ದು, ನಿಗಮದಲ್ಲಿರುವ ₹24 ಸಾವಿರ ಕೋಟಿ ಹಣ ಕೊಳ್ಳೆಯ ಹೊಡೆಯಲು ಅಡ್ಡದಾರಿ ಹಿಡಿಯುತ್ತಿದೆ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಪ್ರಧಾನ ಕಾರ್ಯದರ್ಶಿ ದೀಪಕ್ ಸಿ.ಎನ್. ಆರೋಪಿಸಿದರು.

ಇಲ್ಲಿವರೆಗೆ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಅಧಿಕಾರಿ ಈ ನಿಗಮದ ಅಧ್ಯಕ್ಷರಾಗಿರಬೇಕು ಎಂಬ ನಿಯಮವಿತ್ತು. ಆದರೆ, ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗೃಹ ಕಚೇರಿಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಗಣಿ ಸಚಿವರು ನಿಗಮವನ್ನು ಪುನರ್‌ರಚಿಸುವ ಪ್ರಸ್ತಾವವನ್ನು ಸಲ್ಲಿಸಿದ್ದಾರೆ. ಇದು ಹಣ ದುರುಪಯೋಗಕ್ಕೆ ಮುಂದಾಗಿರುವುದಕ್ಕೆ ಸಾಕ್ಷಿ ಎಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹೊಸ ಪ್ರಸ್ತಾವದಲ್ಲಿ ನಿಗಮಕ್ಕೆ ಮುಖ್ಯಮಂತ್ರಿ ಅಧ್ಯಕ್ಷರಾಗಬೇಕು. ಗಣಿ ಸಚಿವ ಉಪಾಧ್ಯಕ್ಷರಾಗಬೇಕು. ಗಣಿ ಬಾಧಿತ ಬಳ್ಳಾರಿ, ವಿಜಯನಗರ, ಚಿತ್ರದುರ್ಗ, ತುಮಕೂರು ಜಿಲ್ಲೆಗಳ ಉಸ್ತುವಾರಿ ಸಚಿವರು ನಿರ್ದೇಶಕರಾಗಿರಬೇಕು ಎಂದು ತಿಳಿಸಲಾಗಿದೆ. ಆದರೆ, ಸುಪ್ರೀಂ ಕೋರ್ಟ್ ಅಧೀನದಲ್ಲಿರುವ ಗಣಿ ಪರಿಸರ ಪುನಶ್ಚೇತನ ನಿಗಮವನ್ನು ಈ ರೀತಿ ಪುನರ್‌ರಚಿಸಲು ಸಾಧ್ಯವಿಲ್ಲ. ಸರ್ಕಾರಕ್ಕೆ ಯಾರು ಈ ಸಲಹೆ ನೀಡಿದ್ದಾರೋ ಗೊತ್ತಿಲ್ಲ. ಇದು ಸುಪ್ರೀಂಕೋರ್ಟ್‌ನಿಂದ ಛೀಮಾರಿ ಹಾಕಿಸಿಕೊಳ್ಳುವ ಕಾರ್ಯ ಎಂದು ಹೇಳಿದರು.

ಕೆಎಂಇಆರ್‌ಸಿ 2014ರಲ್ಲಿ ಸ್ಥಾಪಿಸಲಾಗಿತ್ತು. ನಿಗಮದಲ್ಲಿ ₹ 24 ಸಾವಿರ ಕೋಟಿ ನಿಧಿ ಇದ್ದು, ಗಣಿ ಬಾಧಿತ ಪ್ರದೇಶಗಳ ಅಭಿವೃದ್ಧಿಗಾಗಿ ಇದನ್ನು ಬಳಸಬೇಕು. ‘ಗಣಿ ಬಾಧಿತ ಪ್ರದೇಶಗಳ ಸಮಗ್ರ ಪರಿಸರ ಯೋಜನೆ’ಯ ವ್ಯಾಪ್ತಿಯಲ್ಲಿ ನಿರ್ದಿಷ್ಟ ಕಾರ್ಯಕ್ರಮಗಳ ಬಗ್ಗೆ ಸರ್ಕಾರದ ವಿವಿಧ ಇಲಾಖೆಗಳು ಪ್ರಸ್ತಾವನೆ ಸಲ್ಲಿಸಬೇಕು. ಅದಕ್ಕೆ ಕೆಎಂಇಆರ್‌ಸಿ ಅನುಮೋದನೆ ನೀಡಿದ ಬಳಿಕ ಯೋಜನೆ ಜಾರಿ ಮಾಡಬಹುದು. ಆದರೆ, ಸರ್ಕಾರದ ಬೇಜವಾಬ್ದಾರಿತನದಿಂದಾಗಿ ಇಲ್ಲಿವರೆಗೆ ಯಾವುದೇ ಯೋಜನೆ ಜಾರಿಯಾಗಿಲ್ಲ ಎಂದು ಟೀಕಿಸಿದರು.

ದಿವಾಳಿಯ ಅಂಚಿನಲ್ಲಿರುವ ರಾಜ್ಯ ಸರ್ಕಾರವು ಹಿಂದೆ ಪರಿಶಿಷ್ಟ ಜಾತಿ ಮತ್ತು ಪಂಗಡದ ನಿಧಿಗೆ ಕೈ ಹಾಕಲು ಹೊರಟಿತ್ತು. ತೀವ್ರ ವಿರೋಧದ ಬಳಿಕ ಹಿಂದಕ್ಕೆ ಸರಿಯಿತು. ಈಗ ಕೆಎಂಇಆರ್‌ಸಿ ನಿಧಿಗೆ ಕಣ್ಣು ಹಾಕಿದೆ ಎಂದು ಆರೋಪಿಸಿದ ಅವರು, ಹಣ ದುರುಪಯೋಗ ಮಾಡಿಕೊಳ್ಳುವ ವಿಚಾರವನ್ನು ಕೈಬಿಡಬೇಕು. ಅಕ್ರಮ ಗಣಿಗಾರಿಕೆಯಿಂದಾಗಿರುವ ನಷ್ಟವನ್ನು ವಸೂಲಿ ಮಾಡಲು, ಅಕ್ರಮ ಗಣಿಗಾರಿಕೆ ನಿಲ್ಲಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

‘ನಗುವಿಗಿದೆ ಇಲ್ಲಿ ಜಾಗ’

ಡಾಲಿ ಧನಂಜಯ ನಿರ್ಮಿಸಿ, ನಾಗಭೂಷಣ್ ನಾಯಕನಾಗಿ ನಟಿಸಿರುವ **ಟಗರು ಪಲ್ಯ** ಸಿನಿಮಾ ಇಂದು (ಅ.27) ತೆರೆ ಕಾಣುತ್ತಿದೆ. ಸಣ್ಣ ಸಣ್ಣ ಪಾತ್ರಗಳೊಂದಿಗೆ ನಗಿಸುತ್ತಲೇ ದೊಡ್ಡ ಅವಕಾಶ ಪಡೆದಿರುವ ನಾಗಭೂಷಣ್ ಸಿನಿಮಾದ ಕುರಿತು **ವಿನಾಯಕ ಕೆ.ಎಸ್** ಅವರೊಂದಿಗೆ ಮಾಹಿತಿ ಹಂಚಿಕೊಂಡಿದ್ದಾರೆ...


ನಾಗಭೂಷಣ್, ಅಮೃತಾ

• ಈ ಸಿನಿಮಾದಲ್ಲಿ ನಿಮ್ಮ ಪಾತ್ರವೇನು?

ಒಂದು ಮನೆಯನ್ನು ನಿಭಾಯಿಸುವ ಹಳ್ಳಿ ಹುಡುಗ ‘ಚಿಕ್ಕ’ನಾಗಿ ಕಾಣಿಸಿಕೊಂಡಿದ್ದೇನೆ. ಮದ್ದೂರಿನಿಂದ ಕೊಳ್ಳೆಗಾಲದವರೆಗಿನ ಗ್ರಾಮೀಣ ಸೊಗಡಿನ ಕಥೆ ಇದೆ. ಭರಚುಕ್ಕಿ ಜಲಪಾತದ ಸುತ್ತಮುತ್ತಲಿನ ಊರುಗಳಲ್ಲಿ ಚಿತ್ರೀಕರಣಗೊಂಡಿದೆ. ಹಾಸ್ಯ, ಮನರಂಜನೆಯ ಜೊತೆಗೆ ಇವತ್ತಿಗೆ ತೀರ ಅಗತ್ಯವಿರುವ ಗಟ್ಟಿಯಾದ ಸಂದೇಶ ಕೂಡ ಚಿತ್ರದಲ್ಲಿದೆ. ಹಳ್ಳಿ ಹುಡುಗರಿಗೆ ಮದುವೆಯಾಗದಿರುವುದು, ಗ್ರಾಮೀಣ ಭಾಗದ ಸಮಸ್ಯೆಗಳು, ಇಂದಿನ ಪೀಳಿಗೆ ಊರಿನಿಂದ ನಗರದತ್ತ ವಲಸೆ ಹೋಗುತ್ತಿರುವುದರತ್ತ ಬೆಳಕು ಚೆಲ್ಲಿದ್ದೇವೆ.

• ನೀವು ನಾಯಕನಾಗಿ ಚಿತ್ರಮಂದಿರಲ್ಲಿ ತೆರೆ ಕಾಣುತ್ತಿರುವ ಮೊದಲ ಸಿನಿಮಾವೇ?

ಹೌದು. ‘ಇಕ್ಕಟ್ಟು’ ನಾಯಕನಾದ ಮೊದಲ ಸಿನಿಮಾ. ಆದರೆ ಅದು ಚಿತ್ರಮಂದಿರದಲ್ಲಿ ತೆರೆ ಕಂಡಿರಲಿಲ್ಲ. ಹೀಗಾಗಿ ಇದು ಚಿತ್ರಮಂದಿರಕ್ಕೆ ಬರುತ್ತಿರುವ ಮೊದಲ ಸಿನಿಮಾ. ಜನ ಇದನ್ನು ಹೇಗೆ ಸ್ವೀಕರಿಸುತ್ತಾರೆ ಎಂಬ ಭಯವಿದೆ. ಆದರೆ ಚಿತ್ರದಲ್ಲಿ ದೊಡ್ಡ ತಾರಾಬಳಗವೇ ಇದೆ. ರಂಗಾಯಣ ರಘು ಹಾಗೂ ತಾರಮ್ಮ ಈ ಚಿತ್ರದ ನಿಜವಾದ ನಾಯಕ–ನಾಯಕಿ. ಎಲ್ಲರ ಪಾತ್ರವೂ ಪ್ರಮುಖವಾಗಿದೆ. ಇತ್ತೀಚಿನ ದಿನಗಳಲ್ಲಿ ಈ ರೀತಿ ಸಿನಿಮಾ ಬಂದಿರಲಿಲ್ಲ ಎಂಬುದು ಬಹಳ ಆತ್ಮವಿಶ್ವಾಸದಿಂದ ಹೇಳುವೆ. ಆ ರೀತಿಯ ಒಂದು ಕಂಟೆಂಟ್, ಹಳ್ಳಿಯ ಸೊಗಡು ಚಿತ್ರದಲ್ಲಿದೆ.

• ಸದ್ಯ ಕೈಯ್ಯಲ್ಲಿ ಯಾವ್ಯಾವ ಸಿನಿಮಾಗಳಿವೆ?

‘ಮ್ಯಾಟ್ನಿ ಶೋ’ ಬಿಡುಗಡೆಗೆ ಸಿದ್ಧವಿದೆ. ಬೇರೆ ಯಾವ ಸಿನಿಮಾವನ್ನೂ ಒಪ್ಪಿಕೊಂಡಿಲ್ಲ. ಈ ಚಿತ್ರದ ಫಲಿತಾಂಶಕ್ಕಾಗಿ ಕಾಯುತ್ತಿದ್ದೇನೆ. ಸದ್ಯ ಒಂದು ಸಣ್ಣ ವಿರಾಮ ತೆಗೆದುಕೊಂಡಿರುವೆ. ಬೇರೆ ಚಿತ್ರದ ಆಲೋಚನೆ ಇದೆ. ಶೀಘ್ರದಲ್ಲಿ ಅದರ ಬಗ್ಗೆ ವಿವರ ನೀಡುವೆ.

• ಮುಂದಿನ ದಿನಗಳಲ್ಲಿ ಸಣ್ಣ ಪಾತ್ರಗಳಿಗೆ ವಿದಾಯ ಹೇಳಿ ನಾಯಕನಾಗಿಯೇ ಮುಂದುವರಿಯುವಿರಾ?

ಹಾಗೆ ನೋಡಿದರೆ ನಾನು ನಾಯಕ ಆಗ್ತೀನಿ ಅಂದುಕೊಂಡಿರಲ್ಲಿ. ಆಗಬೇಕು ಅಂತ ಹಪಹಪಿಸಿದವನೂ ಅಲ್ಲ. ಹೀಗಾಗಿ ಮುಂದಿನ ದಿನಗಳಲ್ಲಿಯೂ ಸಣ್ಣ ಪಾತ್ರ ಮುಂದುವರಿಸುತ್ತೇನೆ. ದೊಡ್ಡ ಸ್ಟಾರ್‌ಗಳೊಂದಿಗೆ ತೆರೆ ಹಂಚಿಕೊಳ್ಳುವ ಆಸೆ ಎಲ್ಲರಿಗೂ ಇರುತ್ತದೆ. ಫಣಿ ರಾಮಚಂದ್ರ ಅವರ ಹಾಸ್ಯದ ಸಿನಿಮಾಗಳು, ಅನಂತ್‌ನಾಗ್ ಅವರ ನಗಿಸುವ ಸರಣಿ ಸಿನಿಮಾಗಳ ರೀತಿಯ ಚಿತ್ರಗಳಿಗೆ ನಮ್ಮಲ್ಲಿ ಸಾಕಷ್ಟು ಜಾಗವಿದೆ. ಅಂತಹ ಸಿನಿಮಾಗಳ ಕೊರತೆ ಇಂದು ಕಾಣುತ್ತಿದೆ. ಗಟ್ಟಿಯಾದ ಪಾತ್ರದೊಂದಿಗೆ ಕೌಟುಂಬಿಕ ಮನರಂಜನೆಯ ಸಿನಿಮಾಗಳತ್ತ ಹೆಚ್ಚು ಒಲವಿದೆ.

• ಇಲ್ಲಿವರೆಗಿನ ಸಿನಿಮಾ ಪಯಣ ಹೇಗಿತ್ತು?

ತುಂಬಾ ಚೆನ್ನಾಗಿತ್ತು. ಒಂದೊಂದು ಸಮಯದಲ್ಲಿ ಒಂದೊಂದು ತಂಡ ಕೈಹಿಡಿಯಿತು. ‘ಸಲಗ’ದಲ್ಲಿ ಎರಡೇ ನಿಮಿಷದ ಪಾತ್ರ. ಆದರೆ ಜನ ಗುರುತಿಸಿದರು. ‘ಫ್ರೆಂಚ್ ಬಿರಿಯಾನಿ’, ‘ಬಡವ ರಾಸ್ಕಲ್’, ‘ಕೌಸಲ್ಯಾ ಸುಪ್ರಜಾ ರಾಮ’ ಒಂದು ರೀತಿ ಕಮರ್ಷಿಯಲ್ ಆಗಿ ನನಗೆ ಸಕ್ಸಸ್ ನೀಡಿದವು. ‘ಹನಿಮೂನ್’ ವೆಬ್‌ಸೀರೀಸ್ ಇನ್ನೊಂದು ರೀತಿ ಅವಕಾಶ ನೀಡಿತು. ಪ್ರತಿಭೆ ಜನರಿಗೆ ತಲುಪಲು ಇವೆಲ್ಲ ವೇದಿಕೆ ಸಿಕ್ಕಿವೆ. ಒಂದು ರೀತಿಯಲ್ಲಿ ನಾನು ಪುಣ್ಯವಂತ. ಹಾಗಂತ ಹಾದಿ ಸುಲಭದ್ದಲ್ಲ. ಸಾಕಷ್ಟು ಕಾದಿರುವೆ. ತಾಳ್ಮೆ, ತ್ಯಾಗಗಳಿವೆ. ಕುಟುಂಬ, ಗೆಳೆಯರ ಬೆಂಬಲದಿಂದ ಇದೆಲ್ಲ ಸಾಧ್ಯವಾಯ್ತು.

• ನಿಮ್ಮ ಸಿನಿ ಪಯಣದಲ್ಲಿ ಧನಂಜಯ ಎಷ್ಟು ಮುಖ್ಯವಾಗುತ್ತಾರೆ?

ಪ್ರತಿಯೊಬ್ಬರಿಗೂ ಎಲ್ಲ ಸಮಯದಲ್ಲಿಯೂ ಜೊತೆಗಿರುವಂತಹ ಒಬ್ಬರು ಬೇಕು. ಧನಂಜಯ ನನ್ನ ಪಾಲಿಗೆ ಆ ರೀತಿಯ ಗೆಳೆಯ. ತಾಳ್ಮೆ ಕಳೆದುಕೊಂಡಾಗ, ಧೃತಿಗೆಟ್ಟಾಗ ಜೊತೆಗೆ ನಿಂತವರು. ಹಾಗಂತ ಈ ಸಿನಿಮಾ ನನಗಾಗಿ ಮಾಡಿದ್ದಲ್ಲ. ಅವರಿಗೆ ಕಥೆ ಇಷ್ಟವಾಯಿತು. ತಿರುಗಿ ನೋಡಿದರೆ ಖುಷಿಪಡಲು ಒಂದಷ್ಟು ಇರಬೇಕು ಎನ್ನುವ ಸ್ವಭಾವ ಅವರದ್ದು. ಹೀಗಾಗಿ ಅವರು ನಿರ್ಮಾಣ ಸಂಸ್ಥೆ ಶುರುಮಾಡಿದ್ದು. ಪೂರ್ತಿ ಆಲೋಚನೆ, ತೀರ್ಮಾನ ಎಲ್ಲವೂ ಅವರದ್ದೇ.

• ನೀವೊಬ್ಬ ಉತ್ತಮ ಹಾಸ್ಯ ಬರಹಗಾರರೂ ಹೌದು. ನಿರ್ದೇಶನದ ಯೋಚನೆ ಇದೆಯಾ?

‘ಹನಿಮೂನ್’ ವೆಬ್‌ಸರಣಿ ನಾನೇ ಬರೆದು, ನಟಿಸಿದ್ದು. ಚಿತ್ರಕಥೆ ಬರವಣಿಗೆ ನನ್ನ ಆಸಕ್ತಿಯೂ ಹೌದು. ನಗಿಸುವ ಸಿನಿಮಾಗಳಿಗೆ ಸಾಕಷ್ಟು ಜಾಗವಿದೆ. ಭವಿಷ್ಯದಲ್ಲಿ ಬರವಣಿಗೆ, ನಿರ್ದೇಶನದ ಆಲೋಚನೆಯಿದೆ.

ಪ್ರಜಾವಾಣಿ ನೋಡಿಯೊ
ಸಿನಿಮಾತು
ನೋಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

‘ಉಪಾಧ್ಯಕ್ಷ’ನಾಗಿ ಚಿಕ್ಕಣ್ಣ ದರ್ಬಾರ್


ಮಲೈಕಾ, ಚಿಕ್ಕಣ್ಣ

ಹಾಸ್ಯ ನಟ ಚಿಕ್ಕಣ್ಣ ನಾಯಕರಾಗಿ ನಟಿಸಿರುವ ‘ಉಪಾಧ್ಯಕ್ಷ’ ಚಿತ್ರದ ಟೀಸರ್ ಇತ್ತೀಚಿಗೆ ಬಿಡುಗಡೆಯಾಗಿದೆ. ಉಮಾಪತಿ ಫಿಲ್ಮ್ಸ್ ಲಾಂಛನದಲ್ಲಿ ಸ್ಮಿತ ಉಮಾಪತಿ ನಿರ್ಮಿಸಿರುವ ಚಿತ್ರವನ್ನು ಅನಿಲ್ ಕುಮಾರ್ ನಿರ್ದೇಶಿಸಿದ್ದಾರೆ.

“ಇದು ‘ಅಧ್ಯಕ್ಷ’ ಚಿತ್ರದ ಮುಂದುವರೆದ ಭಾಗ. ನವೆಂಬರ್‌ನಲ್ಲಿ ಚಿತ್ರ ತೆರೆಗೆ ಬರಲಿದೆ” ಎಂದರು ಉಮಾಪತಿ ಶ್ರೀನಿವಾಸ್.

‘ನಾನು ಈ ಚಿತ್ರದ ನಾಯಕ ಅಂದಕೂಡಲೆ ಸಾಕಷ್ಟು ಜನ ಸಾಕಷ್ಟು ಚುಚ್ಚು ಮಾತನಾಡಿ ಮನಸ್ಸು ನೋಯಿಸಿದ್ದಾರೆ’ ಎಂದರು ನಟ ಚಿಕ್ಕಣ್ಣ. ಧಾರಾವಾಹಿಗಳಲ್ಲಿ ನಟಿಸುತ್ತಿದ್ದ ಮಲೈಕಾ ಈ ಚಿತ್ರದಲ್ಲಿ ಚಿಕ್ಕಣ್ಣನಿಗೆ ಜೋಡಿಯಾಗಿದ್ದಾರೆ. ರವಿಶಂಕರ್, ಸಾಧು ಕೋಕಿಲ, ವೀಣಾ ಸುಂದರ್ ಸೇರಿ ಇನ್ನೂ ಅನೇಕರು ಈ ಚಿತ್ರದಲ್ಲಿದ್ದಾರೆ. ಶೇಖರ್ ಚಂದ್ರ ಛಾಯಾಗ್ರಹಣ, ಅರ್ಜುನ್ ಜನ್ಯ ಸಂಗೀತವಿದೆ.

ಶೀಘ್ರದಲ್ಲೇ ‘ವಿದುರ’ ತೆರೆಗೆ

ಭಾರ್ಗವ್ ನಾಯಕನಾಗಿ ನಟಿಸಿರುವ ‘ವಿದುರ’ ಚಿತ್ರ ಶೀಘ್ರದಲ್ಲಿ ತೆರೆಗೆ ಬರಲಿದೆ ಎಂದು ಚಿತ್ರತಂಡ ಹೇಳಿದೆ.

“ಇತ್ತೀಚೆಗಷ್ಟೇ ನನ್ನ ನಟನೆಯ ‘ಪರಿಶುದ್ಧಂ’ ಚಿತ್ರ ತೆರೆ ಕಂಡಿತ್ತು. ‘ವಿಪರ್ಯಾಸ’, ‘ವಿದುರ’, ‘ಆಗೋದೆಲ್ಲಾ ಒಳ್ಳೇದಕ್ಕೆ’ ಚಿತ್ರಗಳು ಸೆನ್ಸಾರ್ ಹಂತದಲ್ಲಿವೆ. ‘ವಿದುರ’ ನವೆಂಬರ್‌ನಲ್ಲಿ ತೆರೆಗೆ ಬರಲಿದೆ. ಕನ್ನಡ, ತೆಲುಗಿನಲ್ಲಿ ಸಿದ್ಧಗೊಳ್ಳುತ್ತಿರುವ ಮತ್ತೊಂದು ಚಿತ್ರ ಒಪ್ಪಿಕೊಂಡಿರುವೆ’ ಎಂದರು ಭಾರ್ಗವ್.

ಬಿ.ಲೋಕೇಶ್ ಆ್ಯಕ್ಷನ್ ಕಟ್ ಹೇಳಿರುವ ಚಿತ್ರಕ್ಕೆ ಭರತ್ ಕುಮಾರ್-ನವೀನ್ ರೆಗಟ್ಟಿ ಜಂಟಿಯಾಗಿ ಬಂಡವಾಳ ಹೂಡಿದ್ದಾರೆ. ಬಹುತೇಕ ಹೊಸಬರೇ ಇರುವ ‘ವಿದುರ’ ಚಿತ್ರವು ಆಧುನಿಕ ಕುಟುಂಬದ ಕಥೆ ಹೊಂದಿರುವ ಥ್ರಿಲ್ಲರ್ ಸಿನಿಮಾವಾಗಿದೆ.


ಭಾರ್ಗವ್

ಈ ವಾರ ತೆರೆಗೆ

ಚಿತ್ರಮಂದಿರದಲ್ಲಿ ‘ಇನಾಮ್ದಾರ್’

ಶಿವಾಜಿ ಮಹಾರಾಜರನ್ನು ಆರಾಧಿಸುವ ಉತ್ತರ ಕರ್ನಾಟಕದ ಕುಟುಂಬವೊಂದರ ಕಥೆಯಾಧಾರಿತ ‘ಇನಾಮ್ದಾರ್’ ಚಿತ್ರ ಇಂದು (ಅ.27) ತೆರೆ ಕಾಣುತ್ತಿದೆ. ನಿರಂಜನ್ ಶೆಟ್ಟಿ ತಲ್ಲೂರು ನಿರ್ಮಾಣದ ಚಿತ್ರವನ್ನು ಸಂದೇಶ್ ಶೆಟ್ಟಿ ಆಜ್ರಿ ನಿರ್ದೇಶಿಸಿದ್ದಾರೆ. ‘ಇನಾಮ್ದಾರ್’ ಕುಟುಂಬ ಹಾಗೂ ಕರಾವಳಿ ಭಾಗದ ಕಾಡಿನಲ್ಲಿ ವಾಸಿಸುವ ಶಿವನ ಆರಾಧಕ ಕಾಡು ಜನರ ನಡುವೆ ನಡೆಯುವ ವರ್ಣಸಂಘರ್ಷದ ಕಥೆಯನ್ನು ಒಳಗೊಂಡಿದೆ. ನಾಯಕ ರಂಜನ್ ಛತ್ರಪತಿಗೆ ಚಿರಶ್ರೀ ಅಂಚನ್ ಜೋಡಿಯಾಗಿ ಕಾಣಿಸಿಕೊಂಡಿದ್ದಾರೆ. ಚಿತ್ರದಲ್ಲಿ ಪ್ರಮೋದ್ ಶೆಟ್ಟಿ, ಎಂ.ಕೆ.ಮಠ ಮೊದಲಾದವರಿದ್ದಾರೆ.

ರೋನಿ: ಧರ್ಮಕೀರ್ತಿರಾಜ್, ತಿಲಕ್ ಅಭಿನಯದ ‘ರೋನಿ’ ಚಿತ್ರ ಕೂಡ ಶುಕ್ರವಾರ ತೆರೆ ಕಾಣುತ್ತಿದೆ. ಕಿರಣ್.ಆರ್.ಕೆ ಕಥೆ ಬರೆದು ನಿರ್ದೇಶಿಸಿರುವ ಚಿತ್ರಕ್ಕೆ ಎಂ.ರಮೇಶ್ ಹಾಗೂ ಪವನ್‌ಕುಮಾರ್ ಬಂಡವಾಳ ಹೂಡಿದ್ದಾರೆ. ಮುಂಬೈ ಮೂಲದ ರುತ್ವಿ ಪಟೇಲ್ ನಾಯಕಿ. ತಾರಾಗಣದಲ್ಲಿ ಕೀರ್ತಿರಾಜ್, ರಘು ಪಾಂಡೇಶ್ವರ, ಬಲರಾಜವಾಡಿ ಮುಂತಾದವರಿದ್ದಾರೆ. ಆಕಾಶ್‌ಪರ್ವ ಸಂಗೀತ ಸಂಯೋಜನೆ, ವೀನಸ್‌ನಾಗರಾಜಮೂರ್ತಿ ಛಾಯಾಗ್ರಹಣ ಚಿತ್ರಕ್ಕಿದೆ.


ರುತ್ವಿ ಪಟೇಲ್

रजिस्ट्री सं. डी.एल.- 33004/99 REGD. No. D. L.-33004/99

भारत का राजपत्र
The Gazette of India

सी.जी.-डी.एल.-अ.-15032023-244408
CG-DL-E-15032023-244408

असाधारण
EXTRAORDINARY

भाग II—खण्ड 3—उप-खण्ड (ii)
PART II—Section 3—Sub-section (ii)

प्राधिकार से प्रकाशित
PUBLISHED BY AUTHORITY

सं. 1185] नई दिल्ली, मंगलवार, मार्च 14, 2023/फाल्गुन 23, 1944
No. 1185] NEW DELHI, TUESDAY, MARCH 14, 2023/PHALGUNA 23, 1944

ಭಾರತ ಸರ್ಕಾರ

ವಿಶೇಷ ಭೂ–ಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ ರವರ ಕಾರ್ಯಾಲಯ

ರಾಷ್ಟ್ರೀಯ ಹೆದ್ದಾರಿಗಳು, ಕೆ.ಆರ್.ಸರ್ಕಲ್, ಬೆಂಗಳೂರು – 560 001.

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ, ನವದೆಹಲಿ

ಅಧಿಸೂಚನೆ

ನವದೆಹಲಿ, 14ನೇ ಮಾರ್ಚ್ 2023

ಎಸ್.ಓ.1233(ಇ).– ಕೇಂದ್ರ ಸರ್ಕಾರಕ್ಕೆ ಇದೀಗ ಸಾರ್ವಜನಿಕ ಉದ್ದೇಶಕ್ಕಾಗಿ ಇದರೊಂದಿಗೆ ಲಗತ್ತಿಸಿರುವ ಷೆಡ್ಯೂಲ್‌ನಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದಲ್ಲಿರುವ ಶಿವಮೊಗ್ಗ ಜಿಲ್ಲೆ ರಾಷ್ಟ್ರೀಯ ಹೆದ್ದಾರಿ 169 ರ ರಸ್ತೆ ಅಸ್ತಿತ್ವದಲ್ಲಿರುವ ಕಿ.ಮೀ 25.15 ರಿಂದ ಕಿ.ಮೀ 60.00 (ವಿನ್ಯಾಸಗೊಳಿಸಲಾದ ಕಿ.ಮೀ 25.15 ರಿಂದ ಕಿ.ಮೀ 56.70) (ವಿನ್ಯಾಸಗೊಳಿಸಿದ ಕಿ.ಮೀ 52.70 ರಿಂದ 53.50 ಹೊರತುಪಡಿಸಿ) ವರೆಗಿನ ರಸ್ತೆ (ಅಗಲೀಕರಣ / ಎರಡು ಲೈನ್ ಮತ್ತು ಪೇವ್ಡ ಶೋಲ್ಡರ್‌ದೊಂದಿಗೆ/ನಾಲ್ಕು ಲೈನ್ ಇತ್ಯಾದಿ) ನಿರ್ಮಾಣಕ್ಕಾಗಿ ಸಂರಕ್ಷಣೆ, ಕಾರ್ಯನಿರ್ವಹಣೆ ಹಾಗೂ ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂ–ಸ್ವಾಧೀನಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆ ಎಂಬುವುದು ಕಂಡುಬಂದಿರುತ್ತದೆ. ಆದಕಾರಣ ಕೇಂದ್ರ ಸರಕಾರವು ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ–1956 (1956ರ 48)ರ ಪ್ರಕಾರ ಸೆಕ್ಷನ್ 3(A)ರ ಸಬ್ ಸೆಕ್ಷನ್(1) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಇದರೊಂದಿಗೆ ಲಗತ್ತಿಸಿರುವ ಅನುಸೂಚಿ(ಷೆಡ್ಯೂಲ್)ಯಂತೆ ವಿವರಿಸಿರುವ ಜಮೀನುಗಳನ್ನು ಭೂ–ಸ್ವಾಧೀನಪಡಿಸಿಕೊಳ್ಳಲು ಈ ಮೂಲಕ ಅಧಿಸೂಚನೆ ನೀಡಿದೆ.

ಸದರಿ ಜಮೀನುಗಳ ಬಗ್ಗೆ ಭೂ–ಮಾಲೀಕರು ಅಥವಾ ಯಾವುದೇ ರೀತಿಯ ಹಿತಾಸಕ್ತಿ ಉಳ್ಳವರು ಹಾಗೂ ಸಾರ್ವಜನಿಕ ಅವಗಾಹನೆಗಾಗಿ ಈ ಪ್ರಕಟಣೆ ಪ್ರಕಟಿಸಿದ ದಿನಾಂಕದಿಂದ 21 ದಿನಗಳೊಳಗಾಗಿ ಸದರಿ ಕಾಯ್ದೆಯ ಸೆಕ್ಷನ್ 3ಸಿ ರ ಸಬ್ ಸೆಕ್ಷನ್(1)ರ ಅನ್ವಯ ತಮ್ಮಗಳ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು ಸಕ್ಷಮ ಪ್ರಾಧಿಕಾರಿ ಅಂದರೆ ವಿಶೇಷ ಭೂ–ಸ್ವಾಧೀನಾಧಿಕಾರಿ, ರಾಷ್ಟ್ರೀಯ ಹೆದ್ದಾರಿಗಳು, ಕೆ.ಆರ್.ಸರ್ಕಲ್, ಬೆಂಗಳೂರು–560001. ಇವರಿಗೆ ಲಿಖಿತ ರೂಪದಲ್ಲಿ ಸ–ಕಾರಣಗಳೊಂದಿಗೆ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲೀ ಅಥವಾ ಅವರ ಪರ ವಕೀಲರನ್ನಾಗಲಿ ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ ಈ ಬಗ್ಗೆ ಇತರೆ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ–1956ರ (1956ರ 48)ರ ಪ್ರಕಾರ ಸೆಕ್ಷನೆ 3ಸಿ ರ ಸಬ್ ಸೆಕ್ಷನ್(2)ರ ರಂತೆ ಸಕ್ಷಮ ಪ್ರಾಧಿಕಾರ ಮಾಡಿದ ಆದೇಶವು ಅಂತಿಮವಾಗಿರುತ್ತದೆ.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕಾಶೆಗಳು ಮತ್ತು ಮಾಹಿತಿಗಳು ಮೇಲೆ ಕಾಣಿಸಿದ ಸಕ್ಷಮ ಪ್ರಾಧಿಕಾರದಲ್ಲಿ ಲಭ್ಯವಿರುತ್ತದೆ. ಮತ್ತು ಈ ಜಮೀನುಗಳ ಬಗ್ಗೆ ಹಿತಾಸಕ್ತಿಯುಳ್ಳವರು ಸಕ್ಷಮ ಪ್ರಾಧಿಕಾರಿಯವರ ಕಛೇರಿಯಲ್ಲಿ ಪರಿಶೀಲಿಸಬಹುದಾಗಿರುತ್ತದೆ.

ಅನುಸೂಚಿ

ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ–169 ರಸ್ತೆ ಅಸ್ತಿತ್ವದಲ್ಲಿರುವ ಕಿ.ಮೀ 25.15 ರಿಂದ ಕಿ.ಮೀ 60.00 (ವಿನ್ಯಾಸಗೊಳಿಸಲಾದ ಕಿ.ಮೀ 25.15 ರಿಂದ ಕಿ.ಮೀ 56.70) (ವಿನ್ಯಾಸಗೊಳಿಸಿದ ಕಿ.ಮೀ 52.70 ರಿಂದ 53.50 ಹೊರತುಪಡಿಸಿ) ವರೆಗಿನ ಅವಶ್ಯಕವಾಗಿರುವ ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ : ಕರ್ನಾಟಕ **ಜಿಲ್ಲೆಯ ಹೆಸರು: ಶಿವಮೊಗ್ಗ**

ಕ್ರ ಸಂ.	ಸರ್ವೆ ಸಂಖ್ಯೆ	ಜಮೀನಿನ ತರಹೆ	ಜಮೀನಿನ ವಿವರಣೆ	ವಿಸ್ತೀರ್ಣ (ಚದರ ಮೀಟರ್‌ಗಳಲ್ಲಿ)	ವಿಸ್ತೀರ್ಣ (ಹೆಕ್ಟರ್‌ಗಳಲ್ಲಿ)
ತಾಲ್ಲೂಕು : ತೀರ್ಥಹಳ್ಳಿ					
ಗ್ರಾಮ: ಬೇಗುವಳ್ಳಿ					
1	1	ಖಾಸಗಿ	ತರಿ	2,606.2500000 (ಚದರ ಮೀಟರ್)	0.2606250
2	106	ಖಾಸಗಿ	ತರಿ	2,239.7000000 (ಚದರ ಮೀಟರ್)	0.2239700
3	107	ಖಾಸಗಿ	ತರಿ	1,711.5500000 (ಚದರ ಮೀಟರ್)	0.1711550
4	109	ಖಾಸಗಿ	ತರಿ	1,734.0500000 (ಚದರ ಮೀಟರ್)	0.1734050
5	110	ಖಾಸಗಿ	ಭಾಗಾಯ್ತು	1,274.6200000 (ಚದರ ಮೀಟರ್)	0.1274620
6	115	ಖಾಸಗಿ	ತರಿ	617.6100000 (ಚದರ ಮೀಟರ್)	0.0617610
7	117	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	5,881.4400000 (ಚದರ ಮೀಟರ್)	0.5881440
8	121	ಖಾಸಗಿ	ತರಿ	3,545.9000000 (ಚದರ ಮೀಟರ್)	0.3545900
9	191	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	1,995.8100000 (ಚದರ ಮೀಟರ್)	0.1995810
10	192	ಖಾಸಗಿ	ತರಿ	1,445.8000000 (ಚದರ ಮೀಟರ್)	0.1445800
11	193	ಖಾಸಗಿ	ತರಿ	983.7100000 (ಚದರ ಮೀಟರ್)	0.0983710
12	195	ಖಾಸಗಿ	ತರಿ	426.6500000 (ಚದರ ಮೀಟರ್)	0.0426650
13	196	ಖಾಸಗಿ	ತರಿ	213.5100000 (ಚದರ ಮೀಟರ್)	0.0213510
14	206	ಖಾಸಗಿ	ತರಿ	2,227.1000000 (ಚದರ ಮೀಟರ್)	0.2227100
15	21	ಖಾಸಗಿ	ತರಿ	829.1000000 (ಚದರ ಮೀಟರ್)	0.0829100
16	22	ಖಾಸಗಿ	ತರಿ	393.3600000 (ಚದರ ಮೀಟರ್)	0.0393360
17	222	ಖಾಸಗಿ	ತರಿ	1,743.3100000 (ಚದರ ಮೀಟರ್)	0.1743310
18	23	ಸರ್ಕಾರಿ	ತರಿ	1,971.7600000 (ಚದರ ಮೀಟರ್)	0.1971760
19	24	ಖಾಸಗಿ	ತರಿ	1,960.5400000 (ಚದರ ಮೀಟರ್)	0.1960540
20	25	ಖಾಸಗಿ	ತರಿ	3,277.9700000 (ಚದರ ಮೀಟರ್)	0.3277970
21	26	ಖಾಸಗಿ	ತರಿ	69.9500000 (ಚದರ ಮೀಟರ್)	0.0069950
22	3	ಖಾಸಗಿ	ತರಿ	1,843.3800000 (ಚದರ ಮೀಟರ್)	0.1843380
23	6	ಖಾಸಗಿ	ತರಿ	641.6700000 (ಚದರ ಮೀಟರ್)	0.0641670
24	7	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	399.3400000 (ಚದರ ಮೀಟರ್)	0.0399340
25	8	ಖಾಸಗಿ	ತರಿ	292.5000000 (ಚದರ ಮೀಟರ್)	0.0292500
26	9	ಖಾಸಗಿ	ತರಿ	379.4700000 (ಚದರ ಮೀಟರ್)	0.0379470
ಗ್ರಾಮ : ಬೆಜ್ಜವಳ್ಳಿ					
1	13	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	11,720.1800000 (ಚದರ ಮೀಟರ್)	1.1720200
2	14	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	4,177.8700000 (ಚದರ ಮೀಟರ್)	0.4177870
ಗ್ರಾಮ : ಭಾರತಿಪುರ					
1	121	ಖಾಸಗಿ	ತರಿ	1,520.1200000 (ಚದರ ಮೀಟರ್)	0.1520120
2	133	ಖಾಸಗಿ	ತರಿ	295.1100000 (ಚದರ ಮೀಟರ್)	0.0295110
3	135	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	2,621.9000000 (ಚದರ ಮೀಟರ್)	0.2621900
4	150	ಖಾಸಗಿ	ತರಿ	1,200.6300000 (ಚದರ ಮೀಟರ್)	0.1200630
5	151	ಖಾಸಗಿ	ತರಿ	1,337.6100000 (ಚದರ ಮೀಟರ್)	0.1337610
6	152	ಖಾಸಗಿ	ತರಿ	1,131.3400000 (ಚದರ ಮೀಟರ್)	0.1131340
7	153	ಖಾಸಗಿ	ತರಿ	637.4600000 (ಚದರ ಮೀಟರ್)	0.0637460
8	154	ಸರ್ಕಾರಿ	ತರಿ	1,735.0400000 (ಚದರ ಮೀಟರ್)	0.1735040
9	167	ಖಾಸಗಿ	ತರಿ	1,497.9700000 (ಚದರ ಮೀಟರ್)	0.1497970
10	168	ಖಾಸಗಿ	ಖುಷ್ಕಿ	597.1700000 (ಚದರ ಮೀಟರ್)	0.0597170
11	169	ಖಾಸಗಿ	ತರಿ	891.6800000 (ಚದರ ಮೀಟರ್)	0.0891680
12	170	ಖಾಸಗಿ	ತರಿ	146.5100000 (ಚದರ ಮೀಟರ್)	0.0146510
13	171	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	45.4300000 (ಚದರ ಮೀಟರ್)	0.0045430
14	173	ಖಾಸಗಿ	ತರಿ	4,530.6100000 (ಚದರ ಮೀಟರ್)	0.4530610
15	81	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	10,500.0000000 (ಚದರ ಮೀಟರ್)	1.0500000
ಗ್ರಾಮ : ಬಿಳುವೆ					
1	100	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	5,440.8500000 (ಚದರ ಮೀಟರ್)	0.5440850
2	101	ಸರ್ಕಾರಿ	ತರಿ	362.4100000 (ಚದರ ಮೀಟರ್)	0.0362410
3	55	ಸರ್ಕಾರಿ	ತರಿ	229.4300000 (ಚದರ ಮೀಟರ್)	0.0229430
4	59	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	385.8300000 (ಚದರ ಮೀಟರ್)	0.0385830
5	60	ಖಾಸಗಿ	ಖುಷ್ಕಿ	2,430.1000000 (ಚದರ ಮೀಟರ್)	0.2430100
6	61	ಖಾಸಗಿ	ಖುಷ್ಕಿ	3,813.7200000 (ಚದರ ಮೀಟರ್)	0.3813720
7	62	ಖಾಸಗಿ	ತರಿ	2,461.2400000 (ಚದರ ಮೀಟರ್)	0.2461240
8	63	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	2,076.9200000 (ಚದರ ಮೀಟರ್)	0.2076920
9	64	ಖಾಸಗಿ	ತರಿ	4,539.6500000 (ಚದರ ಮೀಟರ್)	0.4539650
10	65	ಖಾಸಗಿ	ತರಿ	138.0400000 (ಚದರ ಮೀಟರ್)	0.0138040
11	72	ಖಾಸಗಿ	ತರಿ	4,565.3500000 (ಚದರ ಮೀಟರ್)	0.4565350
12	73	ಖಾಸಗಿ	ತರಿ	11,342.0000000 (ಚದರ ಮೀಟರ್)	1.1342000
13	82	ಸರ್ಕಾರಿ	ತರಿ	5,580.0000000 (ಚದರ ಮೀಟರ್)	0.5580000
14	85	ಖಾಸಗಿ	ತರಿ	1,082.5600000 (ಚದರ ಮೀಟರ್)	0.1082560
15	88	ಸರ್ಕಾರಿ	ತರಿ	285.8600000 (ಚದರ ಮೀಟರ್)	0.0285860
16	94	ಖಾಸಗಿ	ತರಿ	1,927.0000000 (ಚದರ ಮೀಟರ್)	0.1927000
17	ಮಜಾರೆ ಹುಲಗವಳ್ಳಿ	ಸರ್ಕಾರಿ	ಭಾಗಾಯ್ತು	18.1200000 (ಚದರ ಮೀಟರ್)	0.0018120
ಗ್ರಾಮ : ಜಂಬವಳ್ಳಿ					
1	15	ಖಾಸಗಿ	ತರಿ	10,785.2600000 (ಚದರ ಮೀಟರ್)	1.0785300
2	16	ಖಾಸಗಿ	ತರಿ	3,281.0000000 (ಚದರ ಮೀಟರ್)	0.3281000
3	18	ಸರ್ಕಾರಿ	ತರಿ	6,001.2300000 (ಚದರ ಮೀಟರ್)	0.6001230
4	53	ಖಾಸಗಿ	ತರಿ	2,404.1500000 (ಚದರ ಮೀಟರ್)	0.2404150
5	54	ಖಾಸಗಿ	ತರಿ	844.3200000 (ಚದರ ಮೀಟರ್)	0.0844320
6	55	ಖಾಸಗಿ	ತರಿ	2,156.2100000 (ಚದರ ಮೀಟರ್)	0.2156210
7	59	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	409.3600000 (ಚದರ ಮೀಟರ್)	0.0409360
ಗ್ರಾಮ : ಕುಡಿಗೆ (ಗಬಡಿ)					
1	100	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	6,717.9900000 (ಚದರ ಮೀಟರ್)	0.6717990
2	104	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	4,310.8500000 (ಚದರ ಮೀಟರ್)	0.4310850
3	105	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	624.1100000 (ಚದರ ಮೀಟರ್)	0.0624110
4	106	ಖಾಸಗಿ	ತರಿ	2,035.3100000 (ಚದರ ಮೀಟರ್)	0.2035310
5	107	ಖಾಸಗಿ	ತರಿ	1,268.3700000 (ಚದರ ಮೀಟರ್)	0.1268370
6	108	ಖಾಸಗಿ	ತರಿ	80.0000000 (ಚದರ ಮೀಟರ್)	0.0080000
7	113	ಖಾಸಗಿ	ತರಿ	362.5300000 (ಚದರ ಮೀಟರ್)	0.0362530
8	114	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	2,359.6600000 (ಚದರ ಮೀಟರ್)	0.2359660
9	77	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	1,990.6900000 (ಚದರ ಮೀಟರ್)	0.1990690
10	78	ಸರ್ಕಾರಿ	ತರಿ	2,998.5200000 (ಚದರ ಮೀಟರ್)	0.2998520
11	94	ಖಾಸಗಿ	ತರಿ	535.1700000 (ಚದರ ಮೀಟರ್)	0.0535170
12	95	ಖಾಸಗಿ	ತರಿ	3,574.0800000 (ಚದರ ಮೀಟರ್)	0.3574080
13	99	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	11,546.9800000 (ಚದರ ಮೀಟರ್)	1.1547000
ಗ್ರಾಮ : ಕುಡುಮಲ್ಲಿಗೆ					
1	112	ಸರ್ಕಾರಿ	ತರಿ	28,005.0000000 (ಚದರ ಮೀಟರ್)	2.8005000
2	116	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	29.9600000 (ಚದರ ಮೀಟರ್)	0.0029960
3	120	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	12,297.0200000 (ಚದರ ಮೀಟರ್)	1.2297000
4	121	ಖಾಸಗಿ	ತರಿ	324.4900000 (ಚದರ ಮೀಟರ್)	0.0324490
5	3	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	5,777.1500000 (ಚದರ ಮೀಟರ್)	0.5777150
6	73	ಖಾಸಗಿ	ತರಿ	2,194.5200000 (ಚದರ ಮೀಟರ್)	0.2194520
7	79	ಸರ್ಕಾರಿ	ತರಿ	4,935.5600000 (ಚದರ ಮೀಟರ್)	0.4935560
8	80	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	11,519.2900000 (ಚದರ ಮೀಟರ್)	1.1519300
9	84	ಸರ್ಕಾರಿ	ತರಿ	473.8200000 (ಚದರ ಮೀಟರ್)	0.0473820
10	85	ಸರ್ಕಾರಿ	ತರಿ	2,683.5500000 (ಚದರ ಮೀಟರ್)	0.2683550
11	86	ಸರ್ಕಾರಿ	ತರಿ	9,616.9500000 (ಚದರ ಮೀಟರ್)	0.9616950
ಗ್ರಾಮ : ಮಾಳುರು					
1	33	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	8,927.6200000 (ಚದರ ಮೀಟರ್)	0.8927620
2	34	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	4,828.4500000 (ಚದರ ಮೀಟರ್)	0.4828450
3	69	ಸರ್ಕಾರಿ	ತರಿ	2,371.5400000 (ಚದರ ಮೀಟರ್)	0.2371540
4	70	ಸರ್ಕಾರಿ	ತರಿ	304.7400000 (ಚದರ ಮೀಟರ್)	0.0304740
5	71	ಖಾಸಗಿ	ತರಿ	369.4500000 (ಚದರ ಮೀಟರ್)	0.0369450
6	72	ಖಾಸಗಿ	ತರಿ	1,802.9600000 (ಚದರ ಮೀಟರ್)	0.1802960
7	73	ಖಾಸಗಿ	ತರಿ	141.5000000 (ಚದರ ಮೀಟರ್)	0.0141500
8	74	ಖಾಸಗಿ	ತರಿ	181.9300000 (ಚದರ ಮೀಟರ್)	0.0181930
9	75	ಖಾಸಗಿ	ಖುಷ್ಕಿ	480.2800000 (ಚದರ ಮೀಟರ್)	0.0480280
10	82	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	6,901.2900000 (ಚದರ ಮೀಟರ್)	0.6901290
11	83	ಸರ್ಕಾರಿ	ತರಿ	3,521.8700000 (ಚದರ ಮೀಟರ್)	0.3521870
12	84	ಸರ್ಕಾರಿ	ತರಿ	680.6800000 (ಚದರ ಮೀಟರ್)	0.0680680
13	ಮಜಾರೆ ಸಕಲಕೊಪ್ಪ	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	3,199.1000000 (ಚದರ ಮೀಟರ್)	0.3199100
ಗ್ರಾಮ : ನಂದಗದ್ದೆ (ಶಿಕೆ ರೋಡ್)					
1	40	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	6,717.9900000 (ಚದರ ಮೀಟರ್)	0.6717990
2	42	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	11,546.9800000 (ಚದರ ಮೀಟರ್)	1.1547000
3	43	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	2,313.5000000 (ಚದರ ಮೀಟರ್)	0.2313500
ಗ್ರಾಮ : ಒಡಲಮನೆ					
1	11	ಸರ್ಕಾರಿ	ತರಿ	6,996.4100000 (ಚದರ ಮೀಟರ್)	0.6996410
2	12	ಸರ್ಕಾರಿ	ತರಿ	4,001.8800000 (ಚದರ ಮೀಟರ್)	0.4001880
3	16	ಖಾಸಗಿ	ತರಿ	26.7300000 (ಚದರ ಮೀಟರ್)	0.0026730
4	3	ಖಾಸಗಿ	ತರಿ	1,213.1800000 (ಚದರ ಮೀಟರ್)	0.1213180
5	4	ಖಾಸಗಿ	ತರಿ	1,029.1500000 (ಚದರ ಮೀಟರ್)	0.1029150
6	5	ಖಾಸಗಿ	ತರಿ	2,344.1100000 (ಚದರ ಮೀಟರ್)	0.2344110
ಗ್ರಾಮ : ತೀರ್ಥಹಳ್ಳಿ ಟೌನ್					
1	17	ಖಾಸಗಿ	ಖುಷ್ಕಿ	819.5300000 (ಚದರ ಮೀಟರ್)	0.0819530
2	36	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	10,263.3700000 (ಚದರ ಮೀಟರ್)	1.0263400
3	48	ಖಾಸಗಿ	ತರಿ	110.8600000 (ಚದರ ಮೀಟರ್)	0.0110860
4	49	ಖಾಸಗಿ	ಖುಷ್ಕಿ	200.1700000 (ಚದರ ಮೀಟರ್)	0.0200170
5	50	ಖಾಸಗಿ	ಖುಷ್ಕಿ	531.1900000 (ಚದರ ಮೀಟರ್)	0.0531190
6	51	ಖಾಸಗಿ	ತರಿ	1,564.3000000 (ಚದರ ಮೀಟರ್)	0.1564300
7	52	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	1,952.7500000 (ಚದರ ಮೀಟರ್)	0.1952750
8	53	ಖಾಸಗಿ	ತರಿ	2,977.6100000 (ಚದರ ಮೀಟರ್)	0.2977610
9	55	ಖಾಸಗಿ	ತರಿ	2,153.9400000 (ಚದರ ಮೀಟರ್)	0.2153940
10	56	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	7,157.0000000 (ಚದರ ಮೀಟರ್)	0.7157000
11	58	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	1,618.3900000 (ಚದರ ಮೀಟರ್)	0.1618390
12	65	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	3,125.4400000 (ಚದರ ಮೀಟರ್)	0.3125440
13	ಊರು	ಸಾಮಾನ್ಯ (ಖಾಸಗಿ/ಸರ್ಕಾರಿ)	ಸೆಟಲ್‌ಮೆಂಟ್	6,746.0500000 (ಚದರ ಮೀಟರ್)	0.6746050
ಗ್ರಾಮ : ತೂದುರು					
1	1	ಖಾಸಗಿ	ತರಿ	4,091.6700000 (ಚದರ ಮೀಟರ್)	0.4091670
2	10	ಖಾಸಗಿ	ತರಿ	701.9800000 (ಚದರ ಮೀಟರ್)	0.0701980
3	102	ಖಾಸಗಿ	ತರಿ	4,175.9000000 (ಚದರ ಮೀಟರ್)	0.4175900
4	103	ಖಾಸಗಿ	ತರಿ	1,289.6900000 (ಚದರ ಮೀಟರ್)	0.1289690
5	104	ಸರ್ಕಾರಿ	ತರಿ	2,022.3800000 (ಚದರ ಮೀಟರ್)	0.2022380
6	12	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	1,117.4700000 (ಚದರ ಮೀಟರ್)	0.1117470
7	13	ಖಾಸಗಿ	ತರಿ	600.6000000 (ಚದರ ಮೀಟರ್)	0.0600600
8	14	ಖಾಸಗಿ	ತರಿ	2,206.7000000 (ಚದರ ಮೀಟರ್)	0.2206700
9	16	ಖಾಸಗಿ	ತರಿ	6.5100000 (ಚದರ ಮೀಟರ್)	0.0006510
10	17	ಖಾಸಗಿ	ತರಿ	1,427.6700000 (ಚದರ ಮೀಟರ್)	0.1427670
11	18	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	5,883.7300000 (ಚದರ ಮೀಟರ್)	0.5883730
12	19	ಖಾಸಗಿ	ತರಿ	32.0100000 (ಚದರ ಮೀಟರ್)	0.0032010
13	20	ಖಾಸಗಿ	ತರಿ	1,618.4600000 (ಚದರ ಮೀಟರ್)	0.1618460
14	21	ಖಾಸಗಿ	ತರಿ	2,118.2500000 (ಚದರ ಮೀಟರ್)	0.2118250
15	22	ಸರ್ಕಾರಿ	ತರಿ	2,428.6200000 (ಚದರ ಮೀಟರ್)	0.2428620
16	26	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	365.0000000 (ಚದರ ಮೀಟರ್)	0.0365000
17	8	ಖಾಸಗಿ	ತರಿ	222.9100000 (ಚದರ ಮೀಟರ್)	0.0222910
18	85	ಖಾಸಗಿ	ತರಿ	691.9200000 (ಚದರ ಮೀಟರ್)	0.0691920
19	86	ಖಾಸಗಿ	ತರಿ	1,606.9800000 (ಚದರ ಮೀಟರ್)	0.1606980
20	87	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	326.9300000 (ಚದರ ಮೀಟರ್)	0.0326930
21	88	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	3,381.5600000 (ಚದರ ಮೀಟರ್)	0.3381560
22	9	ಖಾಸಗಿ	ತರಿ	1,577.8900000 (ಚದರ ಮೀಟರ್)	0.1577890
23	99	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	621.6300000 (ಚದರ ಮೀಟರ್)	0.0621630
24	ಊರು	ಸಾಮಾನ್ಯ (ಖಾಸಗಿ/ಸರ್ಕಾರಿ)	ತರಿ	3,143.6600000 (ಚದರ ಮೀಟರ್)	0.3143660
				ಒಟ್ಟು 424,896.9200	**42.4897**

[F. No. RW/NH/169/KNT/2022/3A]

ABHAY JAIN, Dy. Secy

ಕೊಳಚೆ ನೀರಿನಲ್ಲಿ ಬೆಳೆದ ತರಕಾರಿ ಹಾನಿಕರ; ಮಾನವನ ದೇಹಕ್ಕೆ ವಿಷಕಾರಿ ಅಂಶ– ‘ಎಂಪ್ರಿ’ ವರದಿ

ತರಕಾರಿಗಳಲ್ಲಿ ‘ಭಾರ ಲೋಹ’ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಳಚೆ ನೀರು ಬಳಸಿ ಬೆಳೆಯಲಾಗುತ್ತಿರುವ ತರಕಾರಿಗಳಲ್ಲಿ ಭಾರ ಲೋಹದ ಸಾಂದ್ರತೆ ಹೆಚ್ಚಾಗಿದ್ದು, ಇಂಥ ತರಕಾರಿ ತಿನ್ನುವುದರಿಂದ ಮಾನವನ ದೇಹಕ್ಕೆ ವಿಷಕಾರಿ ಅಂಶ ಸೇರ್ಪಡೆಯಾಗುವ ಅಪಾಯವನ್ನು ಹೆಚ್ಚಿಸಿದೆ ಎಂದು ಅರಣ್ಯ ಇಲಾಖೆಯ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ) ಅಧ್ಯಯನ ತಿಳಿಸಿದೆ.

ನಗರದ ವಿವಿಧ ಭಾಗಗಳಲ್ಲಿರುವ ಮಾರುಕಟ್ಟೆ, ಸೂಪರ್ ಮಾರುಕಟ್ಟೆ ಮಳಿಗೆಗಳು, ಹಾಪ್‌ಕಾಮ್ಸ್, ಸಾವಯವ ಮಳಿಗೆಗಳಿಂದ 10 ತರಕಾರಿಗಳ 400 ಮಾದರಿಗಳನ್ನು ಸಂಗ್ರಹಿಸಿ ಎಂಪ್ರಿ ಅಧ್ಯಯನ ನಡೆಸಿದೆ. ಇದರಲ್ಲಿ ಆಹಾರ ಮತ್ತು ಕೃಷಿ ಸಂಸ್ಥೆ (ಎಫ್‌ಎಒ) ಹಾನಿಕರವಲ್ಲವೆಂದು ನಿಗದಿಪಡಿಸಿರುವ (ಪರ್ಮಿಸಿಬಲ್) ಮಿತಿಗಳಿಗಿಂತ ಹೆಚ್ಚಿನ ಭಾರ ಲೋಹ ತರಕಾರಿಗಳಲ್ಲಿ ಕಂಡು ಬಂದಿದೆ.

‘ಬೆಂಗಳೂರು ನಗರದ ಮಾರುಕಟ್ಟೆಗಳಲ್ಲಿ ಲಭ್ಯವಿರುವ ತರಕಾರಿಗಳಲ್ಲಿ ಭಾರ ಲೋಹಗಳ ಸಾಂದ್ರತೆ ಅಧ್ಯಯನ’ ಎಂಬ ವರದಿಯನ್ನು ಎಂಪ್ರಿ 2022ರ ನವೆಂಬರ್‌ನಲ್ಲಿ ಪ್ರಕಟಿಸಿದೆ. ಡಾ. ಎನ್. ಹೇಮಾ, ಪಿ.ಬಿ. ಐಶ್ವರ್ಯ, ಡಿ.ಆರ್. ದಿವ್ಯಾ ಅವರು ಈ ಅಧ್ಯಯನದ ನೇತೃತ್ವ ವಹಿಸಿದ್ದರು.

ಬದನೆಕಾಯಿ, ಟೊಮೆಟೊ, ದೊಡ್ಡ ಮೆಣಸಿನಕಾಯಿ, ಬೀನ್ಸ್, ಕ್ಯಾರಟ್, ಹಸಿ ಮೆಣಸಿನಕಾಯಿ, ಈರುಳ್ಳಿ, ಆಲೂಗಡ್ಡೆ, ಪಾಲಕ್ ಮತ್ತು ಕೊತ್ತಂಬರಿ ಸೊಪ್ಪುಗಳನ್ನು ಮಾರುಕಟ್ಟೆಗಳಿಂದ ಸಂಗ್ರಹಿಸಲಾಗಿದೆ. ನುವಾವ್–ಅಲ್ಟ್ರಾ ಮೈಕ್ರೊವೇವ್ ಡೈಜೆಷನ್ ಎಕ್ಸ್‌ಟ್ರಾಕ್ಷನ್ ಸಿಸ್ಟಮ್‌ನಲ್ಲಿ ಪೂರ್ವ–ಚಾಲಿತ ಪ್ರೋಗ್ರಾಂ ಮೂಲಕ ಈ ತರಕಾರಿಗಳಲ್ಲಿ ಭಾರ ಲೋಹಗಳಿರುವುದನ್ನು ಪತ್ತೆಹಚ್ಚಲಾಗಿದೆ.

ಬೀನ್ಸ್‌ನಲ್ಲಿ ಕಬ್ಬಿಣದ ಅಂಶ ಹಾನಿಕಾರಕವಲ್ಲದ ಮಿತಿ ಪ್ರತಿ ಕೆ.ಜಿಗೆ 425.5 ಮಿ.ಗ್ರಾಂ. ಪ್ರಸಿದ್ಧ ಸಾವಯವ ಮಳಿಗೆಯೊಂದರಿಂದ ಖರೀದಿಸಿದ ಬೀನ್ಸ್‌ನಲ್ಲಿ ಈ ಪ್ರಮಾಣ ಪ್ರತಿ ಕೆ.ಜಿಗೆ 810.20 ಮಿ.ಗ್ರಾಂ ಇದೆ. ಕೊತ್ತಂಬರಿ ಸೊಪ್ಪಿನಲ್ಲಿ 945 ಮಿ.ಗ್ರಾಂ/ಕೆ.ಜಿ, ಪಾಲಕ್ ಸೊಪ್ಪಿನಲ್ಲಿ 554.58 ಮಿ.ಗ್ರಾಂ/ಕೆ.ಜಿ ಯಷ್ಟಿದೆ. ಹಾಪ್‌ಕಾಮ್ಸ್‌ನ ಈರುಳ್ಳಿಯಲ್ಲಿ 592.18 ಮಿ.ಗ್ರಾಂ/ ಕೆ.ಜಿ ಕಬ್ಬಿಣದ ಅಂಶ ಕಂಡುಬಂದಿದೆ.


ಬಿಗ್ ಸೂಪರ್ ಮಾರುಕಟ್ಟೆಗಳು ಅಥವಾ ಸಣ್ಣ ಚಿಲ್ಲರೆ ಮಳಿಗೆಗಳಲ್ಲಿನ ತರಕಾರಿಗಳಲ್ಲಿ ಭಾರ ಲೋಹದ ಪ್ರಮಾಣ ಹಾನಿಕಾರಕವಲ್ಲದ ಮಿತಿಗಿಂತ ಹೆಚ್ಚಿದೆ. ಎಫ್‌ಎಒ ಕ್ಯಾಡ್ಮಿಯಂ ಮಿತಿಯನ್ನು 0.2 ಮಿ.ಗ್ರಾಂ/ ಕೆ.ಜಿ ಎಂದು ನಿಗದಿಪಡಿಸಿದೆ. ಆದರೆ, ಬಿಟಿಎಂ ಲೇಔಟ್‌ನ ಸೂಪರ್ ಮಾರುಕಟ್ಟೆಯಿಂದ ಸಂಗ್ರಹಿಸಿದ ಬದನೆಕಾಯಿಯಲ್ಲಿ ಕ್ಯಾಡ್ಮಿಯಂ 52.30 ಮಿ.ಗ್ರಾಂ/ ಕೆ.ಜಿಯಷ್ಟಿದೆ. ಕೊತ್ತಂಬರಿ ಸೊಪ್ಪಿನಲ್ಲಿ 53.30 ಮಿ.ಗ್ರಾಂ/ ಕೆ.ಜಿ, ಪಾಲಕ್‌ನಲ್ಲಿ 53.50 ಮಿ.ಗ್ರಾಂ/ ಕೆ.ಜಿ, ಕ್ಯಾರಟ್‌ನಲ್ಲಿ 54.60 ಮಿ.ಗ್ರಾಂ/ ಕೆ.ಜಿ ಯಷ್ಟಿದೆ. ಈ ಲೋಹವು ಅತ್ಯಂತ ವಿಷಕಾರಿಯಾಗಿದ್ದು ಇದು ಯಕೃತ್ತು, ಶ್ವಾಸಕೋಶ ಹಾಗೂ ನಿರೋಧಕ ಶಕ್ತಿಯನ್ನು ದುರ್ಬಲಗೊಳಿಸುತ್ತದೆ.

ಸೀಸವನ್ನು ಅತ್ಯಂತ ವಿಷಕಾರಕ ಎಂದು ಹೇಳಲಾಗಿದ್ದು, ಸೊಪ್ಪು–ತರಕಾರಿಗಳಲ್ಲಿ ಈ ಲೋಹದ ಹಾನಿಕಾರಕವಲ್ಲದ ಮಿತಿ 0.3 ಮಿ.ಗ್ರಾಂ/ ಕೆ.ಜಿ ಆಗಿದೆ. ಆದರೆ ಸೂಪರ್ ಮಾರುಕಟ್ಟೆಗಳಲ್ಲಿ ಸಂಗ್ರಹಿಸಲಾದ ಹಲವು ತರಕಾರಿಗಳಲ್ಲಿ ಈ ಪ್ರಮಾಣ 12.20 ಮಿ.ಗ್ರಾಂ/ ಕೆ.ಜಿಯಷ್ಟಿದೆ.

ತರಕಾರಿಗಳಲ್ಲಿ ನಿಕ್ಕಲ್ ಲೋಹದ ಹಾನಿಕಾರಕವಲ್ಲದ ಮಿತಿ 67.9 ಮಿ.ಗ್ರಾಂ/ ಕೆ.ಜಿ ಆಗಿದ್ದು, ಹಸಿ ಮೆಣಸಿನಕಾಯಿ, ಕ್ಯಾರಟ್, ಆಲೂಗಡ್ಡೆ, ಟೊಮೆಟೊ ಮತ್ತು ಬೀನ್ಸ್‌ನಲ್ಲಿ ಈ ಲೋಹದ ಸಾಂದ್ರತೆ ಮಿತಿಮೀರಿದೆ.

ಈ ಭಾರ ಲೋಹಗಳ ಅಂಶ ತರಕಾರಿಗಳಲ್ಲಿ ಅತಿಹೆಚ್ಚಿನ ಪ್ರಮಾಣದಲ್ಲಿದ್ದು, ಇಂಥ ತರಕಾರಿಗಳನ್ನು ಸೇವಿಸುವುದರಿಂದ ಆರೋಗ್ಯದ ಮೇಲೆ ಅತ್ಯಂತ ದುಷ್ಪರಿಣಾಮ ಬೀರಲಿದೆ. ಹೀಗಾಗಿ, ಕೊಳಚೆ ನೀರಿನಲ್ಲಿ ತರಕಾರಿ ಬೆಳೆಯುವುದನ್ನು ನಿರ್ಬಂಧಿಸಬೇಕು. ತರಕಾರಿ ಬೆಳೆಯುವಾಗ ಒಳಚರಂಡಿ ನೀರು ಮತ್ತು ಕೈಗಾರಿಕೆ ತ್ಯಾಜ್ಯ ನೀರನ್ನು ಬಳಸಬಾರದು. ನಗರದ ಹೊರವಲಯದಲ್ಲಿ ತರಕಾರಿ ಬೆಳೆಯುವುದನ್ನು ನಿಷೇಧಿಸಬೇಕು ಎಂದು ವರದಿ ಸಲಹೆ ನೀಡಿದೆ. ಎಲೆ ತರಕಾರಿಗಳಲ್ಲಿ ಭಾರವಾದ ಲೋಹಗಳ ಪ್ರಮಾಣ ಇತರೆ ತರಕಾರಿಗಳಿಗಿಂತ ಹೆಚ್ಚಿದೆ ಎಂದು ತಿಳಿಸಿದೆ.

ಸಂಶೋಧನೆ ತಂಡದ ವಿಜ್ಞಾನಿ ಎನ್. ಹೇಮಾ ಮಾತನಾಡಿ, ‘ತರಕಾರಿಗಳ ಮೂಲವನ್ನು ಪತ್ತೆಹಚ್ಚುವ ವಿಧಾನವನ್ನು ಮತ್ತಷ್ಟು ವೃದ್ಧಿಸಿಕೊಂಡು, ಖಾತರಿಪಡಿಸಿಕೊಳ್ಳಬೇಕು. ತರಕಾರಿಗಳಲ್ಲಿನ ಲೋಹಗಳ ಗರಿಷ್ಠ ಪ್ರಮಾಣವನ್ನು ಮತ್ತು ಅದರ ಬಳಕೆಯ ಅವಧಿಯನ್ನು ಪರಾಮರ್ಶಿಸಬೇಕು. ಈ ಲೋಹಗಳು ಮಕ್ಕಳು, ವಯಸ್ಕರು ಹಾಗೂ ವೃದ್ಧರ ಮೇಲೆ ಯಾವ ಪ್ರಮಾಣದಲ್ಲಿ ದುಷ್ಪರಿಣಾಮ ಬೀರುತ್ತವೆ ಎಂಬುದನ್ನು ಬಹಿರಂಗಪಡಿಸಬೇಕು. ಈ ತರಕಾರಿಗಳನ್ನು ಸೇವಿಸುವುದರಿಂದ ಜನರ ಆರೋಗ್ಯದ ಮೇಲೆ ಉಂಟಾಗುವ ಪರಿಣಾಮವನ್ನು ಸಮಗ್ರವಾಗಿ ವಿವರಿಸಬೇಕು’ ಎಂದರು.



ತಪಾಸಣೆ; ಕಾನೂನು ಕ್ರಮ

ಬೆಂಗಳೂರಿನಾದ್ಯಂತ ತರಕಾರಿಗಳಲ್ಲಿರುವ ಲೋಹ ಹಾಗೂ ಕೀಟನಾಶಕ ಅಂಶಗಳ ಗುಣಮಟ್ಟವನ್ನು ಪರೀಕ್ಷಿಸಲು ವಿಶೇಷ ಆಂದೋಲನ ಹಮ್ಮಿಕೊಳ್ಳಲಾಗಿದೆ. ವಿಶ್ಲೇಷಣಾ ಫಲಿತಾಂಶದ ಆಧಾರದಲ್ಲಿ ಮುಂದಿನ ಕಾನೂನಾತ್ಮಕ ಕ್ರಮ ಜರುಗಿಸಲಾಗುತ್ತದೆ ಎಂದು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ತಿಳಿಸಿದೆ.

ತರಕಾರಿ ಸೇರಿದಂತೆ ಆಹಾರ ಮಾದರಿಗಳಲ್ಲಿ ಭಾರಿ ಲೋಹದ ಅಂಶಗಳು ನಿಗದಿತ ಮಾನದಂಡಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬಂದರೆ ಆ ಪದಾರ್ಥಗಳನ್ನು ಅಸುರಕ್ಷಿತ ಎಂದು ಪರಿಗಣಿಸಲಾಗುತ್ತದೆ. ಅಂತಹ ಆಹಾರ ಪದಾರ್ಥ ಮಾರಾಟ ಮಾಡುವ ವ್ಯಾಪಾರಿಗಳ ಮೇಲೆ ‘ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರ ಸೆಕ್ಷನ್ 59ರ ಅನ್ವಯ ಆರು ತಿಂಗಳಿಂದ ಆರು ವರ್ಷದವರೆಗೆ ಜೈಲುವಾಸ ಮತ್ತು ₹1 ಲಕ್ಷದಿಂದ ₹5 ಲಕ್ಷದವರೆಗೆ ದಂಡ ವಿಧಿಸಲು ಅವಕಾಶ ಇರುತ್ತದೆ ಎಂದು ಮಾಹಿತಿ ನೀಡಿದೆ.

ಹಾಪ್‌ಕಾಮ್ಸ್: 70 ಟನ್ ತರಕಾರಿ ವಿತರಣೆ

ಬೆಂಗಳೂರು ನಗರಕ್ಕೆ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಂದ ತರಕಾರಿ ಪೂರೈಕೆಯಾಗುತ್ತದೆ. ಹಾಪ್‌ಕಾಮ್ಸ್ ಒಂದರಿಂದಲೇ 70 ಟನ್ ತರಕಾರಿ ವಿತರಣೆಯಾಗುತ್ತಿದೆ. ಇದಲ್ಲದೆ ಖಾಸಗಿ ಮಳಿಗೆ, ಸೂಪರ್ ಮಾರುಕಟ್ಟೆಗಳಿಂದಲೂ ತರಕಾರಿ ಮಾರಾಟವಾಗುತ್ತಿದೆ.

ಸುದ್ದಿ 2 ನಿಮಿಷ

ಮುತ್ತತ್ತಿ: ನದಿಯಲ್ಲಿ ಈಜಲು ಹೋಗಿ ಯುವಕ ಸಾವು

ಹಲಗೂರು (ಮಂಡ್ಯ ಜಿಲ್ಲೆ): ಸಮೀಪದ ಮುತ್ತತ್ತಿ ಕಾವೇರಿ ನದಿಯಲ್ಲಿ ಬುಧವಾರ ಮಧ್ಯಾಹ್ನ ಈಜಾಡುತ್ತಿದ್ದಾಗ ಸುಳಿಗೆ ಸಿಲುಕಿ ಬೆಂಗಳೂರಿನ ಲಿಂಗರಾಜಪುರ ಬಡಾವಣೆ ನಿವಾಸಿ ಶಂಕರ್ ಅವರ ಪುತ್ರ ಅಭಿಷೇಕ್ (21) ಮೃತಪಟ್ಟರು.

ಎಂಜಿನಿಯರಿಂಗ್ ಪದವೀಧರರಾಗಿದ್ದ ಅವರು, ಮೂವರು ಸ್ನೇಹಿತರೊಂದಿಗೆ ಪ್ರವಾಸಕ್ಕೆ ಬಂದಿದ್ದರು. ಈಜುಗಾರರ ಸಹಾಯದಿಂದ ಗುರುವಾರ ಮಧ್ಯಾಹ್ನ ಮೃತದೇಹವನ್ನು ನದಿಯಿಂದ ಹೊರತೆಗೆದು ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಲಾಯಿತು.

ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಕಲಿ ಗುರುತಿನ ಚೀಟಿ ಪ್ರಕರಣ : ಚುನಾವಣಾ ಆಯೋಗಕ್ಕೆ ದೂರು



ಬೆಂಗಳೂರು: ಹೆಬ್ಬಾಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅಕ್ರಮವಾಗಿ ಮತದಾರರ ಗುರುತಿನ ಚೀಟಿಗಳನ್ನು ಸೃಷ್ಟಿಸಿ ವಿತರಿಸಿರುವ ಪ್ರಕರಣದ ಬಗ್ಗೆ ಸಮಗ್ರವಾಗಿ ತನಿಖೆ ನಡೆಸಬೇಕು ಎಂದು ಬಿಜೆಪಿ ಚುನಾವಣಾ ಆಯೋಗವನ್ನು ಒತ್ತಾಯಿಸಿದೆ.

ಶಾಸಕ ಎಸ್.ಸುರೇಶ್‌ಕುಮಾರ್ ನೇತೃತ್ವದ ಬಿಜೆಪಿ ನಿಯೋಗ ಗುರುವಾರ ಚುನಾವಣಾಧಿಕಾರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿತು.

ಎಂಎಸ್‌ಎಲ್ ಟೆಕ್ನೊ ಸೊಲ್ಯೂಶನ್ಸ್‌ನಲ್ಲಿ ಮತದಾರರ ನಕಲಿ ಗುರುತು ಚೀಟಿಗಳನ್ನು ಸಿದ್ಧಪಡಿಸಿ ನೀಡಲಾಗುತ್ತಿತ್ತು. ಇದು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಆತಂಕಕಾರಿ ವಿಚಾರ. ನಕಲಿ ಮತದಾರರ ಚೀಟಿ ಜಾಲದ ವ್ಯಾಪ್ತಿಯ ವಿಚಾರಣೆ ಆಗಬೇಕಿದ್ದು, ಅದಕ್ಕಾಗಿ ಪ್ರಕರಣವನ್ನು ಎನ್‌ಐಎ ಅಥವಾ ಸಿಬಿಐಗೆ ಒಪ್ಪಿಸಲು ಶಿಫಾರಸು ಮಾಡಬೇಕು ಎಂದು ಮನವಿಯಲ್ಲಿ ಬಿಜೆಪಿ ಒತ್ತಾಯಿಸಿದೆ.

ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಪ್ರಕಾರ ಸಿಸಿಬಿಯ ಮಹಿಳಾ ಸಂರಕ್ಷಣಾ ದಳದ ಪೊಲೀಸ್ ಇನ್‌ಸ್ಪೆಕ್ಟರ್ ಅವರು ಇದೇ 19 ರಂದು ಆರ್‌ಟಿ ನಗರದ ಸುಲ್ತಾನ್ ಪಾಳ್ಯ ಮತ್ತು ಬನಶಂಕರಿ ಕಾಂಪ್ಲೆಕ್ಸ್‌ನ ಎಂಎಸ್‌ಎಲ್ ಟೆಕ್ನೊ ಸೊಲ್ಯೂಶನ್ಸ್‌ನಲ್ಲಿ ಗುರುತಿನ ಚೀಟಿಗಳನ್ನು ಸಿದ್ಧಪಡಿಸಲಾಗುತ್ತಿತ್ತು ಎಂದು ಉಲ್ಲೇಖಿಸಲಾಗಿದೆ. ಇವರು ಈ ಎಲ್ಲಾ ಗುರುತಿನ ಚೀಟಿಗಳನ್ನು ಸ್ವಂತ ಲಾಭಕ್ಕಾಗಿ ಸೃಷ್ಟಿಸಿ ಕಾನೂನುಬಾಹಿರ ಕೃತ್ಯಗಳಲ್ಲಿ ಭಾಗಿಯಾದವರಿಗೆ ಸಹಕರಿಸುತ್ತಿದ್ದರು. ನೈಜ ಗುರುತಿನ ಚೀಟಿಗಳೆಂದು ಹೆಚ್ಚಿನ ಹಣಕ್ಕೆ ನೀಡಿ ಸರ್ಕಾರ ಮತ್ತು ಸಾರ್ವಜನಿಕರಿಗೆ ಮೋಸ ಮಾಡುತ್ತಿದ್ದರು ಎಂದು ಮನವಿಯಲ್ಲಿ ಹೇಳಿದೆ.

ಕಬಡ್ಡಿ ಆಟಗಾರ್ತಿ ಶವ ಪತ್ತೆ: ಆತ್ಮಹತ್ಯೆ ಶಂಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬಡ್ಡಿ ಆಟಗಾರ್ತಿಯೂ ಆಗಿದ್ದ ನಗರದ ಕಂಪನಿಯೊಂದರ ಉದ್ಯೋಗಿ ಧನಲಕ್ಷ್ಮಿ (25) ಅವರ ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

‘ಅರಿಶಿನಕುಂಟೆಯ ಆದರ್ಶನಗರದಲ್ಲಿರುವ ಮನೆಯಲ್ಲಿ ಧನಲಕ್ಷ್ಮಿ ಮೃತದೇಹ ಪತ್ತೆಯಾಗಿದೆ. ಈ ಸಂಬಂಧ ಅವರ ಪೋಷಕರು ಗುರುವಾರ ಬೆಳಿಗ್ಗೆ ದೂರು ನೀಡಿದ್ದಾರೆ. ಇದೊಂದು ಆತ್ಮಹತ್ಯೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ನೆಲಮಂಗಲ ನಗರ ಠಾಣೆಯ ಪೊಲೀಸ್ ಮೂಲಗಳು ಹೇಳಿವೆ.

‘ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಕೆ. ತಿಮ್ಮಲಾಪುರದ ಧನಲಕ್ಷ್ಮಿ, ಎಂಬಿಎ ಪದವೀಧರರು. ಕಾಡುಗೋಡಿಯ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ತಂದೆ–ತಾಯಿ ಜೊತೆ ಆದರ್ಶನಗರದಲ್ಲಿ ಐದು ವರ್ಷಗಳಿಂದ ನೆಲೆಸಿದ್ದರು. ಹಲವು ಕಬಡ್ಡಿ ಪಂದ್ಯಾವಳಿಗಳಲ್ಲಿ ಭಾಗವಹಿಸಿದ್ದರು’ ಎಂದು ಮೂಲಗಳು ಹೇಳಿವೆ.

‘ಸ್ನೇಹಿತರ ಜೊತೆ ಇತ್ತೀಚೆಗೆ ಮೈಸೂರಿಗೆ ಹೋಗಿದ್ದ ಧನಲಕ್ಷ್ಮಿ, ವಾಪಸು ಮನೆಗೆ ಬಂದಿದ್ದರು. ಬುಧವಾರ ತಡರಾತ್ರಿ ಮನೆಯ ಕೊಠಡಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ಆದರೆ, ಆತ್ಮಹತ್ಯೆಗೆ ಕಾರಣವೇನು ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ’ ಎಂದು ಮೂಲಗಳು ತಿಳಿಸಿವೆ.

ಬಿಬಿಎಂಪಿ ಅಧಿಕಾರಿ ನೌಕರರ ಸಂಘದಿಂದ ಅಂತಿಮ ಗಡುವು

ಬೇಡಿಕೆ ಈಡೇರಿಸದಿದ್ದರೆ ಮುಷ್ಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಬೇಡಿಕೆಗಳನ್ನು ಈಡೇರಿಸದಿದ್ದರೆ ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸಿ ಮುಷ್ಕರ, ಪ್ರತಿಭಟನೆ ನಡೆಸಲು ಸಂಘದವತಿಯಿಂದ ಗುರುವಾರ ನಡೆದ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಗಿದೆ.

ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ್ದ ಬಿಬಿಎಂಪಿ ಸಿಬ್ಬಂದಿ, ಬೇಡಿಕೆ ಈಡೇರಿಸಲು ಸರ್ಕಾರಕ್ಕೆ ಅಂತಿಮ ಗಡುವು ನೀಡಿದರು. ಸರ್ಕಾರ ಸಹಕಾರ ನೀಡುವ ಭರವಸೆ ಹುಸಿಯಾದರೆ ಬಿಬಿಎಂಪಿ ಸಂಪೂರ್ಣ ಬಂದ್ ಮಾಡಲು ಸಭೆಯಲ್ಲಿ ನಿರ್ಧರಿಸಲಾಯಿತು.

‘ಪಾಲಿಕೆಯಲ್ಲಿ ಅಧಿಕಾರಿ ಮತ್ತು ಸಿಬ್ಬಂದಿ ಕೊರತೆ ಮತ್ತು ಸಕಾಲಕ್ಕೆ ನೇಮಕಾತಿ ಇಲ್ಲದೇ ಇರುವುದರಿಂದ ಒತ್ತಡದಲ್ಲಿ ಕಾರ್ಯನಿರ್ವಹಿಸುವ ಪರಿಸ್ಥಿತಿ ಬಂದಿದೆ. ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂದಾಯ ಇಲಾಖೆಯ ಅಧಿಕಾರಿಗಳಿಗೆ 5 ತಿಂಗಳ ಹಿಂದೆ ವಲಯ ಸಹಾಯಕ ಆಯುಕ್ತರು ವೃಂದಕ್ಕೆ ಹಾಗೂ ಕಂದಾಯ ಅಧಿಕಾರಿ ವೃಂದಕ್ಕೆ ಮುಂಬಡ್ತಿ ನೀಡಿದ್ದರೂ ಇದುವರೆವಿಗೂ ಯಾವುದೇ ಸ್ಥಳ ನಿಯುಕ್ತಿಗೊಳಿಸಿಲ್ಲ. ಇದರಿಂದ ಕೆಳಹಂತದ ನೌಕರರು ಮುಂಬಡ್ತಿ ಪಡೆಯಲು ವಂಚಿತರಾಗುತ್ತಿರುತ್ತಾರೆ. ವೃಂದ ಮತ್ತು ನೇಮಕಾತಿ ನಿಯಮಾವಳಿ ವಿರುದ್ಧವಾಗಿ ಕಾನೂನು ಬಾಹಿರವಾಗಿ ಎರವಲು ಸೇವೆ ಮೇಲೆ ನಿಯೋಜಿಸಿರುವ ಅಧಿಕಾರಿ/ ನೌಕರರನ್ನು ಕೂಡಲೇ ಮಾತೃ ಇಲಾಖೆಗೆ ಹಿಂದಿರುಗಿಸಬೇಕು‘ ಎಂದು ಸಭೆಯಲ್ಲಿ ಆಗ್ರಹಿಸಲಾಯಿತು.

ಅಧಿಕಾರಿ, ನೌಕರರು ಮುಂಬಡ್ತಿ, ಆರ್ಥಿಕ ಸೌಲಭ್ಯ ಪಡೆಯಲು ವಂಚಿತರಾಗಿರುತ್ತಿರುವುದರಿಂದ, 5,219 ಹುದ್ದೆಗಳು ಸೃಜಿಸಬೇಕೆಂದು ಮನವಿ ಮಾಡಲಾಯಿತು.

ಪಾಲಿಕೆಯಲ್ಲಿ ಕಾನೂನು ಬಾಹಿರವಾಗಿ 800ಕ್ಕೂ ಮೇಲ್ಪಟ್ಟು ಮಾರ್ಷಲ್‌ಗಳನ್ನು ನಿಯೋಜಿಸಿ ಸಾರ್ವಜನಿಕರ ತೆರಿಗೆ ಹಣ ದುರುಪಯೋಗ ವಾಗುತ್ತಿದೆ. ಈ ನಿಯೋಜನೆಯನ್ನು ರದ್ದುಪಡಿಸಬೇಕು ಎಂದು ಒತ್ತಾಯಿಸಲಾಯಿತು.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ದಿ ಸಂಘದ ಹೋರಾಟಕ್ಕೆ ಪೌರ ಕಾರ್ಮಿಕರ ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿದವು.

ಜಂಟಿ ಆಯುಕ್ತೆ ಲಕ್ಷ್ಮಿದೇವಿ, ಸಂಘದ ಅಧ್ಯಕ್ಷ ಎ.ಅಮೃತ್‌ರಾಜ್, ಪೌರ ಕಾರ್ಮಿಕರ ಸಂಘದ ಮುಖಂಡರಾದ ಡಾ.ಬಾಬು, ಸುಬ್ಬರಾಯುಡು, ಪೋತಣ್ಣ, ತ್ಯಾಗರಾಜ್, ಶೇಖರ್, ಗುಣ, ಲಿಂಗರಾಜು, ಸಹಕಂದಾಯಾಧಿಕಾರಿ ಈಶ್ವರ್ ರಾಯಡು ಇದ್ದರು.



ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಗುರುವಾರ ಆಯೋಜಿಸಿದ್ದ ‘ಪೂರ್ವಭಾವಿ ಸಭೆ’ಯಲ್ಲಿ ಭಾಗವಹಿಸಿದ್ದ ಬಿಬಿಎಂಪಿ ಸಿಬ್ಬಂದಿ



ಕೆ.ಆರ್‌ಪುರ ಸಮೀಪದ ವರ್ತೂರಿನಲ್ಲಿ ವರ್ತೂರು ತೆಲುಗು ಸಂಘಂ ಹಮ್ಮಿಕೊಂಡಿದ್ದ ಮೊದಲನೇ ವಾರ್ಷಿಕೋತ್ಸವದಲ್ಲಿ ಗಾನ ಕೋಗಿಲೆ ಪಿ.ಸುಶೀಲಾ, ಪ್ರವಚನಕಾರ ಗರಕಿಪಾಟಿ ನರಸಿಂಹರಾವ್ ಮತ್ತು ಸಂಗೀತ ನಿರ್ದೇಶಕ ಮಾಧವಪೆದ್ದಿ ಸುರೇಶ್ ಅವರನ್ನು ಸನ್ಮಾನಿಸಲಾಯಿತು

ಷೇರು ವ್ಯವಹಾರ; ದೂರು ದಾಖಲಿಸಿದ ವೈದ್ಯ

₹ 90 ಲಕ್ಷ ಹೂಡಿಕೆ ವಂಚನೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಗಳಿಸಬಹುದೆಂದು ಹೇಳಿ ₹ 90 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ವೈದ್ಯರೊಬ್ಬರು ಹೈಗ್ರೌಂಡ್ಸ್ ಠಾಣೆಗೆ ದೂರು ನೀಡಿದ್ದಾರೆ.

‘ಆಗಸ್ಟ್ 5ರಿಂದ ಅ. 22ರವರೆಗೆ ನಡೆದಿರುವ ವಂಚನೆ ಸಂಬಂಧ 31 ವರ್ಷದ ವೈದ್ಯರೊಬ್ಬರು ದೂರು ನೀಡಿದ್ದಾರೆ. ಆರೋಪಿಗಳಾದ ಕಾರ್ತಿಕೇಯನ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳು ತಲೆಮರೆಸಿಕೊಂಡಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೂರುದಾರ ಮೊಬೈಲ್‌ಗೆ ವಾಟ್ಸ್‌ಆ್ಯಪ್ ಗ್ರೂಪ್‌ವೊಂದರ ಸಂದೇಶ ಬಂದಿತ್ತು. ಆರೋಪಿಗಳು ನಿರ್ವಹಣೆ ಮಾಡುತ್ತಿದ್ದ ಗ್ರೂಪ್ ಅದಾಗಿತ್ತು. ದೂರುದಾರರು, ಲಿಂಕ್ ಕ್ಲಿಕ್ ಮಾಡಿ ಗ್ರೂಪ್ ಸೇರಿದ್ದರು. ಷೇರು ಮಾರುಕಟ್ಟೆ ಬಗ್ಗೆ ವಿಶೇಷ ತರಗತಿಗಳನ್ನು ನಡೆಸುವುದಾಗಿ ಆರೋಪಿಗಳು ಹೇಳಿದ್ದರು. ಹಣ ಹೂಡಿಕೆ ಮಾಡಿದರೆ, ಕೆಲವೇ ದಿನಗಳಲ್ಲಿ ದುಪ್ಪಟ್ಟು ಲಾಭ ಬರುವುದಾಗಿ ತಿಳಿಸಿದ್ದರು.’

‘ಆರೋಪಿಗಳ ಮಾತು ನಂಬಿದ್ದ ದೂರುದಾರ, ಅವರು ಹೇಳಿದ್ದ ಆ್ಯಪ್‌ವೊಂದನ್ನು ಮೊಬೈಲ್‌ನಲ್ಲಿ ಇನ್‌ಸ್ಟಾಲ್ ಮಾಡಿಕೊಂಡಿದ್ದರು. ಹಂತ ಹಂತವಾಗಿ ₹90 ಲಕ್ಷ ಹೂಡಿಕೆ ಮಾಡಿದ್ದರು. ಲಾಭದ ಹಣ ನೀಡುವುದಾಗಿ ಹೇಳಿದ್ದ ಆರೋಪಿಗಳು, ಶುಲ್ಕದ ಹೆಸರಿನಲ್ಲೂ ಹಣ ಪಡೆದಿದ್ದರು.’

‘₹ 90 ಲಕ್ಷ ಖಾತೆಯಲ್ಲಿದ್ದು, ಪುನಃ ಹಣ ಹೂಡಿಕೆ ಮಾಡಿದರೆ ಮುಂದಿನ ದಿನಗಳಲ್ಲಿ ಮತ್ತಷ್ಟು ಲಾಭ ಬರುವುದಾಗಿ ಆರೋಪಿಗಳು ಹೇಳಿದ್ದರು. ಆದರೆ, ದೂರುದಾರರು ತಮ್ಮ ಹಣ ವಾಪಸು ನೀಡುವಂತೆ ಕೇಳಿದ್ದರು. ಆರೋಪಿಗಳು ಯಾವುದೇ ಹಣ ಕೊಟ್ಟಿಲ್ಲ’ ಎಂದು ಮೂಲಗಳು ತಿಳಿಸಿವೆ.

2 ಕೆ.ಜಿ ನಕಲಿ ಚಿನ್ನ: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಚಿನ್ನವನ್ನು ಅಸಲಿ ಎಂಬುದಾಗಿ ಬಿಂಬಿಸಿ ಮಾರಲು ಯತ್ನಿಸಲಾಗಿದ್ದು, ಈ ಸಂಬಂಧ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸ್ಥಳೀಯ ನಿವಾಸಿಯೊಬ್ಬರು ವಂಚನೆ ಜಾಲದ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದೂರುದಾರರ ಅಂಗಡಿಗೆ ಅ. 17ರಂದು ಬಂದಿದ್ದ ಆರೋಪಿ, ‘ನಮಗೆ 2 ಕೆ.ಜಿ ಚಿನ್ನ ಸಿಕ್ಕಿದೆ. ಅದನ್ನು ಕಡಿಮೆ ಬೆಲೆಗೆ ಮಾರುತ್ತಿದ್ದೇವೆ. ನಿಮಗೆ ಬೇಕಾದರೆ ಹೇಳಿ’ ಎಂದಿದ್ದ. ಜೊತೆಗೆ, ಸ್ವಲ್ಪ ಚಿನ್ನವನ್ನೂ ಕೊಟ್ಟು ₹ 2000 ಪಡೆದುಕೊಂಡು ವಾಪಸು ಹೋಗಿದ್ದ. ಚಿನ್ನವನ್ನು ಅಸಲಿ ಎಂಬುದಾಗಿ ದೂರುದಾರ ನಂಬಿದ್ದರು.’

‘ಚಿನ್ನ ಖರೀದಿಸಲು ಮುಂದಾಗಿದ್ದ ದೂರುದಾರ, ಅ. 22ರಂದು ಹೋಟೆಲ್‌ವೊಂದರಲ್ಲಿ ಆರೋಪಿಗಳನ್ನು ಭೇಟಿಯಾಗಿದ್ದರು. ಬ್ಯಾಗ್‌ನಲ್ಲಿದ್ದ ಚಿನ್ನವನ್ನು ಪರಿಶೀಲಿಸಿದಾಗ, ನಕಲಿ ಎಂಬುದು ಗೊತ್ತಾಗಿತ್ತು. ಇದಾದ ಕೆಲ ನಿಮಿಷಗಳಲ್ಲಿಯೇ ಆರೋಪಿಗಳು, ಸ್ಥಳದಿಂದ ಪರಾರಿಯಾಗಿದ್ದಾರೆ’ ಎಂದು ತಿಳಿಸಿದರು.

ಶಾಲೆಯ ಮುಖ್ಯ ಶಿಕ್ಷಕ ಅಮಾನತು

ಚಿತ್ರದುರ್ಗ: ಶಾಲೆಯ ಶೌಚಾಲಯ ಸ್ವಚ್ಛಗೊಳಿಸುವ ಆ್ಯಸಿಡ್ ಮೈಮೇಲೆ ಬಿದ್ದು 2ನೇ ತರಗತಿ ವಿದ್ಯಾರ್ಥಿನಿ ಗಾಯಗೊಂಡಿರುವ ಘಟನೆಗೆ ಸಂಬಂಧಿಸಿ ಜೋಡಿಚಿಕ್ಕೇನಹಳ್ಳಿ ಗೊಲ್ಲರಹಟ್ಟಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಜಿ.ರಂಗಸ್ವಾಮಿ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಕ್ಷೇತ್ರ ಶಿಕ್ಷಣಾಧಿಕಾರಿ ನೀಡಿದ ವರದಿ ಆಧರಿಸಿ ಡಿಡಿಪಿಐ ಕೆ.ರವಿಶಂಕರ್ ರೆಡ್ಡಿ ಗುರುವಾರ ಈ ಆದೇಶ ಹೊರಡಿಸಿದ್ದಾರೆ. ‘ಬುಧವಾರ ಶಾಲೆಯಲ್ಲಿನ ಶೌಚಾಲಯ ಸ್ವಚ್ಛಗೊಳಿಸುವಾಗ ವಿದ್ಯಾರ್ಥಿನಿ ಸಿಂಚನಾ ಬೆನ್ನಿನ ಮೇಲೆ ಆ್ಯಸಿಡ್ ಬಿದ್ದಿದೆ. ಗಾಯಗೊಂಡಿರುವ ವಿದ್ಯಾರ್ಥಿನಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ. ಶೌಚಾಲಯ ಸ್ವಚ್ಛಗೊಳಿಸಲು ವಿದ್ಯಾರ್ಥಿಗಳನ್ನು ಬಳಸಿ ಕರ್ತವ್ಯಲೋಪ ಎಸಗಿದ್ದೀರಿ. ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿತನ ಮೇಲ್ನೋಟಕ್ಕೆ ಕಂಡುಬಂದಿದೆ’ ಎಂದು ಅಮಾನತು ಆದೇಶದಲ್ಲಿ ತಿಳಿಸಲಾಗಿದೆ.

ಬಾಯ್ಲರ್ ಸಿಡಿದು ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ



ಚಿಗಮಲ್ಲಪ್ಪ

ದಾಬಸ್ ಪೇಟೆ: ಸೋಂಪುರ ಕೈಗಾರಿಕಾ ಪ್ರದೇಶದ ಆರ್ಗ್ಯಾನಿಕ್ ಆರೋಮ್ಯಾಟಿಕ್ಸ್ ಕಂಪನಿಯಲ್ಲಿ ಗುರುವಾರ ಮಧ್ಯಾಹ್ನ ಬಾಯ್ಲರ್ ಸ್ಫೋಟಗೊಂಡು ಕಾರ್ಮಿಕ ಚಿಗಮಲ್ಲಪ್ಪ ಅಲಿಯಾಸ್ ಮಂಜಪ್ಪ (40) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮತ್ತೊಬ್ಬ ಕಾರ್ಮಿಕ ಮನೋಜ್ (29) ತೀವ್ರವಾಗಿ ಗಾಯಗೊಂಡಿದ್ದಾರೆ.

ಹರಪನಹಳ್ಳಿ ತಾಲ್ಲೂಕಿನ ಕುಂಚೂರು ಗ್ರಾಮದ ಚಿಗಮಲ್ಲಪ್ಪ ಅವರು ನಗರದ ಟಿ. ದಾಸರಹಳ್ಳಿಯಲ್ಲಿ ವಾಸವಿದ್ದರು. ದುರಸ್ತಿಗಾಗಿ ಬಾಯ್ಲರ್ ಹೊರಗೆ ತಂದಾಗ ಸ್ಫೋಟವಾಯಿತು. ಸ್ಫೋಟದ ರಭಸಕ್ಕೆ ಕಬ್ಬಿಣದ ತುಂಡುಗಳು, ಬೋಲ್ಟ್‌ಗಳು ಪಕ್ಕದಲ್ಲಿದ್ದ ಕರ್ಲಾನ್ ಕಂಪನಿಯವರೆಗೆ ಹಾರಿದ್ದವು ಎಂದು ಸ್ಥಳೀಯರು ತಿಳಿಸಿದರು.

ಬಾಯ್ಲರ್ ಮಷಿನ್‌ಗಳು ತುಕ್ಕು ಹಿಡಿದಿದ್ದವು. ರಾಸಾಯನಿಕ ಬಳಕೆ ಮಾಡುವ ಆರ್ಗ್ಯಾನಿಕ್ ಆರೋಮ್ಯಾಟಿಕ್ಸ್ ಕಂಪನಿಯಲ್ಲಿ ಯಾವುದೇ ಮುಂಜಾಗ್ರತಾ ಮತ್ತು ಸುರಕ್ಷತಾ ಕ್ರಮ ವಹಿಸದೇ ಇರುವುದರಿಂದ ಅಪಾಯ ಉಂಟಾಗಿದೆ ಎಂದು ದೂರಿದರು. ಸ್ಥಳಕ್ಕೆ ಡಿವೈಎಸ್ಪಿ ಜಗದೀಶ್, ಇನ್‌ಸ್ಪೆಕ್ಟರ್ ರವಿ ಎಸ್., ಪಿಎಸ್‌ಐ ವಿಜಯಕುಮಾರಿ, ಸಿಬ್ಬಂದಿ ಭೇಟಿ ನೀಡಿದರು.

ಕೈಚೀಲ ತಯಾರಿಕೆ ಯಂತ್ರ: ₹ 74.25 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಸಿ ನೀರಿನಲ್ಲಿ ಕರಗುವ ಪರಿಸರ ಸ್ನೇಹಿ ಕೈ ಚೀಲ ತಯಾರಿಕೆ ಯಂತ್ರದ ಹೆಸರಿನಲ್ಲಿ ₹74.25 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಅಶೋಕನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘₹1.26 ಕೋಟಿ ಮೌಲ್ಯದ ಯಂತ್ರ ಹಾಗೂ ನುರಿತ ಕೆಲಸಗಾರರನ್ನು ಒದಗಿಸುವುದಾಗಿ ಹೇಳಿದ್ದ ಅಶ್ವಥ್ ಹೆಗ್ಡೆ ಅವರು ನನ್ನಿಂದ ಮುಂಗಡವಾಗಿ ₹ 74.25 ಲಕ್ಷ ಪಡೆದು ವಂಚಿಸಿದ್ದಾರೆ’ ಎಂದು ಆರೋಪಿಸಿ 47 ವರ್ಷದ ಮಹಿಳಾ ಉದ್ಯಮಿಯೊಬ್ಬರು ದೂರು ನೀಡಿದ್ದಾರೆ. ಅಶ್ವಥ್ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿ, ದಾಖಲೆಗಳ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕಂಪನಿಯೊಂದರ ವ್ಯವಸ್ಥಾಪಕ ನಿರ್ದೇಶಕರಾದ ಅಶ್ವಥ್, ಪರಿಸರ ಸ್ನೇಹಿ ಕೈ ಚೀಲ ತಯಾರಿಕೆ ಯಂತ್ರ ಮಾರಾಟ ಸಂಬಂಧ ದೂರುದಾರರ ಜೊತೆ ಮಾತುಕತೆ ನಡೆಸಿದ್ದರು. ಇದಕ್ಕಾಗಿ ಹಣ ಪಡೆದಿದ್ದರು. ಆದರೆ, ಕೇವಲ ₹ 5 ಲಕ್ಷ ಬೆಲೆಯ ಹಳೇ ಯಂತ್ರ ನೀಡಿದ್ದರು. ಕೈ ಚೀಲ ತಯಾರಿಕೆ ಬಗ್ಗೆ ಯಾವುದೇ ಜ್ಞಾನವಿಲ್ಲದ ಸಿಬ್ಬಂದಿ ಒದಗಿಸಿದ್ದರೆಂದು ದೂರುದಾರರು ಆರೋಪಿಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ವಂಚನೆ ಪ್ರಶ್ನಿಸಿದ್ದ ದೂರುದಾರರು, ಹಣ ವಾಪಸು ನೀಡುವಂತೆ ಹೇಳಿದ್ದರು. ಯಂತ್ರ ಹಿಂಪಡೆದಿದ್ದ ಆರೋಪಿ, ₹1.30 ಕೋಟಿಯನ್ನು ವಾಪಸು ನೀಡುವುದಾಗಿ ಹೇಳಿದ್ದರು. ಆದರೆ, ಇದುವರೆಗೂ ಹಣ ನೀಡಿಲ್ಲ. ನೊಂದ ಮಹಿಳಾ ಉದ್ಯಮಿ ಠಾಣೆಗೆ ದೂರು ನೀಡಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಇದೊಂದು ಹಣಕಾಸಿನ ವ್ಯವಹಾರ. ಮೊದಲಿಗೆ ದಾಖಲೆಗಳನ್ನು ಪರಿಶೀಲಿಸಿ, ನಂತರ ಆರೋಪಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಮೂಲಗಳು ತಿಳಿಸಿವೆ.

‘ನಡುರಸ್ತೆಯಲ್ಲಿ ಕುರಿ ಶಿರಚ್ಛೇದ’

ಬೆಂಗಳೂರು: ಸೀಗೆಹಳ್ಳಿ ಗ್ರಾಮ ಪಂಚಾಯಿತಿ ಕಚೇರಿ ಎದುರು ಮಚ್ಚಿನಿಂದ ಕುರಿಯ ಶಿರಚ್ಛೇದ ಮಾಡಲಾಗಿದ್ದು, ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ವಿಡಿಯೊ ಆಧರಿಸಿ ಎಫ್‌ಐಆರ್ ದಾಖಲಿಸಿಕೊಂಡಿರುವ ಕಾಡುಗೋಡಿ ಪೊಲೀಸರು, ಸ್ಥಳೀಯರ ವಿಚಾರಣೆ ನಡೆಸುತ್ತಿದ್ದಾರೆ.

‘ಸೀಗೆಹಳ್ಳಿಯಲ್ಲಿ ಇತ್ತೀಚೆಗೆ ಊರ ಹಬ್ಬವಿತ್ತು. ಹರಕೆ ಹೊತ್ತಿದ್ದ ಜನರು, ಕುರಿಗಳನ್ನು ಬಲಿ ಕೊಟ್ಟಿರುವುದಾಗಿ ಗೊತ್ತಾಗಿದೆ. ವ್ಯಕ್ತಿಯೊಬ್ಬ, ಪಂಚಾಯಿತಿ ಕಚೇರಿ ಎದುರೇ ಕುರಿಯೊಂದರ ಶಿರಚ್ಛೇದ ಮಾಡಿದ್ದಾನೆ. ಇದೇ ವಿಡಿಯೊವನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿರುವ ಸ್ಥಳೀಯರೊಬ್ಬರು, ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದಾರೆ. ವಿಡಿಯೊದಲ್ಲಿರುವ ವ್ಯಕ್ತಿಗಳ ಪತ್ತೆಗೆ ಸ್ಥಳೀಯರನ್ನು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪೊಲೀಸರು ಏನು ಮಾಡುತ್ತಿದ್ದಾರೆ: ‘ನಡುರಸ್ತೆಯಲ್ಲೇ ಕುರಿಯ ತಲೆಯನ್ನು ಕಡಿಯಲಾಗಿದೆ. ಸ್ಥಳದಲ್ಲಿ ಬಿದ್ದು ಒದ್ದಾಡಿ ಕುರಿ ಸತ್ತಿದೆ. ಇದೆಲ್ಲ ನಡೆಯುತ್ತಿದ್ದರೂ ಪೊಲೀಸರು ಏನು ಮಾಡುತ್ತಿದ್ದಾರೆ. ನಗರದಲ್ಲಿ ಪೊಲೀಸರ ಗಸ್ತು ಇಲ್ಲವೇ’ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಜನರು ಪ್ರಶ್ನಿಸಿದ್ದಾರೆ.

‘ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿದರೆ ಸಾಲದು, ಅವರನ್ನು ಪತ್ತೆ ಮಾಡಿ ಜೈಲಿಗೆ ಕಳುಹಿಸಬೇಕು. ಮುಂದೆ ಇಂಥ ಘಟನೆಗಳು ಆಗದಂತೆ ನೋಡಿಕೊಳ್ಳಬೇಕು’ ಎಂದು ಆಗ್ರಹಿಸಿದ್ದಾರೆ.

ಆಭರಣ ಕಳವು

ಬೆಂಗಳೂರು: ಸಕಲೇಶಪುರದಿಂದ ಬೆಂಗಳೂರಿಗೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಮಹಿಳೆಯೊಬ್ಬರ ಚಿನ್ನಾಭರಣ ಕಳ್ಳತನವಾಗಿದ್ದು, ಈ ಸಂಬಂಧ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ 42 ವರ್ಷದ ಮಹಿಳೆ ಕಳ್ಳತನದ ಬಗ್ಗೆ ದೂರು ನೀಡಿದ್ದಾರೆ. ಚಿನ್ನದ ಸರಗಳು, ಉಂಗುರಗಳು ಸೇರಿ 67 ಗ್ರಾಂ ತೂಕದ ಚಿನ್ನಾಭರಣ ಕಳ್ಳತನವಾಗಿದೆ. ಇವುಗಳ ಮೌಲ್ಯ ₹ 3.20 ಲಕ್ಷ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಹಿಳೆ ಹೈದರಾಬಾದ್‌ನಲ್ಲಿರುವ ಸಂಬಂಧಿಕರ ಮನೆಯ ಕಾರ್ಯಕ್ರಮಕ್ಕೆ ಹೋಗಲು ಅ. 3ರಂದು ಬೆಂಗಳೂರಿಗೆ ಬಂದಿದ್ದರು. ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಇಳಿದಿದ್ದ ಅವರು, ಹೈದರಾಬಾದ್ ಕಡೆ ಹೋಗುವ ಬಸ್ ಬಳಿ ಹೋಗಿದ್ದರು. ಆಗ ಬ್ಯಾಗ್ ಪರಿಶೀಲನೆ ನಡೆಸಿದಾಗ, ಚಿನ್ನಾಭರಣಗಳು ಇರಲಿಲ್ಲ’ ಎಂದು ಮೂಲಗಳು ಹೇಳಿವೆ.

ವಿವಿಧ ಬಡಾವಣೆಗಳಲ್ಲಿ ನಾಗರಿಕರ ಕುಂದುಕೊರತೆ ಆಲಿಸಿದ ಸಂಸದ

ಮೂಲ ಸೌಕರ್ಯ ಕಲ್ಪಿಸಲು ಮನವಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ‘ರಸ್ತೆಗಳು ಗುಂಡಿ ಬಿದ್ದಿವೆ. ನಡೆದಾಡುವುದು ಕಷ್ಟ. ದ್ವಿಚಕ್ರ-ವಾಹನಗಳಲ್ಲಿ ಬಿದ್ದು ಗಾಯಗೊಂಡವರ ಸಂಖ್ಯೆ ಲೆಕ್ಕಕ್ಕಿಲ್ಲ. ಚರಂಡಿ ವ್ಯವಸ್ಥೆ ಅವ್ಯವಸ್ಥೆಯಾಗಿದೆ. ಮಳೆ ಬಂದಾಗ ಚರಂಡಿ ನೀರು ಮನೆಗಳಿಗೆ ನುಗ್ಗುತ್ತವೆ. ಹಲವು ವರ್ಷಗಳಿಂದ ನಮ್ಮ ಬದುಕು ಬಹಳ ಶೋಚನೀಯವಾಗಿದೆ...’

ಮಾಗಡಿ ರಸ್ತೆಗೆ ಹೊಂದಿಕೊಂಡಿರುವ ಭೈರವೇಶ್ವರ ನಗರ, ಕೆಪ್ಪೆಹಳ್ಳ ಶಾಂತಿಧಾಮ ಸ್ಕೂಲ್ ಹಿಂಭಾಗದಲ್ಲಿರುವ ನಿವಾಸಿಗಳು ಸಂಸದ ಡಿ.ಕೆ. ಸುರೇಶ್ ಅವರ ಎದುರು ಒಂದೇ ಉಸಿರಿಗೆ ತಮ್ಮ ಬಡಾವಣೆಯ ಸಮಸ್ಯೆಗಳ ಪಟ್ಟಿಯನ್ನೇ ತೆರೆದಿಟ್ಟರು. ಈ ಭಾಗದ ಕೆಲವು ಬಡಾವಣೆಗಳಿಗೆ ದಿಢೀರ್ ಭೇಟಿ ನೀಡಿದ ಸುರೇಶ್ ಅವರು, ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ, ಮನವಿ ಸ್ವೀಕರಿಸಿದರು.

ಮಲ್ಲತ್ತಹಳ್ಳಿಯ ಆರ್‌ಎಚ್‌ಸಿಎಸ್ ಬಡಾವಣೆಯ ಅಪಾರ್ಟ್‌ಮೆಂಟ್ ನಿವಾಸಿಗಳು, ‘ಈ ಬಡಾವಣೆಯಲ್ಲಿ ಚರಂಡಿ ವ್ಯವಸ್ಥೆ ಇಲ್ಲ. ರಸ್ತೆ ಡಾಂಬರ್ ಹಾಕಿಲ್ಲ. ಕೆಲವೊಮ್ಮೆ ಬೀದಿ ದೀಪಗಳೇ ಇರುವುದಿಲ್ಲ. ರಾತ್ರಿ ವೇಳೆ ತಿರುಗಾಡುವುದು ಕಷ್ಟವಾಗುತ್ತದೆ. ದಯವಿಟ್ಟು ಚರಂಡಿ ವ್ಯವಸ್ಥೆ ಮಾಡಿಸಿ, ರಸ್ತೆಗಳನ್ನು ಸರಿಪಡಿಸಿ’ ಎಂದು ಸಂಸದರಿಗೆ ಮನವಿ ಮಾಡಿದರು. ಈರಣ್ಣನಪಾಳ್ಯದ ಮಹಿಳೆಯರು ಇದಕ್ಕೆ ದನಿಗೂಡಿಸಿದರು.

ಮೈಸೂರು ರಸ್ತೆಗೆ ಹೊಂದಿಕೊಂಡಂತಿರುವ ಅರಣ್ಯ ಇಲಾಖೆ ನೌಕರರ ಬಡಾವಣೆಯ ಸ್ಥಿತಿ ನೋಡಿ ಸಂಸದರು ದಿಗಿಲುಗೊಂಡರು. ’20 ವರ್ಷಗಳ ಹಿಂದೆ ಬಡಾವಣೆ ನಿರ್ಮಾಣವಾದಾಗ (ಬಿಡಿಎ ಅನುಮೋದನೆ) ನಗರಸಭೆಯವರು ರಸ್ತೆ, ಒಳಚರಂಡಿ ಮಾಡಿಸಿರುವುದನ್ನು ಬಿಟ್ಟು ಈವರೆಗೂ ಯಾವುದೇ ಅಭಿವೃದ್ಧಿ ಕಾಮಗಾರಿ ನಡೆದಿಲ್ಲ‘ ಎಂದು ನಿವಾಸಿಗಳು ದೂರಿದರು. ’ಚರಂಡಿಗಳು ಕಿತ್ತುಹೋಗಿವೆ. ಮಳೆಬಂದಾಗ ನೀರಿನ ಮೂಲಕ ಹಾವುಗಳು ಮನೆಗಳಿಗೆ ಹರಿದು ಬರುತ್ತವೆ’ ಎಂದು ಮಹಿಳೆಯರು ದೂರಿದರು.

ಶಾಸಕ ಮುನಿರತ್ನ ಅವರು ಮೂರು ವರ್ಷದ ಹಿಂದೆ ರಸ್ತೆ ಮಾಡಿಸುತ್ತೇನೆ ಎಂದು ಜಲ್ಲಿ ಕಲ್ಲುಗಳನ್ನು ಹಾಕಿಸಿದ್ದರು. ಆ ಜಲ್ಲಿಕಲ್ಲುಗಳನ್ನು ಬೇರೆಡೆ ಗುತ್ತಿಗೆದಾರರು ತೆಗೆದುಕೊಂಡು ಹೋದರು. ಈ ಬಗೆ ನಿವಾಸಿಗಳು ಅವರಲ್ಲಿ ಮನವಿ ಮಾಡಿದಾಗ ’ಹೋಗ್ರಿ ಏನು ಅರ್ಜೆಂಟ್ ಇಲ್ಲ. ಮುಂದೆ ರಸ್ತೆ ಮಾಡಿಸುತ್ತೇನೆ’ ಎಂದು ಹೇಳಿ ಕಳುಹಿಸಿದರು’ ಎಂದರು.

ಅಹವಾಲು ಆಲಿಸಿದ ಸಂಸದ ಡಿ ಕೆ ಸುರೇಶ್ ’ನಿಮ್ಮ ಕಷ್ಟ ಅರ್ಥವಾಗಿದೆ. ಹಂತ ಹಂತವಾಗಿ ಸಮಸ್ಯೆಗಳನ್ನು ಬಗೆ ಹರಿಸುತ್ತೇನೆ. ಈ ಭಾಗಕ್ಕೆ ಹೆಚ್ಚಿನ ಅನುದಾನ ನೀಡಲು ಪ್ರಯತ್ನಿಸುತ್ತೇನೆ. ರಾಜ್ಯದಲ್ಲಿ ನಮ್ಮದೇ ಸರ್ಕಾರವಿದೆ. ಅಭಿವೃದ್ಧಿ ಪರವಾಗಿ ನಿಮ್ಮ ಜೊತೆ ನಿಲ್ಲಲಿದೆ’ ಎಂದು ಭರವಸೆ ನೀಡಿದರು.

ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತರಾಯಪ್ಪ, ಜ್ಞಾನಭಾರತಿ ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ಎಚ್. ತುಕಾರಾಂ, ಬಿಬಿಎಂಪಿ ಮಾಜಿ ಸದಸ್ಯ ಜಿ. ಮೋಹನ್ ಕುಮಾರ್, ಕೊಟ್ಟಿಗೆಪಾಳ್ಯ ಎನ್ ಶೇಖರ್, ಪುಟ್ಟಮಾರೇಗೌಡ, ಗಂಗಾಧರ್, ರವಿಕುಮಾರ್ ವಿವಿಧ ಬಡಾವಣೆಗಳ ಸಮಸ್ಯೆಗಳ ಬಗ್ಗೆ ಸಂಸದರಿಗೆ ವಿವರಿಸಿದರು. ಬಿಬಿಎಂಪಿ ಜಂಟಿ ಆಯುಕ್ತ ಅಜಯ್ ವಿ. ಮುಖ್ಯ ಎಂಜಿನಿಯರ್ ರಾಘವೇಂದ್ರ ಪ್ರಸಾದ್ ಇದ್ದರು.



ಜ್ಞಾನಭಾರತಿ ವಾರ್ಡ್‌ನ ಆರ್‌ಎಚ್‌ಸಿಎಸ್ ಬಡಾವಣೆಯಲ್ಲಿ ಸಂಚರಿಸಿದ ಸಂಸದ ಡಿ.ಕೆ. ಸುರೇಶ್ ಅವರು ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿದರು.

ಬಿಬಿಎಂಪಿ: ಗುತ್ತಿಗೆದಾರರಿಗೆ ಒಂದು ತಿಂಗಳಲ್ಲಿ ಒಂದು ಸಾವಿರ ಕೋಟಿ ಬಾಕಿ ಪಾವತಿ

ಶೀಘ್ರವೇ ₹750 ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳ ಬಾಕಿ ಮೊತ್ತದಲ್ಲಿ ಸುಮಾರು ₹1,086 ಕೋಟಿ ಪಾವತಿಯಾಗಿದ್ದು, ಇನ್ನೂ ₹750 ಕೋಟಿಯನ್ನು ಸರ್ಕಾರ ಸದ್ಯದಲ್ಲಿಯೇ ಬಿಡುಗಡೆ ಮಾಡಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಗುತ್ತಿಗೆದಾರರ ಸಂಘದ ಸದಸ್ಯರು ಭೇಟಿ ಮಾಡಿದ್ದ ಸಂದರ್ಭದಲ್ಲಿ ಅನುದಾನ ಬಿಡುಗಡೆ ಮಾಡುವ ಭರವಸೆ ದೊರೆತಿದೆ.

'ರಾಜ್ಯ ಸರ್ಕಾರದ ಅನುದಾನದಡಿ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ₹750 ಕೋಟಿ ಬಿಡುಗಡೆಗೆ ಸಮ್ಮತಿ ನೀಡಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ನಮಗೆ ತಿಳಿಸಿದರು' ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಕಾರ್ಯಾಧ್ಯಕ್ಷ ಜಿ.ಎಂ. ರವೀಂದ್ರ ಹೇಳಿದರು.

'ಗುತ್ತಿಗೆದಾರರಿಗೆ ಜ್ಯೇಷ್ಠತೆ ಆಧಾರದಲ್ಲಿ ಹಣ ಬಿಡುಗಡೆ ಮಾಡಬೇಕು. ಯಾವುದೇ ರೀತಿಯಲ್ಲಿ ಬಿಲ್ ಪಾವತಿ ಪ್ರಮಾಣವನ್ನು ಕಾಮಗಾರಿಗಳಿಗೆ ನಿಗದಿಪಡಿಸಬಾರದು ಎಂದು ಮನವಿ ಮಾಡಿಕೊಂಡಿದ್ದೇವೆ. ಇದನ್ನು ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಇಬ್ಬರೂ ಒಪ್ಪಿಕೊಂಡಿದ್ದಾರೆ. ಹೀಗಾಗಿ ಜ್ಯೇಷ್ಠತೆ ಆಧಾರದಲ್ಲೇ ಗುತ್ತಿಗೆದಾರರಿಗೆ ಬಿಲ್ ಪಾವತಿಯಾಗುವ ವಿಶ್ವಾಸವಿದೆ' ಎಂದು ತಿಳಿಸಿದರು.

ಮುಖ್ಯಾಂಶಗಳು

- ಗುತ್ತಿಗೆದಾರರಿಗೆ ಜ್ಯೇಷ್ಠತೆ ಆಧಾರದ ಮೇಲೆ ಹಣ ಬಿಡುಗಡೆಗೆ ಕೋರಿಕೆ
- ನಗರೋತ್ಥಾನ ಕಾಮಗಾರಿಗಳ ಬಾಕಿ ಬಿಲ್ ಪಾವತಿಗೆ ₹675 ಕೋಟಿ
- ಒಟ್ಟು ₹1,086 ಕೋಟಿ ಬಾಕಿ ಬಿಡುಗಡೆ

ರಾಜ್ಯ ಸರ್ಕಾರದ ನಗರೋತ್ಥಾನ ಅನುದಾನ ಕಾಮಗಾರಿಗಳ ಬಾಕಿ ಬಿಲ್ ಪಾವತಿಗೆ ₹675 ಕೋಟಿ ಬಿಡುಗಡೆ ಮಾಡಲಾಗಿದೆ. ಅದನ್ನು ಬೃಹತ್ ನೀರುಗಾಲುವೆ (ಕೆ-100 ಯೋಜನೆ ಸಹಿತ) ಕಾಮಗಾರಿಗಳಿಗೆ ಶೇ 30, ಮೇಲ್ಸೇತುವೆ, ಅಂಡರ್‌ಪಾಸ್, ರೈಲು ಮೇಲ್ಸೇತುವೆ, ಕೆಳಸೇತುವೆ-ಶೇ 10, ಪಾದಚಾರಿ ಮಾರ್ಗ, ಟೆಂಡರ್‌ಶ್ಯೂರ್ ರಸ್ತೆಗಳು ಸೇರಿದಂತೆ ಮುಖ್ಯ, ಉಪಮುಖ್ಯ ರಸ್ತೆಗಳು- ಶೇ 30, ವೈಟ್‌ಟಾಪಿಂಗ್ ಮತ್ತು ಕಟ್ಟಡಗಳು- ಶೇ 15, ವಾರ್ಡ್ ಕಾಮಗಾರಿಗಳಿಗೆ ಶೇ 15ರಷ್ಟು ಹಣ ಬಿಡುಗಡೆ ಮಾಡಲು ಆದೇಶಿಸಲಾಗಿತ್ತು. ಇದರಂತೆಯೇ ಬಿಲ್ ಪಾವತಿಸಲಾಗಿದೆ.

ನಗರೋತ್ಥಾನ ಅನುದಾನದಲ್ಲಿ ವಾರ್ಡ್ ಕಾಮಗಾರಿಗಳೇ ಹೆಚ್ಚಾಗಿ ನಡೆದಿದ್ದರೂ ಆ ಬಿಲ್‌ಗಳ ಪಾವತಿ ಪ್ರಮಾಣ ಕಡಿಮೆಯಾಗಿದೆ. 2023ರ ಫೆಬ್ರುವರಿಯಲ್ಲಿ ವಾರ್ಡ್ ಕಾಮಗಾರಿ ಪೂರ್ಣಗೊಂಡವರಿಗೆ ಬಿಲ್ ಪಾವತಿಯಾಗಿಲ್ಲ. ಆದರೆ, ಮೇಲ್ಸೇತುವೆ, ಪ್ರಮುಖ ರಸ್ತೆ, ಬೃಹತ್ ನೀರುಗಾಲುವೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಆಗಸ್ಟ್ ಬಿಲ್ ಪಾವತಿಯಾಗಿದೆ. ಇದು ಜ್ಯೇಷ್ಠತೆಯ ಉಲ್ಲಂಘನೆಯಾಗಿದ್ದು, ಇದನ್ನು ಸರಿಪಡಿಸುವಂತೆ ಗುತ್ತಿಗೆದಾರರು ಆಗ್ರಹಿಸಿದ್ದಾರೆ.

ಪಾವತಿ ಪೂರ್ಣ: 'ಸರ್ಕಾರ ಸೂಚಿಸಿದ ಪ್ರಮಾಣದಲ್ಲಿ ಕಾಮಗಾರಿಗಳ ಬಿಲ್ ಪಾವತಿ ಮಾಡಲಾಗಿದ್ದು, ವಾರ್ಡ್ ಕಾಮಗಾರಿ ನಡೆಸಿದವರಿಗೆ ಹೆಚ್ಚಾಗಿ ಸಿಗದಿರಬಹುದು. ರಾಜ್ಯ ಸರ್ಕಾರದ ಅನುದಾನದ ₹675 ಕೋಟಿ ಹಾಗೂ ಬಿಬಿಎಂಪಿ ಅನುದಾನದ ₹411 ಕೋಟಿ ಬಿಲ್ ಮೊತ್ತವನ್ನು ಗುತ್ತಿಗೆದಾರರಿಗೆ ಪಾವತಿಸಲಾಗಿದೆ' ಎಂದು ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಶಿವಾನಂದ ಕಲಕೇರಿ ಹೇಳಿದರು.

ನವೆಂಬರ್ ಬಿಲ್ ಪಾವತಿಸಿಲ್ಲ: 'ಬಿಬಿಎಂಪಿ ಅನುದಾನದ ಕಾಮಗಾರಿಗಳಿಗೆ 2022ರ ಮಾರ್ಚ್‌ವರೆಗೆ ಹಣ ಬಿಡುಗಡೆಯ ಭರವಸೆ ದೊರೆತಿತ್ತು. ಆದರೆ, 2021ರ ಸೆಪ್ಟೆಂಬರ್‌ವರೆಗೆ ಕಾಮಗಾರಿಗಳ ಬಿಲ್ ಮೊತ್ತದ ಶೇ 75ರಷ್ಟು ಹಣ ಬಿಡುಗಡೆ ಮಾಡಲಾಗಿದೆ. ನವೆಂಬರ್ ಬಿಲ್‌ನ ಸುಮಾರು ₹80 ಕೋಟಿಯನ್ನು ವಲಯ ಮುಖ್ಯ ಎಂಜಿನಿಯರ್‌ಗಳು ಇನ್ನೂ ಪಾವತಿ ಮಾಡಿಲ್ಲ' ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ.ಟಿ. ಮಂಜುನಾಥ್ ದೂರಿದರು.

ಎಸ್‌ಐಟಿ ತನಿಖೆ: ಸರ್ಕಾರದ ಸೂಚನೆಯಂತೆ ಬಿಬಿಎಂಪಿ ವ್ಯಾಪ್ತಿಯಲ್ಲಿ ನಡೆದಿರುವ ಕಾಮಗಾರಿಗಳಲ್ಲಿ ಅಕ್ರಮ ನಡೆದಿದೆಯೇ ಎಂಬುದರ ಬಗ್ಗೆ ನಾಲ್ಕು ವಿಶೇಷ ತಂಡಗಳು ತನಿಖೆ ನಡೆಸುತ್ತಿವೆ. ಈ ತನಿಖೆ ವಿಳಂಬವಾಗುತ್ತಿರುವುದರಿಂದ ಪೂರ್ಣಗೊಂಡಿರುವ ಕಾಮಗಾರಿಗಳ ಬಿಲ್ ಮೊತ್ತದ ಶೇ 75ರಷ್ಟು ಹಣ ಬಿಡುಗಡೆಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೆಪ್ಟೆಂಬರ್‌ನಲ್ಲಿ ಸೂಚಿಸಿದ್ದರು.

ಬಾಕಿ ಬಿಲ್ ಅಂಕಿ-ಅಂಶ

- ₹6,077 ಕೋಟಿ — ಒಟ್ಟು ಕಾಮಗಾರಿಗಳ ಮೊತ್ತ
- ₹3,256 ಕೋಟಿ — ಬಿಬಿಎಂಪಿ ಅನುದಾನದ ಕಾಮಗಾರಿಗಳು
- ₹2,753 ಕೋಟಿ — ರಾಜ್ಯ ಸರ್ಕಾರ ಅನುದಾನದ ಕಾಮಗಾರಿಗಳು
- ₹67.48 ಕೋಟಿ — ಕೇಂದ್ರ ಸರ್ಕಾರ ಅನುದಾನದ ಕಾಮಗಾರಿಗಳು

ಪಾವತಿಯಾಗಿರುವ ಮೊತ್ತ

- ₹675 ಕೋಟಿ — ರಾಜ್ಯ ಸರ್ಕಾರ ಅನುದಾನದ ಕಾಮಗಾರಿಗಳು
- ₹411 ಕೋಟಿ — ಬಿಬಿಎಂಪಿ ಅನುದಾನದ ಕಾಮಗಾರಿಗಳು

10 ಸಂಘ-ಸಂಸ್ಥೆಗಳಿಗೂ ಈ ಬಾರಿ ರಾಜ್ಯೋತ್ಸವ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದ ಸುವರ್ಣ ವರ್ಷದ ನೆನಪಿಗಾಗಿ ಕನ್ನಡ, ಕರ್ನಾಟಕದ ಏಳಿಗೆಗಾಗಿ ಶ್ರಮಿಸಿದ 10 ಸಂಘ-ಸಂಸ್ಥೆಗಳಿಗೆ ಈ ವರ್ಷ ಹೆಚ್ಚುವರಿಯಾಗಿ ಪ್ರಶಸ್ತಿ ನೀಡಲು ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಮಿತಿ ತೀರ್ಮಾನಿಸಿದೆ.

ಗುರುವಾರ ನಡೆದ ಆಯ್ಕೆ ಸಮಿತಿ ಸಭೆಯ ನಂತರ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸುವವರ ಸಂಖ್ಯೆ ಪ್ರತಿವರ್ಷ ಹೆಚ್ಚಳವಾಗುವ ಜತೆಗೆ, ಲಾಬಿಗಳಿಂದಾಗಿ ಪ್ರಶಸ್ತಿ ಸಂಖ್ಯೆಯಲ್ಲೂ ಗಣನೀಯವಾಗಿ ಏರಿಕೆಯಾಗುತ್ತಿತ್ತು. ಅದಕ್ಕೆ ಕಡಿವಾಣ ಹಾಕಲು ಏಕೀಕರಣವಾಗಿ ಎಷ್ಟು ವರ್ಷಗಳಾಗುತ್ತದೋ ಅಷ್ಟು ಪ್ರಶಸ್ತಿಗಳನ್ನು ಆಯಾ ವರ್ಷ ನೀಡಲು ಹಿಂದೆ ನಮ್ಮ ಸರ್ಕಾರವೇ ತೀರ್ಮಾನ ಕೈಗೊಂಡಿತ್ತು. ಅದರಂತೆಯೇ ಈ ವರ್ಷ 68 ಪ್ರಶಸ್ತಿ ನೀಡಲಾಗುತ್ತಿದೆ. ಜತೆಗೆ, ಸಂಘ-ಸಂಸ್ಥೆಗಳಿಗೆ ಹೆಚ್ಚುವರಿ 10 ಪ್ರಶಸ್ತಿ ನೀಡಲಾಗುವುದು' ಎಂದರು.

ಸಭೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಸಚಿವರಾದ ಜಿ. ಪರಮೇಶ್ವರ, ಎಚ್.ಸಿ.ಮಹದೇವಪ್ಪ, ಆಯ್ಕೆ ಸಮಿತಿ ಸದಸ್ಯರಾದ ಜಾಣಗೆರೆ ವೆಂಕಟರಾಮಯ್ಯ, ಎಚ್.ಎಲ್.ಪುಷ್ಪಾ, ವೀರಣ್ಣ ದಂಡೆ, ಮೂಡ್ನಾಕೂಡು ಚಿನ್ನಸ್ವಾಮಿ, ಅಲ್ಲಮಪ್ರಭು ಬೆಟ್ಟದೂರ, ಕಾ.ತ. ಚಿಕ್ಕಣ್ಣ, ಪಿಂಡಿಪಾಪನಹಳ್ಳಿ ವೆಂಕಟಪ್ಪ, ಟಾಕಪ್ಪ ಕಣ್ಣೂರು, ಪಿಚ್ಚಳ್ಳಿ ಶ್ರೀನಿವಾಸ್, ವಿಠಲ್ ಐ.ಬೆಣಗಿ, ಸಣ್ಣರಾಮ, ವೆಂಕಟರಾಮಯ್ಯ, ಎಂ.ಎಸ್. ಮೂರ್ತಿ, ಗೀತಾ ಶಿವಮೊಗ್ಗ, ಜಯದೇವಿ ಜಂಗಮ ಶೆಟ್ಟಿ, ಐರೋಡಿ ಗೋವಿಂದಪ್ಪ, ಸಾಧುಕೋಕಿಲ, ಸುಕನ್ಯಾ ಪ್ರಭಾಕರ್, ಫಯಾಜ್ ಖಾನ್, ಹೃಷಿಕೇಶ್ ಬಹದ್ದೂರ್ ದೇಸಾಯಿ, ನರಸಿಂಹಲು ವಡವಾಟಿ, ಡಿ.ಎನ್. ನರಸಿಂಹರಾಜು, ಪುರುಷೋತ್ತಮ ಬಿಳಿಮಲೆ, ಚನ್ನಬಸವಣ್ಣ, ಶೈಲೇಶ್‌ಚಂದ್ರ ಗುಪ್ತ, ಜೆ. ಲೋಕೇಶ್ ಉಪಸ್ಥಿತರಿದ್ದರು.

31ಕ್ಕೆ ವಿಚಾರಣೆಗೆ ಹಾಜರಾಗಲು ಮಹುವಾಗೆ ಸೂಚನೆ



ಮಹುವಾ

ನವದೆಹಲಿ (ಪಿಟಿಐ): ಲೋಕಸಭೆಯಲ್ಲಿ ಪ್ರಶ್ನೆ ಕೇಳಲು ಹಣ ಪಡೆದಿದ್ದಾರೆ ಎಂಬ ಆರೋಪ ಕುರಿತ ವಿಚಾರಣೆಗೆ ಅಕ್ಟೋಬರ್ 31ರಂದು ಹಾಜರಾಗುವಂತೆ ಸಂಸತ್ತಿನ ನೀತಿ ನಿಯಮಗಳ ಸಮಿತಿಯು, ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರಿಗೆ ಸೂಚಿಸಿದೆ.

ಸಮಿತಿ ಸಭೆಯ ನಂತರ ಗುರುವಾರ ಸುದ್ದಿಗಾರರ ಜೊತೆಗೆ ಮಾತನಾಡಿದ ಅಧ್ಯಕ್ಷ ವಿನೋದ್ ಕುಮಾರ್ ಸೋಂಕರ್, 'ವಿಚಾರಣೆಗೆ ಗೃಹ ಸಚಿವಾಲಯ ಮತ್ತು ಐ.ಟಿ ಇಲಾಖೆಯ ನೆರವನ್ನು ಪಡೆಯಲಾಗುವುದು' ಎಂದರು.

ಈ ಪ್ರಕರಣದ ಸಂಬಂಧ ಸಮಿತಿಯು ಗುರುವಾರ ವಕೀಲ ಜೈ ಅನಂತ್ ದೇಹಾದ್ರಿ ಮತ್ತು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರ ಹೇಳಿಕೆಯನ್ನು ದಾಖಲಿಸಿಕೊಂಡಿತು. ದುಬೆ ಅವರು ಸ್ಪೀಕರ್ ಓಂ ಬಿರ್ಲಾ ಅವರಿಗೆ ನೀಡಿದ್ದ ದೂರಿನಲ್ಲಿ, ಮೊಯಿತ್ರಾ ಅವರ ವಿರುದ್ಧದ ದೂರಿಗೆ ಸಮರ್ಥನೆಯಾಗಿ ದೇಹಾದ್ರಿ ಅವರು ಒದಗಿಸಿದ್ದ ದಾಖಲೆಗಳನ್ನು ಉಲ್ಲೇಖಿಸಿದ್ದರು.

ತುಷಾರ್ ಗಿರಿನಾಥ್‌ಗೆ ನೋಟಿಸ್

ಪ್ರಜಾವಾಣಿ ವಾರ್ತೆ



ತುಷಾರ್ ಗಿರಿನಾಥ್

ಬೆಂಗಳೂರು: 'ಜಯನಗರ ಶಾಪಿಂಗ್ ಕಾಂಪ್ಲೆಕ್ಸ್ ನೆಲ ಮಾಳಿಗೆಯಲ್ಲಿ ಅಕ್ರಮವಾಗಿ ನಿರ್ಮಿಸಿದ ಮಳಿಗೆಗಳನ್ನು ತೆರವುಗೊಳಿಸುವಂತೆ ಸೂಚಿಸಿ ಮೂರು ವರ್ಷಗಳ ಹಿಂದೆ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಪಾಲನೆ ಮಾಡಿಲ್ಲ' ಎಂಬ ಆರೋಪದ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಹೈಕೋರ್ಟ್ ನ್ಯಾಯಾಂಗ ನಿಂದನೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಈ ಸಂಬಂಧ ವಕೀಲ ಆರ್.ಆರ್. ಹಿರೇಮಠ್ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಪ್ರಕರಣವೇನು?: 'ಶಾಪಿಂಗ್ ಕಾಂಪ್ಲೆಕ್ಸ್‌ನ ಬ್ಲಾಕ್-1ರ ಮರು ನಿರ್ಮಾಣದ ವೇಳೆ ಪಾರ್ಕಿಂಗ್ ಜಾಗಕ್ಕಾಗಿ ಮೀಸಲಿದ್ದ ಮೇಲಿನ ನೆಲಮಹಡಿಯಲ್ಲಿ ಮಳಿಗೆಗಳ ಕಾರ್ಯ ನಿರ್ವಹಣೆಗೆ ಬಿಬಿಎಂಪಿ ಅನುಮತಿ ನೀಡಿತ್ತು. ಇದನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿತ್ತು. ಅರ್ಜಿ ವಿಚಾರಣೆ ವೇಳೆ ಪ್ರಮಾಣ ಪತ್ರ ಸಲ್ಲಿಸಿದ್ದ ಬಿಬಿಎಂಪಿ, ಕಾಂಪ್ಲೆಕ್ಸ್‌ನ ಬ್ಲಾಕ್-1ರ ಮರು ನಿರ್ಮಾಣದ ಹಿನ್ನೆಲೆಯಲ್ಲಿ ತಾತ್ಕಾಲಿಕ ಅನುಮತಿ ಕಲ್ಪಿಸಲಾಗಿದೆ. ಬ್ಲಾಕ್-2, 3 ಮತ್ತು 4 ಅನ್ನು ನಿರ್ಮಿಸಿದ ನಂತರ ಮೇಲಿನ ನೆಲಮಹಡಿ ಜಾಗವನ್ನು ಪಾರ್ಕಿಂಗ್‌ಗೆ ಬಳಸಲಾಗುವುದು' ಎಂದು ತಿಳಿಸಿತ್ತು.

ಇದನ್ನು ದಾಖಲಿಸಿಕೊಂಡಿದ್ದ ಹೈಕೋರ್ಟ್, 'ಶಾಪಿಂಗ್ ಕಾಂಪ್ಲೆಕ್ಸ್ ಬ್ಲಾಕ್‌ಗಳ ಮರು ನಿರ್ಮಾಣದ ನಂತರ ಮೇಲಿನ ನೆಲಮಹಡಿಯಲ್ಲಿ ನಿರ್ಮಿಸಿರುವ ಮಳಿಗೆಗಳನ್ನು ತೆರವುಗೊಳಿಸಬೇಕು' ಎಂದು 2020ರಲ್ಲಿ ನಿರ್ದೇಶಿಸಿತ್ತು.


'ಈ ಆದೇಶ ಹೊರಬಿದ್ದು ಮೂರು ವರ್ಷ ಕಳೆದರೂ ಅಕ್ರಮ ಮಳಿಗೆಗಳನ್ನು ತೆರವುಗೊಳಿಸುವಲ್ಲಿ ಬಿಬಿಎಂಪಿ ವಿಫಲವಾಗಿದೆ' ಎಂದು ಆರೋಪಿಸಿ ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸಲಾಗಿದೆ.

ಅರ್ಜಿದಾರರ ಪರ ವಕೀಲ ಜಿ.ಆರ್. ಮೋಹನ್ ವಾದ ಮಂಡಿಸಿದರು.

ನ್ಯಾಯಾಂಗ ನಿಂದನೆ: ಬಿಡಿಎಗೆ ದಂಡ

ಐದು ದಶಕ ಕಳೆದರೂ ಜಮೀನು ನೀಡಿದ ಮಾಲೀಕರಿಗೆ ಪರಿಹಾರ ನೀಡಲು ವಿಳಂಬ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಡಾವಣೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನಿಗೆ ಬದಲಾಗಿ ಅದರ ಮಾಲೀಕರಿಗೆ ಐದು ದಶಕ ಕಳೆದರೂ ಪರಿಹಾರ ನೀಡದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ನಡೆಗೆ ಕಿಡಿಕಾರಿರುವ ಹೈಕೋರ್ಟ್, 'ಬಿಡಿಎ ಬುದ್ಧಿ ಕಲಿಯಲಿ ಮತ್ತು ಭವಿಷ್ಯದಲ್ಲಿ ಇಂತಹ ನಿರ್ಲಕ್ಷ್ಯ ಮರುಕಳಿಸಬಾರದು' ಎಂದು ಎಚ್ಚರಿಸಿ ₹ 25 ಸಾವಿರ ದಂಡ ವಿಧಿಸಿದೆ.

ಈ ಸಂಬಂಧ ಆರ್.ಟಿ.ನಗರದ ಕಾವಲ್ ಭೈರಸಂದ್ರ ನಿವಾಸಿ ಎ.ಲಕ್ಷ್ಮೀಪತಿ ಸಲ್ಲಿಸಿದ್ದ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

'ಭೂ ಮಾಲೀಕರಿಗೆ ಪಾವತಿಸಬೇಕಾದ ₹45,150 ಪರಿಹಾರ ಮೊತ್ತ ಹಾಗೂ ದಂಡದ ರೂಪದಲ್ಲಿ ಹೆಚ್ಚುವರಿಯಾಗಿ ₹ 25 ಸಾವಿರವನ್ನು ನಾಲ್ಕು ವಾರಗಳಲ್ಲಿ ಪಾವತಿಸಬೇಕು' ಎಂದು ಆದೇಶಿಸಿ ಅರ್ಜಿ ವಿಲೇವಾರಿ ಮಾಡಿತು.

'ಮಠದಹಳ್ಳಿಯಲ್ಲಿ ಅರ್ಜಿದಾರರಿಗೆ ಸೇರಿದ 3 ಎಕರೆ ಜಮೀನನ್ನು ಬಿಡಿಎ ಬಡಾವಣೆ ನಿರ್ಮಾಣಕ್ಕಾಗಿ 1972-73ರಲ್ಲೇ ಸ್ವಾಧೀನಪಡಿಸಿಕೊಂಡಿದೆ. ಇದಕ್ಕಾಗಿ ₹45,150 ಪರಿಹಾರವೂ ನಿಗದಿಯಾಗಿತ್ತು. ಆದರೆ, ಐದು ದಶಕ ಕಳೆದರೂ ಪರಿಹಾರ ಸಿಕ್ಕಿಲ್ಲ. ಭೂಮಿ ಕಳೆದುಕೊಂಡವರು ನ್ಯಾಯ ಪಡೆದುಕೊಳ್ಳಲು ಕೋರ್ಟ್, ಕಚೇರಿ ಅಲೆದಿದ್ದಾರೆ. ಭೂಮಾಲೀಕರ ಪರವಾಗಿ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠವೂ ಆದೇಶ ಮಾಡಿದೆ. ಆದರೂ ಆದೇಶ ಪಾಲನೆ ಮಾಡಿಲ್ಲ. ಇದು ಬಿಡಿಎ ನಿರ್ಲಕ್ಷ್ಯಕ್ಕೆ ಕೈಗನ್ನಡಿ' ಎಂದು ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿಸಿದೆ.

ಭೂ ಪರಿಹಾರ ಸಂಬಂಧ 2022ರ ನವೆಂಬರ್ 3ರಂದು ಏಕಸದಸ್ಯ ನ್ಯಾಯಪೀಠ ಆದೇಶಿಸಿತ್ತು.

'ಬಿಡಿಎ ಈ ಆದೇಶ ಪಾಲನೆ ಮಾಡಿಲ್ಲ' ಎಂದು ಆರೋಪಿಸಿ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಲಾಗಿತ್ತು. ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಬಿಡಿಎ ಆಯುಕ್ತ ಕುಮಾರ ನಾಯ್ಕ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರನ್ನು ಆರೋಪಿಗಳನ್ನಾಗಿ ಮಾಡಲಾಗಿತ್ತು.

ಫ್ಲ್ಯಾಟ್ ನೀಡಲು ವಿಳಂಬ ಆರೋಪ: ದೂರು ವಜಾ

ಬೆಂಗಳೂರು: 'ಖರೀದಿ ಮಾಡಿದ ಫ್ಲ್ಯಾಟ್ ನೀಡಲು ವಿಳಂಬ ಮಾಡಲಾಗಿದೆ' ಎಂದು ಡೆವಲಪರ್ ವಿರುದ್ಧ ವಂಚನೆ ಆರೋಪದಡಿ ದಾಖಲಿಸಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಈ ಸಂಬಂಧ ಸುಶೀಲ್, ಪ್ರತೀಕ್ ಮತ್ತು ಸ್ನೇಹಾಲ್ ಮಂತ್ರಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದ್ದು, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಕೈಗೊಂಡಿದ್ದ ಪ್ರಕ್ರಿಯೆಗಳನ್ನು ರದ್ದುಗೊಳಿಸಿದೆ.

'ಅಪರಾಧವು ಶಿಕ್ಷಾರ್ಹ ಕಾನೂನಿನಡಿ ದಾಖಲಾಗದೆ ಪಿಎಂಎಲ್‌ಎ ಆರೋಪವನ್ನು ಸ್ವತಂತ್ರವಾಗಿ ಹೊರಿಸಲಾಗದು. ಅರ್ಜಿದಾರರು ನಡೆಸಿರುವ ವಹಿವಾಟಿನಲ್ಲಿ ಯಾವುದೇ ಅಪ್ರಾಮಾಣಿಕ ಉದ್ದೇಶ ಕಾಣುತ್ತಿಲ್ಲ. ಎಲ್ಲ ಗೃಹ ಖರೀದಿದಾರರೂ ಆಸ್ತಿಯ ಕ್ರಯಪತ್ರವನ್ನು ನೋಂದಣಿ ಮಾಡಿಸುತ್ತಾರೆ. ಆ ಕ್ರಯಪತ್ರ ಜಾರಿಯನ್ನು ದೂರುದಾರರು ಒಪ್ಪಲಿಲ್ಲ ಎಂದ ಮಾತ್ರಕ್ಕೆ ಅದು ಕ್ರಿಮಿನಲ್ ವಿಶ್ವಾಸದ್ರೋಹ ಅಥವಾ ವಂಚನೆ ಎಂದರ್ಥವಲ್ಲ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವೇನು?: ಮಂತ್ರಿ ಸೆರಿನಿಟಿ ವಸತಿ ಯೋಜನೆಯಡಿ ಫ್ಲ್ಯಾಟ್ ಖರೀದಿಗಾಗಿ ಧನಂಜಯ ಮತ್ತಿತರರು ಹಣ ಹೂಡಿಕೆ ಮಾಡಿ ಫ್ಲ್ಯಾಟ್ ಹಂಚಿಕೆಗೆ ಮನವಿ ಮಾಡಿದ್ದರು. ಇದರನ್ವಯ ಅರ್ಜಿದಾರರು ಧನಂಜಯ ಮತ್ತಿತರ ಜತೆ ಭೂಮಿಯ ಅವಿಭಜಿತ ಪಾಲು ಮಾರಾಟ ಮತ್ತು ಕಟ್ಟಡ ನಿರ್ಮಾಣ ಕುರಿತು ಒಪ್ಪಂದ ಮಾಡಿಕೊಂಡಿದ್ದರು.

'ವಸತಿ ಯೋಜನೆ ನಿಗದಿತ ಸಮಯಕ್ಕೆ ಪೂರ್ಣಗೊಂಡಿಲ್ಲ ಮತ್ತು ಗೃಹ ಖರೀದಿದಾರರಿಂದ ಸಂಗ್ರಹಿಸಿದ ಹಣವನ್ನು ಬಿಲ್ಡರ್ ಬೇರೆ ಉದ್ದೇಶಕ್ಕೆ ಬಳಸಿಕೊಂಡಿದ್ದಾರೆ ಅಥವಾ ದುರ್ಬಳಕೆ ಮಾಡಿಕೊಂಡಿದ್ದಾರೆ' ಎಂದು ಅರ್ಜಿದಾರರು ಆರೋಪಿಸಿದ್ದರು.

ದೂರನ್ನು ಆಧರಿಸಿ ಪೊಲೀಸರು ಭಾರತೀಯ ದಂಡ ಸಂಹಿತೆ-1860ರ ಕಲಂ 406, 420, 415, 417ರ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದರು. ದೂರನ್ನು ಆಧರಿಸಿ ಜಾರಿ ನಿರ್ದೇಶನಾಲಯ ಪಿಎಂಎಲ್‌ಎ ಕಾಯ್ದೆ ಅಡಿ ವಿಚಾರಣಾ ಪ್ರಕ್ರಿಯೆ ಆರಂಭಿಸಿತ್ತು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.



ತಯಾರಿ ಜೋರು

ಬೆಂಗಳೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಈರುಳ್ಳಿ ವ್ಯಾಪಾರಕ್ಕೆ ಮಹಿಳೆಯೊಬ್ಬರು ತಯಾರಿ ನಡೆಸುತ್ತಿರುವ ದೃಶ್ಯ ಗುರುವಾರ ಕಂಡು ಬಂದಿತು –ಪ್ರಜಾವಾಣಿ ಚಿತ್ರ

ರಾಜಕಾಲುವೆ ಒತ್ತುವರಿ ಮತ್ತಷ್ಟು ಪ್ರಕರಣಗಳು ಪತ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ರಾಜಕಾಲುವೆ ಒತ್ತುವರಿಯಾಗಿರುವ ಮತ್ತಷ್ಟು ಪ್ರಕರಣಗಳು ಪತ್ತೆಯಾಗಿವೆ.

ಹೈಕೋರ್ಟ್ ಸೂಚನೆಯಂತೆ ಈ ಒತ್ತುವರಿ ತೆರವು ಕಾರ್ಯಾಚರಣೆಗೆ ಬಿಬಿಎಂಪಿ ಕ್ರಿಯಾಯೋಜನೆ ಸಲ್ಲಿಸಿತ್ತು. ಅದರಂತೆ, ರಾಜಕಾಲುವೆಗಳ ಒತ್ತುವರಿ ಬಗ್ಗೆ ನಾಗರಿಕರಿಗೆ ಮಾಹಿತಿ ನೀಡಲು ಸೆಪ್ಟೆಂಬರ್ ಆರಂಭದಲ್ಲಿ ಮನವಿ ಮಾಡಿತ್ತು. ಅಧಿಕಾರಿಗಳಿಗೂ ಅತಿಕ್ರಮ ದಾಖಲಿಸಲು ಸೂಚಿಸಲಾಗಿತ್ತು.

ಬಿಬಿಎಂಪಿ ಸೆಪ್ಟೆಂಬರ್‌ನಲ್ಲಿ ಸಿದ್ಧಪಡಿಸಿದ್ದ ಮಾಹಿತಿ ಪಟ್ಟಿಯಲ್ಲಿ 768 ಪ್ರಕರಣಗಳಲ್ಲಿ ರಾಜಕಾಲುವೆ ಒತ್ತುವರಿಯಾಗಿತ್ತು. ಇದೀಗ ಇನ್ನೂ 826 ಪ್ರಕರಣಗಳು ಸೇರಿಕೊಂಡು, ಒಟ್ಟು 1,594 ಪ್ರದೇಶಗಳಲ್ಲಿ ರಾಜಕಾಲುವೆ ಒತ್ತುವರಿಯಾಗಿದೆ. 859.79 ಕಿ.ಮೀ ಉದ್ದದ ರಾಜಕಾಲುವೆ ಬಿಬಿಎಂಪಿ ವ್ಯಾಪ್ತಿಯಲ್ಲಿದ್ದು, 2,591 ಪ್ರಕರಣಗಳಲ್ಲಿ ಒತ್ತುವರಿಯಾಗಿತ್ತು. ಅದರಲ್ಲಿ 768 ಪ್ರಕರಣಗಳಲ್ಲಿ ಒತ್ತುವರಿ ತೆರವು ಬಾಕಿ ಇದೆ ಎಂಬ ಮಾಹಿತಿ ಇತ್ತು.

ಕ್ರಿಯಾಯೋಜನೆಯಂತೆ ಕ್ರಮ: 'ರಾಜಕಾಲುವೆ ಒತ್ತುವರಿ ತೆರವಿಗೆ ಸಂಬಂಧಿಸಿದಂತೆ ಬಿಬಿಎಂಪಿ ವ್ಯಾಪ್ತಿಯ ಕೆಲಸವನ್ನು ಕ್ರಿಯಾಯೋಜನೆಯಂತೆ ಪೂರ್ಣಗೊಳಿಸಲಾಗಿದೆ. 25 ದಿನಗಳಲ್ಲಿ ಹೊಸ ಒತ್ತುವರಿ ಪ್ರಕರಣಗಳನ್ನು ಗುರುತಿಸಿ, ಎಲ್ಲ ಮಾಹಿತಿಯನ್ನೂ ಕ್ರೋಡೀಕರಿಸಿ ಸಂಬಂಧಿಸಿದ ತಹಶೀಲ್ದಾರ್ ಅವರಿಗೆ ಕ್ರಮ ಕೈಗೊಳ್ಳಲು ಕಳೆದ ವಾರವೇ ಕಡತ ಸಲ್ಲಿಸಲಾಗಿದೆ' ಎಂದು ಬಿಬಿಎಂಪಿ ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಯನ್ನೂ ಹೆಚ್ಚುವರಿಯಾಗಿ ಹೊಂದಿರುವ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ತಿಳಿಸಿದರು.

ಒಟ್ಟು 175 ದಿನಗಳಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿರುವ ರಾಜಕಾಲುವೆ ಒತ್ತುವರಿಯನ್ನು ತೆರವು ಮಾಡಲು ಕ್ರಿಯಾಯೋಜನೆ ರೂಪಿಸಲಾಗಿದೆ.

ಕೆರೆ ಒತ್ತುವರಿ: ಕೆರೆ ಒತ್ತುವರಿ ತೆರವು ಕಾರ್ಯಾಚರಣೆಗೂ ಕ್ರಿಯಾಯೋಜನೆ ರೂಪಿಸಲಾಗಿದ್ದು, 16 ವಾರಗಳಲ್ಲಿ 159 ಕೆರೆಗಳ ಒತ್ತುವರಿ ಪಟ್ಟಿಯನ್ನು ಬಿಬಿಎಂಪಿ ತಹಶೀಲ್ದಾರ್ ಅವರಿಗೆ ಸಲ್ಲಿಸಬೇಕಿದೆ. ಇದರಲ್ಲಿ ಈಗಾಗಲೇ ಎಂಟು ವಾರಗಳಲ್ಲಿ 60 ಕೆರೆಗಳ ಪಟ್ಟಿಯನ್ನು ಸಲ್ಲಿಸಲಾಗಿದೆ. ಆದರೆ, ತಹಶೀಲ್ದಾರ್ ವ್ಯಾಪ್ತಿಯಲ್ಲಿ ಯಾವುದೇ ಪ್ರಕ್ರಿಯೆ ಆರಂಭವಾಗಿಲ್ಲ.

'ಸೆ.5ರಂದು ಪ್ರಥಮ ವಾರದ ಕೆರೆಗಳ 10 ಪಟ್ಟಿಯನ್ನು ಸಲ್ಲಿಸಲಾಗಿತ್ತು. ಅದರಂತೆ ಈವರೆಗೆ ಎಂಟು ವಾರ, ತಲಾ 10 ಕೆರೆಗಳಂತೆ 60 ಕೆರೆಗಳ ಪಟ್ಟಿ ಸಲ್ಲಿಸಲಾಗಿದೆ. ಒತ್ತುವರಿ ತೆರವಿನ ಪ್ರಕ್ರಿಯೆ ಬಗ್ಗೆ ತಹಶೀಲ್ದಾರ್ ಅವರಿಂದ ಯಾವುದೇ ಮಾಹಿತಿ ಬಂದಿಲ್ಲ. ನಗರ ಜಿಲ್ಲಾಧಿಕಾರಿಗೂ ಪ್ರಕ್ರಿಯೆ ಆರಂಭಿಸಲು ಮನವಿ ಮಾಡಿಕೊಳ್ಳಲಾಗಿದೆ' ಎಂದು ಬಿಬಿಎಂಪಿ ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ವಿಜಯಕುಮಾರ್ ಹರಿದಾಸ್ ತಿಳಿಸಿದರು.

ಮರಾಠ ಮೀಸಲಾತಿ ಹೋರಾಟ ತೀವ್ರ: ಇಬ್ಬರು ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಮುಂಬೈ: ಮರಾಠ ಸಮುದಾಯಕ್ಕೆ ಮೀಸಲಾತಿ ಬೇಡಿಕೆ ವಿಷಯ ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿದೆ.

ಮೀಸಲಾತಿಗೆ ಆಗ್ರಹಿಸಿ ಎರಡು ಪ್ರತ್ಯೇಕ ಘಟನೆಗಳಲ್ಲಿ ಇಬ್ಬರು ಯುವಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇನ್ನೊಂದೆಡೆ, ಮೀಸಲಾತಿ ವಿರೋಧಿ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ವಕೀಲರೊಬ್ಬರ ಕಾರನ್ನು ಕಿಡಿಗೇಡಿಗಳು ಗುರುವಾರ ಧ್ವಂಸ ಮಾಡಿದ್ದಾರೆ.

ಹಿಂಗೋಳಿ ಜಿಲ್ಲೆಯ ಅಖಾಡ ಬಾಲಾಪುರದಲ್ಲಿ ಕೃಷ್ಣ ಕಲ್ಯಾಣಕರ್(25) ಎಂಬ ಯುವಕ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ತೋಟದ ಮರದಲ್ಲಿ ನೇಣು ಬಿಗಿದುಕೊಂಡು ಕೃಷ್ಣ ಆತ್ಮಹತ್ಯೆಗೆ ಮಾಡಿಕೊಂಡಿದ್ದಾರೆ. ಮರಾಠ ಸಮುದಾಯದ ಮೀಸಲಾತಿಯಿಂದ ಆತ್ಮಹತ್ಯೆಗೆ ಶರಣಾಗುತ್ತಿದ್ದೇನೆ ಎಂದು ಉಲ್ಲೇಖಿಸಲಾದ ಪತ್ರ ಯುವಕನ ಜೇಬಿನಲ್ಲಿ ಲಭ್ಯವಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಛತ್ರಪತಿ ಸಂಭಾಜಿನಗರದಲ್ಲಿ ಗಿರೀಶ್ ಕಾಕಾಸಾಹೇಬ್ ಕುಬೇರ್(28) ಎಂಬುವವರು ಆತ್ಮಹತ್ಯೆಗೆ ಶರಣಾಗಿದ್ದಾರೆ.

'ಮರಾಠ ಸಮುದಾಯಕ್ಕೆ ಮೀಸಲಾತಿ ನೀಡಬೇಕು ಎಂಬ ವಿಚಾರವಾಗಿ ಗಿರೀಶ್ ಆತ್ಮಹತ್ಯೆ ಮಾಡಿದ್ದಾರೆ ಎನ್ನಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕಾರು ಧ್ವಂಸ: ಮರಾಠ ಸಮುದಾಯಕ್ಕೆ ಮೀಸಲಾತಿ ನೀಡದಂತೆ ಕಾನೂನು ಹೋರಾಟ ನಡೆಸುತ್ತಿರುವ ವಕೀಲ ಗುಣರತ್ನ ಸದಾವರ್ತೆ ಅವರ ಕಾರನ್ನು ಕಿಡಿಗೇಡಿ ಗಳು ಧ್ವಂಸಗೊಳಿಸಿದ್ದಾರೆ. ಇಲ್ಲಿನ ಪರೇಲ್‌ನಲ್ಲಿ ಈ ಘಟನೆ ನಡೆದಿದೆ. ಈ ಸಂಬಂಧ ಎಫ್‌ಐಆರ್ ದಾಖಲಿಸಿರುವ ಭೋಯಿವಾಡ ಪೊಲೀಸರು, ಮೂವರನ್ನು ಬಂಧಿಸಿದ್ದಾರೆ.

'ಪ್ಯಾಲೆಸ್ಟೀನ್: ಭಾರತ ಮಧ್ಯಸ್ಥಿಕೆ ವಹಿಸಲಿ'

ಬೆಂಗಳೂರು: ಪ್ಯಾಲೆಸ್ಟೀನ್-ಇಸ್ರೇಲ್ ನಡುವಿನ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳಲು ಭಾರತವು ಮಧ್ಯವರ್ತಿಯ ಪಾತ್ರವನ್ನು ವಹಿಸಬೇಕು ಎಂದು ಕರ್ನಾಟಕ ಸಂಘಟನೆಗಳ ಮತ್ತು ಧಾರ್ಮಿಕ ನೇತಾರರ ಪ್ಯಾಲೆಸ್ಟೀನ್ ಸಹಾನುಭೂತಿ ಒಕ್ಕೂಟ ಆಗ್ರಹಿಸಿದೆ.

ಭಾರತವು ದೀರ್ಘಾವಧಿಯಿಂದ ಪ್ಯಾಲೆಸ್ಟೀನ್ ಹಿತಾಸಕ್ತಿಯನ್ನು ಬೆಂಬಲಿಸುವ ಮತ್ತು ಮಾನವ ಹಕ್ಕುಗಳನ್ನು ಎತ್ತಿ ಹಿಡಿಯುವ ನೀತಿಯನ್ನು ಅನುಸರಿಸಿಕೊಂಡು ಬಂದಿದೆ. ಈಗಲೂ ವಿಶ್ವಸಂಸ್ಥೆಯ ನಿರ್ಣಯಗಳು ಮತ್ತು ಅಂತರರಾಷ್ಟ್ರೀಯ ಕಾನೂನಿಗೆ ಅನುಸಾರವಾಗಿ ಸಮಸ್ಯೆ ಪರಿಹರಿಸುವ ಕಾರ್ಯದ ನೇತೃತ್ವವನ್ನು ಭಾರತ ವಹಿಸಬೇಕು ಎಂದು ಒಕ್ಕೂಟದ ಸದಸ್ಯ ಬೆಳಗಾಮಿ ಮಹಮ್ಮದ್ ಸಾದ್, ಅಕ್ಬರ್ ಅಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ಗಾಜಾದ ಸಂತ್ರಸ್ತರಿಗೆ ಭಾರತ ನೆರವು ನೀಡಿರುವುದು ಸ್ವಾಗತಾರ್ಹ ಹೆಜ್ಜೆ. ಸಂತ್ರಸ್ತರನ್ನು ಬೆಂಬಲಿಸುವುದು ಮತ್ತು ದಬ್ಬಾಳಿಕೆ ಮಾಡುವವರನ್ನು ವಿರೋಧಿಸುವುದು ನಾಗರಿಕರ ಮೂಲ ಪ್ರಜಾಸತ್ತಾತ್ಮಕ ಹಕ್ಕು. ಈ ಹಕ್ಕನ್ನು ರಕ್ಷಿಸಬೇಕು ಎಂದು ಹೇಳಿದರು.

ಎಎಪಿ ರಾಜ್ಯ ಪದಾಧಿಕಾರಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯದ ವಿವಿಧ ಘಟಕಗಳ ಅಧ್ಯಕ್ಷರು, ಪದಾಧಿಕಾರಿಗಳನ್ನು ನೇಮಿಸಲಾಗಿದೆ ಎಂದು ಪಕ್ಷದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಹೇಳಿದ್ದಾರೆ.

ನವೀನ್‌ಚಂದ್ರ ಪೂಜಾರಿ-ಅಧ್ಯಕ್ಷ, ರಾಜ್ಯ ಹಿಂದುಳಿದ ವರ್ಗಗಳ ಘಟಕ. ಲೋಹಿತ್ ಹನುಮಾಪುರ-ಅಧ್ಯಕ್ಷ, ಯುವ ಘಟಕ. ಗಿರೀಶ್ ನಾಯ್ಕ-ಸಂಘಟನಾ ಕಾರ್ಯದರ್ಶಿ, ಯುವ ಘಟಕ. ಹೇಮಂತ್ ಕುಮಾರ್-ಅಧ್ಯಕ್ಷ, ಕಾಫಿ ಬೆಳೆಗಾರರ ಘಟಕ. ಆಯುಬ್ ಖಾನ್-ಅಧ್ಯಕ್ಷ, ಆಟೊಚಾಲಕರ ಘಟಕ, ಗೀತಾ ಎಂ ಯಾಡಗಿ, ರಾಜೇಶ್ವರಿ, ವಿ. ಜ್ಯೋತಿ-ಕಾರ್ಯದರ್ಶಿಗಳು, ಮಹಿಳಾ ಘಟಕ.

ಐಐಎಂಬಿ ಸಂಸ್ಥಾಪನಾ ಸಪ್ತಾಹಕ್ಕೆ ಚಾಲನೆ ನೀಡಿದ ರಾಷ್ಟ್ರಪತಿ ದ್ರೌಪದಿ ಮುರ್ಮು

ದೇಶ ಕಟ್ಟಲು ಸೌಹಾರ್ದ, ಸದಾಶಯಗಳೇ ಅಸ್ತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳು ಹಾಗೂ ಯುವ ಸಮುದಾಯ ಪರಸ್ಪರ ಸೌಹಾರ್ದ, ಸದಾಶಯಗಳಿಂದ ದೇಶ ಕಟ್ಟಬೇಕು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಸಲಹೆ ನೀಡಿದರು.

ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ (ಐಐಎಂಬಿ) ಸುವರ್ಣ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಸಂಸ್ಥಾಪನಾ ಸಪ್ತಾಹಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ನೈತಿಕತೆ ಇಲ್ಲದ ಯಶಸ್ಸು, ದುಡಿಮೆ ಇಲ್ಲದ ಸಂಪತ್ತು ಹಾಗೂ ಚಾರಿತ್ರ್ಯ ಇಲ್ಲದ ಜ್ಞಾನ ನಿಷ್ಪ್ರಯೋಜಕ. ಅವುಗಳಿಂದ ಮನುಕುಲಕ್ಕೆ ಒಳಿತು ಮಾಡಲು ಸಾಧ್ಯವಿಲ್ಲ. ಮಹಾತ್ಮ ಗಾಂಧೀಜಿ ಅವರು ಬೋಧಿಸಿದ ನೈತಿಕತೆಗಳು ಶಿಕ್ಷಣದ ಅವಿಭಾಜ್ಯ ಅಂಗವಾಗಬೇಕು. ಭವಿಷ್ಯದ ಸಂಪತ್ತು ಸೃಷ್ಟಿಸುವ ಸಾಮರ್ಥ್ಯ ಹೊಂದಿರುವ ಐಐಎಂನಂತಹ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ನೈತಿಕ ಮೌಲ್ಯಗಳನ್ನೂ ಪಾಲನೆ ಮಾಡಬೇಕು ಎಂದು ತಿಳಿಸಿದರು.



ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಸುವರ್ಣ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಸಂಸ್ಥಾಪನಾ ಸಪ್ತಾಹದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಮಾತನಾಡಿದರು. ಐಐಎಂಬಿ ನಿರ್ದೇಶಕ ಋಷಿಕೇಶ ಟಿ.ಕೃಷ್ಣನ್, ರಾಜ್ಯಪಾಲ ಥಾವರಚಂದ್ ಗೆಹಲೋತ್ ಇದ್ದಾರೆ

'ದಿ ಮೇಕಿಂಗ್ ಆಫ್ ಎ ಕ್ಯಾಂಪಸ್ ಐಐಎಂ ಬೆಂಗಳೂರು' ಕೃತಿ ಬಿಡುಗಡೆಗೊಳಿಸಿದ ರಾಜ್ಯಪಾಲ ಥಾವರಚಂದ್ ಗೆಹಲೋತ್, ಕರ್ನಾಟಕ ಶಿಕ್ಷಣ ಹಾಗೂ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಬೆಂಗಳೂರು ದೇಶದ ಐಟಿ ಹಬ್ ಆಗಿ ಬೆಳೆಯಲು ಐಐಎಂ ತನ್ನದೇ ಕೊಡುಗೆ ನೀಡಿದೆ ಎಂದು ಹೇಳಿದರು.

ಐಐಎಂಬಿ ಕುರಿತು ಸಾಕ್ಷ್ಯಚಿತ್ರದ ಟೀಸರ್ ಬಿಡುಗಡೆ ಮಾಡಲಾಯಿತು. 50 ಗಂಟೆಗಳ ರಿಲೇ ವಾಕ್‌ಥಾನ್‌ಗೆ ಚಾಲನೆ ನೀಡಲಾಯಿತು. ಐಐಎಂಬಿ ಆಡಳಿತ ಮಂಡಳಿ ಅಧ್ಯಕ್ಷ ಡಾ.ದೇವಿಪ್ರಸಾದ ಶೆಟ್ಟಿ, ನಿರ್ದೇಶಕ ಋಷಿಕೇಶ ಟಿ.ಕೃಷ್ಣನ್ ಉಪಸ್ಥಿತರಿದ್ದರು.



❦ ಸುಭಾಷಿತ ❦

ಹಣ ಎಂಬುದು ಉಪ್ಪಿನಂತೆ, ಕಡಿಮೆ ತಿಂದರೆ ರುಚಿ, ಹೆಚ್ಚು ತಿಂದರೆ ದಾಹ.

-ಶಿವರಾಮ ಕಾರಂತ

ವೈಯಕ್ತಿಕ ಸಾಲ ನೀಡಿಕೆ ಹೆಚ್ಚಳ ಸಮಸ್ಯೆ ಅಲ್ಲದಿರಬಹುದು; ಎಚ್ಚರಿಕೆ ಬೇಕು

ಬ್ಯಾಂಕ್‌ಗಳು ಹಾಗೂ ಬ್ಯಾಂಕೇತರ ಹಣಕಾಸು ಸಂಸ್ಥೆಗಳು (ಎನ್‌ಬಿಎಫ್‌ಸಿ) ನೀಡುವ ವೈಯಕ್ತಿಕ ಸಾಲ ವಿಭಾಗದಲ್ಲಿ ಈಚಿನ ತಿಂಗಳುಗಳಲ್ಲಿ ಕಂಡುಬಂದಿರುವ ಭಾರಿ ಪ್ರಮಾಣದ ಹೆಚ್ಚಳವು ಕಳವಳಕ್ಕೆ ಕಾರಣವಾಗಿದೆ. ಈ ತಿಂಗಳ ಆರಂಭದಲ್ಲಿ ನಡೆದ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸಭೆಯ ನಂತರದಲ್ಲಿ ಮಾತನಾಡಿದ ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಅವರು ಈ ಬಗೆಯ ಸಾಲಗಳ ವಿತರಣೆಯಲ್ಲಿ ಆಗಿರುವ ಹೆಚ್ಚಳದ ಬಗ್ಗೆ ಪ್ರಸ್ತಾಪಿಸಿದ್ದಾರೆ. 'ಕೆಲವು ಬಗೆಯ ವೈಯಕ್ತಿಕ ಸಾಲಗಳ ನೀಡಿಕೆಯು ಬಹಳ ದೊಡ್ಡ ಪ್ರಮಾಣದಲ್ಲಿ ಹೆಚ್ಚಳ ಕಾಣುತ್ತಿದೆ' ಎಂದು ದಾಸ್ ತಿಳಿಸಿದ್ದಾರೆ. ಅಲ್ಲದೆ, ಈ ವಿಭಾಗದಲ್ಲಿ ನೀಡಿರುವ ಸಾಲಗಳ ಮರುಪಾವತಿಯ ವಿಚಾರವಾಗಿ ಆರಂಭಿಕ ಹಂತದ ಸಮಸ್ಯೆಗಳೇನಾದರೂ ಕಂಡುಬರುತ್ತಿವೆಯೇ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ ಎಂದು ಕೂಡ ಅವರು ಹೇಳಿದ್ದಾರೆ. ಬ್ಯಾಂಕ್ ಹಾಗೂ ಎನ್‌ಬಿಎಫ್‌ಸಿಗಳು ನೀಡುವ ಹಲವು ಬಗೆಯ ಸಾಲಗಳ ಪೈಕಿ ವೈಯಕ್ತಿಕ ಸಾಲಗಳು ಅತಿಹೆಚ್ಚಿನ ಪ್ರಮಾಣದ 'ರಿಸ್ಕ್' ಒಳಗೊಂಡಿರುತ್ತವೆ. ಈ ಬಗೆಯ ಸಾಲಗಳನ್ನು ನೀಡುವಾಗ ಹಣಕಾಸು ಸಂಸ್ಥೆಗಳು ವ್ಯಕ್ತಿಯ ವೇತನ, ಆದಾಯ ಅಥವಾ ಆತನ ಅದುವರೆಗಿನ ಸಾಲ ಮರುಪಾವತಿ ದಾಖಲೆಗಳನ್ನು ಮಾತ್ರ ಪರಿಶೀಲಿಸಿರುತ್ತವೆ. ಸಾಲಕ್ಕೆ ಪ್ರತಿಯಾಗಿ ಯಾವುದೇ ಅಡಮಾನ ಇರುವುದಿಲ್ಲ. ಅಂದರೆ, ಸಾಲವನ್ನು ಮರುಪಾವತಿಸುವಲ್ಲಿ ವ್ಯಕ್ತಿ ವಿಫಲನಾದ ಸಂದರ್ಭದಲ್ಲಿ ಅದರ ವಸೂಲಿಯು ಬ್ಯಾಂಕ್‌ಗಳ ಪಾಲಿಗೆ ಬಹಳ ತ್ರಾಸದಾಯಕವಾಗುತ್ತದೆ. ಹೀಗಾಗಿ, ಇಂತಹ ಸಾಲಗಳ ವಿಚಾರವಾಗಿ ಆರ್‌ಬಿಐ ಗಮನ ಹರಿಸಿರುವುದು ಒಳ್ಳೆಯ ನಡೆ.



ಆರ್ಥಿಕತೆಯು ಮಂದಗತಿಗೆ ತಿರುಗಿದರೆ ವೈಯಕ್ತಿಕ ಸಾಲವು ಕುಟುಂಬಗಳ ಪಾಲಿಗೆ ಸಮಸ್ಯೆ ಸೃಷ್ಟಿಸಬಹುದು, ಬ್ಯಾಂಕಿಂಗ್ ವ್ಯವಸ್ಥೆಯ ಪಾಲಿಗೆ ವಿಷವಾಗಬಹುದು ಎಂಬುದನ್ನು ಹಣಕಾಸು ಸಂಸ್ಥೆಗಳು ನೆನಪಿನಲ್ಲಿಡಬೇಕು

ಆಗಸ್ಟ್ 25ರ ಹೊತ್ತಿಗೆ ಕ್ರೆಡಿಟ್ ಕಾರ್ಡ್ ಹೊಂದಿರುವವರಿಂದ ಹಣಕಾಸು ಸಂಸ್ಥೆಗಳಿಗೆ ಬರಬೇಕಿರುವ ಒಟ್ಟು ಮೊತ್ತವು ₹ 2.18 ಲಕ್ಷ ಕೋಟಿ ಆಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕ್ರೆಡಿಟ್ ಕಾರ್ಡ್ ಹೊಂದಿರುವವರಿಂದ ಬರಬೇಕಿದ್ದ ಮೊತ್ತವು ₹ 1.68 ಲಕ್ಷ ಕೋಟಿ ಮಾತ್ರ ಇತ್ತು. ಒಂದು ವರ್ಷದ ಅವಧಿಯಲ್ಲಿ ಜನರು ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಮಾಡುವ ವೆಚ್ಚಗಳು ದೊಡ್ಡ ಪ್ರಮಾಣದಲ್ಲಿ ಹೆಚ್ಚಾಗಿರುವುದನ್ನು ಇದು ಸೂಚಿಸುತ್ತಿದೆ. ಕಳೆದ ಎರಡು ವರ್ಷಗಳಲ್ಲಿ ಸಾಲ ನೀಡಿಕೆ ಪ್ರಮಾಣವು ಶೇಕಡ 12ರಿಂದ ಶೇ 14ರ ಪ್ರಮಾಣದಲ್ಲಿ ಬೆಳವಣಿಗೆ ಕಂಡಿದೆ. ಆದರೆ ಅಡಮಾನ ಇಲ್ಲದ ಸಣ್ಣ ಸಾಲಗಳ ನೀಡಿಕೆ ಪ್ರಮಾಣದಲ್ಲಿ ಶೇ 23ರಷ್ಟು ಹೆಚ್ಚಳ ಆಗಿದೆ. ಇದನ್ನು ಗಮನಿಸಿಯೇ ಆರ್‌ಬಿಐ, ಸಮಸ್ಯೆಯು ದೊಡ್ಡದಾಗುವ ಮೊದಲೇ ಅದನ್ನು ನಿಭಾಯಿಸುವತ್ತ ಗಮನ ನೀಡಿ ಎಂದು ಬ್ಯಾಂಕ್‌ಗಳಿಗೆ ಕಿವಿಮಾತು ಹೇಳಿದೆ. ಅಡಮಾನರಹಿತ ಸಾಲಗಳ ನೀಡಿಕೆ ಹೆಚ್ಚಾಗುತ್ತಿರುವುದು ಈಗಿನ ಹಂತದಲ್ಲಿ ಹಣಕಾಸು ವ್ಯವಸ್ಥೆಗೆ ಸಮಸ್ಯೆಯಾಗಿ ಪರಿಣಮಿಸಿಲ್ಲವಾದರೂ ಮುಂದೆ ಸಮಸ್ಯೆ ಸೃಷ್ಟಿಯಾಗಬಹುದು ಎಂಬುದನ್ನು ಗಮನದಲ್ಲಿ ಇರಿಸಿಕೊಳ್ಳಬೇಕು ಎಂಬುದು ಆರ್‌ಬಿಐ ಆಶಯ.

ವೈಯಕ್ತಿಕ ಸಾಲಗಳ ಮರುಪಾವತಿಯ ಸಮಸ್ಯೆಯು ಕೆಲವು ಬ್ಯಾಂಕ್‌ಗಳ ತ್ರೈಮಾಸಿಕ ಫಲಿತಾಂಶದಲ್ಲಿ ಪ್ರತಿಫಲಿಸಿದೆ ಕೂಡ. ಈಚೆಗೆ ಸೆಪ್ಟೆಂಬರ್ ತ್ರೈಮಾಸಿಕದ ಫಲಿತಾಂಶವನ್ನು ಪ್ರಕಟಿಸಿರುವ ಯೆಸ್ ಬ್ಯಾಂಕ್, ವೈಯಕ್ತಿಕ ಸಾಲದ ಮರುಪಾವತಿ ಸರಿಯಾಗಿ ಆಗುತ್ತಿಲ್ಲದಿರುವುದು ಈಚಿನ ದಿನಗಳಲ್ಲಿ ಹೆಚ್ಚಾಗಿದೆ ಎಂದು ತಿಳಿಸಿದೆ. ಆದರೆ ಇವು ಇನ್ನೂ ಅನುತ್ಪಾದಕ ಆಸ್ತಿ (ಎನ್‌ಪಿಎ) ಎಂದು ವರ್ಗೀಕರಣ ಆಗಿಲ್ಲ ಎಂಬುದನ್ನು ಸ್ಪಷ್ಟಪಡಿಸಿದೆ. ಆದರೆ ಕೆಲವು ದೊಡ್ಡ ಬ್ಯಾಂಕ್‌ಗಳು ವೈಯಕ್ತಿಕ ಸಾಲದ ಮರುಪಾವತಿಯಲ್ಲಿ ಸಮಸ್ಯೆ ಕಂಡುಬಂದಿಲ್ಲ ಎಂದು ಸ್ಪಷ್ಟಪಡಿಸಿವೆ ಕೂಡ. ವೈಯಕ್ತಿಕ ಸಾಲ ಅಥವಾ ಕ್ರೆಡಿಟ್ ಕಾರ್ಡ್ ಸಾಲ ನೀಡಿಕೆಯಲ್ಲಿ ಹೆಚ್ಚಾಗಿರುವುದು ಸಮಸ್ಯೆಗೆ ದಾರಿಮಾಡಿಕೊಡಬಹುದು ಎಂದಷ್ಟೇ ಭಾವಿಸುವ ಅಗತ್ಯವಿಲ್ಲ ಎಂಬುದು ನಿಜ. ಸಾಲ ಪಡೆಯುವಿಕೆ ಹೆಚ್ಚಾಗಿದೆ ಎಂದಾದರೆ, ಇಂದಿನ ವರಮಾನ ಹಾಗೂ ಮುಂದೆ ಸಿಗಬಹುದಾದ ವರಮಾನದ ವಿಚಾರದಲ್ಲಿ ಜನರ ವಿಶ್ವಾಸ ಹೆಚ್ಚಾಗಿದೆ ಎಂದೂ ಭಾವಿಸಬಹುದು. ಆ ಕಾರಣದಿಂದಾಗಿ ಜನ ವೈಯಕ್ತಿಕ ಸಾಲವನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆದು, ಅಗತ್ಯ ವಸ್ತುಗಳನ್ನು ಖರೀದಿಸಿ, ಮಾರುಕಟ್ಟೆಯಲ್ಲಿ ಚೇತರಿಕೆ ತರುವ ಕೆಲಸ ಮಾಡುತ್ತಿದ್ದಾರೆ ಎಂಬ ವ್ಯಾಖ್ಯಾನವೂ ಇದೆ. ಅರ್ಥವ್ಯವಸ್ಥೆಯು ಚೇತರಿಕೆಯಲ್ಲಿ ಇರುವಷ್ಟು ಕಾಲ ಈ ವಾದಕ್ಕೆ ಹೆಚ್ಚಿನ ಮಾನ್ಯತೆ ಇರುತ್ತದೆ. ಆದರೆ, ಆರ್ಥಿಕತೆಯು ಮಂದಗತಿಗೆ ತಿರುಗಿದರೆ ವೈಯಕ್ತಿಕ ಸಾಲವು ಕುಟುಂಬಗಳ ಪಾಲಿಗೆ ಸಮಸ್ಯೆ ಸೃಷ್ಟಿಸಬಹುದು, ಬ್ಯಾಂಕಿಂಗ್ ವ್ಯವಸ್ಥೆಯ ಪಾಲಿಗೆ ವಿಷವಾಗಬಹುದು. ಹೀಗಾಗಿ, ಇಂತಹ ಸಾಲಗಳ ವಿಚಾರದಲ್ಲಿ ಹಣಕಾಸು ಸಂಸ್ಥೆಗಳು ಎಚ್ಚರಿಕೆಯ ಹೆಜ್ಜೆ ಇರಿಸುವ ಅಗತ್ಯ ಖಂಡಿತ ಇದೆ.

ಪ್ರಾದೇಶಿಕತೆ ಒಪ್ಪದ, ವೈವಿಧ್ಯಕ್ಕೆ ಕುರುಡಾದ 'ರಾಷ್ಟ್ರೀಯತೆ' ಜಡ ಹಾಗೂ ಜೀವವಿರೋಧಿ

'ಪ್ರೊಕ್ರೂಸ್ಟೆಸ್ ಮಂಚ' ನಮಗೆ ಬೇಕೆ?



ಪಡಸಾಲೆ

ರಘುನಾಥ ಚ.ಹ.

ಪ್ರೊಕ್ರೂಸ್ಟೆಸ್ ಎನ್ನುವವನು ಗ್ರೀಕರ ದಂತಕಥೆಯಲ್ಲಿನ ದರೋಡೆಕೋರ. ಕಥೆಯ ಸಾರಾಂಶ ಇಷ್ಟು: ವಶಕ್ಕೆ ಸಿಕ್ಕವರನ್ನು, ತನ್ನ ಬಳಿಯಿದ್ದ ಕಬ್ಬಿಣದ ಮಂಚದ ಮೇಲೆ ಮಲಗಿಸುತ್ತಿದ್ದ ಪ್ರೊಕ್ರೂಸ್ಟೆಸ್, ಉದ್ದವಿದ್ದವರ ದೇಹವನ್ನು ಮಂಚದ ಅಳತೆಗೆ ತಕ್ಕಂತೆ ಕತ್ತರಿಸುತ್ತಿದ್ದ; ಉದ್ದವಿಲ್ಲದವರನ್ನು ಮಂಚದ ಉದ್ದಕ್ಕೆ ಸರಿಯಾಗಿ ಎಳೆದೆಳೆದು ಹಿಗ್ಗಿಸುತ್ತಿದ್ದ. ಎರಡರ ಪರಿಣಾಮವೂ ಒಂದೇ–ಸಾವು! ಈ ಕಥೆಯನ್ನು 'ಪ್ರೊಕ್ರೂಸ್ಟೆಸ್ ಮಂಚ' ಹೆಸರಿನ ಈ ಕವಿತೆ (ಎಸ್. ದಿವಾಕರ್, 'ವಿಧಾನಸಭೆಯಲ್ಲೊಂದು ಹಕ್ಕಿ' ಸಂಕಲನ), 'ಜನನಾಯಕರಿಗೆಲ್ಲ ಅವನೇ ಮಾದರಿ' ಎನ್ನುತ್ತ, 'ಎಲ್ಲರನ್ನೂ ಒಂದೇ ವಿಚಾರಕ್ಕೆ ಒಗ್ಗಿಸುವ/ ಬಡಿದು ಕಡಿದು ಒಂದೇ ಪ್ರಮಾಣಕ್ಕೆ ಬಗ್ಗಿಸುವ/ ಪ್ರೊಕ್ರೂಸ್ಟೆಸ್ ಮಂಚ, ಎಂಥ ಸತ್ಪರಿಮಾಣ/ ಮನುಷ್ಯನಾಗುವುದಕ್ಕೆ ಪರಿಪೂರ್ಣ' ಎಂದು ವ್ಯಂಗ್ಯವಾಡುತ್ತ, 'ಇದ್ದರೆಷ್ಟು ಚೆನ್ನ ಎಲ್ಲರೂ ಒಂದೇ ರೀತಿ/ ಅದಕ್ಕೆ ಬೇಕೇ ಬೇಕು ಹಲವರ ಆಹುತಿ' ಎಂದು ಕೊನೆಗೊಳ್ಳುತ್ತದೆ.

ಇಡೀ ಸಮಾಜವನ್ನು ಏಕರೂಪದ ಅಚ್ಚಿನಲ್ಲಿ ಕಾಣಬಯಸುವ ರಾಜಕಾರಣಿಗಳ ಮನಃಸ್ಥಿತಿ 'ಪ್ರೊಕ್ರೂಸ್ಟೆಸ್ ಮಂಚ'ಕ್ಕೆ ತಕ್ಕಂತೆಯೇ ಇದೆ. 'ಸಮಾಜಕ್ಕೆ ಅಂಟಿಕೊಂಡಿರುವ ಜಾತೀಯತೆ ಮತ್ತು ಪ್ರಾದೇಶಿಕತೆಯನ್ನು ಬೇರು ಸಮೇತ ಕಿತ್ತೆಸೆಯಿರಿ' ಎಂದು ದಸರೆಯ ಸಂದರ್ಭದಲ್ಲಿ ದೇಶವಾಸಿಗಳಿಗೆ ಪ್ರಧಾನಮಂತ್ರಿ ನೀಡಿರುವ ಕರೆ 'ಪ್ರೊಕ್ರೂಸ್ಟೆಸ್ ಮಂಚ'ದ ಕಥೆಯನ್ನು ನೆನಪಿಸುವಂತಿದೆ ಎಂದು ಹೇಳುವುದು ಒರಟಾದರೂ ಅತಿರೇಕವಾದರೂ, ಅಂಥ ಮಾತುಗಳನ್ನು ಕಾರ್ಯರೂಪಕ್ಕೆ ತರಲು ಹೊರಟ ಚರಿತ್ರೆಯಲ್ಲಿನ ಪ್ರಯತ್ನಗಳೆಲ್ಲ ತಲುಪಿರುವುದು ಮರಣಮಂಚವನ್ನೇ.

ಭಾರತವನ್ನು ವಿಭಜಿಸುತ್ತಿರುವ ದುಷ್ಟಶಕ್ತಿಗಳ ರೂಪದಲ್ಲಿ ಈ ಎರಡನ್ನೂ ಗುರುತಿಸಿರುವ ಪ್ರಧಾನಿ, ದೇಶದ ಹಿತಕ್ಕಾಗಿ ಅವುಗಳ ನಾಶ ಅಗತ್ಯವೆಂದು ಹೇಳಿದ್ದಾರೆ. ಜಾತೀಯತೆ ದೇಶದ ಹಿತಕ್ಕೆ ಮಾರಕ ಎನ್ನುವುದರಲ್ಲಿ ಅನುಮಾನ ಇರಬೇಕಿಲ್ಲ. ಸಮಸ್ಯೆ ಇರುವುದು, ಪ್ರಾದೇಶಿಕತೆಯನ್ನು ದೇಶದ ವಿಭಜಕವನ್ನಾಗಿ ಭಾವಿಸುವುದರಲ್ಲಿ. ಪ್ರಾದೇಶಿಕತೆಯನ್ನು ಮಾರಕ ಎನ್ನುವುದಾದರೆ, ಗಣತಂತ್ರ ವ್ಯವಸ್ಥೆ ಹಾಗೂ ಗಣರಾಜ್ಯೋತ್ಸವ ಅರ್ಥಹೀನವಾಗುತ್ತವೆ; 'ಪ್ರಜಾಪ್ರಭುತ್ವ ಭಾರತ'ದ ಚೆಲುವು ಹಾಗೂ ಶಕ್ತಿ ಇರುವುದೇ ಅದರ ಬಹುತ್ವದಲ್ಲಿ ಎನ್ನುವ ನಂಬಿಕೆ ಬುಡಮೇಲಾಗುತ್ತದೆ. ಬಹುತ್ವ ಮತ್ತು ಪ್ರಾದೇಶಿಕತೆ ಬೇರೆಯಲ್ಲವಷ್ಟೆ. ಈ ಪ್ರಾದೇಶಿಕ ವೈವಿಧ್ಯವನ್ನು ಗೌರವಿಸುತ್ತ, ಬಹುತ್ವವನ್ನು ಸಾಧಿಸುವುದು ಸಂವಿಧಾನದ ಆಶಯ. ವಾಸ್ತವ ಹೀಗಿರುವಾಗ, ಪ್ರಾದೇಶಿಕತೆಯನ್ನು ನಿರಾಕರಿಸುವುದು ಸಂವಿಧಾನದ ನಿರಾಕರಣೆಯಲ್ಲವೆಂದು ಹೇಳಲಾದೀತೆ?

ಪ್ರಾದೇಶಿಕತೆಯನ್ನು ದೇಶದ ಹಿತಾಸಕ್ತಿಗೆ ವಿರುದ್ಧವಾಗಿ ಬಿಂಬಿಸುವ ಪ್ರಯತ್ನವು ಇದು ಮೊದಲೇನೂ ಅಲ್ಲ. ಪ್ರಾದೇಶಿಕತೆಯನ್ನು ದೇಶದ ಅಭಿವೃದ್ಧಿಗೆ ಮಾರಕವೆಂದು ಬಿಂಬಿಸುವವರು, ಪರ್ಯಾಯವಾಗಿ 'ರಾಷ್ಟ್ರೀಯತೆ' ಪರಿಕಲ್ಪನೆಯನ್ನು ಮುಂದಿಡುತ್ತಾರೆ. 'ನಾವೆಲ್ಲ ಒಂದು' ಎನ್ನುವ ಭಾವನೆ ಹಾಗೂ 'ದೇಶದ ಹಿತಾಸಕ್ತಿಯೇ ಎಲ್ಲಕ್ಕೂ ಮೊದಲು' ಎನ್ನುವುದು ಈ ರಾಷ್ಟ್ರೀಯತೆಯ ತಿರುಳು. ಹೀಗೆ, ದೇಶಭಕ್ತಿಯ ರೂಪದಲ್ಲಿ ರಾಷ್ಟ್ರೀಯತೆಯನ್ನು ಪ್ರತಿಪಾದಿಸುವವರು ಉದ್ದೇಶಪೂರ್ವಕವಾಗಿ ಮರೆಯುವುದು, ಪ್ರಾದೇಶಿಕತೆ ದೇಶದ ಹಿತಾಸಕ್ತಿಗೆ ವಿರುದ್ಧವಾಗಿಲ್ಲ ಎನ್ನುವುದನ್ನು. ಪ್ರಾದೇಶಿಕ ಹಿತಾಸಕ್ತಿಯ ಕಾಳಜಿ ದೇಶದ ಹಿತಕ್ಕೆ ಅಪಾಯಕಾರಿ ಎಂದು ಭಾವಿಸುವುದು ವಿತಂಡವಾದವೇ ಹೊರತು, ಜನಪರವೂ ಅಲ್ಲ, ಮಾನವೀಯತೆಯೂ ಅಲ್ಲ. ಜನಸಮೂಹವೇ ದೇಶವಾಗಿರುವಾಗ ಹಾಗೂ ಆ ಸಮೂಹವು ವೈವಿಧ್ಯದಿಂದ ಕೂಡಿರುವಾಗ, ಅವರೆಲ್ಲರ ಹಿತಾಸಕ್ತಿ ದೇಶದ ಹಿತಾಸಕ್ತಿಯೂ ಆಗಿರುತ್ತದೆ. ಪ್ರಾದೇಶಿಕತೆಯನ್ನು ಒಳಗೊಳ್ಳದ ರಾಷ್ಟ್ರೀಯತೆ ಸರ್ವಾಧಿಕಾರಕ್ಕೆ ಎಡೆ ಮಾಡಿಕೊಡುತ್ತದೆ; ವೈವಿಧ್ಯಕ್ಕೆ ಕುರುಡಾದ ರಾಷ್ಟ್ರೀಯತೆ ಜಡವಾಗುತ್ತದೆ, ಕೆಲವೊಮ್ಮೆ ಜೀವವಿರೋಧಿಯೂ ಆಗುತ್ತದೆ ಎನ್ನುವುದಕ್ಕೆ ಚರಿತ್ರೆಯಲ್ಲಿರುವ ಉದಾಹರಣೆಗಳಿಗೆ ಕುರುಡಾಗಬಾರದು.

ಪ್ರಾದೇಶಿಕತೆಯ ಬಗ್ಗೆ ಕಿಸುರುಗಣ್ಣಾಗಿರುವ ರಾಜಕೀಯ ಪಕ್ಷಗಳು ಪ್ರತಿಪಾದಿಸುತ್ತಿರುವ ರಾಷ್ಟ್ರೀಯತೆಯ ಚಹರೆಗಳನ್ನು ಗಮನಿಸಿದರೆ, ಅವರ ವಾದದ ಹಿಂದಿನ ಅಸಲಿಯತ್ತು ಸ್ಪಷ್ಟವಾಗುತ್ತದೆ. ಒಂದು ದೇಶ, ಒಂದು ಧರ್ಮ, ಒಂದು ಭಾಷೆ ಎನ್ನುವುದು ಈಗಿನ 'ರಾಷ್ಟ್ರೀಯತೆ'ಯ ಹೂರಣ. ಕರ್ನಾಟಕದಲ್ಲಿನ ರಾಷ್ಟ್ರೀಯತೆಯ ವಕ್ತಾರರ ನಡವಳಿಕೆಯನ್ನೇ ಗಮನಿಸಿ. ಇನ್ನೊಂದು ಧರ್ಮವನ್ನು ವಿರೋಧಿಸುವುದರಲ್ಲಿ ತಮ್ಮ ರಾಜಕೀಯ ಅಸ್ತಿತ್ವವಿದೆಯೆಂದು ಅವರು ನಂಬಿದ್ದಾರೆ. ಅವಕಾಶ ಸಿಕ್ಕಾಗಲೆಲ್ಲ 'ಹಿಂದಿಪುಂಗಿ' ಊದುತ್ತಾರೆ. ಧರ್ಮದ ವಿಷಯ ಬಂದಾಗ ನರ ಹರಿದುಹೋಗುವ ರೀತಿಯಲ್ಲಿ ಬೊಬ್ಬಿರಿಯುವವರು, ನೆಲ–ಜಲದ ಸಂಕಟಗಳು ಎದುರಾದ ಸಂದರ್ಭಗಳಲ್ಲಿ, ತಮ್ಮ 'ಜೀ'ಗಳಿಗೆ ಇರುಸು ಮುರುಸಾದೀತೆಂಬ ಕಾಳಜಿಯಿಂದ ನಾಲಿಗೆ ಬಿದ್ದು ಹೋದವರಂತೆ ವರ್ತಿಸುತ್ತಾರೆ. ಇದೇನಾ ರಾಷ್ಟ್ರೀಯತೆ?


ಪ್ರಾದೇಶಿಕತೆಯನ್ನು ಅಪಾಯಕಾರಿಯೆಂದು ಬಿಂಬಿಸುತ್ತ, 'ರಾಷ್ಟ್ರೀಯತೆ'ಯನ್ನು ಮುಂದಿಡುತ್ತಿರುವವರಿಗೆ ಎರಡು ಅನುಕೂಲಗಳಿವೆ. ವರ್ತಮಾನದ ಸಂಕಟಗಳನ್ನು ಮರೆಮಾಚುವುದು ಅಥವಾ ಆ ಸಂಕಟಗಳು ಅಷ್ಟೇನೂ ತೀವ್ರವಾದವುಗಳಲ್ಲ ಎಂದು ಜನರನ್ನು ನಂಬಿಸುವುದಕ್ಕೆ ರಾಷ್ಟ್ರೀಯತೆಯನ್ನು ಬಳಸುವುದು ಮೊದಲ ಅನುಕೂಲ. ಉದಾಹರಣೆಯ ಮೂಲಕ ಹೇಳುವುದಾದರೆ, ಜಾಗತಿಕ ಹಸಿವಿನ ಸೂಚ್ಯಂಕ ಬೆಟ್ಟು ಮಾಡಿ ತೋರಿಸುತ್ತಿರುವ ಹಸಿವೆ ಹಾಗೂ ಅಪೌಷ್ಟಿಕತೆ ಈ ನೆಲದ ವಾಸ್ತವಗಳಾದರೆ, ಅವುಗಳನ್ನು ನಿರಾಕರಿಸುವುದು ಈ ಹೊತ್ತಿನ ರಾಷ್ಟ್ರೀಯತೆಯ ಲಕ್ಷಣ. ಸಮುದಾಯಗಳ ನಡುವಿನ ತಿಕ್ಕಾಟದಿಂದ ಮಣಿಪುರ ಗಾಯಗೊಂಡಿರುವುದು ಪ್ರಾದೇಶಿಕ ಕಟುವಾಸ್ತವವಾದರೆ, ರಾಷ್ಟ್ರೀಯತೆಯ ಪ್ರತಿಪಾದಕರಿಗೆ ಈ ಬಿಕ್ಕಟ್ಟು ನಗಣ್ಯವಾಗುತ್ತದೆ ಹಾಗೂ ಇಸ್ರೇಲ್ ಸಮಸ್ಯೆ ಅವರಿಗೆ ಸಂಕಟ ತರುತ್ತದೆ. ಇಸ್ರೇಲ್‌ನಿಂದ ತತ್ತರಿಸಿದ ಪ್ಯಾಲೆಸ್ಟೀನಿಯನ್ನರ ಸಂಕಟ ಅರಣ್ಯರೋದನವಾಗಿಯಷ್ಟೇ ಕಾಣಿಸುತ್ತದೆ.

ಚುನಾವಣಾ ಲಾಭ ರಾಷ್ಟ್ರೀಯತೆಯ ಪ್ರತಿಪಾದಕರಿಗಿರುವ ಎರಡನೇ ಅನುಕೂಲ. ಪ್ರಾದೇಶಿಕ ಆಗುಹೋಗು ಚುನಾವಣೆ ವಿಷಯವಾಗುವುದನ್ನು ತಪ್ಪಿಸಲು ರಾಷ್ಟ್ರೀಯತೆಯನ್ನು ಬಳಸಿಕೊಳ್ಳಲಾಗುತ್ತಿದೆ. ಈ ಅನುಕೂಲಗಳ ಸಾಧ್ಯತೆಗಳನ್ನು ಪಕ್ಕಕ್ಕಿಟ್ಟು, 'ಪ್ರಾದೇಶಿಕತೆಯನ್ನು ನಾಶ ಮಾಡಿ' ಎನ್ನುವ ಪ್ರಧಾನಿಯವರ ಮಾತಿನ ಪ್ರಾಮಾಣಿಕತೆಯನ್ನು ಪರಿಶೀಲಿಸಿದರೆ, ಅಲ್ಲಿ ಮಾತಿಗೂ ಕೃತಿಗೂ ತಾಳಮೇಳಕ್ಕಿಂತಲೂಬೂಟಾಟಿಕೆಯೇ ಎದ್ದುಕಾಣಿಸುತ್ತದೆ. ದೇಶದ ಹಿತಾಸಕ್ತಿಗೆ ಕುತ್ತೆಂದು ಪ್ರಧಾನಿ ಪ್ರತಿಪಾದಿಸಿರುವ ವಂಶ ಪಾರಂಪರ್ಯ, ಜಾತೀಯತೆ, ಪ್ರಾದೇಶಿಕತೆಯ ಮೂರ್ತ ರೂಪವಾದ ಪಕ್ಷದೊಂದಿಗೆ ಲೋಕಸಭಾ ಚುನಾವಣೆಯಲ್ಲಿ ಕೈಕುಲುಕಲು ರಾಷ್ಟ್ರೀಯತೆ ಪ್ರತಿಪಾದನೆಯ ಪಕ್ಷ ಸಿದ್ಧವಾಗಿರುವುದು ಏನನ್ನು ಸೂಚಿಸುತ್ತದೆ? ಧರ್ಮವನ್ನೇ ಒಂದು ಜಾತಿಯನ್ನಾಗಿ ಬಳಸಿಕೊಳ್ಳುತ್ತಿರುವವರು, ಜಾತಿ ನಿರ್ಮೂಲನದ ಮಾತನಾಡುವುದು ದೊಡ್ಡ ಚೋದ್ಯ.


ಜನಪರವಾಗಿರುವ ಯಾವುದೇ ರಾಜಕೀಯ ಸಂಘಟನೆ ತನ್ನನ್ನು 'ರಾಷ್ಟ್ರೀಯ ಪಕ್ಷ'ವೆಂದು ಗುರುತಿಸಿಕೊಳ್ಳುವುದು ತಪ್ಪಲ್ಲವಾದರೂ, ಪ್ರಾದೇಶಿಕವಾಗಿ ಸ್ಥಳೀಯ ಆವೃತ್ತಿಗಳನ್ನು ಹೊಂದದೇ ಹೋದರೆ, ಅದರ ಸಾಮಾಜಿಕ ಕಾಳಜಿ ಪ್ರಶ್ನಾರ್ಹ. ರಾಷ್ಟ್ರೀಯತೆ ಹಾಗೂ ಪ್ರಾದೇಶಿಕತೆ ವಿರೋಧಿಗಳಲ್ಲ ಎನ್ನುವುದಕ್ಕೆ ಅತ್ಯುತ್ತಮ ಉದಾಹರಣೆ, ಕರ್ನಾಟಕದ ನಾಡಗೀತೆ. ಕುವೆಂಪು ಅವರ 'ಜಯಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೆ' ಎನ್ನುವ ನುಡಿವಿವೇಕದಲ್ಲಿ ನಾಡಿನ ಹಿತವೂ ದೇಶದ ಹಿರಿಮೆಯೂ ಇದೆ.

ಜನಪರತೆಯ ಚೌಕಟ್ಟಿನಲ್ಲಿ ಇರುವವರೆಗೂ ಯಾವುದೇ ಸಿದ್ಧಾಂತ ಸಮಾಜಮುಖಿಯಾಗಿರುತ್ತದೆ. ಅದು, ಸ್ವಾರ್ಥ ರಾಜಕಾರಣದ ಭಾಗವಾದಾಗ ಅಪಾಯಕಾರಿಯಾಗಿ ಪರಿಣಮಿಸುತ್ತದೆ. ಇದಕ್ಕೆ ಪ್ರಾದೇಶಿಕತೆಯೂ ಹೊರತಲ್ಲ. ಹಾಗೆಂದು, ಪ್ರಾದೇಶಿಕತೆಯ ಅತಿರೇಕಗಳಿಗೆ ಪ್ರಧಾನಿಯೂ ಸೇರಿದಂತೆ ಈಗಿನ ರಾಜಕಾರಣಿಗಳು ಪ್ರತಿಪಾದಿಸುವ ರಾಷ್ಟ್ರೀಯತೆ ಉತ್ತರವಲ್ಲ.

ಕನ್ನಡನಾಡಿಗೆ ಕರ್ನಾಟಕವೆಂದು ನಾಮಕರಣವಾದ ಸಂದರ್ಭಕ್ಕೆ ಐವತ್ತು ವರ್ಷಗಳು ತುಂಬಲು ವಾರವಷ್ಟೇ ಉಳಿದಿರುವ ಸಂದರ್ಭದಲ್ಲಿ, ಪ್ರಧಾನಮಂತ್ರಿ ಪ್ರಾದೇಶಿಕತೆಯನ್ನು ದುಷ್ಟಶಕ್ತಿ ಎಂದಿದ್ದಾರೆ. ಪ್ರಾದೇಶಿಕ ಅಸ್ಮಿತೆಯ ಚಾರಿತ್ರಿಕ ಸಂಭ್ರಮವನ್ನು ಆಚರಿಸಲು ನಾಡು ಸಜ್ಜಾಗಿರುವ ಹೊತ್ತಿನಲ್ಲಿ, ನಾಡಿಗರಿಗೆ ನೀಡಿರುವ ಸಂದೇಶದ ರೂಪದಲ್ಲಿ ಪ್ರಧಾನಿಯ ಮಾತನ್ನು ನೋಡಬೇಕೆ?



ಚುರುಮುರಿ



ಉಗುರು ಪುರಾಣ!

• ಬಿ.ಎನ್.ಮಲ್ಲೇಶ್

'ಅಲ್ಲ, ಇದೊಳ್ಳೆ ಕತಿಯಾತಪ.. ಟಿ.ವಿ., ಪೇಪರ್‌ನಾಗೆಲ್ಲ ಜುಜುಬಿ ಹುಲಿ ಉಗುರು ಎಟಾಕಂದು ಸೌಂಡ್ ಮಾಡಾಕತ್ತೇತಲ್ಲೋ ತೆಪರಾ' ಎಂದ ದುಬ್ಬೀರ ನಗುತ್ತ.

'ಜುಜುಬಿ ಉಗುರು ಅಂತೀಯ, ಉಗುರಿಗೋಸ್ಕರ ಹುಲಿ ಕೊಂದ್ರ ಬಿಡ್ತಾರಾ?' ತೆಪರೇಸಿ ವಾದಿಸಿದ.

'ಲೇಯ್, ಸ್ವಾಮಿಗಳು, ಸಿನಿಮಾ ನಟರು ಹುಲಿ ಕೊಲ್ಲೋಕೋಗ್ತಾರಾ? ಯಾರೋ ಮಾರೋರತ್ರ ತಗಂಡಿರ್ತಾರಪ'.

'ಇಂಥೋರು ತಗೋತಾರೆ ಅಂತಾನೇ ಹುಲಿ ಕೊಲ್ಲೋರೂ ಇರ್ತಾರೆ, ಅದು ಗೊತ್ತಾ?'

'ಹೋಗ್ಲಿ ಬಿಡ್ರಪ, ಈಗ ಉಗುರಿಗೂ ಒಂದು ಕಾಲ. ನಾವು ಚಿಕ್ಕೋರಿದ್ದಾಗ ಕರಡಿ ಆಡ್ಸೋರತ್ರ ಕರಡಿ ಕೂದ್ಲು ಇಸ್ಕಂಡು ನಮ್ ಕೈಗೆ ಕಟ್ತಿದ್ರು, ಮಕ್ಕಳಿಗೆ ಹೆದ್ರಿಕಿ ಹೋಗ್ಲಿ ಅಂತ. ಅದೂ ತಪ್ಪಲ್ವಾ?' ಮಂಜಮ್ಮ ಕೇಳಿದಳು.

'ಅದೂ ತಪ್ಪೇ, ಕೂದ್ಲು ಕಿತ್ರೆ ಕರಡಿಗೆ ನೋವಾಗಲ್ವಾ? ಪ್ರಾಣಿಗಳ ಕೂದ್ಲು, ಚರ್ಮ, ಕೊಂಬು ಯಾವುದನ್ನೂ ಮುಟ್ಟಂಗಿಲ್ಲ'.

'ಅದಿರ್ಲಿ, ಈಗ ಈ ಹುಲಿ ಉಗುರು ಯಾಕೆ ಹಾಕ್ಕಾಬೇಕು? ಚರ್ಮದ ಮೇಲೆ ಯಾಕೆ ಕೂತ್ಕಾಬೇಕು? ಅದ್ರಿಂದ ಏನು ಪ್ರಯೋಜನ?' ಗುಡ್ಡೆ ಪ್ರಶ್ನೆ.

'ಧೈರ್ಯ ಬರ್ತತಿ ಕಣಲೆ. ನಾವೂ ಹುಲಿ, ಸಿಂಹ ಇದ್ದಂಗೆ ಅನ್ನೋ ಧೈರ್ಯ ಬರ್ತತಿ' ಕೊಟ್ರೇಶಿ ಉತ್ತರ.

'ಓ... ಹಂಗಾದ್ರೆ ನಿಮ್ಮಂಥ ನಾಯಿ, ನರಿಗಳೆಲ್ಲ ಹುಲಿ ಉಗುರು ಹಾಕ್ಕಂಬಿಟ್ರೆ ಹುಲಿ ಆಗಿಬಿಡ್ತೀರಾ?'

'ಲೇ... ನೀನು ನನ್ ಉಗುರಿಗೂ ಸಮ ಇಲ್ಲ, ನನ್ನ ನಾಯಿ, ನರಿ ಅಂತೀಯ?' ಕೊಟ್ರೇಶಿಗೆ ಸಿಟ್ಟು ಬಂತು.

'ಥೋ... ಸುಮ್ಕಿರ್ರಲೆ, ಈಗ ಹುಲಿ ಉಗುರು, ಚರ್ಮ ಇಟ್ಕಂಡೋರ್ನ ಜೈಲಿಗೆ ಹಾಕೋದಾದ್ರೆ ಮನೇಲೇ ಹುಲಿ ಇಟ್ಕಂಡೋರ್ನ ಯಾಕೆ ಜೈಲಿಗೆ ಹಾಕ್ಬಾರ್ದು?' ದುಬ್ಬೀರ ಕೇಳಿದ.

'ಈಗ ಹುಲೀನ ಯಾರು ಮನೇಲಿ ಇಟ್ಕಂಡಿರೋದು?'

'ಇನ್ಯಾರು ನಮ್ ತೆಪರೇಸಿ. ಅವ್ನ ಹೆಂಡ್ತಿ ಪಮ್ಮಿ ಯಾವ ಹುಲಿಗೆ ಕಮ್ಮಿ?'

ದುಬ್ಬೀರನ ಕೀಟಲೆಗೆ ತೆಪರೇಸಿಗೂ ನಗು ತಡೆಯಲಾಗಲಿಲ್ಲ.

ದಿನದ ಟ್ವೀಟ್

ನ್ಯಾಯ ಒದಗಿಸಿ



ನಮ್ಮ ನೌಕಾದಳದ 8 ಮಂದಿ ಮಾಜಿ ಅಧಿಕಾರಿಗಳಿಗೆ ಖತಾರ್ ಕೋರ್ಟ್ ಮರಣದಂಡನೆ ವಿಧಿಸಿದೆ. ಇದನ್ನು ಕೇಳಿ ಹತಾಶನಾಗಿದ್ದೇನೆ. ಅವರ ಮೇಲಿನ ಆರೋಪಗಳ ಬಗ್ಗೆ ನಮ್ಮ ವಿದೇಶಾಂಗ ಸಚಿವಾಲಯಕ್ಕೆ ಅರಿವಿದೆಯೇ? ಈ ಅಧಿಕಾರಿಗಳು ಹಾಗೂ ಅವರ ಕುಟುಂಬವರ್ಗದವರಿಗೆ ನ್ಯಾಯ ಒದಗಿಸಲು ನಮ್ಮ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ಎಂಬುದನ್ನು ದೇಶವು ಕುತೂಹಲದಿಂದ ಎದುರು ನೋಡುತ್ತಿದೆ.

ರಾಜೀವ್ ಶುಕ್ಲಾ, ರಾಜ್ಯಸಭಾ ಸದಸ್ಯ

ಕಿಡಿನುಡಿ



ಹುಲಿಯ ಗರ್ಜನೆಯು ಭಯಾನಕ ಶಬ್ದ ಹೊರಡಿಸುತ್ತದೆ ಎಂಬುದು ನಮಗೆಲ್ಲರಿಗೂ ತಿಳಿದಿರುವ ಸಂಗತಿ! ಹುಲಿಯ ಪಂಜ/ ಉಗುರು ಸಹ ಸದ್ದು ಮಾಡಬಲ್ಲದು ಎಂಬುದನ್ನು ನಾವು ಇತ್ತೀಚೆಗಷ್ಟೇ ಕಂಡುಕೊಂಡಿದ್ದೇವೆ!
#politics #Tiger #nails

ಸಚಿನ್, ಟೆಕ್ನಾಲಜಿ ಕನ್‌ಸಲ್ಟೆಂಟ್

25 ವರ್ಷಗಳ ಹಿಂದೆ

ಮಂಗಳವಾರ, 27-10-1998

• **ಅಧಿವೇಶನ ವಿವಾದ: ಪಟೇಲ್ ವಿವರಣೆಗೆ ವರಿಷ್ಠರ ಒಪ್ಪಿಗೆ**

ನವದೆಹಲಿ, ಅ. 26– ಉದ್ದೇಶಿತ ವಿಧಾನಮಂಡಲ ಅಧಿವೇಶನವನ್ನು ಮುಂದೂಡಲು ಸಾಧ್ಯವಾಗದಿರುವ ಬಗೆಗೆ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ನೀಡಿರುವ ಕಾರಣಗಳನ್ನು ಜನತಾದಳ ವರಿಷ್ಠರು ಒಪ್ಪಿದ್ದಾರೆ.

ಇದರಿಂದಾಗಿ, ಬಿಕ್ಕಟ್ಟಿಗೆ ಸಿಲುಕಿದ್ದ ಮುಖ್ಯಮಂತ್ರಿ ಪಟೇಲ್ ಅವರು ಈಗ ಸದ್ಯಕ್ಕೆ ದೆಹಲಿ ಒತ್ತಡದಿಂದಲೂ ಮುಕ್ತರಾದಂತಾಯಿತು. ಜನತಾದಳದ ಮಹಾ ಪ್ರಧಾನ ಕಾರ್ಯದರ್ಶಿ ಬಾಪೂ ಕಲ್ದಾತೆ ಪಕ್ಷದ ಈ ನಿರ್ಧಾರವನ್ನು ವರದಿಗಾರರಿಗೆ ತಿಳಿಸಿದರು.

ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು, ನಿನ್ನೆ ತಾವು ಕಳುಹಿಸಿದ್ದ ಫ್ಯಾಕ್ಸ್ ಸಂದೇಶಕ್ಕೆ ಉತ್ತರ ಬರೆದಿದ್ದು, ಈಗಾಗಲೇ ವಿಧಾನಸಭೆಯ ಅಧಿವೇಶನವನ್ನು ಕರೆದಿರುವುದರಿಂದ, ಅದನ್ನು ತಾಂತ್ರಿಕ ಮತ್ತು ಕಾನೂನಿಕ ಪ್ರಕಾರ ಮುಂದೂಡುವುದು ಕಷ್ಟವಾಗುತ್ತದೆ ಎಂದಿದ್ದಾರೆ ಎಂದು ಹೇಳಿದರು.

50 ವರ್ಷಗಳ ಹಿಂದೆ

ಶನಿವಾರ, 27-10-1973

• **ಪಶ್ಚಿಮ ಏಷ್ಯಾಕ್ಕೆ ವಿಶ್ವಸಂಸ್ಥೆ ತುರ್ತು ಪಡೆ ರವಾನೆ**

ವಿಶ್ವಸಂಸ್ಥೆ, ಅ. 26– ಮಧ್ಯಪ್ರಾಚ್ಯದ ಕದನ ವಿರಾಮ ಉಸ್ತುವಾರಿಗಾಗಿ ಸೈಪ್ರಸ್‌ನಿಂದ ಈಜಿಪ್ಟಿಗೆ ತಕ್ಷಣ ಹೊರಡಬೇಕೆಂದು ಆಸ್ಟ್ರಿಯ, ಫಿನ್ಲೆಂಡ್, ಸ್ವೀಡನ್‌ನಲ್ಲಿರುವ ವಿಶ್ವಸಂಸ್ಥೆ ಪಡೆಗಳಿಗೆ ಪ್ರಧಾನ ಕಾರ್ಯದರ್ಶಿ ವಾಲ್ಡ್ ಹೈಂ ಅವರು ಗುರುವಾರ ಆದೇಶಿಸಿದರು. ಅವು ಶುಕ್ರವಾರ ಹೊರಡುವ ಸಿದ್ಧತೆಯಲ್ಲಿದ್ದವು.

ಮಧ್ಯಪ್ರಾಚ್ಯದಲ್ಲಿ ವಿಶ್ವಸಂಸ್ಥೆ ತುರ್ತು ಸೇನೆಯನ್ನಿಡಬೇಕೆಂಬ ಭದ್ರತಾ ಸಮಿತಿಯ ನಿರ್ಣಯದ ಅನುಸಾರ ಮೊದಲ ತುಕಡಿಗಳನ್ನು ರವಾನೆ ಮಾಡಲು ನೀಡಿರುವ ಆದೇಶ ಇದಾಗಿದೆ.

ಮಧ್ಯಪ್ರಾಚ್ಯಕ್ಕೆ ರಷ್ಯಾವು ತನ್ನ ಪಡೆಗಳನ್ನು ಕಳುಹಿಸಬಹುದೆಂಬ ಶಂಕೆ ಮೇರೆಗೆ ಅಮೆರಿಕವು ಗುರುವಾರ ವಿಶ್ವದಾದ್ಯಂತ ವಿವಿಧ ನೆಲೆಗಳಲ್ಲಿರುವ ತನ್ನ ಪಡೆಗಳಿಗೆ ಸನ್ನದ್ಧವಾಗಲು ಕರೆ ನೀಡಿತು.

• **ಆಂಧ್ರ ಮತ್ತು ಉ.ಪ್ರ.ಗಳಲ್ಲಿ ಶೀಘ್ರವೇ ಜನತಾ ಸರ್ಕಾರ ರಚನೆ: ಉನ್ನತ ಮಟ್ಟದ ನಿರ್ಧಾರ**

ನವದೆಹಲಿ, ಅ. 26– ಉತ್ತರ ಪ್ರದೇಶ ಮತ್ತು ಆಂಧ್ರ ಪ್ರದೇಶಗಳಲ್ಲಿ ಸಾಧ್ಯವಾದಷ್ಟು ಬೇಗ ಜನತಾ ಸರ್ಕಾರಗಳನ್ನು ಮತ್ತೆ ಅಸ್ತಿತ್ವಕ್ಕೆ ತರಲು ಕೇಂದ್ರ ಸಂಪುಟದ ರಾಜಕೀಯ ವ್ಯವಹಾರಗಳ ಸಮಿತಿಯು ಇಂದು ಇಲ್ಲಿ ನಿರ್ಧರಿಸಿತು.

ಈ ಎರಡೂ ರಾಜ್ಯಗಳಲ್ಲಿ ಪರಿಸ್ಥಿತಿ ತಹಬಂದಿಗೆ ಬಂದು ಮಾಮೂಲಿನ ಸ್ಥಿತಿ ಉಂಟಾಗಿರುವುದನ್ನು ಸಮಿತಿಯು ತನ್ನ ಗಮನಕ್ಕೆ ತೆಗೆದುಕೊಂಡು ಈ ನಿರ್ಧಾರವನ್ನು ಕೈಗೊಂಡಿತು. ಮುಲ್ಕಿ ಚಳವಳಿಗಳಿಂದಾಗಿ ಆಂಧ್ರ ಪ್ರದೇಶದಲ್ಲೂ, ಸಶಸ್ತ್ರ ಪೊಲೀಸ್ ಪಡೆಯ ಬಂಡಾಯದಿಂದ ಉತ್ತರ ಪ್ರದೇಶದಲ್ಲೂ ಇತ್ತೀಚೆಗೆ ಭಾರಿ ಗಲಭೆಗಳಾಗಿದ್ದವು. ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರು ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಸಂಗತ

ಜಾಲತಾಣವೆಂಬ ಪ್ರಯೋಗಶಾಲೆ!

ಸಾಮಾಜಿಕ ಮಾಧ್ಯಮಗಳು ನಿಜಕ್ಕೂ ಸಾಮಾಜಿಕ ಕೌಶಲಗಳನ್ನು ವೃದ್ಧಿಸುತ್ತಿವೆಯೇ?

• ಡಾ. ಕೆ.ಎಸ್.ಪವಿತ್ರ

ಫೇಸ್‌ಬುಕ್, ಇನ್‌ಸ್ಟಾಗ್ರಾಂ ಒಡೆತನ ಹೊಂದಿರುವ ಕಂಪನಿ 'ಮೆಟಾ'ದ ಮೇಲೆ ಅಮೆರಿಕದ 33 ರಾಜ್ಯಗಳು ಕ್ಯಾಲಿಫೋರ್ನಿಯಾದ ಫೆಡರಲ್ ನ್ಯಾಯಾಲಯದಲ್ಲಿ ದಾವೆ ಹೂಡಿವೆ. ಸಾಮಾಜಿಕ ಮಾಧ್ಯಮಗಳು ಮಕ್ಕಳ ಮಾನಸಿಕ ಆರೋಗ್ಯವನ್ನು ಹಾಳುಗೆಡವುತ್ತವೆ ಎಂಬ ಕೂಗು ಹಲವು ವರ್ಷಗಳಿಂದ ಕೇಳುತ್ತಲೇ ಬಂದಿದೆ. ಆದರೆ ಈಗ ನ್ಯಾಯಾಲಯದ ಮೆಟ್ಟಿಲು ಹತ್ತಿರುವ ರಾಜ್ಯಗಳು ಹೇಳಿರುವ ಮಾತು 'ಮೆಟಾ ಕಂಪನಿಯು ಮಕ್ಕಳು ಮತ್ತು ಯುವಜನರನ್ನು ತನ್ನೆಡೆ ಸೆಳೆಯಲು, ತನಗೇ ಅಂಟಿಕೊಳ್ಳುವಂತೆ ಮಾಡಲು ಪ್ರಬಲ ತಂತ್ರಜ್ಞಾನವನ್ನು ಬಳಸುತ್ತಿದೆ. ಅದರ ಉದ್ದೇಶ ಬರೀ ಲಾಭ ಮಾಡುವುದು'.

ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿರುವ ಹದಿಹರೆಯದ ಮಕ್ಕಳನ್ನು ಪ್ರತಿನಿತ್ಯ ನೋಡುವ ನನಗೆ, ಇಡೀ ಸಮಾಜದ ಹತಾಶೆಯ ಕ್ರಮವಾಗಿ ಈ ಪ್ರತಿಕ್ರಿಯೆ ತೋರುತ್ತದೆ. ಜಗತ್ತಿನಾದ್ಯಂತ ಮಕ್ಕಳು ಮತ್ತು ಹದಿಹರೆಯದವರಲ್ಲಿ ಆತಂಕ, ಭಾವನಾತ್ಮಕ ಸಮಸ್ಯೆಗಳು ಏರುಗತಿಯಲ್ಲಿವೆ. ವೈದ್ಯರೂ ಸೇರಿದಂತೆ ಸಮಾಜದ ಯಾರಿಗೂ ಏನು ಮಾಡಬೇಕೆಂಬುದೇ ತೋಚುತ್ತಿಲ್ಲ. 'ಮಕ್ಕಳಿಗೆ ಮೊಬೈಲ್ ಏಕೆ ಕೊಟ್ಟಿರಿ' ಎಂಬ ಪ್ರಶ್ನೆಗೆ ಸಿಗುವ ಉತ್ತರ, ತಾವೂ ಸದಾ 'ತೆರೆ'ಗಳಲ್ಲಿಯೇ ಮುಳುಗಿರುವ ಅಪ್ಪ-ಅಮ್ಮಂದಿರ ಪೆಚ್ಚು ಮುಖವೊಂದೇ.

ಸಂವಹನದ ರೀತಿಯೂ ಅಗಾಧ ಎನ್ನುವಂತೆ ಬದಲಾಗಿಬಿಟ್ಟಿದೆ. ವ್ಯವಹಾರದ ಮಂದಿ, ಯಾವ ಸಂವಹನ ಮಾಧ್ಯಮವನ್ನು ಜನ ಎಷ್ಟು ಅವಲಂಬಿಸಿದ್ದಾರೆ ಎಂಬುದನ್ನು ನೋಡಿ, ಮತ್ತಷ್ಟು ಲಾಭಕ್ಕಾಗಿ ಅದನ್ನು ಬಳಸಿಕೊಳ್ಳುವುದು ಸಹಜವಷ್ಟೆ. 'ಎಫ್‌ಬಿ'ಗೆ ಹೋಲಿಸಿದರೆ, ಬೇಡದವರನ್ನು ಫಿಲ್ಟರ್ ಮಾಡುವುದು ಸುಲಭ ಎಂಬ ಕಾರಣಕ್ಕೆ ಯುವಜನರಲ್ಲಿ ಇನ್‌ಸ್ಟಾ ಇಂದು ಜನಪ್ರಿಯ. ಇದನ್ನು ಮನಗಂಡಿರುವ ಮೆಟಾದಂತಹ ಕಂಪನಿಗಳು ಅದಕ್ಕೆ ಪೂರಕವಾಗಿ ತಂತ್ರಜ್ಞಾನವನ್ನು ಮತ್ತಷ್ಟು ಬಲಪಡಿಸುತ್ತಲೇ ಇವೆ. ಈ ತಂತ್ರಜ್ಞಾನ ಎಷ್ಟು ಬಲಶಾಲಿ ಎಂದು ಪರೀಕ್ಷಿಸಲು ಯುವಜನರ ಮನಸ್ಸೇ ಪ್ರಯೋಗಶಾಲೆ!

ಎಫ್‌ಬಿ ಮತ್ತು ಇನ್‌ಸ್ಟಾದಂತಹವುಗಳನ್ನು ನಾವು ಸಾಮಾಜಿಕ ಮಾಧ್ಯಮಗಳು (ಸೋಷಿಯಲ್ ಮೀಡಿಯಾ) ಎನ್ನುತ್ತೇವಷ್ಟೆ. ಆದರೆ ಇವು ನಿಜವಾಗಿ ಸಾಮಾಜಿಕ ಕೌಶಲಗಳನ್ನು ವೃದ್ಧಿಪಡಿಸುತ್ತಿವೆಯೇ? ಸಾಮಾಜಿಕ ಮಾಧ್ಯಮಗಳ ಬಳಕೆಯಿಂದ ಸಾಮಾಜಿಕ ಕೌಶಲಗಳ ವೃದ್ಧಿಯ ಬದಲು ಸುಳ್ಳು ಹೇಳುವುದು, ಜವಾಬ್ದಾರಿಯಿಲ್ಲದೆ ಮಾಹಿತಿ ಹರಡುವುದು, ಇತರರನ್ನು ಮಾತನಾಡಿಸಲು ಬೇಕಾಗುವ ಮಾತು–ಕಣ್ನೋಟ–ಅಶಾಬ್ದಿಕ ಸಂವಹನ ಇಲ್ಲವಾಗುವಂತಹ ಪರಿಸ್ಥಿತಿ ಇದೆ ಎಂಬುದನ್ನು ಅಧ್ಯಯನಗಳು ತೋರಿಸಿವೆ.

ಹದಿಹರೆಯದ ಮಕ್ಕಳು ಸಾಮಾಜಿಕ ಮಾಧ್ಯಮವನ್ನು ಮೇಲ್ವಿಚಾರಣೆಯೇ ಇಲ್ಲದೆ ಬಳಸುವುದನ್ನು ಮನೋವೈದ್ಯಕೀಯ ಕ್ಷೇತ್ರವು 'ಸಾಮೂಹಿಕ ನಾಶದ ಆಯುಧ' ಎಂದೇ ಗುರುತಿಸುತ್ತದೆ. ಮೇಲ್ನೋಟಕ್ಕೆ ಇದು ಉತ್ಪ್ರೇಕ್ಷೆ ಅನ್ನಿಸಬಹುದಾದರೂ ಹದಿಹರೆಯದವರಲ್ಲಿ ಏರುತ್ತಿರುವ ಆತ್ಮಹತ್ಯೆಯ ಪ್ರಮಾಣದಲ್ಲಿ ಸಾಮಾಜಿಕ ಮಾಧ್ಯಮಗಳು ಪ್ರಮುಖ ಪಾತ್ರ ವಹಿಸುತ್ತಿರುವುದನ್ನು ನೋಡಿದರೆ, ಈ ಸಮಸ್ಯೆಯ ತೀವ್ರತೆಯ ಅರಿವು ನಮಗೆ ಆಗುತ್ತದೆ. ಜಗತ್ತಿನ ವಿವಿಧ ವಿಶ್ವವಿದ್ಯಾಲಯಗಳ ಅಧ್ಯಯನಗಳು, ಸಾಮಾಜಿಕ ಮಾಧ್ಯಮವು ಯುವಜನರಲ್ಲಿ ಇಂದು ಮುಖ್ಯವಾದ ಸಂವಹನ ವಿಧಾನವಾಗಿದೆ ಎಂಬುದನ್ನು ದೃಢಪಡಿಸಿವೆ.

ಈ ವರ್ಷದ ಮೇ ತಿಂಗಳಿನಲ್ಲಿ 'ಸಾಮಾಜಿಕ ಮಾಧ್ಯಮಗಳು ಮತ್ತು ಯುವಜನರ ಮಾನಸಿಕ ಆರೋಗ್ಯ' ಎಂಬ ಹೆಸರಿನಲ್ಲಿ ಅಮೆರಿಕದ ಸರ್ಜನ್ ಜನರಲ್ ಅವರು ಅಡ್ವೈಸರಿಯನ್ನು ಬಿಡುಗಡೆ ಮಾಡಿದ್ದಾರೆ. ಅಂತರ್ಜಾಲದಲ್ಲಿ ಸುಲಭವಾಗಿ ಲಭ್ಯವಿರುವ 25 ಪುಟಗಳ ಈ ದಾಖಲೆ, ಸಾಮಾಜಿಕ ಮಾಧ್ಯಮ ಎಂಬ ಸಂವಹನ ವಿಧಾನದ ಸಾಧಕ- ಬಾಧಕಗಳನ್ನು ವಿವರವಾಗಿ ಪರಿಶೀಲಿಸಿದೆ. ಇದರಲ್ಲಿ ಕೆಲವು ಗಮನಾರ್ಹ ಅಂಶಗಳಿವೆ. ವಿಶೇಷವಾಗಿ ಹೆಣ್ಣು ಮಕ್ಕಳಲ್ಲಿ ಆಹಾರ ಕ್ರಮ, ದೇಹದ ಪರಿಕಲ್ಪನೆ, ಆತ್ಮವಿಶ್ವಾಸಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಸಾಮಾಜಿಕ ಮಾಧ್ಯಮಗಳು ಇನ್ನಷ್ಟು ಹೆಚ್ಚಿಸುತ್ತವೆ. ದ್ವೇಷವನ್ನೂ ನಕಾರಾತ್ಮಕ ಭಾವನೆಗಳನ್ನೂ ಅವು ಹೆಚ್ಚು 'ನಿಜ' ಎಂಬಂತೆ, ಯಾವ ನಿರ್ಬಂಧವೂ ಇಲ್ಲದೆ ಮಕ್ಕಳಿಗೆ ತೋರಿಸಬಲ್ಲವು. ಇದು ಮಕ್ಕಳನ್ನು ಸಂವೇದನಾರಹಿತರನ್ನಾಗಿ ಮಾಡುತ್ತದೆ.



ಸಾಮಾಜಿಕ ಮಾಧ್ಯಮ ಎಂಬ ಸಂವಹನವನ್ನು ಯುವಜನರು ಸಂಯಮದಿಂದ, ಮಿತಿಯಿಂದ, ಸ್ವಯಂ ನಿಯಂತ್ರಣ ಸಾಧಿಸಿ ಬಳಸಬೇಕಾದದ್ದು ಅತ್ಯಗತ್ಯ. ಈ ಹೊತ್ತಿನ ಫಜೀತಿ ಏನೆಂದರೆ, ಈ ಎಲ್ಲಾ ಅಧ್ಯಯನಗಳನ್ನು ಗಮನಿಸಿ ಬರೆದ ಬರಹವೂ ಕಾಗದದ ಮೇಲೆ ಪ್ರಕಟವಾದರೆ, ಅದು 'ಟಾರ್ಗೆಟ್ ಗುಂಪನ್ನು' ತಲುಪುವ ಸಾಧ್ಯತೆಯೇ ಇಲ್ಲ! ಅದನ್ನು ಮತ್ತೆ ನಾವು ಎಫ್‌ಬಿ-ಇನ್‌ಸ್ಟಾ ಮೂಲಕವೇ ತಲುಪಲೇಬೇಕಾದ ಯುವಜನರಿಗೆ ಮುಟ್ಟಿಸಬೇಕು!

ಶಾಲೆಯೊಂದು 7ನೇ ತರಗತಿಯ ಮಕ್ಕಳ ಸ್ಕೂಲ್‌ಬ್ಯಾಗ್‌ಗಳನ್ನು ಇತ್ತೀಚೆಗೆ ತಪಾಸಣೆಗೆ ಒಳಪಡಿಸಿತು. ಚಾಕೊಲೇಟು ಹುಡುಕಲಲ್ಲ! ಮೊಬೈಲ್ ಇದೆಯೇ, ಅದರಲ್ಲಿ ಇನ್‌ಸ್ಟಾ ಅಕೌಂಟ್ ಇದೆಯೇ ಎಂಬುದನ್ನು ಪರೀಕ್ಷಿಸಲು! ಈ ಪರಿಸ್ಥಿತಿಯಲ್ಲಿ ಅರಿವು ಮೂಡಿಸುವುದೊಂದೇ ಮಾರ್ಗ. ಅಮೆರಿಕದ ರಾಜ್ಯಗಳು ಹೂಡಿರುವ ದಾವೆ ನಾವು ಎಚ್ಚೆತ್ತುಕೊಳ್ಳಲು ಒಂದು ಸ್ಫೂರ್ತಿಯಾಗಬೇಕು.

ಲೇಖಕಿ: ಮನೋವೈದ್ಯೆ

ವಾಚಕರ ವಾಣಿ

ಅಬ್ಬರದ ಸಂಗೀತ: ಇರಲಿ ಎಚ್ಚರ

ಮನಸ್ಸಿಗೆ ಉಲ್ಲಾಸ ನೀಡುವ ಸಂಗೀತ ಕೇಳಿದರೆ ಹಲವಾರು ಕಾಯಿಲೆಗಳು ವಾಸಿಯಾಗುತ್ತವೆ ಎಂಬ ನಂಬಿಕೆ ಇದೆ. ಆದರೆ ಅದೇ ಈಗ ಅಬ್ಬರದ ಸಂಗೀತವು ಜೀವಿಗಳ ಸಾವಿಗೆ ಕಾರಣವಾಗುತ್ತಿದೆ ಎಂಬ ಮಾತು ಕೇಳಿಬಂದಿರುವುದು ಎಂತಹ ವಿಪರ್ಯಾಸ! ಅದರಲ್ಲೂ ಇಂದಿನ ಯುವಜನಾಂಗದ ಡಿ.ಜೆ. ಹುಚ್ಚು ನೋಡಿ ಸಂಕಟವಾಗುತ್ತದೆ. 'ಅತಿಯಾದರೆ ಅಮೃತವೂ ವಿಷವಾಗುತ್ತದೆ' ಎಂಬ ಗಾದೆ ನೆನಪಾಗುತ್ತದೆ. ರಾಣೆಬೆನ್ನೂರಿನಲ್ಲಿ ಇತ್ತೀಚೆಗೆ ಗಣೇಶ ವಿಸರ್ಜನೆ ಸಂದರ್ಭದಲ್ಲಿ ನಡೆದ ಡಿ.ಜೆ. ಅಬ್ಬರದಲ್ಲಿ ನಗರದ ಮತ್ತು ಸುತ್ತಮುತ್ತಲಿನ ಯುವಜನರು ಕುಣಿದಾಡಿದ್ದು ನೋಡಿ ಬಹಳ ಬೇಸರವಾಯಿತು.

ಡಿ.ಜೆ.ಯಿಂದ ಪ್ರಾಣಿ, ಪಕ್ಷಿಗಳಿಗೆ ಆಗುವ ತೊಂದರೆಯ ಬಗ್ಗೆ ಯಾರೂ ಯೋಚಿಸುವುದಿಲ್ಲ. ಈಗಾಗಲೇ ಮೊಬೈಲ್ ಮತ್ತು ಮೊಬೈಲ್ ಟವರ್‌ಗಳು ಪಕ್ಷಿಗಳ ಮೇಲೆ ದುಷ್ಪರಿಣಾಮ ಉಂಟುಮಾಡುತ್ತಿವೆ. ನನ್ನ ಗೆಳೆಯರೊಬ್ಬರು ಇತ್ತೀಚೆಗೆ ಮದುವೆಯ ಮೆಹಂದಿ ಕಾರ್ಯಕ್ರಮಕ್ಕೆ ಹೋದಾಗ, ಅಲ್ಲಿನ ಅಬ್ಬರದ ಸಂಗೀತ ಕಾರ್ಯಕ್ರಮದಿಂದ ಬೇಸತ್ತು, ಯುವಜನರ ಬೆದರಿಕೆಗೂ ಜಗ್ಗದೆ ಸಂಗೀತದ ಅಬ್ಬರ ಕಡಿಮೆ ಮಾಡಿಸುವಲ್ಲಿ ಯಶಸ್ವಿಯಾದರು. ಯುವಜನರಿಗೆ ತಿಳಿಹೇಳುವ ಕೆಲಸ ಮಾಡುವುದೊಂದೇ ಪರಿಹಾರ.

ಪಿ.ಎಚ್.ಪಾಟೀಲ್, ರಾಣೆಬೆನ್ನೂರು

ಅಶಿಸ್ತಿನ ದಸರಾ: ಬೀಳಲಿ ಕಡಿವಾಣ

ಮೈಸೂರಿನ ಕೊನೆಯ ಅರಸರಾದ ಜಯಚಾಮರಾಜ ಒಡೆಯರ್ ಅವರು ಅಂಬಾರಿಯಲ್ಲಿ ಕುಳಿತುಕೊಂಡಿದ್ದ ಕೊನೆಯ ದಸರಾ ಉತ್ಸವವನ್ನು ನೋಡಿದ್ದೇನೆ. ದಸರಾ ಉತ್ಸವಕ್ಕೆ ಸಂಬಂಧಿಸಿದಂತೆ ಅಂದಿಗೂ ಇಂದಿಗೂ ಬಹಳಷ್ಟು ವ್ಯತ್ಯಾಸವಿದೆ. ಅಂದಿನದು ಶಿಸ್ತಿನ ದಸರಾ ಆಗಿತ್ತು. ಹಳ್ಳಿಯ ಮಂದಿ ದಸರಾ ಉತ್ಸವದ ದಿನವನ್ನು 'ಪೌಜು' ಎಂದು ಕರೆಯುತ್ತಿದ್ದರು. ಪೌಜು ಎಂದರೆ ಸೇನೆ, ಸೇನೆ ಶಿಸ್ತಿಗೆ ಹೆಸರುವಾಸಿ. ಅಂದು ಮೈಸೂರು ಮಹಾರಾಜರು ಅಂಬಾರಿಯಲ್ಲಿ ಕುಳಿತು ಸಾಗುವ ಮುನ್ನ ಪಥಸಂಚಲನದಲ್ಲಿ ಸೈನಿಕರು 'ಶಿಸ್ತಿನ ಸಿಪಾಯಿ' ಎಂಬ ಹೆಸರಿಗೆ ತಕ್ಕಂತೆ ನಡೆದುಕೊಂಡು ಹೋಗುತ್ತಿದ್ದರು. ಪಥಸಂಚಲನದ ಮಾರ್ಗದಲ್ಲಿ ಸಾರ್ವಜನಿಕರಿಗೆ ಪ್ರವೇಶವಿರಲಿಲ್ಲ. ಮಹಾರಾಜರು ಕುಳಿತ ಅಂಬಾರಿ ಹೊತ್ತ ಆನೆಯ ಪಾದಗಳನ್ನು ನೋಡುವ ಅವಕಾಶ ಇತ್ತು. ಅಂದರೆ ಅಂಬಾರಿ ಹೊತ್ತ ಆನೆಯ ಸುತ್ತ ಜನ ಇರಲು ಅವಕಾಶವಿರಲಿಲ್ಲ. ಪಥಸಂಚಲನದ ಮಾರ್ಗದಲ್ಲಿ ಸಮವಸ್ತ್ರ ಧರಿಸಿದವರು ಮಾತ್ರ ಇರುತ್ತಿದ್ದರು. 'ಮೈಸೂರು ದಸರಾ ಎಷ್ಟೊಂದು ಸುಂದರ' ಎಂಬ ಸಿನಿಮಾ ಗೀತೆ ರಚನೆಗೆ ಅಂದಿನ ದಸರಾ ಪ್ರೇರಣೆಯಾಗಿತ್ತು.

ಈಗಿನ ದಸರಾ ಉತ್ಸವದ ಅಂಬಾರಿಯಲ್ಲಿ ಚಾಮುಂಡೇಶ್ವರಿ ಪ್ರತಿಮೆ ಇರುತ್ತದೆ. ಅಂಬಾರಿ ಹೊತ್ತ ಆನೆಯ ಸುತ್ತಮುತ್ತ ಜನರನ್ನು ನೋಡಿದಾಗ, ದೇವರ ರಥೋತ್ಸವಕ್ಕೂ ಇದಕ್ಕೂ ವ್ಯತ್ಯಾಸ ಕಾಣುವುದಿಲ್ಲ. ಅಂಬಾರಿಯಲ್ಲಿ ಚಾಮುಂಡೇಶ್ವರಿ ದೇವಿ ಇದ್ದ ಮಾತ್ರಕ್ಕೆ ಅದು ಜಾತ್ರೆಯಂತೆ ನಡೆಯಬೇಕಾಗಿಲ್ಲ. ದಸರಾ ಇತಿಹಾಸ ಪ್ರಸಿದ್ಧ ಪರಂಪರೆಗೆ ಧಕ್ಕೆಯಾಗದಂತೆ ಅದರ ಶಿಸ್ತು ಕಾಪಾಡುವ ಹೊಣೆ ಸರ್ಕಾರದ್ದು. ದಸರಾ ಉತ್ಸವದ ಪಥಸಂಚಲನದ ಮಾರ್ಗದಲ್ಲಿ ಸಮವಸ್ತ್ರಧಾರಿ ಸೇವಕರನ್ನು ಹೊರತುಪಡಿಸಿ ಸಾರ್ವಜನಿಕರು, ಛಾಯಾಚಿತ್ರಗಾರರಿಗೆ ಅವಕಾಶ ನೀಡದೆ, ಶಿಸ್ತುಬದ್ಧ ದಸರಾ ಉತ್ಸವಕ್ಕೆ ಕ್ರಮ ಕೈಗೊಳ್ಳಲಿ. ಛಾಯಾಚಿತ್ರ, ವಿಡಿಯೊ ಚಿತ್ರೀಕರಣಕ್ಕೆ ಪರ್ಯಾಯ ವ್ಯವಸ್ಥೆ ಮಾಡುವ ಮೂಲಕ ಅಶಿಸ್ತಿನ ದಸರಾ ಉತ್ಸವಕ್ಕೆ ಕಡಿವಾಣ ಹಾಕಲಿ.

ಸಿ.ಸಿದ್ದರಾಜು ಆಲಕೆರೆ, ಮಂಡ್ಯ

ಕಾರಣ?!

ಅಬ್ಬಾ, ಆ ಜನಸಾಗರದ
ನಡುವೆ ಸಾಗಿತು
ಅದ್ದೂರಿ ಜಂಬೂ ಸವಾರಿ...
750 ಕೆ.ಜಿ. ತೂಕದ ಅಂಬಾರಿ
ಹೊತ್ತ ಅಭಿಮನ್ಯು
ನಾಲ್ಕನೇ ಬಾರಿ,
ಎಲ್ಲೂ ಮಾಡಲಿಲ್ಲ ಕಿರಿಕಿರಿ
ಏನಿರಬಹುದು ಕಾರಣ?!
ಜೊತೆ ಜೊತೆಗೇ ಇದ್ದರು
ಈರ್ವರು ಅಕ್ಕಪಕ್ಕ
ಕಪ್ಪು ಸುಂದರಿಯರು
ವಿಜಯ- ವರಲಕ್ಷ್ಮಿ!

ಮ.ಗು.ಬಸವಣ್ಣ
ನಂಜನಗೂಡು

ತನಿಖಾ ವಿಧಾನದಲ್ಲಿ ತಾರತಮ್ಯ ಏಕೆ?

ಹುಲಿ ಉಗುರಿಗೆ ಸಂಬಂಧಿಸಿದ ವಿಷಯ ಈಗ ನಾಡಿನಾದ್ಯಂತ ಸುದ್ದಿ ಮಾಡುತ್ತಿದೆ. ಹುಲಿ ಉಗುರಿನ ಲೋಲಕವನ್ನು ಧರಿಸಿದ್ದಕ್ಕೆ ಒಬ್ಬ ವ್ಯಕ್ತಿಯನ್ನು ಬಂಧಿಸಿ ಜೈಲಿಗಟ್ಟಲಾಗಿದೆ. ಈ ಬಂಧನಕ್ಕೆ ವಿಡಿಯೊ ಹೇಳಿಕೆ ಆಧಾರ ಎನ್ನಲಾಗಿದೆ. ಅದೇ ತೆರನಾಗಿ ನಾಡಿನ ಖ್ಯಾತನಾಮರು ಹುಲಿ ಉಗುರಿನ ಲೋಲಕದ ಬಗ್ಗೆ ಹಿಂದೆ ಹೆಮ್ಮೆಯಿಂದ ಹೇಳಿಕೊಂಡಿದ್ದ ವಿಡಿಯೊ ದೃಶ್ಯಗಳು ಲಭ್ಯವಿದ್ದರೂ ಅವರ ಬಂಧನವಾಗಿಲ್ಲ. ಏಕೆಂದರೆ ಅದು ಎಷ್ಟು ವರ್ಷ ಹಳೆಯದು ಎಂಬುದನ್ನು ಖಾತರಿಪಡಿಸಿಕೊಳ್ಳಬೇಕಂತೆ!

ಕಾಶ್ಮೀರಕ್ಕೆ ಹೋದ ಹಲವರು ಸುವಾಸನೆಭರಿತ ಕಾಗದದ ಚೂರುಗಳನ್ನೇ 'ಕೇಸರಿ' ಎಂದು ಖರೀದಿಸಿ ಮೋಸಹೋದ ಹಲವು ಉದಾಹರಣೆಗಳಿವೆ. ಹಾಗೆಯೇ ನೇಪಾಳ, ಉತ್ತರಾಖಂಡ ಪ್ರವಾಸಕ್ಕೆ ಹೋದವರು ಪ್ಲಾಸ್ಟಿಕ್ ಏಕಮುಖಿ ರುದ್ರಾಕ್ಷಿ ಖರೀದಿಸಿ, ಕೊರಳಲ್ಲಿ ಧರಿಸಿದ್ದೂ ಉಂಟು! ಮಾರಾಟಗಾರ ಹೇಳಿದ್ದನ್ನೇ ನಂಬಿ ನೂರಾರು ಜನರು ಹಲವಾರು ವಸ್ತುಗಳನ್ನು ಖರೀದಿಸುತ್ತಾರೆ. ಖ್ಯಾತನಾಮರ ಬಳಿ ಇರುವುದು ಹುಲಿ ಉಗುರು ಎಂಬುದನ್ನು ಖಚಿತಪಡಿಸಿಕೊಳ್ಳಲು ನೋಟಿಸ್, ಪರಿಶೀಲನೆ, ತನಿಖೆ ಎಂದೆಲ್ಲ ಸಮಯ ಕಳೆಯುವ ಅಧಿಕಾರಿಗಳು, ಮೊದಲ ಆರೋಪಿಗೆ ಯಾವುದಕ್ಕೂ ಅವಕಾಶ ನೀಡದೆ ಬಂಧಿಸಿದ್ದು ಎಷ್ಟು ಸರಿ?

ಈ ಹಿಂದೆ ಅಕ್ರಮ ಕಟ್ಟಡಗಳನ್ನು ಕೆಡವಿದಾಗ, ರಾಜಕಾಲುವೆಯ ಒತ್ತುವರಿ ತೆರವುಗೊಳಿಸಿದಾಗ ಕೂಡ ಅಧಿಕಾರಿಗಳು ಇಂಥದ್ದೇ ಜಾಣಕುರುಡು ಆಟವಾಡಿದ್ದರು. ಬಡಪಾಯಿಗಳ ಮನೆಗಳನ್ನು ಜೆಸಿಬಿ ಯಂತ್ರ ಬಳಸಿ ಹೊಸಕಿ ಹಾಕಿದ್ದರು, ದೊಡ್ಡವರ ಮನೆಗಳ ಹತ್ತಿರವೇ ಸುಳಿಯದೆ ಸಹಕರಿಸಿದ್ದರು! ಕಾನೂನು ಎಲ್ಲರಿಗೂ ಒಂದೇ ಎಂಬುದು ಕ್ಲೀಷೆಯ ಮಾತಾಗಬಾರದು. ವನ್ಯಸಂಪತ್ತಿನ ರಕ್ಷಣೆ ದೊಡ್ಡವರು, ಸಣ್ಣವರ ಸ್ಥಾನಮಾನ ನೋಡಿ ನಿರ್ಣಯವಾಗಬಾರದು. ಪಾರದರ್ಶಕತೆ ಪಾಲಿಸಿದರೆ ಜನಸಾಮಾನ್ಯರಿಗೂ ನಿಯಮಗಳ ಬಗ್ಗೆ ಗೌರವ, ವಿಶ್ವಾಸ ಮೂಡುತ್ತದೆ.

ಚನ್ನು ಹಿರೇಮಠ, ರಾಣೆಬೆನ್ನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಚಂಡವ್ಯಾಘ್ರನ ದಿಗಿಲು ದುಮ್ಮಾನ



• ಕೆ.ಎಚ್. ಓಬಳೇಶ್

ಭಾರತದ ಕಾಲ್ಪನಿಕ ಕಥನಗಳಲ್ಲಿ ಹುಲಿಗೆ ದೈವತ್ವದ ಸ್ಥಾನ ನೀಡಲಾಗಿದೆ. ಹುಲಿಯು ಧೈರ್ಯ, ಶಕ್ತಿ ಹಾಗೂ ಪರಾಕ್ರಮದ ಸಂಕೇತವೂ ಆಗಿದೆ. ಹಾಗಾಗಿಯೇ ದೇಸಿ ಕಲೆ, ಜನಪದ ಕಥೆಗಳಲ್ಲಿ ಅದು ಪದೇ ಪದೇ ಕಾಣಿಕೊಳ್ಳುತ್ತದೆ.

ಅರಣ್ಯದ ಕಗ್ಗತ್ತಲಿನಲ್ಲಿ ನಿಶ್ಯಬ್ದವಾಗಿ ನೆರಳಿನಂತೆ ಚಲಿಸುವ ಅದರ ಬಗ್ಗೆ ಎಲ್ಲರಲ್ಲೂ ಆಕರ್ಷಣೆ ಮೂಡುವುದು ಸಹಜ. ಆದರೆ, ಚೀನಾ ಸೇರಿದಂತೆ ಹಲವು ದೇಶಗಳ ಜನರಲ್ಲಿ ಅದರ ಅವಯವಗಳು ಸರ್ವರೋಗ ನಿವಾರಕ ಶಕ್ತಿ ಹೊಂದಿವೆ ಎಂಬ ಮೌಢ್ಯ ಬೇರೂರಿದೆ. ಮೋಜು, ವರ್ಣಮಯ ಚರ್ಮ, ಗೃಹಾಲಂಕಾರಿಕ ವಸ್ತುಗಳು ಹಾಗೂ ಔಷಧ ತಯಾರಿಕೆ ಸೇರಿದಂತೆ ಕಾಮೋದ್ದೀಪನ ಮದ್ದಿಗಾಗಿ ಅವುಗಳ ಬೇಟೆ ಅವ್ಯಾಹತವಾಗಿದೆ. ಮಾನವನ ಅತಿಯಾಸೆಯು ಅವುಗಳ ಬದುಕನ್ನು ಅಡಕತ್ತರಿಗೆ ಸಿಲುಕಿಸಿರುವುದು ಸತ್ಯ.

10 ತಿಂಗಳಲ್ಲಿ 151 ಹುಲಿ ಸಾವು

ವನ್ಯಜೀವಿ ಪ್ರವಾಸೋದ್ಯಮದ ಪರಿಕಲ್ಪನೆ ಬಲಗೊಂಡ ಬಳಿಕ ಭಾರತದಲ್ಲಿ ಹುಲಿಗಳು ಪ್ರವಾಸಿಗರ ಆಕರ್ಷಣೆಯ ಕೇಂದ್ರಬಿಂದುವಾಗಿವೆ. ಮತ್ತೊಂದೆಡೆ ಅಷ್ಟೇ ವೇಗದಲ್ಲಿ ವನ್ಯಜೀವಿ ವ್ಯಾಪಾರಕ್ಕಾಗಿ ಅವು ಬಲಿಯಾಗುತ್ತಿರುವುದು ವಿಪರ್ಯಾಸ.

ದೇಶದಲ್ಲಿ 2022ರ ಗಣತಿ ಅನ್ವಯ ಒಟ್ಟು 3,682 ಹುಲಿಗಳಿವೆ. ಪ್ರಸಕ್ತ ವರ್ಷದ ಜನವರಿಯಿಂದ ಅಕ್ಟೋಬರ್‌ವರೆಗೆ 151 ಹುಲಿಗಳು ಮೃತಪಟ್ಟಿವೆ. ಈ ಅಂಕಿ–ಅಂಶಗಳು ಭಾರತದಲ್ಲಿ ಸಂರಕ್ಷಣಾ ವೈಫಲ್ಯದತ್ತ ಬೊಟ್ಟು ಮಾಡುತ್ತವೆ. ದೇಶದಲ್ಲಿ ಬೇಟೆಯನ್ನೇ ವೃತ್ತಿಯಾಗಿಸಿಕೊಂಡಿರುವ ಬುಡಕಟ್ಟು ಸಮುದಾಯಗಳನ್ನು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಗುರುತಿಸಿದೆ. ಉತ್ತರ ಭಾರತದಲ್ಲಿರುವ ಬೆಹೆಲಿಯಾಸ್, ಬವಾರಿಯಾ, ಅಂಬಲ್‌ಗರ್ಸ್, ಬಡಾಕ್ಸ್, ಮೊಂಗಿಯಾಸ್, ಪಾರ್ಧಿ, ಬೋಯಾಸ್, ಕರ್ವಾಲ್ ನಾಟ್ ಪಂಗಡಗಳು ಈ ಪಟ್ಟಿಯಲ್ಲಿವೆ. ಹುಲಿ ಯೋಜನೆಯ ಪರಿಷ್ಕೃತ ಮಾರ್ಗಸೂಚಿಯ 4.5ನೇ ಸೆಕ್ಷನ್‌ನಲ್ಲಿ ಈ ಬುಡಕಟ್ಟು ಸಮುದಾಯಗಳನ್ನು ಗುರುತಿಸಲಾಗಿದೆ.



ಹುಲಿ ಮೂಳೆ

ವನ್ಯಜೀವಿ ವ್ಯಾಪಾರಿಗಳು ಹುಲಿ, ಆನೆ, ಚಿರತೆ ಸೇರಿದಂತೆ ಕಾಡುಪ್ರಾಣಿಗಳ ಹತ್ಯೆಗೆ ಇವರನ್ನು ದಾಳವಾಗಿ ಬಳಸಿಕೊಳ್ಳುತ್ತಾರೆ. 2012ರಲ್ಲಿ ಹರಿಯಾಣದ ಬವಾರಿಯಾ ಸಮುದಾಯದವರು ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನಬೆಟ್ಟ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಜಾಟ್ರಾಪ್ ಬಳಸಿ ಹುಲಿ ಬೇಟೆಗೆ ಸಂಚು ರೂಪಿಸಿದ್ದ ವೇಳೆ ಅರಣ್ಯ ಇಲಾಖೆಯ ಸಿಬ್ಬಂದಿಯ ಕೈಗೆ ಸಿಕ್ಕಿ ಬಿದ್ದಿದ್ದರು. ದೇಶದ ಹಲವು ಸಂರಕ್ಷಿತ ಪ್ರದೇಶಗಳಲ್ಲಿ ಇವರು ಹುಲಿ ಹತ್ಯೆ ನಡೆಸಿದ್ದ ಸಂಗತಿ ತನಿಖೆಯಿಂದ ಬಹಿರಂಗಗೊಂಡಿತ್ತು.

ಏತಕ್ಕಾಗಿ ಬಳಕೆ?: ಪರಂಪರಾಗತ ಕಾರಣದಿಂದ ಹುಲಿಯ ಅವಯವಗಳಿಗೆ ಅತಿಹೆಚ್ಚಿನ ಮೌಲ್ಯವಿದೆ ಎಂಬ ಭಾವನೆ ಜನರಲ್ಲಿದೆ. ಅದರ ಚರ್ಮ, ಉಗುರು ಮತ್ತು ಹಲ್ಲುಗಳನ್ನು ಪಾರಿತೋಷಕ, ತಾಯಿತವನ್ನಾಗಿ ಜಗತ್ತಿನಾದ್ಯಂತ ಹಲವು ಶತಮಾನಗಳಿಂದ ಬಳಸಲಾಗುತ್ತದೆ.

ಚೀನಾ, ಜಪಾನ್, ಟಿಬೆಟ್, ತೈವಾನ್, ವಿಯೆಟ್ನಾಂ, ದಕ್ಷಿಣ ಕೊರಿಯಾದ ಸಾಂಪ್ರದಾಯಿಕ ಔಷಧ ತಯಾರಿಕೆಯಲ್ಲಿ ಹುಲಿಯ ದೇಹದ ಭಾಗಗಳನ್ನು ಬಳಸಲಾಗುತ್ತದೆ. ಹಾಗಾಗಿಯೇ ಇದರ ಅವಯವಗಳಿಗೆ ಆ ದೇಶಗಳಲ್ಲಿ ಅಪಾರ ಬೇಡಿಕೆಯಿದೆ. ಅದರ ಮೂಳೆಗಳಿಗೆ ಸಂಧಿವಾತ ಗುಣಪಡಿಸುವ ಹಾಗೂ ಸ್ನಾಯುಗಳನ್ನು ಬಲಗೊಳಿಸುವ ಶಕ್ತಿ ಇದೆ ಎಂದು ನಂಬಲಾಗಿದೆ. ರಕ್ತವು ಉತ್ತಮ ಟಾನಿಕ್ ಎಂದು ಭಾವಿಸುತ್ತಾರೆ. ಅದರ ಬಾಲ ಚರ್ಮವ್ಯಾಧಿಗೆ ದಿವ್ಯೌಷಧ. ಕಣ್ಣಿನಗುಡ್ಡೆಗಳನ್ನು ತಿಂದರೆ ಕಣ್ಣಿನ ಪೊರೆಯ ಸಮಸ್ಯೆ, ಮೂರ್ಛೆ ರೋಗ, ಮಲೇರಿಯಾ ಜ್ವರ ನಿವಾರಣೆಯಾಗುತ್ತದೆ ಎಂಬ ಮೌಢ್ಯ ಅವರಲ್ಲಿದೆ.

ಇಂದಿಗೂ ಚೀನೀಯರು ಹುಲಿಯ ದೇಹ ಭಾಗಗಳಿಂದ ತಯಾರಿಸಿದ ಶಕ್ತಿಪೇಯ ಕುಡಿಯುತ್ತಾರೆ. ಮೂಳೆಗಳಿಂದ ತಯಾರಿಸಿದ ವೈನ್ ಅಲ್ಲಿ ಜನಪ್ರಿಯ. ಕೆಲವು ಶ್ರೀಮಂತರು ತಮ್ಮ ಮನೆಗೆ ಬರುವವರಿಗೆ ಇದನ್ನು ಉಡುಗೊರೆಯಾಗಿ ನೀಡುವ ಪದ್ಧತಿ ಇದೆ. ಕಾಮೋದ್ದೀಪನಕ್ಕೂ ಇದು ಶಕ್ತಿಯುತ ಮದ್ದು ಎಂದು ನಂಬುತ್ತಾರೆ.

ಉಗುರುಗಳನ್ನು ನಿದ್ರಾಹೀನತೆ ಹೋಗಲಾಡಿಸುವ ಔಷಧ ತಯಾರಿಕೆಗೆ ಬಳಸುತ್ತಾರೆ. ಹಲ್ಲುಗಳನ್ನು ಜ್ವರದ ಔಷಧ, ಕೊಬ್ಬನ್ನು ಕುಷ್ಠರೋಗ, ಸಂಧಿವಾತ ರೋಗದ ಶಮನಕ್ಕೆ ಬಳಸುತ್ತಾರೆ. ಆದರೆ, ಇದಕ್ಕೆ ಯಾವುದೇ ವೈಜ್ಞಾನಿಕ ತಳಹದಿ ಇಲ್ಲ. ಪ್ರಯೋಗಾಲಯಗಳಲ್ಲೂ ಇದು ದೃಢಪಟ್ಟಿಲ್ಲ.

ನಕಲಿ ಹಾವಳಿ: ದನಗಳ ಗೊರಸು, ಕೊಂಬುಗಳನ್ನು ಬಳಸಿ ಹುಲಿಯ ನಕಲಿ ಉಗುರು ತಯಾರಿಸಿ ಕರ್ನಾಟಕದಲ್ಲಿ ಮಾರಾಟ ಮಾಡುವರು ಇದ್ದಾರೆ.

ಕೊರಳಲ್ಲಿ ಹುಲಿ ಉಗುರು ಧರಿಸಿದರೆ ಹುಲಿಯಷ್ಟೇ ಶಕ್ತಿ ಲಭಿಸುತ್ತದೆ. ಭಯ ನಿವಾರಣೆಯಾಗುತ್ತದೆ. ಭೂತಪ್ರೇತಗಳ ಚೇಷ್ಟೆ ಕಾಡುವುದಿಲ್ಲ ಎಂಬ ನಂಬಿಕೆ ಭಾರತೀಯರಲ್ಲಿದೆ. ಇದಕ್ಕಾಗಿ ಜ್ಯೋತಿಷಿಗಳ ಮೊರೆ ಹೋಗುವವರು ಇದ್ದಾರೆ. ಅಂತಹವರು ನಕಲಿ ವಸ್ತುಗಳ ಮಾರಾಟ ಜಾಲಕ್ಕೆ ಸುಲಭವಾಗಿ ಸಿಲುಕುತ್ತಾರೆ.

ಟ್ರೋಫಿ ಉಡುಗೊರೆ ನೀಡುವುದು ಅಪರಾಧ

ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಅಡಿ ವನ್ಯಜೀವಿಗಳ ಮಾರಾಟ ಮತ್ತು ಟ್ರೋಫಿಗಳ ವ್ಯಾಪಾರಕ್ಕೆ ನಿರ್ಬಂಧ ಹೇರಲಾಗಿದೆ. ಪ್ರಾಣಿಗಳ ಚರ್ಮ, ಉಗುರು ಸೇರಿದಂತೆ ಇತರೆ ಅವಯವಗಳನ್ನು (ಟ್ರೋಫಿ) ಸಂಸ್ಕರಿಸಿ ಮನೆಯಲ್ಲಿ ಸಂಗ್ರಹಿಸಿಡುವುದು ಕೂಡ ಅಪರಾಧ.

ಆದರೆ, ಕೆಲವರು ವನ್ಯಜೀವಿ ಟ್ರೋಫಿಗಳು ನಮ್ಮ ಪೂರ್ವಿಕರಿಂದ ಬಂದಿರುವ ಬಳುವಳಿ ಎಂದು ಸಮರ್ಥಿಸಿಕೊಳ್ಳುತ್ತಾರೆ. ದೇಶದಲ್ಲಿ ವನ್ಯಜೀವಿ ಕಾಯ್ದೆ ಜಾರಿಗೆ ಬಂದ ವರ್ಷದಲ್ಲಿ 30 ದಿನಗಳವರೆಗೆ ವನ್ಯಜೀವಿ ಟ್ರೋಫಿಗಳ ಪ್ರಮಾಣೀಕರಣಕ್ಕೆ ಮೊದಲ ಬಾರಿಗೆ ಅವಕಾಶ ನೀಡಲಾಗಿತ್ತು. ಇದಾದ ಬಳಿಕ 1992ರಲ್ಲಿ ಕಾಯ್ದೆಗೆ ತಿದ್ದುಪಡಿ ತಂದ ವೇಳೆ ಮತ್ತೊಮ್ಮೆ ಅವಕಾಶ ಕಲ್ಪಿಸಲಾಗಿತ್ತು. 2003ರಲ್ಲಿ ಕಾಯ್ದೆಗೆ ಮತ್ತೆ ತಿದ್ದುಪಡಿ ತಂದಾಗ ಆರು ತಿಂಗಳ ಅವಕಾಶ ನೀಡಲಾಗಿತ್ತು. ರಾಜ್ಯ ಮುಖ್ಯ ವನ್ಯಜೀವಿ ಪರಿಪಾಲಕರ ಮುಂದೆ ಟ್ರೋಫಿಗಳನ್ನು ಹಾಜರುಪಡಿಸಿದವರಿಗೆ ‘ಮಾಲೀಕತ್ವದ ಪ್ರಮಾಣ ಪತ್ರ’ ನೀಡಲಾಗಿದೆ. ಆದರೆ, ಅನುಮತಿ ಪಡೆದ ಟ್ರೋಫಿಗಳನ್ನು ಮನೆಯ ಆವರಣದಲ್ಲಷ್ಟೇ ಪ್ರದರ್ಶಿಸಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸಬಾರದು. ಅಲ್ಲದೇ, ಬೇರೆಯವರಿಗೆ ಹಸ್ತಾಂತರಿಸುವುದು, ಉಡುಗೊರೆ ರೂಪದಲ್ಲಿ ನೀಡುವುದು ಅಥವಾ ಮಾರಾಟ ಮಾಡುವುದು ಕಾಯ್ದೆಯಡಿ ಅಪರಾಧವಾಗಲಿದೆ ಎನ್ನುತ್ತಾರೆ ವನ್ಯಜೀವಿ ತಜ್ಞರು.

ಅರಣ್ಯ–ಪೊಲೀಸ್ ಜಂಟಿ ಕಾರ್ಯಾಚರಣೆ ಅಗತ್ಯ

‘ಸಂವಿಧಾನದ 51ಎ(ಜಿ) ವಿಧಿಯಡಿ ಅರಣ್ಯ, ಸರೋವರ, ನದಿ ಮತ್ತು ವನ್ಯಜೀವಿಗಳ ಸಂರಕ್ಷಣೆ ಮಾಡುವುದು ದೇಶದ ಪ್ರತಿಯೊಬ್ಬ ನಾಗರಿಕನ ಸಾಂವಿಧಾನಿಕ ಕರ್ತವ್ಯ ಆಗಿದೆ. ಎಲ್ಲರೂ ಈ ನೈತಿಕ ಹೊಣೆಯನ್ನು ಅರಿಯಬೇಕಿದೆ. ಹೀಗಿದ್ದರೂ ಸಮಾಜದಲ್ಲಿ ಗೌರವಯುತ ಸ್ಥಾನ ಹೊಂದಿದವರು ಕಾನೂನು ಉಲ್ಲಂಘನೆ ಮಾಡುವುದು ಸರಿಯಲ್ಲ’ ಎನ್ನುತ್ತಾರೆ ‘ವೈಲ್ಡ್ ಲೈಫ್ ಫಸ್ಟ್’ನ ವ್ಯವಸ್ಥಾಪಕ ಟ್ರಸ್ಟಿ ಹಾಗೂ ರಾಷ್ಟ್ರೀಯ ವನ್ಯಜೀವಿ ಮಂಡಳಿ ಮಾಜಿ ಸದಸ್ಯ ಪ್ರವೀಣ್ ಭಾರ್ಗವ್.

‘ವನ್ಯಜೀವಿಗಳ ಅವಯವ ಹೋಲುವ ನಕಲಿ ವಸ್ತುಗಳನ್ನು ಕೊರಳಲ್ಲಿ ಧರಿಸುವುದು ತಪ್ಪು. ಇದು ವನ್ಯಜೀವಿಗಳ ಹತ್ಯೆಗೆ ಪ್ರೇರೇಪಿಸುವ ಸಾಧ್ಯತೆಯೂ ಇರುತ್ತದೆ. ವನ್ಯಜೀವಿ ವ್ಯಾಪಾರವು ದೊಡ್ಡ ಜಾಲ. ನಕಲಿ ವಸ್ತುಗಳನ್ನು ಮಾರಾಟ ಮಾಡುವವರು ಅಸಲಿ ವಸ್ತುಗಳನ್ನೂ ಮಾರಾಟ ಮಾಡುವ ಸಾಧ್ಯತೆಯೂ ಇದೆ’ ಎನ್ನುತ್ತಾರೆ ಅವರು.

ಅರಣ್ಯ ಅಧಿಕಾರಿಗಳಿಗೆ ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿಯಷ್ಟೇ ಪ್ರಕರಣ ದಾಖಲಿಸಲು ಅವಕಾಶವಿದೆ. ಆದರೆ, ಪೊಲೀಸರು ಭಾರತೀಯ ದಂಡ ಸಂಹಿತೆ, ಶಸ್ತ್ರಾಸ್ತ್ರ ಕಾಯ್ದೆಯಡಿ ಪ್ರಕರಣ ದಾಖಲಿಸಬಹುದು. ವನ್ಯಜೀವಿ ಅಪರಾಧ ತಡೆ ಸಂಬಂಧ ರಚಿಸುವ ಕಾರ್ಯಪಡೆಗಳಲ್ಲಿ ಈ ಎರಡೂ ಇಲಾಖೆಗಳು ಜಂಟಿಯಾಗಿ ಕಾರ್ಯ ನಿರ್ವಹಿಸುವುದು ಉತ್ತಮ ಎಂಬುದು ಅವರ ಸಲಹೆ.

3ರಿಂದ 7 ವರ್ಷ ಸಜೆ

ಕಾಯ್ದೆಯ ಪರಿಚ್ಛೇದ 1, 2, 3 ಮತ್ತು 4ರಲ್ಲಿ ಬರುವ ಸಸ್ತನಿಗಳು, ಪಕ್ಷಿಗಳು, ಜಲಚರಗಳು, ಉಭಯವಾಸಿಗಳು, ಸರೀಸೃಪಗಳನ್ನು ಸೆರೆ ಹಿಡಿಯುವುದು ಮತ್ತು ಬೇಟೆಯಾಡುವುದನ್ನು ನಿಷೇಧಿಸಲಾಗಿದೆ. ಅಲ್ಲದೇ, ಅವುಗಳ ಉಗುರು, ಚರ್ಮ ಇತ್ಯಾದಿ ಸಂಗ್ರಹಿಸುವುದು, ಪ್ರದರ್ಶಿಸುವುದು ದಂಡಾರ್ಹ ಮತ್ತು ಶಿಕ್ಷಾರ್ಹ ಅಪರಾಧವಾಗಲಿದೆ. ಕಾನೂನು ಉಲ್ಲಂಘಿಸಿದರೆ ಕನಿಷ್ಠ 3ರಿಂದ 7 ವರ್ಷ ಸಜೆ ಹಾಗೂ ₹ 10 ಸಾವಿರ ದಂಡ ವಿಧಿಸುವ ಅವಕಾಶವಿದೆ.

ಕಾನೂನು ಕ್ರಮಕ್ಕೆ ಹಿಂಜರಿಯಲ್ಲ: ಪುಷ್ಕರ್

‘ಹುಲಿಯ ಉಗುರು, ಚರ್ಮ, ಮೀಸೆ, ಮೂಳೆ ಸೇರಿದಂತೆ ಇತರೆ ಅವಯವಗಳನ್ನು ಇಟ್ಟುಕೊಳ್ಳುವುದು ಕಾನೂನುಬಾಹಿರ. ಸದ್ಯ ಬಿಗ್‌ಬಾಸ್ ಸ್ಪರ್ಧಿಯಿಂದ ವಶಪಡಿಸಿಕೊಂಡಿರುವ ಉಗುರುಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಅವು ಅಸಲಿಯೋ ಅಥವಾ ನಕಲಿಯೋ ಎಂಬುದು ಅಲ್ಲಿಂದ ವರದಿ ಬಂದ ಬಳಿಕವಷ್ಟೇ ಗೊತ್ತಾಗಲಿದೆ’ ಎಂದು ರಾಜ್ಯ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಕುಮಾರ್ ಪುಷ್ಕರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಉಗುರುಗಳು ಅಸಲಿ ಎಂಬುದು ಸಾಬೀತಾದರೆ ವನ್ಯಜೀವಿ ಕಾಯ್ದೆಯಡಿ ಮುಂದಿನ ಕ್ರಮ ಜರುಗಿಸುತ್ತೇವೆ’ ಎಂದರು.

‘ರಾಜ್ಯದಲ್ಲಿ ಕೆಲವರು ಹುಲಿ ಉಗುರು, ಚರ್ಮವನ್ನು ಕಾನೂನುಬಾಹಿರವಾಗಿ ಹೊಂದಿದ್ದಾರೆ ಎಂಬ ಬಗ್ಗೆ ದೂರು ಬಂದಿವೆ. ಈ ಬಗ್ಗೆ ಪರಿಶೀಲಿಸಿ ಕಾನೂನು ಕ್ರಮವಹಿಸಲು ಆಯಾ ಜಿಲ್ಲೆಯ ಅರಣ್ಯ ಅಧಿಕಾರಿಗಳಿಗೆ ಸೂಚಿಸಲಾಗಿದೆ. ತಪ್ಪಿತ್ಥರ ವಿರುದ್ಧ ಕ್ರಮ ಜರುಗಿಸಲು ಹಿಂಜರಿಯುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

ಪೂರಕ ಮಾಹಿತಿ: ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ವೆಬ್‌ಸೈಟ್, ವರ್ಲ್ಡ್ ವೈಲ್ಡ್‌ಲೈಫ್ ಫಂಡ್, ಕರ್ನಾಟಕ ಅರಣ್ಯ ಇಲಾಖೆ

ಮದುವೆ ನಂತರವೂ ನಟನೆ

‘ಹರಿಕಥೆ ಅಲ್ಲ ಗಿರಿಕಥೆ’ ಚಿತ್ರದ ಮೂಲಕ ಸ್ಯಾಂಡಲ್‌ವುಡ್ ಪ್ರವೇಶಿಸಿದ್ದ ನಟಿ ತಪಸ್ವಿನಿ ಪೂಣಚ್ಚ ‘ರಾವಣ್’ ಚಿತ್ರದ ಮೂಲಕ ಮತ್ತೆ ಚಿತ್ರರಂಗದಲ್ಲಿ ಸಕ್ರಿಯರಾಗಿದ್ದಾರೆ.

“ನನ್ನ ನಟನೆಯ ‘ಗಜರಾಮ’ ಸಿನಿಮಾ ಚಿತ್ರೀಕರಣ ಮುಗಿದಿದ್ದು, ಬಿಡುಗಡೆಗೆ ಸಿದ್ಧವಿದೆ. ಮದುವೆ ಕಾರಣದಿಂದಾಗಿ ಹೊಸ ಚಿತ್ರಗಳನ್ನು ಅಷ್ಟಾಗಿ ಒಪ್ಪಿಕೊಳ್ಳುತ್ತಿಲ್ಲ. ಪತಿ ಜೊತೆ ಸೇರಿ ಕಾಫಿ ಬಿಸಿನೆಸ್ ನಡೆಸುತ್ತಿರುವೆ. ಆದರೂ ನಟನೆಯನ್ನು ಬಿಟ್ಟಿಲ್ಲ. ‘ರಾವಣ್’ ಎಂಬ ಹೊಸ ಚಿತ್ರಕ್ಕೆ ಸಹಿ ಹಾಕಿದ್ದು, ನಟನೆಗೆ ಸಿದ್ಧತೆ ನಡೆಸಿರುವೆ” ಎನ್ನುತ್ತಾರೆ ತಪಸ್ವಿನಿ.

“ಬಹಳಷ್ಟು ಜನ ಮದುವೆಯ ನಂತರ ನಟನೆಗೆ ವಿದಾಯ ಹೇಳುತ್ತಾರೆ. ಆದರೆ, ನನಗೆ ನಟಿಸಲು ಪತಿ ಹಾಗೂ ಮನೆಯವರು ಪೂರ್ಣ ಸಹಕಾರ ನೀಡುತ್ತಿದ್ದಾರೆ. ಗಟ್ಟಿಯಾದ ಕಥೆ ಮತ್ತು ಉತ್ತಮ ಪಾತ್ರಗಳಿಗಾಗಿ ಎದುರು ನೋಡುತ್ತಿದ್ದೇನೆ” ಎಂದರು.

ಈ ಹಿಂದೆ ‘ಮಿಸ್ ನಂದಿನಿ’ ಎಂಬ ಸಿನಿಮಾ ಮಾಡಿದ್ದ ಗುರುದತ್ ಎಸ್.ಆರ್ ‘ರಾವಣ್’ ಚಿತ್ರದ ನಿರ್ದೇಶಕರು. ಸಸ್ಪೆನ್ಸ್ ಥ್ರಿಲ್ಲರ್ ಚಿತ್ರಕ್ಕೆ ನೀಲಕಂಠ ಸ್ವಾಮಿ, ಜಗದೀಶ್ ಬಂಡವಾಳ ಹೂಡುತ್ತಿದ್ದಾರೆ.

‘ಕಬ್ಜ’ ಸೇರಿದಂತೆ ಕೆಲ ಚಿತ್ರಗಳಲ್ಲಿ ಖಳನಟನಾಗಿದ್ದ ರತನ್ ಚೆಂಗಪ್ಪ ಈ ಚಿತ್ರದ ನಾಯಕ. ಸಿದ್ದಿಂಗು ಶ್ರೀಧರ್, ಪ್ರಮೋದ್ ಶೆಟ್ಟಿ, ರಂಗಾಯಣ ರಘು, ರಘುಪಾಂಡೇಶ್ವರ್ ಮುಂತಾದವರು ತಾರಾಗಣದಲ್ಲಿದ್ದಾರೆ.



ತಪಸ್ವಿನಿ ಪೂಣಚ್ಚ

‘ವರಾಹಚಕ್ರ’ವೇರಿದ ಪ್ರೇಮಾ

ಹಿರಿಯ ನಟಿ ಪ್ರೇಮಾ ಹಾಗೂ ಸಾಯಿಕುಮಾರ್ ಪ್ರಮುಖ ಪಾತ್ರಗಳಲ್ಲಿ ನಟಿಸುತ್ತಿರುವ ‘ವರಾಹಚಕ್ರಂ’ ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿತು. ‘ಮನಸುಗಳ ಮಾತು ಮಧುರ’ ಖ್ಯಾತಿಯ ನಿರ್ದೇಶಕ ಮಂಜು ಮಸ್ಕಲ್ ಮಟ್ಟಿ ಅವರದೇ ನಿರ್ಮಾಣ ಹಾಗೂ ನಿರ್ದೇಶನ ಈ ಚಿತ್ರಕ್ಕಿದೆ.

ಮಾಜಿ ಸಚಿವ ಆರ್.ಅಶೋಕ್ ಚಿತ್ರದ ಪ್ರಥಮ ದೃಶ್ಯಕ್ಕೆ ಕ್ಲಾಪ್ ಮಾಡಿ ತಂಡಕ್ಕೆ ಶುಭ ಹಾರೈಸಿದರು. ‘ಈಗಿನ ಡಿಜಿಟಲ್ ಜಗತ್ತಿನಲ್ಲಿ ಏನೆಲ್ಲ ಅನ್ಯಾಯ, ಮೋಸ, ಅಕ್ರಮಗಳು ನಡೆಯುತ್ತಿವೆ ಎಂಬುದನ್ನು ಹೇಳುವ ಕಥೆಯ ಚಿತ್ರವಿದು. ಆಧುನಿಕ ಪಂಚ ಪಾಂಡವರಂತೆ ಐವರು ನಾಯಕರಿದ್ದಾರೆ. ವರಾಹ ವಿಷ್ಣುವಿನ ಒಂದು ಅವತಾರ. ಕಥೆಯಲ್ಲಿ ಇದರ ಪ್ರಸ್ತಾಪ ಬರುತ್ತದೆ’ ಎಂದರು ನಿರ್ದೇಶಕರು.

ಅರ್ಜುನ್ ದೇವ್, ರಾಣಾ, ಇಮ್ರಾನ್ ಷರೀಫ್, ಆರ್ಯನ್ ಹಾಗೂ ಪ್ರತೀಕ್ ಗೌಡ ಪಂಚಪಾಂಡವರಾಗಿ ಕಾಣಿಸಿಕೊಳ್ಳಲಿದ್ದಾರೆ. ನಾಯಕಿಯರಾಗಿ ಶೋಭಾರಾಣಿ, ಪ್ರಿಯಾ ತರುಣ್, ಅನನ್ಯ, ಜಾಹ್ನವಿ, ದೀಕ್ಷಾ, ಚೈತ್ರಾ ನಟಿಸುತ್ತಿದ್ದಾರೆ. ವಿ. ನಾಗೇಂದ್ರಪ್ರಸಾದ್, ತೆಲುಗುನಟ ಭಾನುಚಂದರ್, ಚಿ.ಗುರುದತ್, ಶೋಭರಾಜ್ ತಾರಾಬಳಗದಲ್ಲಿದ್ದಾರೆ.

‘ಕಣ್ಣು, ಗನ್ನು, ಪೆನ್ನು ಈ ಮೂರನ್ನೂ ಇಟ್ಟುಕೊಂಡು ಏನೋ ಮಾಡಲು ಹೊರಟಿದ್ದೇನೆ. ಬಳ್ಳಾರಿ, ಹಿರಿಯೂರು, ಬೆಂಗಳೂರು, ಚಿತ್ರದುರ್ಗ, ತಮಿಳುನಾಡಿನ ಪೊಲ್ಲಾಚ್ಚಿ ಅಲ್ಲದೆ ಉತ್ತರ ಪ್ರದೇಶದ ವಾರಾಣಸಿ, ಕಾಶಿಯಲ್ಲಿ ಚಿತ್ರೀಕರಿಸುವ ಯೋಜನೆಯಿದೆ’ ಎಂದು ಮಸ್ಕಲ್ ಮಟ್ಟಿ ತಿಳಿಸಿದರು.

ವಿ.ನಾಗೇಂದ್ರಪ್ರಸಾದ್ ಸಂಗೀತ, ಶರತ್‌ಕುಮಾರ್ ಜಿ. ಛಾಯಾಗ್ರಹಣ, ಭಾರ್ಗವ ಅವರ ಸಂಕಲನವಿದೆ.



ಪ್ರೇಮಾ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕ್ರೀಡಾಂಗಣವೊಂದರ ಬಳಿ ಪೊಲೀಸ್ ಅಧಿಕಾರಿಯೊಬ್ಬರು ಕಸದ ಬುಟ್ಟಿಯಿಂದ ತ್ರಿವರ್ಣ ಧ್ವಜಗಳನ್ನು ತೆಗೆದುಕೊಳ್ಳುತ್ತಿರುವ ಮತ್ತು ಅವನ್ನು ತಮ್ಮ ವಾಹನದೊಳಗೆ ಇಡುವ ದೃಶ್ಯವಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅದರ ಜತೆಯಲ್ಲಿ, ‘ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನ ಕ್ರಿಕೆಟ್ ಪಂದ್ಯದ ವೇಳೆ ಕ್ರೀಡಾಂಗಣದೊಳಕ್ಕೆ ಭಾರತದ ತ್ರಿವರ್ಣ ಧ್ವಜ ಒಯ್ಯುವುದನ್ನು ತಮಿಳುನಾಡು ಸರ್ಕಾರ ನಿಷೇಧಿಸಿದೆ. ಪಾಕಿಸ್ತಾನದ ಅಭಿಮಾನಿಗಳಿಗೆ ನೋವಾಗದಿರಲಿ ಎಂದು ತಮಿಳುನಾಡು ಸರ್ಕಾರ ಹೀಗೆ ಮಾಡಿದೆ’ ಎಂಬ ಬರಹವನ್ನೂ ಹಂಚಿಕೊಳ್ಳಲಾಗಿದೆ. ಆದರೆ ಇದು ತಿರುಚಲಾದ ಮಾಹಿತಿ.



ಈ ಬಗ್ಗೆ ತಮಿಳುನಾಡು ಪೊಲೀಸ್ ಇಲಾಖೆ ಸ್ಪಷ್ಟನೆ ನೀಡಿದೆ. ‘ಪಂದ್ಯದ ವೇಳೆ ವಿವಾದಾತ್ಮಕ ಸ್ವರೂಪದ ಧ್ವಜ ಮತ್ತು ಬ್ಯಾನರ್‌ಗಳನ್ನು ಅಭಿಮಾನಿಗಳು ಪ್ರದರ್ಶಿಸದಂತೆ ಎಚ್ಚರವಹಿಸಬೇಕು ಎಂದು ಸೂಚಿಸಲಾಗಿತ್ತು. ಆದರೆ ಪೊಲೀಸ್ ಅಧಿಕಾರಿಯೊಬ್ಬರು ಅಭಿಮಾನಿಗಳ ಕೈಯಲ್ಲಿದ್ದ ತ್ರಿವರ್ಣ ಧ್ವಜಗಳನ್ನು ಕಿತ್ತುಕೊಂಡು ಕಸದಬುಟ್ಟಿಗೆ ಹಾಕಿದ್ದಾರೆ ಮತ್ತು ನಂತರ ಅವನ್ನು ಎತ್ತಿ, ತಮ್ಮ ವಾಹನದಲ್ಲಿ ಇಟ್ಟುಕೊಂಡಿದ್ದಾರೆ. ಧ್ವಜಕ್ಕೆ ಅವಮಾನ ಮಾಡಿದ ಅವರ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಲಾಗಿದೆ. ಆದರೆ, ಕ್ರೀಡಾಂಗಣದಲ್ಲಿ ತ್ರಿವರ್ಣ ಧ್ವಜವನ್ನು ನಿಷೇಧಿಸಲಾಗಿತ್ತು ಎಂಬುದು ಸುಳ್ಳು ಸುದ್ದಿ’ ಎಂದು ಪೊಲೀಸ್ ಇಲಾಖೆಯು ಸ್ಪಷ್ಟನೆ ನೀಡಿದೆ ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಮನುಷ್ಯನಿಗೆ ಮಾತ್ರ ಆಯ್ಕೆಗಳಿವೆ

ನುಡಿ ಬೆಳಗು



ಪ್ರೊ.ಎಂ. ಕೃಷ್ಣೇಗೌಡ

ಒಂದು ನಾಯಿ, ನಾಯಿ ಅಂತ ಹುಟ್ಟಿದ ಮೇಲೆ ಅದು ನಾಯಿಯಾಗಿಯೇ ಬೆಳೆಯಬೇಕು, ನಾಯಿಯಾಗಿಯೇ ಬಾಳಬೇಕು, ನಾಯಿಯಾಗಿಯೇ ಸಾಯಬೇಕು. ಬೆಕ್ಕು ಬೆಕ್ಕಾಗಿಯೇ ಬಾಳಿ ಬೆಕ್ಕಾಗಿಯೇ ಸಾಯಬೇಕು. ಅವು ಯಾವ ದೇಶದಲ್ಲಿ ಹುಟ್ಟಿದರೂ, ಯಾವ ಜಾಗದಲ್ಲಿ ಬೆಳೆದರೂ ಅಷ್ಟೆ. ಒಂದು ಕಂಬಳಿ ಹುಳು ಹೆಚ್ಚೆಂದರೆ ಒಂದು ಚಿಟ್ಟೆ ಆಗಬಹುದು. ಅದಕ್ಕಿಂತ ಆ ಹುಳುವಿಗೆ ಹೆಚ್ಚು ಆಯ್ಕೆಗಳಿಲ್ಲ.

ಆದರೆ ಈ ಮನುಷ್ಯನನ್ನು ನೋಡಿ- ಅವನು ಮನುಷ್ಯನಾಗಿ ಹುಟ್ಟಿದ ಮೇಲೆ ರಾಜನಾಗಬಹುದು, ಸಾಧುವಾಗಬಹುದು, ಸಿದ್ಧನಾಗಬಹುದು, ಬೇಕೆಂದರೆ ಬುದ್ಧನೂ ಆಗಬಹುದು. ಅಥವಾ ಅದೇ ಮನುಷ್ಯ ಅಂಗುಲಿಮಾಲ ಆಗಬಹುದು, ವೀರಪ್ಪನ್ ಆಗಬಹುದು, ಹಿಟ್ಲರ್ ಆಗಬಹುದು, ಅರ್ಥ ಇಷ್ಟೆ- ಮನುಷ್ಯನಿಗೆ ತಾನು ಏನಾಗಬೇಕೆಂದು ನಿರ್ಧರಿಸಲು ಆಯ್ಕೆಗಳಿವೆ.

ಯಾವುದೋ ಒಂದು ಕಾಡಿನಲ್ಲಿ ಸಾವಿರಾರು ಕೋತಿಗಳು ವಾಸವಾಗಿದ್ದವಂತೆ. ಆ ಕಾಡಿನಲ್ಲೊಮ್ಮೆ ಅಸಾಧ್ಯವಾದ ಚಳಿ ಉಂಟಾಯಿತಂತೆ. ಕೋತಿಗಳಿಗೆ ಚಳಿ ತಡೆಯುವುದಕ್ಕೆ ಆಗಲೇ ಇಲ್ಲ. ಕೆಲವು ಕೋತಿಗಳಂತೂ ಸತ್ತೇ ಹೋದವು. ಆಗ ಆ ಕೋತಿಗಳು ನೂರಾರು ಮರಿಕೋತಿಗಳನ್ನು ಸುಟ್ಟು ಆ ಬೆಂಕಿಯಲ್ಲಿ ಮೈ ಕಾಯಿಸಿಕೊಂಡು ಕುಣಿದಾಡಿದವಂತೆ...

ಎಷ್ಟು ಕ್ರೂರ? ಎಂಥಾ ಭೀಭತ್ಸ ಅಲ್ಲವೇ?

ಇದನ್ನೇ ತಾನೆ ಮೃಗೀಯ ವರ್ತನೆ ಅಂತ ಕರೆಯೋದು? ಆದರೆ ಈ ಇತಿಹಾಸದ ತುಂಬಾ ಮನುಷ್ಯ ಎಂಬ ಪ್ರಾಣಿ ಕೂಡಾ ಎಷ್ಟೆಷ್ಟೋ ಯುದ್ಧಗಳನ್ನು ಮಾಡಿ ಎಷ್ಟೋ ಮನುಷ್ಯರೆಂಬ ಪ್ರಾಣಿಗಳನ್ನೇ ಕೊಂದು ಕುಣಿದಾಡಿದ್ದಾನಲ್ಲಾ, ಆ ಹಿಟ್ಲರ್ ಎಂಬಾತ ಎಷ್ಟು ಮಿಲಿಯನ್ ಮನುಷ್ಯರನ್ನು ಗ್ಯಾಸ್ ಚೇಂಬರುಗಳಿಗೆ ತುಂಬಿ ಕೊಂದು ಕೇಕೆ ಹಾಕಿದನಲ್ಲಾ, ಇದು ಕೂಡಾ ಮೃಗೀಯ ವರ್ತನೆ ಅಲ್ಲದೆ ಮತ್ತೇನು?

ಆದರೆ ಪ್ರಾಣಿಗಳಿಗೂ ಮನುಷ್ಯರಿಗೂ ಒಂದು ದೊಡ್ಡ ವ್ಯತ್ಯಾಸವಿದೆ. ಅದೇನೆಂದರೆ ಯಾರನ್ನಾದರೂ ಕೊಲ್ಲುವ ಮನುಷ್ಯನಿಗೆ ತನ್ನ ಕ್ರೌರ್ಯವನ್ನು ಸಮರ್ಥಿಸಿಕೊಳ್ಳಲು ಬರುತ್ತದೆ. ಅದಕ್ಕೊಂದು ತಾತ್ವಿಕತೆಯನ್ನೋ ವೈಚಾರಿಕತೆಯನ್ನೋ ಧಾರ್ಮಿಕತೆಯನ್ನೋ ಹೆಣೆಯಲು ಬರುತ್ತದೆ. ತನ್ನಂಥವರದೇ ಒಂದು ಗುಂಪು ಕಟ್ಟಿಕೊಳ್ಳಲು ಬರುತ್ತದೆ. ಆದರೆ ಕೋತಿಯಂತಹ ಪ್ರಾಣಿಗಳಿಗೆ ಅದೆಲ್ಲಾ ಬರುವುದಿಲ್ಲ. ಅವಕ್ಕೆ ಅಷ್ಟೊಂದು ವಿದ್ಯೆ ಬುದ್ಧಿ ಇರುವುದಿಲ್ಲ.

ಯಾವಾಗ ಒಂದು ಜೀವಿ ತನ್ನ ಉಳಿವಿಗಾಗಿ, ಸ್ವಾರ್ಥಕ್ಕಾಗಿ ಅಥವಾ ಸುಖಕ್ಕಾಗಿ ಮತ್ತೊಂದು ಜೀವಿಯನ್ನು ಕೊಲ್ಲುತ್ತದೆಯೋ ಆಗ ಅದು ಮೃಗವಾಗುತ್ತದೆ. ಸುಖ ಸ್ವಾರ್ಥವನ್ನು ಚಿಂತಿಸದೆ ಲೋಕಸೌಖ್ಯವನ್ನು ಬಯಸುತ್ತದೆಯೋ ಆಗ ಅದು ಬುದ್ಧನಾಗುತ್ತದೆ.

ನಾಯಿ ಬೆಕ್ಕು ಕೋತಿಗಳಿಗೆ ತಾವು ಏನಾಗಬೇಕೆಂಬ ಆಯ್ಕೆಗಳಿಲ್ಲ. ಮನುಷ್ಯರಿಗೆ ಇದೆ.

(ಓಶೋ ಪ್ರವಚನದಿಂದ ಪ್ರೇರಿತ)

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಶುಕ್ರವಾರ ಅಕ್ಟೋಬರ್ 27, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ತ್ರಯೋದಶಿ ಗಂ. 06-57 ನಂತರ ಚತುರ್ದಶಿ ಗಂ. 28-18 ನಕ್ಷತ್ರ: ಉತ್ತರಭಾದ್ರ ಗಂ. 09-25 ಯೋಗ: ಹರ್ಷಣ ಗಂ 26-01 ಕರಣ: ತೈತಿಲ ಗಂ. 06-57, ತುಲಾ ಮಾಸದ 10 ನೇ ದಿನ,
ಮಳೆನಕ್ಷತ್ರ: ಸ್ವಾತಿ 1, ರಾಹುಕಾಲ : ಬೆಳಿಗ್ಗೆ 10-30 - 12-00
ಸೂರ್ಯೋದಯ : 06-27 ಸೂರ್ಯಾಸ್ತ : 06-02
ಮುಸ್ಲಿಂ ದಿನಾಂಕ : 11 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ : 7, 5

ಮೇಷ: ಈ ದಿನವನ್ನು ಗಣಪತಿಯ ಪ್ರಾರ್ಥನೆ ಅಥವಾ ದರ್ಶನದೊಂದಿಗೆ ಪ್ರಾರಂಭಿಸಲು ಮರೆಯದಿರಿ. ಎಲ್ಲವನ್ನು ಮಾಡಬಲ್ಲೆನೆಂಬ ಹುಮ್ಮಸ್ಸು ನಿಮ್ಮಲ್ಲಿ ಈ ದಿನ ಮೂಡಲಿದೆ. ಮಹತ್ವದ ಮಾತುಕತೆ ನಡೆಸಲು ಒಳ್ಳೆಯ ಸಮಯ.

ವೃಷಭ: ಕೆಲವು ಕಠಿಣ ನಿರ್ಧಾರ ಕೈಗೊಳ್ಳುವ ಪ್ರಸಂಗ ಈ ದಿನ ನಿಮ್ಮ ಮುಂದಿದೆ, ಇದಕ್ಕಾಗಿ ವಿಚಲಿತರಾಗಬೇಕಾಗಿಲ್ಲ. ಮುಖ್ಯ ಕೆಲಸವೊಂದಕ್ಕೆ ಸಲಹೆ ಪಡೆಯಲು ಪ್ರಸಿದ್ಧ ವ್ಯಕ್ತಿಯೊಬ್ಬರನ್ನು ಸಂಪರ್ಕಿಸಲು ಪ್ರಯತ್ನಿಸುವಿರಿ.

ಮಿಥುನ: ಸಂದರ್ಭಕ್ಕನುಗುಣವಾಗಿ ವರ್ತಿಸುವ ತೀರ್ಮಾನ ಕೈಗೊಳ್ಳುವುದು ಅನಿವಾರ್ಯವಾಗಲಿದೆ. ಜೀವನ ನಡೆಸಲು ಹಿರಿಯರ ಮಾರ್ಗದರ್ಶನ ಬೇಕೆನಿಸಲಿದೆ. ಶುಭವಾಗಲು ದೈವಾನುಗ್ರಹವನ್ನು ಪ್ರಾರ್ಥಿಸಬೇಕಾಗುತ್ತದೆ.

ಕರ್ಕಾಟಕ: ದಾನ, ಧರ್ಮದ ಮಾರ್ಗದಲ್ಲಿ ನಡೆಯುವುದು ನಿಮ್ಮ ಅಭಿವೃದ್ಧಿಗೆ ಪೂರಕವಾಗುವುದು. ಕೌಟುಂಬಿಕವಾಗಿ ಇರುವ ಗೌರವ ಕಾಪಾಡಿಕೊಳ್ಳುವ ಬಗ್ಗೆ ಗಮನವಿರಲಿ. ಮನಸ್ಸನ್ನು ಪ್ರಶಾಂತವಾಗಿರಿಸುವ ಪ್ರಯತ್ನ ಫಲಿಸಲಿದೆ.

ಸಿಂಹ: ಮನೆಯಲ್ಲಿ ನಡೆಯಬೇಕಾಗಿರುವ ಕಾರ್ಯಕ್ರಮಗಳ ಬಗ್ಗೆ ಒಡಹುಟ್ಟಿದವರೊಡನೆ ಮಾತುಕತೆ ನಡೆಯಲಿದೆ. ಉತ್ತಮ ಅವಕಾಶದ ಜೊತೆಯಲ್ಲಿ ಅದೃಷ್ಟವೂ ಕೂಡ ನಿಮ್ಮ ಪಾಲಿಗಿದೆ. ಗಣೇಶನ ಧ್ಯಾನ ಶುಭತರಲಿದೆ.

ಕನ್ಯಾ: ನಿಮ್ಮನ್ನು ಪ್ರೀತಿಸುವವರ ಮಾರ್ಗದರ್ಶನ ಈ ದಿನ ದೊರೆಯಲಿದ್ದು ಹೊಸ ಚೈತನ್ಯ ತುಂಬಿಬರಲಿದೆ. ಕಾರ್ಯಕ್ಷೇತ್ರದಲ್ಲಿ ಅಡ್ಡಿ, ಆತಂಕ, ವಿಳಂಬಗಳು ಏನೇ ತೋರಿ ಬಂದರೂ ಸಹ ಯೋಜಿತ ಕೆಲಸಗಳು ಫಲ ನೀಡಲಿದೆ.

ತುಲಾ: ನಿವೇಶನ ಮಾರಾಟದಿಂದ ಲಾಭ ಪಡೆಯುವಿರಿ ಹಾಗೂ ಅದರ ಹಣದಿಂದ ಹಣಕಾಸಿನ ಬಗೆಗಿನ ಚಿಂತೆಗಳು ದೂರವಾಗಿ ಆರ್ಥಿಕವಾಗಿ ವೃದ್ಧಿ ಕಾಣಲಿದ್ದೀರಿ. ಮಕ್ಕಳ ಬೆಳವಣಿಗೆಗೆ ಬೇಕಾದ ಅಗತ್ಯಗಳನ್ನು ಪೂರೈಸಿ.

ವೃಶ್ಚಿಕ: ಭವಿಷ್ಯದ ಯೋಜನೆಗಳಿಗೆ ಗಮನ ಕೊಡುವುದರಿಂದ ಗುರಿ ತಲುಪಲು ಸುಲಭವಾಗುವುದು. ಈ ದಿನದ ನಿಮ್ಮ ಶ್ರಮ ಮುಂದಿನ ದಿನಕ್ಕೆ ಒಂದು ಅಡಿಪಾಯ. ಇಂಧನ ಮಾರಾಟಗಾರರಿಗೆ ಹೆಚ್ಚಿನ ಕಮಿಷನ್ ಲಭ್ಯವಾಗಲಿದೆ.

ಧನು: ಮಕ್ಕಳನ್ನು ಯಾವುದೇ ರೀತಿಯ ಶಿಕ್ಷೆಗೆ ಒಳಪಡಿಸದೇ ನಯವಾದ ಮಾತುಗಳಿಂದ ತಿದ್ದುವ ಪ್ರಯತ್ನವನ್ನು ಮಾಡಿ. ಮನಸ್ಸಿನಲ್ಲಿ ಏಕಾಗ್ರತೆಯಿಂದ ಶಿವನ ನಾಮ ಸ್ಮರಣೆ ಅಥವಾ ಧ್ಯಾನ ಮಾಡುವುದು ಒಳ್ಳೆಯದು.

ಮಕರ: ಸುಖ-ದುಃಖ, ನೋವು, ಅನಾರೋಗ್ಯ, ಲಾಭ-ನಷ್ಟಗಳ ಮಿಶ್ರಫಲ ಅನುಭವಿಸಬೇಕಾಗುತ್ತದೆ. ಮಕ್ಕಳ ವರ್ತನೆ ನಿಮ್ಮ ಮನಸ್ಸಿಗೆ ಸಂತೋಷ ತರಲಿದೆ. ಆಲಸ್ಯ ದೂರವಾಗಿ ಲವಲವಿಕೆಯಿಂದ ದಿನ ಕಳೆಯುತ್ತೀರಿ.

ಕುಂಭ: ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸುವುದರಿಂದ ಮಾನಸಿಕ ಶಾಂತಿ ಹೆಚ್ಚಾಗಲಿದೆ. ವ್ಯವಹಾರದ ವಿಚಾರದಲ್ಲಿ ನಿಮಗೆ ಇನ್ನೂ ಸಾಕಷ್ಟು ಅನುಭವ ಅಗತ್ಯವಿದೆ. ಆದ್ದರಿಂದ ಯಾವ ಕೆಲಸ ಮಾಡುವ ಮೊದಲು ಸಹ ಯೋಚಿಸಿ.


ಮೀನ: ಆಲಂಕಾರಿಕ ವಸ್ತುಗಳ ಮಾರಾಟದ ಉದ್ಯೋಗದವರು ಈ ಕೆಲವು ದಿನಗಳ ಉತ್ತಮ ಸಂಪಾದನೆಯಿಂದ ನೆಮ್ಮದಿ ಕಾಣಬಹುದು. ಇಂದಿನ ವಿನಾಕಾರಣ ಅಲೆದಾಟದಿಂದ ಬೇಸರ ಪಡುವ ಅವಶ್ಯಕತೆ ಇಲ್ಲ.

ಪದಬಂಧ 5482

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮರಗಳ ಸಮೂಹ (2)
3.ಸಂಭ್ರಮಕ್ಕಿಲ್ಲಿ ಗರ ಬಡಿದಿದೆ! (4)
5.ಕೆಸರಿನಲ್ಲಿ ಅರಳುವ ಹೂ (3)
7.ಕಾಡಿನಲ್ಲಿ ವಾಸಿಸುವಿಕೆ (4)
9.ಬದಿಯಲ್ಲಿರುವ ಜೈನ ದೇವಾಲಯ(3)
10.ಚಂದ್ರ ಸೂರ್ಯನ ಸುತ್ತಲಿರುವ ಪ್ರಭಾವಲಯ (3)
11.ಬಟ್ಟೆಗಳ ಮಡಿಕೆಗಳು ಮುರಿಯದೇ ಇರುವುದು (4)
13.ಮದುವೆ ಗಂಡು ತೋರಿದ ವ್ಯಾಯಾಮದ ಪಟ್ಟು (3)
15.ನಾಲ್ಕು ವೇದಗಳಲ್ಲಿ ಎರಡನೆಯದು (4)
16.ರಟ್ಟಾಗದ ಗೋಪ್ಯ!(2)

ಮೇಲಿಂದ ಕೆಳಕ್ಕೆ
2.ಮಸ್ತಕದ ಬಳಿಯಿರಿಸಿದ ಗ್ರಂಥ (3)
3.ನೀರು ಇಲ್ಲಿದೆ (3)
4.ಗಡಕ್ಕನೆ ಬಂದೆರಗಿದ ಗಂಡುಕೋತಿ (3)
6.ಮುಸಲ್ಮಾನರ ಪ್ರಾರ್ಥನಾ ಸ್ಥಳ (3)
8.ಹೆಣವನ್ನು ಹೂಳುವ ಜಾಗ (3)
9.ಸೊರಗಿದ ಉತ್ತರ ದಿಕ್ಕು (3)
10.ಕೊನೆಗೆ ಬೆಲೆಯುಳ್ಳ ಮಡಿಕೆ (3)
12.ರೀತಿಯೊಡಗೂಡುವ ಪದ್ಧತಿ (3)
13.ಬಗ್ಗು ಬಡಿಯುವವನು (3)
14.ಸೀರೆಯ ಹೊದೆಯುವ ಭಾಗ (3)



5481ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಲಿಪಶು 3.ದಮ್ಮಡಿ
4.ಕಶೇರುಕ 6.ಕಠೋರ
7.ಅಕಳಂಕ 8.ಕಾಮನೆ
9.ಪರದಾಡು 10.ಪಲ್ಲಂಗ
12.ಗಡಿಯಾರ 14.ಜಠರ
15.ವಿನಿಮಯ

ಮೇಲಿಂದ ಕೆಳಕ್ಕೆ:
1.ಬಡಿವಾರ 2.ಶುಕ
3.ದಶಕ 5.ಕಣಕ
7.ಆನೆ 8.ಕಾಡು
9.ಪರಾಗ 10.ಪರಾಜಯ
11.ಗಟಾರ 13.ರವಿ

ಸುಡೊಕು 5868

		1		8				
	7		1		6			
3		5		2			8	
	8	7					1	
		4	7	6	3	8		9
5	9						7	
		2		7		1		5
1			2		5		9	
	5			4		2		8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5867 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ನಿಗಮ ಮಂಡಳಿಗಳ ಖಾಲಿ ಹುದ್ದೆ ಭರ್ತಿ ಪ್ರಕ್ರಿಯೆ: ಅಭ್ಯರ್ಥಿಗಳಿಗೆ ದೂರದ ಊರುಗಳ ಪರೀಕ್ಷಾ ಕೇಂದ್ರ ನೀಡಿಕೆ

ನೇಮಕಾತಿ ಪರೀಕ್ಷೆ; ಅಂಗವಿಕಲರಿಗೆ ಸಮಸ್ಯೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ (ಕಿಯೋನಿಕ್ಸ್) ಸೇರಿದಂತೆ ಐದು ನಿಗಮ-ಮಂಡಳಿಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅ.28 ಮತ್ತು 29ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಪರೀಕ್ಷೆ ನಡೆಸುತ್ತಿದ್ದು, ದೃಷ್ಟಿದೋಷ ಉಳ್ಳವರೂ ಸೇರಿದಂತೆ ಅಂಗವಿಕಲ ಅಭ್ಯರ್ಥಿಗಳಿಗೆ ತೊಡಕಾಗಿದೆ.

ದೃಷ್ಟಿದೋಷವಿರುವ ಅಭ್ಯರ್ಥಿಗಳೂ ಸೇರಿದಂತೆ 11,538 ಅಭ್ಯರ್ಥಿಗಳು ಪರೀಕ್ಷೆ ತೆಗೆದುಕೊಂಡಿದ್ದಾರೆ. ಅರ್ಜಿ ಸಲ್ಲಿಸುವಾಗ ನಿರ್ದಿಷ್ಟ ಕೇಂದ್ರಗಳನ್ನು ಆಯ್ಕೆ ಮಾಡಿಕೊಂಡರೂ, ಅವರಿಗೆ ದೂರದ ಕೇಂದ್ರಗಳನ್ನು ನೀಡಲಾಗಿದೆ. ಮೈಸೂರು ಆಯ್ಕೆ ಮಾಡಿಕೊಂಡಿದ್ದ ಅಭ್ಯರ್ಥಿಯೊಬ್ಬರಿಗೆ ಕಲಬುರಗಿ ಕೇಂದ್ರ ನೀಡಲಾಗಿದೆ. ಬೆಂಗಳೂರು ಆಯ್ಕೆ ಮಾಡಿಕೊಂಡವರಿಗೆ ಧಾರವಾಡದಲ್ಲಿ ಪರೀಕ್ಷಾ ಕೇಂದ್ರ ನಿಗದಿ ಮಾಡಲಾಗಿದೆ ಎಂದು ಅಭ್ಯರ್ಥಿಗಳು ದೂರಿದ್ದಾರೆ.

> ಅಂಗವಿಕಲ ಅಭ್ಯರ್ಥಿಗಳಿಗೆ ನೀಡಬೇಕಾದ ಸವಲತ್ತುಗಳನ್ನು ದೊರಕಿಸುವಂತೆ ಕೆಇಎಗೆ ಮನವಿ ಮಾಡಿದರೂ, ಸೂಕ್ತ ಸ್ಪಂದನೆ ದೊರೆತಿಲ್ಲ. ಇದರಿಂದ ಹಲವರು ಉದ್ಯೋಗ ವಂಚಿತರಾಗುತ್ತಿದ್ದಾರೆ.
> **ಗೌತಮ್ ಪ್ರಕಾಶ್ ಅಗರವಾಲ್,** ಪ್ರಧಾನ ಕಾರ್ಯದರ್ಶಿ, ರಾಷ್ಟ್ರೀಯ ಅಂಧರ ಒಕ್ಕೂಟ

> ಅಂಗವಿಕಲ ಅಭ್ಯರ್ಥಿಗಳಿಗೆ ಪ್ರತ್ಯೇಕ ಸೂಚನೆಗಳನ್ನು ವೆಬ್‌ಸೈಟ್‌ನಲ್ಲಿ ಹಾಕಲಾಗಿದೆ. ಪರೀಕ್ಷಾ ಕೇಂದ್ರಗಳಿಗೂ ಸೂಚನೆ ನೀಡಲಾಗಿದೆ. ಸರಿಯಾದ ಮಾಹಿತಿ ನೀಡದ ಕೆಲ ಅಭ್ಯರ್ಥಿಗಳಿಗೆ ಕೇಂದ್ರಗಳ ಹಂಚಿಕೆಯಲ್ಲಿ ವ್ಯತ್ಯಾಸವಾಗಿರಬಹುದು.
> **ಎಚ್.ರಮ್ಯಾ,** ಕಾರ್ಯನಿರ್ವಾಹಕ ನಿರ್ದೇಶಕಿ, ಕೆಇಎ

ಪರೀಕ್ಷಾ ಕೇಂದ್ರಗಳು ದೂರ ಇರುವುದರಿಂದ ಪ್ರಯಾಣ ಮಾಡಲು ಕಷ್ಟವಾಗುತ್ತದೆ. ಕೆಲವರಿಗೆ ಅವರ ವಾಸ ಸ್ಥಳಗಳಿಂದ ಐದಾರು ಗಂಟೆ ಪ್ರಯಾಣದ ಕೇಂದ್ರಗಳು ದೊರೆತಿವೆ. ಇನ್ನೂ ಕೆಲವರಿಗೆ 10ರಿಂದ 12 ಗಂಟೆ ಪ್ರಯಾಣ ಮಾಡುವ ಅನಿವಾರ್ಯ ಎದುರಾಗಿದೆ. ಇಲ್ಲಿ ದೃಷ್ಟಿದೋಷ ಸೇರಿದಂತೆ ಗಂಭೀರ ವೈಕಲ್ಯ ಇರುವ ಅಭ್ಯರ್ಥಿಗಳು ತಮ್ಮ ಜತೆಗೆ ಸಹಾಯಕರಾಗಿ ಲಿಪಿಕಾರರೊಬ್ಬರನ್ನು ಕರೆದುಕೊಂಡು ಹೋಗಬೇಕಿದೆ. 'ಇದೆಲ್ಲ ವೆಚ್ಚದಾಯಕ ಕೆಲಸ ಎನ್ನುತ್ತಾರೆ ಅಭ್ಯರ್ಥಿ ವಿಶೇಷ್.

ಕರ್ನಾಟಕ ಲೋಕಸೇವಾ ಆಯೋಗ ಸೇರಿದಂತೆ ವಿವಿಧ ಪ್ರಾಧಿಕಾರಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ದೃಷ್ಟಿದೋಷ, ಚಲನ ವೈಕಲ್ಯ, ಮಿದುಳಿನ ಪಾರ್ಶ್ವ ವಾಯುವಿಗೆ ಒಳಗಾದ ಅಭ್ಯರ್ಥಿಗಳು ಪರೀಕ್ಷೆ ಬರೆಯಲು ಲಿಪಿಕಾರರನ್ನು ಬಳಸಿಕೊಳ್ಳಲು 2007ರಿಂದಲೇ ಅವಕಾಶ ಕಲ್ಪಿಸಲಾಗಿದೆ. ಅಲ್ಲದೇ ಅಂತಹ ಅಭ್ಯರ್ಥಿಗಳಿಗೆ ಪ್ರತಿ ಗಂಟೆಗೆ 20 ನಿಮಿಷದಂತೆ ಹೆಚ್ಚುವರಿ ಸಮಯವನ್ನೂ ನೀಡಲಾಗುತ್ತದೆ.

ಅಂಕಿ–ಅಂಶಗಳು

674	5 ಲಕ್ಷ	11,538	2,118
ಖಾಲಿ ಹುದ್ದೆಗಳು	ಅರ್ಜಿ ಸಲ್ಲಿಸಿದವರು	ಪರೀಕ್ಷೆ ತೆಗೆದುಕೊಂಡ ಅಂಗವಿಕಲ ಅಭ್ಯರ್ಥಿಗಳು	ದೃಷ್ಟಿದೋಷವಿರುವ ಅಭ್ಯರ್ಥಿಗಳು

‘ಅರ್ಜಿ ಸಲ್ಲಿಸುವಾಗಲೇ ಲಿಪಿಕಾರರನ್ನು ಅಭ್ಯರ್ಥಿಯೇ ನೇಮಕ ಮಾಡಿಕೊಳ್ಳುತ್ತಾರೋ ಅಥವಾ ಪ್ರಾಧಿಕಾರ ಲಿಪಿಕಾರ ವ್ಯವಸ್ಥೆ ಕಲ್ಪಿಸಬೇಕೋ ಎನ್ನುವ ಕುರಿತು ಆಯ್ಕೆ ಇರುತ್ತದೆ. ಅಲ್ಲದೇ, ಮೊದಲೇ ಲಿಪಿಕಾರರನ್ನು ನಿಗದಿ ಮಾಡಿ ಅವರದೇ ಭಾವಚಿತ್ರ ಇರುವ ಪ್ರತ್ಯೇಕ ಪ್ರವೇಶ ಪತ್ರವನ್ನೂ ನೀಡಬೇಕು. ಆದರೆ, ಕೆಇಎ ಕರೆದಿದ್ದ ಅರ್ಜಿಯಲ್ಲಿ ದೃಷ್ಟಿ ದೋಷವಿರುವ ಅಭ್ಯರ್ಥಿಗಳು ಲಿಪಿಕಾರರ ಬಳಕೆ ಕುರಿತು ಆಯ್ಕೆಯ ಅವಕಾಶವೇ ಇರಲಿಲ್ಲ. ಸರ್ಕಾರಿ ಪದವಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಹಿಂದೆ ನಡೆದಿದ್ದ ಪರೀಕ್ಷೆಯಲ್ಲೂ ಇಂತಹ ಪ್ರಮಾದವಾಗಿತ್ತು. ಈ ಪರೀಕ್ಷೆಯಲ್ಲೂ ಅದು ಮುಂದುವರಿದಿದೆ ಎನ್ನುವುದು’ ಅಂಗವಿಕಲ ಅಭ್ಯರ್ಥಿಗಳ ದೂರು.

‘ಅಂಗವಿಕಲ ಅಭ್ಯರ್ಥಿಗಳಿಗೆ ಕಂಪ್ಯೂಟರ್‌ನಲ್ಲಿ ಪರೀಕ್ಷೆ ಬರೆಯಲು ಅವಕಾಶವಿದ್ದರೆ ಸಾಫ್ಟ್‌ವೇರ್ ಮತ್ತು ಸ್ಕ್ರೀನಿಂಗ್‌ನ ಸಮಸ್ಯೆ ಪರಿಹರಿಸಿಕೊಳ್ಳಲು ಪರೀಕ್ಷೆಗೂ ಒಂದು ದಿನ ಮೊದಲು ಅವಕಾಶ ಕಲ್ಪಿಸಬೇಕು. ಆದರೆ, ಬೆಂಗಳೂರಿನ ನನಗೆ ದೂರದ ಚಿಕ್ಕೋಡಿಯಲ್ಲಿ ಕೇಂದ್ರ ನೀಡಿರುವ ಕಾರಣ ಒಂದು ದಿನ ಮುಂಚೆ ಅಲ್ಲಿಗೆ ತಲುಪಲು ಸಾಧ್ಯವಾಗುತ್ತಿಲ್ಲ ಎನ್ನುತ್ತಾರೆ’ ದೃಷ್ಟಿದೋಷವಿರುವ ಅಭ್ಯರ್ಥಿಯೊಬ್ಬರು.

ಆಹಾರ ಮತ್ತು ನಾಗರಿಕ ಸರಬರಾಜು ನಿಗಮ, ಕಟ್ಟಡ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ (ಕಿಯೋನಿಕ್ಸ್), ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನಲ್ಲಿ (ಎಂಎಸ್ಐಎಲ್) ಖಾಲಿ ಇರುವ ವಿವಿಧ ವೃಂದಗಳ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ.

ಬ್ರೇಕ್ ಇನ್‌ಸ್ಪೆಕ್ಟರ್: ಮತ್ತೆ ಪಟ್ಟಿ ಪರಿಷ್ಕರಣೆ

ಬೆಂಗಳೂರು: ಮೋಟಾರು ವಾಹನ ನಿರೀಕ್ಷಕ (ಐಎಂವಿ– ಬ್ರೇಕ್ ಇನ್‌ಸ್ಪೆಕ್ಟರ್) 141 ಹುದ್ದೆಗಳ ಭರ್ತಿಗೆ 2022ರ ಜುಲೈ 22ರಂದು ಪ್ರಕಟಿಸಿದ್ದ ಆಯ್ಕೆ ಪಟ್ಟಿಯನ್ನು ಕೆಪಿಎಸ್‌ಸಿ ಗುರುವಾರ ಮತ್ತೊಮ್ಮೆ ಪರಿಷ್ಕರಿಸಿ ಪ್ರಕಟಿಸಿದೆ.

ಪರಿಷ್ಕೃತ ಪಟ್ಟಿಯಲ್ಲಿ ಮೂವರು ಅಭ್ಯರ್ಥಿಗಳು ಹುದ್ದೆ ವಂಚಿತರಾಗಿದ್ದು, ಅವರ ಬದಲು ಇತರ ಮೂವರು ಹೊಸತಾಗಿ ಸೇರ್ಪಡೆ ಆಗಿದ್ದಾರೆ.

ಆಯ್ಕೆ ಪಟ್ಟಿ ಸಿದ್ಧಪಡಿಸುವ ಸಂದರ್ಭದಲ್ಲಿ ಕೆಪಿಎಸ್‌ಸಿ, ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಕರ್ತವ್ಯ ನಿರ್ವಹಿಸಿದವರಿಗೆ ವಯೋಮಿತಿ ಸಡಿಲಿಸಿ ಅವಕಾಶ ನೀಡಿರಲಿಲ್ಲ. ಇದನ್ನು ಪ್ರಶ್ನಿಸಿ ಮೂವರು ಅಭ್ಯರ್ಥಿಗಳು ಕೆಎಟಿ ಮೊರೆ ಹೋಗಿದ್ದರು. ಸಾರಿಗೆ ನಿಗಮ ಕೂಡಾ ಸರ್ಕಾರಿ ಸ್ವಾಮ್ಯದ ಸಂಸ್ಥೆ ಆಗಿರುವುದರಿಂದ ಈ ಮೂವರು ಅಭ್ಯರ್ಥಿಗಳು ಈಗಾಗಲೇ ಸಲ್ಲಿಸಿರುವ ಕರ್ತವ್ಯದ ಅವಧಿಯನ್ನು ಪರಿಗಣಿಸಿ ವಯೋಮಿತಿ ಸಡಿಲಿಸಿ ಅವಕಾಶ ನೀಡುವಂತೆ ಕೆಎಟಿ ತೀರ್ಪು ನೀಡಿತ್ತು. ಹೀಗಾಗಿ, ಕೆಪಿಎಸ್‌ಸಿ ಆಯ್ಕೆ ಪಟ್ಟಿಯನ್ನು ಪರಿಷ್ಕರಿಸಿದೆ.

ಸುದ್ದಿ 2 ನಿಮಿಷ

ರಾಜ್ಯದ ಹಲವೆಡೆ ಗರಿಷ್ಠ ಉಷ್ಣಾಂಶ ಹೆಚ್ಚಳ ಸಾಧ್ಯತೆ

ಬೆಂಗಳೂರು: ರಾಜ್ಯದ ಹಲವೆಡೆ ಗರಿಷ್ಠ ಉಷ್ಣಾಂಶವು 2ರಿಂದ 3 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿ ಉತ್ತರ ಕನ್ನಡ, ಉತ್ತರ ಒಳನಾಡಿನ ಬಾಗಲಕೋಟೆ, ಬೆಳಗಾವಿ, ಗದಗ, ಹಾವೇರಿ, ದಕ್ಷಿಣ ಒಳನಾಡಿನ ಬಳ್ಳಾರಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ಕೋಲಾರ, ಮಂಡ್ಯ, ಮೈಸೂರು, ಹಾಸನ ಹಾಗೂ ವಿಜಯನಗರ ಜಿಲ್ಲೆಯ ಒಂದೆರಡು ಕಡೆ ಗರಿಷ್ಠ ಉಷ್ಣಾಂಶ ಹೆಚ್ಚಳವಾಗುವ ಸಂಭವವಿದೆ ಎಂದು ಇಲಾಖೆ ಹೇಳಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರುತ್ತದೆ. ಕೆಲವು ಕಡೆಗಳಲ್ಲಿ ಬೆಳಿಗ್ಗೆ ವೇಳೆ ಮಂಜು ಮುಸುಕುವ ಸಾಧ್ಯತೆ ಇರುತ್ತದೆ. ಗರಿಷ್ಠ ಉಷ್ಣಾಂಶ 30 ಡಿಗ್ರಿ ಸೆಲ್ಸಿಯಸ್, ಕನಿಷ್ಠ ಉಷ್ಣಾಂಶ 18 ಡಿಗ್ರಿ ಸೆಲ್ಸಿಯಸ್ ಇರುವ ಸಾಧ್ಯತೆಯಿದೆ ಎಂದು ತಿಳಿಸಿದೆ.

ಗುರುವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ ಹಿಂದಿನ 24 ಗಂಟೆಯ ಅವಧಿಯಲ್ಲಿ ಕಾರವಾರದಲ್ಲಿ ಗರಿಷ್ಠ ಉಷ್ಣಾಂಶ (36.9 ಡಿಗ್ರಿ ಸೆಲ್ಸಿಯಸ್) ಹಾಗೂ ಬೆಂಗಳೂರಿನ ಚಿಕ್ಕಜಾಲದಲ್ಲಿ ಕನಿಷ್ಠ ಉಷ್ಣಾಂಶ (13.4 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ.

ದಸರಾ ಮೆರವಣಿಗೆ: ಗುಮಟೆ ನೃತ್ಯಕ್ಕೆ ಪ್ರಥಮ ಬಹುಮಾನ



ಮೈಸೂರು: ದಸರಾ ಅಂಗವಾಗಿ ಇಲ್ಲಿ ಮಂಗಳವಾರ ನಡೆದ ವಿಜಯದಶಮಿ ಮೆರವಣಿಗೆಯಲ್ಲಿ ಪಾಲ್ಗೊಂಡ ಕಲಾತಂಡಗಳ ಪೈಕಿ ಉಡುಪಿ ಜಿಲ್ಲೆಯ ಹೆಗ್ಗುಂಜೆಯ ಸಿ. ಚಂದ್ರನಾಯ್ಕ ನೇತೃತ್ವದ ಮಲ್ಲಿಕಾರ್ಜುನ ಕುಡುಬಿ ಹೋಳಿ ಜಾನಪದ ಕಲಾಸಂಘದ ಕಲಾವಿದರು ಪ್ರದರ್ಶಿಸಿದ ಗುಮಟೆ ನೃತ್ಯಕ್ಕೆ ಪ್ರಥಮ ಬಹುಮಾನ ಲಭಿಸಿದೆ.

ಚಂದ್ರನಾಯ್ಕ ಅವರ ತಂಡವು ಪ್ರಥಮ ಬಹುಮಾನವಾಗಿ ₹15 ಸಾವಿರ ಪಡೆದಿದೆ. ಮೈಸೂರಿನ ಸಿ. ಮಂಜುನಾಥ ನೇತೃತ್ವದ ಆದಿದ್ರಾವಿಡ ತಮಟೆ ಮತ್ತು ನಗಾರಿ ಸಾಂಸ್ಕೃತಿಕ ಕಲಾತಂಡದ ತಮಟೆ ಮತ್ತು ನಗಾರಿ ಪ್ರದರ್ಶನ ಹಾಗೂ ಮೈಸೂರಿನ ಅಂಬಳೆ ಶಿವಣ್ಣ ನೇತೃತ್ವದ ಬಸವೇಶ್ವರ ವೀರಗಾಸೆ ಜಾನಪದ ಕಲಾ ತಂಡದ ವೀರಭದ್ರನ ಕುಣಿತಕ್ಕೆ ಜಂಟಿಯಾಗಿ ದ್ವಿತೀಯ ಬಹುಮಾನ ನೀಡಲಾಗಿದ್ದು, ತಲಾ ₹ 5 ಸಾವಿರ ದೊರೆತಿದೆ.

ಚಿಕ್ಕಬಳ್ಳಾಪುರದ ಜಂಗಮಕೋಟೆಯ ಜಿ.ಎಂ.ಮಂಜುನಾಥ ನೇತೃತ್ವದ ನಂದೀಶ್ವರ ನಗಾರಿ ಗೊಂಬೆ ನೃತ್ಯ ಕಲಾವಿದರ ಸಂಘದ ನಗಾರಿ ಗೊಂಬೆ ಪ್ರದರ್ಶನಕ್ಕೆ ತೃತೀಯ ಬಹುಮಾನವಾಗಿ ₹5 ಸಾವಿರ ನೀಡಲಾಗಿದೆ ಎಂದು ದಸರಾ ಮೆರವಣಿಗೆ ಉಪಸಮಿತಿ ಉಪ ವಿಶೇಷಾಧಿಕಾರಿ ಬಿ. ರಮೇಶ್ ತಿಳಿಸಿದ್ದಾರೆ.

ಕಲಿಕಾ ಸಾಮರ್ಥ್ಯ ಒರೆಗೆ: ನ.3ಕ್ಕೆ ಸಮೀಕ್ಷೆ

ರಾಷ್ಟ್ರದಾದ್ಯಂತ 3, 6 ಮತ್ತು 9ನೇ ತರಗತಿ ಮಕ್ಕಳಿಗೆ ಒಂದೇ ದಿನ ರಾಜ್ಯ ಶೈಕ್ಷಣಿಕ ಸಾಧನಾ ಪರೀಕ್ಷೆ

• ಸೂರ್ಯನಾರಾಯಣ ವಿ.

ಚಾಮರಾಜನಗರ: ಕಿರಿಯ ಹಾಗೂ ಹಿರಿಯ ಪ್ರಾಥಮಿಕ ತರಗತಿಗಳಲ್ಲಿ ಓದುತ್ತಿರುವ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಒರೆಗೆ ಹಚ್ಚುವ ಉದ್ದೇಶದಿಂದ ಕೇಂದ್ರ ಶಿಕ್ಷಣ ಸಚಿವಾಲಯ ಮತ್ತು ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿಯು (ಎನ್‌ಸಿಇಆರ್‌ಟಿ) ನ.3ರಂದು ದೇಶದಾದ್ಯಂತ ರಾಜ್ಯ ಶೈಕ್ಷಣಿಕ ಸಾಧನಾ ಸಮೀಕ್ಷೆ–2023 (ಎಸ್‌ಇಎಎಸ್) ಹಮ್ಮಿಕೊಂಡಿದೆ.

ರಾಜ್ಯ, ಸಿಬಿಎಸ್‌ಇ, ಐಸಿಎಸ್‌ಇ ಸೇರಿದಂತೆ ಎಲ್ಲ ಪಠ್ಯಕ್ರಮಗಳ ಸರ್ಕಾರಿ, ಅನುದಾನಿತ, ಖಾಸಗಿ ಶಾಲೆಗಳ 3, 6 ಮತ್ತು 9ನೇ ತರಗತಿಯ ವಿದ್ಯಾರ್ಥಿಗಳು ಸಮೀಕ್ಷೆಗೆ ಒಳಗಾಗಲಿದ್ದಾರೆ. ಸಮೀಕ್ಷೆಯು ಪರೀಕ್ಷೆ ರೂಪದಲ್ಲಿರುತ್ತದೆ. ಭಾಷೆ ಮತ್ತು ಗಣಿತ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಗಳಿರಲಿದ್ದು, ವಿದ್ಯಾರ್ಥಿಗಳು ಒಎಂಆರ್ ಶೀಟ್‌ನಲ್ಲಿ ಉತ್ತರಿಸಬೇಕು.

ಮುಖ್ಯಾಂಶಗಳು

- ದೇಶದಾದ್ಯಂತ ಏಕರೂಪದ ಪರೀಕ್ಷೆ
- ಎಲ್ಲ ಪಠ್ಯಕ್ರಮಗಳ ವಿದ್ಯಾರ್ಥಿಗಳು ಭಾಗಿ
- ಭಾಷೆ ಮತ್ತು ಗಣಿತ ವಿಷಯದ ಪ್ರಶ್ನೆ

ದೇಶದ ಎಲ್ಲ ರಾಜ್ಯ, ಕೇಂದ್ರಾಡಳಿತ ಪ್ರದೇಶಗಳ ಆಯ್ದ 1.14 ಕೋಟಿ ಮಕ್ಕಳು ಈ ಪರೀಕ್ಷೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ರಾಜ್ಯದಲ್ಲಿ 4.96 ಲಕ್ಷ ವಿದ್ಯಾರ್ಥಿಗಳು ಹಾಜರಾಗಲಿದ್ದಾರೆ ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮಕ್ಕಳಲ್ಲಿರುವ ಕಲಿಕಾ ಸಾಮರ್ಥ್ಯ ಅರಿಯುವುದು ಹಾಗೂ ವಿಶ್ಲೇಷಣೆಗೆ ಒಳಪಡಿಸುವುದು ಈ ಸಮೀಕ್ಷೆಯ ಪ್ರಮುಖ ಉದ್ದೇಶವಾಗಿದೆ.



> ದೇಶದಾದ್ಯಂತ ಈ ಪರೀಕ್ಷೆ ನಡೆಯುತ್ತಿದ್ದು, ಜಿಲ್ಲೆಯಲ್ಲೂ ಸಿದ್ಧತೆ ನಡೆಸಲಾಗುತ್ತಿದೆ. ಮಕ್ಕಳ ಕಲಿಕಾ ಮಟ್ಟವನ್ನು ತಿಳಿಯಲು ಇದು ಸಹಕಾರಿ
> **ರಾಮಚಂದ್ರ ರಾಜೇ ಅರಸ್,** ಡಿಡಿಪಿಐ, ಚಾಮರಾಜನಗರ

‘ಸಮೀಕ್ಷೆಯ ಫಲಿತಾಂಶವು ಮಕ್ಕಳ ಕಲಿಕಾ ಮಟ್ಟ ಹೆಚ್ಚಿಸಲು ಮತ್ತು ಬೋಧನಾ ವ್ಯವಸ್ಥೆಯಲ್ಲಿ ಮಾಡಬೇಕಾದ ಸುಧಾರಣಾ ಕ್ರಮಗಳ ಬಗ್ಗೆ ನಿರ್ಧಾರ ಕೈಗೊಳ್ಳಲು ಕೇಂದ್ರ ಶಿಕ್ಷಣ ಇಲಾಖೆ ಮತ್ತು ಎನ್‌ಸಿಇಆರ್‌ಟಿಗೆ ಅವಕಾಶ ನೀಡಲಿದೆ’ ಎಂದು ಅಧಿಕಾರಿಗಳು ಹೇಳುತ್ತಾರೆ.

ಎಸ್‌ಇಎಎಸ್ ವೈಶಿಷ್ಟ್ಯ ಏನು?

ಶೈಕ್ಷಣಿಕ ಸಮೀಕ್ಷೆ ಹೊಸದೇನಲ್ಲ. ಶಿಕ್ಷಣ ಸಚಿವಾಲಯ ಈ ಹಿಂದೆಯೂ ರಾಷ್ಟ್ರೀಯ ಶೈಕ್ಷಣಿಕ ಸಮೀಕ್ಷೆ (ಎನ್‌ಎಎಸ್) ನಡೆಸಿದೆ.

‘ಎನ್‌ಎಎಸ್‌ನಲ್ಲಿ ಜಿಲ್ಲಾ ಮಟ್ಟದಲ್ಲಿ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಹೋಲಿಕೆ ಮಾಡಲಾಗುತ್ತಿತ್ತು. ಜಿಲ್ಲೆಗಳ ಅಂಕಿ ಅಂಶಗಳಿಗೆ ಒತ್ತು ನೀಡಲಾಗುತ್ತಿತ್ತು. ಈ ಬಾರಿ ನಡೆಯುತ್ತಿರುವ ಪರೀಕ್ಷೆಯಲ್ಲಿ ಎನ್‌ಸಿಇಆರ್‌ಟಿ ಇನ್ನಷ್ಟು ತಳಮಟ್ಟಕ್ಕೆ ಹೋಗಿದ್ದು, ತಾಲ್ಲೂಕುವಾರು ಶಾಲೆಗಳು ಮತ್ತು ಅಲ್ಲಿನ ಮಕ್ಕಳ ಶೈಕ್ಷಣಿಕ ಸಾಧನೆಯನ್ನು ಅಳೆಯಲು ಮುಂದಾಗಿದೆ. ಜಿಲ್ಲೆಯ ಒಳಗಡೆ ತಾಲ್ಲೂಕು ಮಟ್ಟದಲ್ಲಿ ಮಕ್ಕಳ ಕಲಿಕಾ ಮಟ್ಟವನ್ನು ವಿಶ್ಲೇಷಿಸಲು ಈ ಸಮೀಕ್ಷೆ ಅವಕಾಶ ನೀಡಿದೆ’ ಎಂದು ಅಧಿಕಾರಿಗಳು ವಿವರಿಸಿದರು.

ಆಯ್ದ ಶಾಲೆಗಳು: ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಆಯ್ದ ಶಾಲೆಗಳ ಮಕ್ಕಳು ಮಾತ್ರ ಈ ಪರೀಕ್ಷೆ ಬರೆಯಲಿದ್ದಾರೆ. ರಾಜ್ಯದಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಶಾಲೆಗಳನ್ನು ಆಯ್ಕೆ ಮಾಡಿದೆ. ಒಂದು ತರಗತಿಯಿಂದ ಗರಿಷ್ಠ 30 ಮಕ್ಕಳು ಪರೀಕ್ಷೆ ಬರೆಯಲಿದ್ದಾರೆ.

‘ಚಾಮರಾಜನಗರ ಜಿಲ್ಲೆಯಲ್ಲಿ ಸರ್ಕಾರಿ, ಅನುದಾನಿತ, ಖಾಸಗಿ ಸೇರಿದಂತೆ 377 ಶಾಲೆಗಳನ್ನು ಈ ಸಮೀಕ್ಷೆಗಾಗಿ ಆಯ್ಕೆ ಮಾಡಲಾಗಿದೆ. 3, 6 ಮತ್ತು 9ನೇ ತರಗತಿಯ 10,528 ಮಕ್ಕಳು ಪರೀಕ್ಷೆ ಬರೆಯಲಿದ್ದಾರೆ’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ರಾಮಚಂದ್ರ ರಾಜೇ ಅರಸ್ ‘ಪ್ರಜಾವಾಣಿ’ಗೆ ತಿಳಿಸಿದರು.

ಸಮಗ್ರ ತನಿಖೆಗೆ ಅಡ್ಡಿ– ರಾಜಭವನ

ಪ್ರಜಾವಾಣಿ ವಾರ್ತೆ

ಚೆನ್ನೈ: ರಾಜಭವನದ ಆವರಣದ ಹೊರಭಾಗದಲ್ಲಿ ನಡೆದಿದ್ದ ಪೆಟ್ರೋಲ್ ಬಾಂಬ್ ದಾಳಿಯನ್ನು ಸಾಧಾರಣ ವಿಧ್ವಂಸಕ ಕೃತ್ಯ ಎಂಬುದಾಗಿ ಹೇಳುವ ಮೂಲಕ ಪೊಲೀಸರು ಪ್ರಕರಣವನ್ನು ದುರ್ಬಲಗೊಳಿಸಲು ಯತ್ನಿಸುತ್ತಿದ್ದಾರೆ. ಪ್ರಕರಣ ಕುರಿತು ಸಮಗ್ರ ತನಿಖೆಗೆ ತಡೆ ಒಡ್ಡಿದ್ದಾರೆ ಎಂದು ರಾಜಭವನ ಗುರುವಾರ ಆರೋಪಿಸಿದೆ.

ರಾಜಭವನದ ಆರೋಪವನ್ನು ತಳ್ಳಿ ಹಾಕಿರುವ ಪೊಲೀಸರು, ಕಾನೂನು ಪ್ರಕಾರವೇ ತನಿಖೆ ನಡೆಯುತ್ತಿದೆ ಎಂದು ಹೇಳಿದ್ದಾರೆ.

ಈ ಕುರಿತು ರಾಜಭವನದ ಕಾರ್ಯದರ್ಶಿ ಟಿ.ಸೆಂಗೊಟ್ಟೈಯನ್ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ‘ಪೊಲೀಸರ ನಡೆಯು, ದಾಳಿ ನಡೆಸಿದವರನ್ನು ರಕ್ಷಿಸುವ ಉದ್ದೇಶ ಹೊಂದಿದೆ ಎಂಬುದನ್ನು ತೋರಿಸುತ್ತದೆ’ ಎಂದಿದ್ದಾರೆ.

ಚೆನ್ನೈ ಪೊಲೀಸ್ ಆಯುಕ್ತ ಸಂದೀಪ್ ರಾಯ್ ರಾಥೋಡ್ ಅವರು ರಾಜ್ಯಪಾಲ ಆರ್.ಎನ್. ರವಿ ಅವರನ್ನು ಭೇಟಿಯಾಗಿ ತನಿಖೆಯ ಪ್ರಗತಿಯ ಬಗ್ಗೆ ಮಾಹಿತಿ ನೀಡಿದ ಬಳಿಕ ರಾಜಭವನದಿಂದ ಈ ಹೇಳಿಕೆ ಹೊರಬಿದ್ದಿದೆ.

ಪ್ರಕರಣಕ್ಕೆ ಸಂಬಂಧಿಸಿ, ಕರುಕ್ಕಾ ವಿನೋದ್ ಎಂಬಾತನನ್ನು ಬಂಧಿಸಿ, 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಆತನ ವಿರುದ್ಧ ಐಪಿಸಿ, ಸ್ಫೋಟಕ ವಸ್ತುಗಳ ಕಾಯ್ದೆ ಮತ್ತು ಸಾರ್ವಜನಿಕ ಸ್ವತ್ತುಗಳ (ಹಾನಿ ತಡೆ) ಕಾಯ್ದೆಯಡಿ ಗುರುವಾರ ಎಫ್‌ಐಆರ್ ದಾಖಲಿಸಲಾಗಿದೆ.

ಬಿಜೆಪಿ ಕಚೇರಿ ಹಾಗೂ ಪೊಲೀಸ್ ಠಾಣೆ ಮೇಲೆ ಪೆಟ್ರೋಲ್ ಬಾಂಬ್ ಎಸೆದ ಪ್ರಕರಣಗಳು ಸೇರಿ ವಿನೋದ್ ವಿರುದ್ಧ ಈಗಾಗಲೇ 7 ಪ್ರಕರಣಗಳಿವೆ.

ತಮಿಳುನಾಡು ಕಾನೂನು ಸಚಿವ ಎಸ್.ರಘುಪತಿ ಅವರು ಘಟನೆಯನ್ನು ಖಂಡಿಸಿದ್ದಾರೆ.



ಬೀಳ್ಕೊಡುಗೆ ಸಂಭ್ರಮ... ಮೈಸೂರಿನ ಅರಮನೆ ಆವರಣದಲ್ಲಿ ಗುರುವಾರ ನಡೆದ ಬೀಳ್ಕೊಡುಗೆ ವೇಳೆ ಅಂಬಾರಿ ಆನೆ ‘ಅಭಿಮನ್ಯು’ ಮಾವುತ ವಸಂತ ಅವರು ಪತ್ನಿಯೊಂದಿಗೆ ಫೋಟೊ ತೆಗೆಸಿಕೊಂಡು ಸಂಭ್ರಮಿಸಿದರು. ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.

ಲೋಕಾಯುಕ್ತ ಬಲೆಗೆ ಬೆಳಗಾವಿ ವಾಣಿಜ್ಯ ತೆರಿಗೆ ಜಂಟಿ ಆಯುಕ್ತೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಳಗಾವಿ ವಿಭಾಗದ ವಾಣಿಜ್ಯ ತೆರಿಗೆ ಜಂಟಿ ಆಯುಕ್ತೆ ದಾಕ್ಷಾಯಿಣಿ ಚೌಶೆಟ್ಟಿ ಅವರನ್ನು ಉದ್ಯಮಿಯೊಬ್ಬರಿಂದ ₹25 ಸಾವಿರ ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ವಿಕಾಸ ಕಂಪೋಸಿಟ್ಸ್ ಸಂಸ್ಥೆಯ ವ್ಯವಸ್ಥಾಪಕ ವಿಕಾಸ ಪ್ರಮೋದ ಕೋಕಣೆ ನೀಡಿದ ದೂರು ಆಧರಿಸಿ ಲೋಕಾಯುಕ್ತ ಎಸ್‌ಪಿ ಹನುಮಂತರಾಯ ಮತ್ತು ಇನ್‌ಸ್ಪೆಕ್ಟರ್ ನಿರಂಜನ ಪಾಟೀಲ ನೇತೃತ್ವದಲ್ಲಿ ಪೊಲೀಸರು ಕಾರ್ಯಾಚರಣೆ ನಡೆಸಿದರು.



ದಾಕ್ಷಾಯಿಣಿ

‘ವಿಕಾಸ ಅವರು ತಮ್ಮ ಸಂಸ್ಥೆಯಿಂದ ಪೂರೈಸಲಾದ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ‘ಸಿ’ ಫಾರ್ಮ್ ಪಡೆದು ರಾಜ್ಯ ಸರಕು ಮತ್ತು ಸೇವಾ ತೆರಿಗೆ ಇಲಾಖೆಗೆ ಸಲ್ಲಿಸದ ಕಾರಣ, ಇಲಾಖೆಯಿಂದ ಕಂಪನಿಗೆ ಜಪ್ತಿ ನೋಟಿಸ್ ನೀಡಲಾಗಿತ್ತು. ಹೀಗಾಗಿ ವಿಕಾಸ ಅವರು ಸಂಸ್ಥೆಯಿಂದ ಜಿಎಸ್‌ಟಿ ಮೊತ್ತ ₹41 ಸಾವಿರ ಕಟ್ಟಿದ್ದರು’ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

‘ಈ ಹಣವನ್ನು ಮರಳಿ ಪಡೆಯಲು (ರಿಫಂಡ್) ವಾಣಿಜ್ಯ ತೆರಿಗೆ ಜಂಟಿ ಆಯುಕ್ತರ ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಅದನ್ನು ಪಡೆಯಲು ₹25 ಸಾವಿರ ಲಂಚಕ್ಕೆ ಆಯುಕ್ತೆ ದಾಕ್ಷಾಯಿಣಿ ಬೇಡಿಕೆ ಇಟ್ಟಿದ್ದರು’ ಎಂದು ಅವರು ತಿಳಿಸಿದ್ದಾರೆ.

ಅ.30ರಂದು ಮಾಲೆ ಧಾರಣೆ: ನ.5ರಂದು ಶೋಭಾಯಾತ್ರೆ

ಶ್ರೀರಾಮ ಸೇನೆ: ದತ್ತಮಾಲಾ ಅಭಿಯಾನ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಶ್ರೀರಾಮ ಸೇನೆಯ 20ನೇ ವರ್ಷದ ದತ್ತಮಾಲಾ ಅಭಿಯಾನ ಇದೇ 30ರಿಂದ ನವೆಂಬರ್ 5ರವರೆಗೆ ನಡೆಯಲಿದೆ ಎಂದು ಶ್ರೀರಾಮ ಸೇನೆ ರಾಜ್ಯ ಘಟಕದ ಅಧ್ಯಕ್ಷ ಗಂಗಾಧರ ಕುಲಕರ್ಣಿ ತಿಳಿಸಿದರು.

‘ಮೊದಲ ದಿನ ದತ್ತಮಾಲಾ ಧಾರಣೆ, ನ.2ರಂದು ದತ್ತ ದೀಪೋತ್ಸವ, ನ.4ರಂದು ಪಡಿ ಸಂಗ್ರಹ, ನ.5ರಂದು ನಗರದಲ್ಲಿ ಶೋಭಾಯಾತ್ರೆ ಮತ್ತು ದತ್ತಪೀಠದಲ್ಲಿ ಪಾದುಕೆ ದರ್ಶನ, ಹೋಮ–ಹವನ ಮತ್ತು ಮಹಾಪ್ರಸಾದ ಕಾರ್ಯಕ್ರಮ ಇರಲಿದೆ. ಶ್ರೀರಾಮ ಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಭಾಗವಹಿಸಲಿದ್ದಾರೆ’ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾಹಿತಿ ನೀಡಿದರು.

‘20ನೇ ವರ್ಷದ ಅಭಿಯಾನದಲ್ಲಿ ಹಲವು ಬೇಡಿಕೆಗಳನ್ನು ಸರ್ಕಾರದ ಮುಂದೆ ಇಡಲಾಗಿದೆ. ದತ್ತಪೀಠದಲ್ಲಿರುವ ಗೋರಿಗಳನ್ನು ಸರ್ಕಾರಿ ದಾಖಲೆಗಳ ಪ್ರಕಾರ 14 ಕಿ.ಮೀ. ದೂರದ ನಾಗೇನಹಳ್ಳಿ ಬಾಬಾ ಬುಡನ್ ದರ್ಗಾಕ್ಕೆ ಸ್ಥಳಾಂತರ ಮಾಡಬೇಕು. ದತ್ತಪೀಠ ಹಿಂದೂ ಪೀಠ ಎಂದು ಘೋಷಣೆ ಮಾಡಬೇಕು. ಅಲ್ಲಿ ನಡೆಯುವ ಉರುಸ್ ಬಂದ್ ಆಗಬೇಕು. ಬರುವ ಭಕ್ತರಿಗೆ ನಿತ್ಯ ಪ್ರಸಾದ ವ್ಯವಸ್ಥೆ ಮಾಡಬೇಕು. ಯಾತ್ರಿ ನಿವಾಸ ನಿರ್ಮಿಸಿ ಉಪನಯನ, ಹೋಮ–ಹವನ ಸೇರಿ ಧಾರ್ಮಿಕ ಕಾರ್ಯಕ್ರಮಗಳಿಗೆ ಅವಕಾಶ ನೀಡಬೇಕು. ಸಾಧು–ಸಂತರಿಗೆ ದರ್ಶನಕ್ಕೆ ಮುಕ್ತ ಅವಕಾಶ ಸಿಗಬೇಕು’ ಎಂದು ಒತ್ತಾಯಿಸಿದರು.

‘ನ.30ರಂದು ಪಾದುಕೆ ದರ್ಶನಕ್ಕೆ ಬರುವ ಭಕ್ತರಿಗೆ ಮುಜರಾಯಿ ಇಲಾಖೆಯಿಂದ ಊಟದ ವ್ಯವಸ್ಥೆ ಮಾಡಬೇಕು. ಸಂಸದರ ನಿಧಿಯಿಂದ ಹಣ ಪಡೆದು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ದತ್ತಪೀಠಕ್ಕೆ ಭೇಟಿ ನೀಡುವ ಭಕ್ತರಿಗೆ ವಸ್ತ್ರಸಂಹಿತೆ ನಿಗದಿ ಮಾಡಬೇಕು. ಅಲ್ಲಿರುವ ಜೀಪ್ ಚಾಲಕರಿಂದ ಪ್ರವಾಸಿಗರ ಲೂಟಿಯಾಗುತ್ತಿದ್ದು, ಅದಕ್ಕೆ ಕಡಿವಾಣ ಹಾಕಬೇಕು’ ಎಂದು ಆಗ್ರಹಿಸಿದರು.

‘ಮಹಿಷ ದಸರಾಕ್ಕೆ ವಿರೋಧ ಇರಲಿಲ್ಲ’

‘ಮಹಿಷ ದಸರಾ ಆಚರಣೆಗೆ ನಮ್ಮ ವಿರೋಧ ಇರಲಿಲ್ಲ. ಸದಾ ಹಿಂದೂ ದೇವತೆಗಳ ಅವಹೇಳನ ಮಾಡುವ ಪ್ರೊ.ಕೆ.ಎಸ್.ಭಗವಾನ್ ಭಾಗವಹಿಸುವುದಕ್ಕೆ ನಮ್ಮ ವಿರೋಧವಿತ್ತು’ ಎಂದು ಗಂಗಾಧರ ಕುಲಕರ್ಣಿ ಸ್ಪಷ್ಟಪಡಿಸಿದರು.



ಗಂಗಾಧರ ಕುಲಕರ್ಣಿ

ದತ್ತಮಾಲೆ ಅಭಿಯಾನಕ್ಕೆ ವಿರೋಧ ವ್ಯಕ್ತಪಡಿಸುವುದಾಗಿ ದಲಿತ ಸಂಘಟನೆಗಳು ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಕೆ.ಎಸ್.ಭಗವಾನ್ ಭಾಗವಹಿಸಲು ಅವಕಾಶ ನೀಡಬಾರದು ಎಂದು ಮನವಿ ಸಲ್ಲಿಸಿದ್ದೆವು. ಜಿಲ್ಲಾಡಳಿತಕ್ಕೆ ಅದು ಸರಿ ಎನಿಸಿ ಕಾರ್ಯಕ್ರಮ ನಿರ್ಬಂಧಿಸಿತು. ಶ್ರೀರಾಮ ಸೇನೆ ಅಸ್ಪೃಶ್ಯತೆ ವಿರುದ್ಧ ಧ್ವನಿ ಎತ್ತುತ್ತಲೇ ಬಂದಿದೆ’ ಎಂದರು.

ನರ್ಸಿಂಗ್: ವಿದ್ಯಾರ್ಥಿಗಳೇ ‘ನಕಲಿ’

ಒಂದನೇ ಪುಟದಿಂದ

‘ವಿದ್ಯಾರ್ಥಿಗಳನ್ನು ಹೆಸರು ಬದಲಿಸಿರುವ ನರ್ಸಿಂಗ್ ಶಾಲೆಗಳಿಗೆ ಮಂಡಳಿಯ ಕಾರ್ಯದರ್ಶಿ ಪತ್ರ ಬರೆದು ಎಲ್ಲ ಮಾಹಿತಿಯೊಂದಿಗೆ ವಿವರಣೆ ನೀಡುವಂತೆ ತಿಳಿಸಿದ್ದಾರೆ. ಹೆಸರುಗಳಲ್ಲಿನ ಅಕ್ಷರ ತಪ್ಪುಗಳನ್ನು ಸರಿಪಡಿಸಲು ಅವಕಾಶವಿದೆ. ಆದರೆ, ಸಂಪೂರ್ಣ ಹೆಸರು ಬದಲಾಗಿರುವುದು ಮೇಲ್ನೋಟಕ್ಕೆ ಕಾಣಿಸುತ್ತಿದೆ. ವಿದ್ಯಾರ್ಥಿಗಳ ಹೆಸರು ಬದಲಾಗಿರುವುದಕ್ಕೆ ಸಂಬಂಧಪಟ್ಟಂತೆ ನರ್ಸಿಂಗ್ ಶಾಲೆಯವರು ಸೂಕ್ತ ವಿವರಣೆ ನೀಡದೇ ಇದ್ದರೆ, ಬದಲಾದ ಹೆಸರಿನ ವಿದ್ಯಾರ್ಥಿಯ ನೋಂದಣಿಯನ್ನು ತಡೆಹಿಡಿಯಲಾಗುವುದು ಎಂದೂ ಅವರು ಹೇಳಿದ್ದಾರೆ.

ಏನಿದು ಪ್ರಕರಣ?: 2022–23ನೇ ಸಾಲಿನ ನರ್ಸಿಂಗ್ ಕೋರ್ಸ್‌ಗೆ ಪ್ರವೇಶಕ್ಕೆ ಪರೀಕ್ಷಾ ಮಂಡಳಿಯಲ್ಲಿ ವಿದ್ಯಾರ್ಥಿಗಳ ಆನ್‌ಲೈನ್ ನೋಂದಣಿಯು 2022 ಸೆ. 1ರಿಂದ ಡಿ. 31ರವರೆಗೆ ನಡೆದಿತ್ತು. ಅದರಂತೆ ನರ್ಸಿಂಗ್ ಶಾಲೆಯವರು ವಿದ್ಯಾರ್ಥಿಗಳ ವಿದ್ಯಾರ್ಹತೆಯ ದಾಖಲೆಗಳ ಸಹಿತ ಡಿ. 31ರವರೆಗೆ ಆನ್‌ಲೈನ್‌ನಲ್ಲಿ ನೋಂದಾಯಿಸಿದ್ದಾರೆ. ಹೀಗೆ ನೋಂದಾಯಿಸಿದ ವಿದ್ಯಾರ್ಥಿಗಳ ಮೂಲ ದಾಖಲಾತಿಗಳನ್ನು ಪರೀಕ್ಷಾ ಮಂಡಳಿಗೆ ಸಲ್ಲಿಸಲು 2023 ಮಾರ್ಚ್ 5ರಿಂದ 15ರವರೆಗೆ ಕಾಲಾವಕಾಶ ನೀಡಲಾಗಿತ್ತು. ಆದರೆ, ಕೆಲವು ಶಾಲೆಯವರು ಆನ್‌ಲೈನ್‌ನಲ್ಲಿ ಮೊದಲು ನೀಡಿದ್ದ ಹೆಸರುಗಳನ್ನು ಮಂಡಳಿಯ ಸಿಬ್ಬಂದಿಯ ನೆರವಿನಿಂದ ಬದಲಾವಣೆ ಮಾಡಿದ್ದಾರೆ. ಮಂಡಳಿಯ ಹಿರಿಯ ಅಧಿಕಾರಿಗಳ ಗಮನಕ್ಕೆ ತಾರದೆ ಕೆಳಹಂತದಲ್ಲಿ ಈ ಅಕ್ರಮ ನಡೆದಿರುವುದು ಗೊತ್ತಾಗಿದೆ.

‘ಖಾಸಗಿ ನರ್ಸಿಂಗ್ ಶಾಲೆಗಳು ಈ ಅಕ್ರಮ ದಾರಿಯಲ್ಲಿ ಹೊರ ರಾಜ್ಯದ ವಿದ್ಯಾರ್ಥಿಗಳನ್ನು ಕೋರ್ಸ್‌ಗೆ ನೋಂದಣಿ ಮಾಡಿಕೊಳ್ಳುತ್ತಿವೆ. ಈ ರೀತಿ ನೋಂದಣಿಯಾದ ವಿದ್ಯಾರ್ಥಿಗಳು ಪರೀಕ್ಷೆಗೆ ಮಾತ್ರ ಹಾಜರಾಗುತ್ತಾರೆ. ಅವರನ್ನು ಪಾಸ್ ಮಾಡಿ ಪ್ರಮಾಣಪತ್ರಗಳನ್ನು ಶಾಲೆಯವರೇ ತಲುಪಿಸುತ್ತಾರೆ. ನರ್ಸಿಂಗ್ ಮಂಡಳಿಯ ಸಿಬ್ಬಂದಿಯ ಜೊತೆ ನರ್ಸಿಂಗ್ ಶಾಲೆಯವರು ಹೊಂದಾಣಿಕೆ ಮಾಡಿಕೊಂಡು ಈ ದಂಧೆಯಲ್ಲಿ ತೊಡಗಿದ್ದಾರೆ. ಹಲವು ವರ್ಷಗಳಿಂದ ಈ ಅಕ್ರಮ ನಡೆಯುತ್ತಿದೆ’ ಎಂದು ನರ್ಸಿಂಗ್ ಮಂಡಳಿಯ ಸಿಬ್ಬಂದಿಯೊಬ್ಬರು ತಿಳಿಸಿದರು.

ಹೈಕೋರ್ಟ್ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಆದೇಶ

‘ಪಿತ್ರಾರ್ಜಿತ ಆಸ್ತಿ: ತಾಯಿಗೂ ಪಾಲು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೃತ ಹೊಂದಿದ ಪುತ್ರನ ಆಸ್ತಿಗೆ ತಾಯಿಯು ಮೊದಲನೇ ವರ್ಗದ ವಾರಸುದಾರಳಾಗುತ್ತಾಳೆ ಮತ್ತು ಪತಿ ಜೀವಂತವಾಗಿದ್ದರೂ ಪಿತ್ರಾರ್ಜಿತ ಆಸ್ತಿ ಪೈಕಿ ಪುತ್ರನಿಗೆ ಸೇರಬೇಕಾದ ಆಸ್ತಿಯಲ್ಲಿ ಆಕೆ ತನ್ನ ಪಾಲು ಪಡೆಯಬಹುದು’ ಎಂದು ಹೈಕೋರ್ಟ್ ಆದೇಶಿಸಿದೆ.

‘ಮೃತಪಟ್ಟಿರುವ ಪುತ್ರನ (ಸಂತೋಷ್) ಪಾಲಿನ ಆಸ್ತಿಯಲ್ಲಿ ಪಾಲು ಪಡೆಯಲು ತಾಯಿ (ಸುಶೀಲಮ್ಮ) ಹಕ್ಕು ಹೊಂದಿಲ್ಲ’ ಎಂಬ ಚಿಕ್ಕಮಗಳೂರು ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯದ ಆದೇಶ ಪ್ರಶ್ನಿಸಿ ಟಿ.ಎನ್. ಸುಶೀಲಮ್ಮ ಸಲ್ಲಿಸಿದ್ದ ಸಾಮಾನ್ಯ ಎರಡನೇ ಮೇಲ್ಮನವಿಯನ್ನು (ಆರ್‌ಎಸ್‌ಎ) ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿದ್ದ ಏಕಸದಸ್ಯ ಪೀಠ ಪುರಸ್ಕರಿಸಿ ಈ ಕುರಿತಂತೆ ಆದೇಶಿಸಿದೆ.

ಪ್ರಕರಣವೇನು?: ಸಂತೋಷ್ ಪತ್ನಿ ಮತ್ತು ಪುತ್ರ ಪೂರ್ವಜರ ಆಸ್ತಿಯಲ್ಲಿ ಪಾಲು ಕೋರಿ ವಿಚಾರಣಾ ನ್ಯಾಯಾಲಯದಲ್ಲಿ ಅಸಲು ದಾವೆ ಹೂಡಿದ್ದರು. ಈ ಅರ್ಜಿ ವಿಲೇವಾರಿ ಮಾಡುವಾಗ ಸುಶೀಲಮ್ಮ, ‘ಪ್ರಕರಣದಲ್ಲಿ ನನ್ನನ್ನೂ ಪ್ರತಿವಾದಿಯನ್ನಾಗಿ ಮಾಡಬೇಕಿತ್ತು. ಆದರೆ, ಮಾಡಿಲ್ಲ. ಈ ಕುರಿತ ಮನವಿಯನ್ನು ವಿಚಾರಣಾ ಮತ್ತು ಸೆಷನ್ಸ್ ನ್ಯಾಯಾಲಯ ಪರಿಗಣಿಸಿಲ್ಲ. ಹೀಗಾಗಿ, ಅವುಗಳ ಆದೇಶ ಅಕ್ರಮವಾಗಿದ್ದು ನನಗೆ ಅನ್ಯಾಯವಾಗಿದೆ. ಮೇಲ್ಮನವಿದಾರಳಾದ ನಾನು ಮೃತ ಸಂತೋಷ್‌ನ ತಾಯಿಯಾಗಿದ್ದು, ಕಾನೂನುಬದ್ಧವಾಗಿ ಅವನಿಗೆ ಸೇರಬೇಕಾದ ಆಸ್ತಿಯಲ್ಲಿ ನನಗೂ ಪಾಲು ಬರಬೇಕಿದೆ’ ಎಂದು ಕೋರಿದ್ದರು. ಆದರೆ, ಈ ಅರ್ಜಿ ವಿಚಾರಣೆ ಹಂತದಲ್ಲಿರುವಾಗಲೇ ಸುಶೀಲಮ್ಮ ಅವರೂ ನಿಧನ ಹೊಂದಿದ್ದರು.



ಪ್ರತಿವಾದಿಗಳ ಪರ ವಕೀಲರು ‘ಸುಶೀಲಮ್ಮ ಅವರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಹಂಚಿಕೆಯಾಗಿಲ್ಲ. ಮೇಲಾಗಿ, ಅವರಿಗೆ ಪಾಲು ಹಂಚಿಕೆ ಮಾಡುವ ವೇಳೆಗಾಗಲೇ ಅವರು ಸಾವನ್ನಪ್ಪಿದ್ದಾರೆ. ಈ ಹಂತದಲ್ಲಿ ಸುಶೀಲಮ್ಮನ ಪುತ್ರಿಗೆ ಮತ್ತು ಅವರ ಕಾನೂನಾತ್ಮಕ ವಾರಸುದಾರರಿಗೆ ಪಾಲು ಹಂಚಿಕೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಅವರು ತಾಯಿಯ ಪಾಲಿನಲ್ಲಿ ಪಾಲು ಪಡೆಯಲು ಅರ್ಹರಲ್ಲ. ತಾಯಿಗೆ ಪಾಲು ಹಂಚಿಕೆಯಾಗುವ ಮುನ್ನವೇ ನಿಧನ ಹೊಂದಿರುವ ಕಾರಣ ಸೆಷನ್ಸ್ ನ್ಯಾಯಾಲಯದ ಆದೇಶದಲ್ಲಿ ಮಾರ್ಪಾಡು ಮಾಡುವ ಅಗತ್ಯವಿಲ್ಲ’ ಎಂಬ ವಾದ ಮಂಡಿಸಿದ್ದರು.

ಆದರೆ, ಇದನ್ನು ತಳ್ಳಿ ಹಾಕಿರುವ ಹೈಕೋರ್ಟ್, ‘ಅರ್ಜಿ ವಿಚಾರಣೆಗೆ ಬಾಕಿ ಇರುವಾಗ ಸುಶೀಲಮ್ಮ ನಿಧನರಾಗಿದ್ದು, ಹಿಂದೂ ಮಹಿಳೆಗೆ ಸಂಬಂಧಿಸಿದ ಸಾಮಾನ್ಯ ಉತ್ತರಾಧಿಕಾರ ನಿಯಮಗಳನ್ನು ಹಿಂದೂ ಉತ್ತರಾಧಿಕಾರಿ ಕಾಯ್ದೆ–1956ರ ಕಲಂ 15ರ ಅಡಿಯಲ್ಲಿ ಅನ್ವಯಿಸಿ ನೋಡಬೇಕಿದೆ. ಕಲಂ 16ರ ಅಡಿ ಹಿಂದೂ ಮಹಿಳೆಯ ಆಸ್ತಿಯು ಪುತ್ರರು, ಪುತ್ರಿಯರು (ಹಿಂದೆ ಸಾವನ್ನಪ್ಪಿರುವ ಪುತ್ರ ಅಥವಾ ಪುತ್ರಿಯ ಮಕ್ಕಳೂ ಸೇರಿ) ಮತ್ತು ಪತಿಗೆ ವಿಭಾಗವಾಗುತ್ತದೆ. ಆದ್ದರಿಂದ, ಕಲಂ 15ರ ಪ್ರಕಾರ ಸುಶೀಲಮ್ಮ ಅವರ ಆಸ್ತಿಯು ಪುತ್ರ, ಪುತ್ರಿ ಮತ್ತು ಪತಿಗೆ ವಿಭಾಗವಾಗುತ್ತದೆ ಎಂದು ವಿವರಿಸಿದೆ. ಅಂತೆಯೇ, ಸೆಷನ್ಸ್ ನ್ಯಾಯಾಲಯದ ಡಿಕ್ರಿ ಆದೇಶದಲ್ಲಿ ಮಾರ್ಪಾಡು ಮಾಡಿ ಆದೇಶಿಸಿದೆ.

‘ಅರ್ಜಿಯಲ್ಲಿ ಸುಶೀಲಮ್ಮ ಅವರನ್ನು ಒಮ್ಮೆ ಪಕ್ಷಕಾರರನ್ನಾಗಿ ಮಾಡಿದ ಮೇಲೆ ಅವರೂ ಸಂತೋಷ್ ಅವರ ಮೊದಲನೇ ವರ್ಗದ ವಾರಸುದಾರರು ಎನಿಸಲಿದ್ದಾರೆ. ಸಂತೋಷ್ ಅವರು ತಾಯಿ, ಪತ್ನಿ ಮತ್ತು ಪುತ್ರನನ್ನು ಅಗಲಿದ್ದು, ಹಿಂದೂ ಅವಿಭಾಜ್ಯ ಕುಟುಂಬದಲ್ಲಿ ಸುಶೀಲಮ್ಮ ಮೊದಲನೇ ವರ್ಗದ ವಾರಸುದಾರೆ. ಸಂತೋಷ್ ಅವರ ಆಸ್ತಿಯಲ್ಲಿ ಪಾಲು ಪಡೆಯಲು ಮೂಲ ಮೇಲ್ಮನವಿದಾರರಾದ ಸುಶೀಲಮ್ಮ ಅರ್ಹರು. ಮೊದಲ ಮೇಲ್ಮನವಿ ನ್ಯಾಯಾಲಯದ ನಡೆ ದೋಷಪೂರಿತವಾಗಿದೆ’ ಎಂದು ಪೀಠ ಹೇಳಿದೆ.

ಶಿವಮೂರ್ತಿ ಶರಣರ ಜಾಮೀನು ಅರ್ಜಿ ಹೈಕೋರ್ಟ್‌ನಲ್ಲಿ ವಿಚಾರಣೆ

‘ಬಸವರಾಜನ್ ದಂಪತಿಯ ಕ್ರಿಮಿನಲ್ ಪಿತೂರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಠದ ಮಾಜಿ ಆಡಳಿತಾಧಿಕಾರಿ ಎಸ್.ಕೆ.ಬಸವರಾಜನ್ ಹಾಗೂ ಮಾಜಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷೆಯೂ ಆದ ಅವರ ಪತ್ನಿ ಸೌಭಾಗ್ಯ ಬಸವರಾಜನ್ ಅವರ ಕ್ರಿಮಿನಲ್ ಪಿತೂರಿಯ ಭಾಗವಾಗಿ ಶಿವಮೂರ್ತಿ ಶರಣರು ಪೋಕ್ಸೊ ಸೇರಿದಂತೆ ವಿವಿಧ ಕಾಯ್ದೆಗಳ ಅಡಿಯಲ್ಲಿ ಹೀನಾಯ ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುವಂತಾಗಿದೆ’ ಎಂದು ಮುರುಘಾಮಠದ ಪೀಠಾಧಿಪತಿ ಶಿವಮೂರ್ತಿ ಶರಣರ ಪರ ವಕೀಲರು ಹೈಕೋರ್ಟ್‌ನಲ್ಲಿ ವಾದ ಮಂಡಿಸಿದರು.

ಜಾಮೀನು ಕೋರಿ ಶಿವಮೂರ್ತಿ ಶರಣರು ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್ ಅವರಿದ್ದ ಏಕಸದಸ್ಯ ಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಹಿರಿಯ ವಕೀಲ ಸಿ.ವಿ.ನಾಗೇಶ್ ಅವರು ಸುದೀರ್ಘ ವಾದ ಮಂಡಿಸಿ, ‘ಇಬ್ಬರು ಸಂತ್ರಸ್ತ ಬಾಲಕಿಯರು ಶರಣರ ವಿರುದ್ಧ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆಯಡಿ ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುವ ಮುನ್ನ ಸರಿಸುಮಾರು ಒಂದು ತಿಂಗಳು ಬಸವರಾಜನ್ ಮತ್ತು ಸೌಭಾಗ್ಯ ವಶದಲ್ಲಿ ಅವರ ಮನೆಯಲ್ಲೇ ತಂಗಿದ್ದರು. ತದನಂತರ ಚಿತ್ರದುರ್ಗದಿಂದ ದೂರದ ಮೈಸೂರಿಗೆ ತೆರಳಿ ಒಡನಾಡಿ ಸಂಸ್ಥೆಯ ಆಶ್ರಯ ಪಡೆದು ದೂರು ದಾಖಲಿಸಿದರು. ಇದರ ಹಿಂದೆ ಪೂರ್ವ ನಿಯೋಜಿತ ಪಿತೂರಿ ಇದೆ’ ಎಂದರು.

‘ಸಂತ್ರಸ್ತ ಬಾಲಕಿಯರು ಮಠದ ಆವರಣದಲ್ಲಿನ ಹಾಸ್ಟೆಲ್‌ನಲ್ಲೇ ಇದ್ದರಾದರೂ ಅದಕ್ಕೆ ಸೂಕ್ತ ಮಹಿಳಾ ವಾರ್ಡನ್ ಇದ್ದರು. ಸ್ವಾಮೀಜಿ ಹದಿನೈದು ದಿನಕ್ಕೋ ಅಥವಾ ತಿಂಗಳಿಗೆ ಒಮ್ಮೆಯೋ ಬಾಲಕಿಯರಿಗೆ ಇಂಗ್ಲಿಷ್ ಮತ್ತು ಸಂಸ್ಕೃತದ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಆಗಾಗ್ಗೆ ಮಕ್ಕಳಿಗೆ ಚಾಕೊಲೆಟ್, ಮೂಸಂಬಿ ಮತ್ತು ದ್ರಾಕ್ಷಿಹಣ್ಣು ಕೊಟ್ಟು ತಮ್ಮ ಪ್ರೇಮ ಮೆರೆಯುತ್ತಿದ್ದರು. ಎಲ್ಲ ಮಕ್ಕಳೂ ಅವರನ್ನು ಅಪ್ಪಾಜಿ ಎಂದೇ ಸಂಬೋಧಿಸುತ್ತಿದ್ದವು. ಅವರೊಬ್ಬ ಬುದ್ಧಿವಂತ, ಯೋಗ್ಯ ಸ್ವಾಮೀಜಿಯಾಗಿ ನಡೆದುಕೊಳ್ಳುತ್ತಿದ್ದರು’ ಎಂದು ಪ್ರತಿಪಾದಿಸಿದರು.

‘ಇಬ್ಬರೂ ಬಾಲಕಿಯರು ಚಿತ್ರದುರ್ಗದಿಂದ 2022ರ ಜುಲೈ 24ರಂದು ಕೆಎಸ್‌ಆರ್‌ಟಿಸಿ ಬಸ್ ಹತ್ತಿ ಬೆಂಗಳೂರಿಗೆ ಬಂದು ಕಾಟನ್‌ಪೇಟೆ ಪೊಲೀಸ್ ಠಾಣೆಯಲ್ಲಿ ಪೊಲೀಸರೆದುರು ನಮಗೆ ಅನ್ಯಾಯವಾಗಿದೆ ಎಂದು ವ್ಯಥೆ ತೋಡಿಕೊಂಡರು. ಮರುದಿವಸವೇ ಮಿಸ್ಟರ್ ಅಂಡ್ ಮಿಸೆಸ್ ಬಸವರಾಜನ್ ಬೆಂಗಳೂರಿಗೆ ಬಂದು ಮಕ್ಕಳನ್ನು ತಮ್ಮೊಟ್ಟಿಗೆ ಕರೆದೊಯ್ದರು. ಕರೆದೊಯ್ಯುವಾಗ ಇವರಿಗೆ ಅನ್ಯಾಯವಾಗಿದೆ. ನ್ಯಾಯ ಸಿಗುವತನಕ ವಿರಮಿಸುವುದಿಲ್ಲ ಎಂದು ಗುಡುಗಿದರು. ಆದರೆ, ಆಗಿದ್ದ ಅನ್ಯಾಯವೇನು ಎಂಬುದನ್ನೇ ಹೇಳಲಿಲ್ಲ’ ಎಂದು ನಾಗೇಶ್ ವಿವರಿಸಿದರು.

‘ಒಂದು ತಿಂಗಳು ಪೂರೈಸಿದ ನಂತರ ಮೈಸೂರಿಗೆ ತೆರಳಿ ಒಡನಾಡಿ ಎಂಬ ಸಂಸ್ಥೆಯ ಆಶ್ರಯದಲ್ಲಿ ಮಕ್ಕಳಿಂದ ದೂರು ದಾಖಲಿಸಿದರು. ಆದರೆ, ವೈದ್ಯಕೀಯ ಪರೀಕ್ಷೆಯಲ್ಲಿ ಮಕ್ಕಳ ಮೇಲೆ ಉದ್ರೇಕಿತ ಲೈಂಗಿಕ ದೌರ್ಜನ್ಯ ನಡೆದಿಲ್ಲ ಎಂಬುದು ಸಾಬೀತಾಗಿದೆ. ಈ ಮಕ್ಕಳೇನೂ ಅಶಿಕ್ಷಿತರಲ್ಲ. ಮುರುಘಾಮಠದ ಬೃಹತ್ ವಿದ್ಯಾಸಂಸ್ಥೆಗೆ ಮಸಿ ಬಳಿಯಲೆಂದೇ ಇಂತಹ ಸುಳ್ಳು ಪ್ರಕರಣವನ್ನು ಸ್ವಾಮೀಜಿ ವಿರುದ್ಧ ಹೆಣೆಯಲಾಗಿದೆ. ಪೋಕ್ಸೊ, ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ, ಧಾರ್ಮಿಕ ಸಂಸ್ಥೆಗಳ ದುರುಪಯೋಗ ತಡೆ, ಬಾಲನ್ಯಾಯ ಅಪರಾಧಗಳಡಿ ಗುರುತರ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಗಿದೆ’ ಎಂದು ನಾಗೇಶ್ ವಿವರಿಸಿದರು.

‘ಬಸವರಾಜನ್ ದಂಪತಿ ಮೇಲೆ ಪಿತೂರಿಯ ಭಾಗವಾಗಿ ಪ್ರತಿ ದೂರು ದಾಖಲಾಗಿರುವುದನ್ನು ಪೀಠ ಗಮನಿಸಬೇಕು’ ಎಂದೂ ಕೋರಿದರು. ಕೋರ್ಟ್ ಕಲಾಪದ ಅವಧಿ ಮುಗಿದ ಕಾರಣ ವಿಚಾರಣೆಯನ್ನು ಇದೇ 30ಕ್ಕೆ ಮುಂದೂಡಲಾಗಿದೆ.

ರಾಜಸ್ಥಾನ ವಿಧಾನಸಭಾ ಚುನಾವಣೆ: ಕಾಂಗ್ರೆಸ್, ಬಿಜೆಪಿ ಕಾರ್ಯಕರ್ತರಲ್ಲಿ ಭುಗಿಲೆದ್ದ ಅಸಮಾಧಾನ

ಪಟ್ಟಿ ಬಿಡುಗಡೆ ಬೆನ್ನಲ್ಲೇ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- **ಈವರೆಗೆ 124 ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದ ಬಿಜೆಪಿ,10 ಕಡೆ ವಿರೋಧ**
- **95 ಸ್ಥಾನಗಳಿಗೆ ಅಭ್ಯರ್ಥಿಗಳ ಹೆಸರು ಪ್ರಕಟಿಸಿರುವ ಕಾಂಗ್ರೆಸ್, 6 ಕಡೆ ಪ್ರತಿಭಟನೆ**

ಜೈಪುರ (ರಾಜಸ್ಥಾನ): ವಿಧಾನಸಭಾ ಚುನಾವಣೆಗೆ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿದ ಬಳಿಕ ಬಿಜೆಪಿ ಮತ್ತು ಕಾಂಗ್ರೆಸ್‌ನಲ್ಲಿ ಭಿನ್ನಾಭಿಪ್ರಾಯ ಕಾಣಿಸಿಕೊಂಡಿದೆ. ಟಿಕೆಟ್ ಸಿಗದವರು ತಮ್ಮ ಅಸಮಾಧಾನ ಹೊರ ಹಾಕಿದ್ದಾರೆ.

ಜೈಪುರದಲ್ಲಿನ ಮಾಳವೀಯ ನಗರ ಕ್ಷೇತ್ರದಲ್ಲಿ ಕಾಂಗ್ರೆಸ್ ಎರಡು ಬಾರಿ ಪರಾಭವಗೊಂಡಿದ್ದ ಅರ್ಚನಾ ಶರ್ಮಾ ಅವರಿಗೆ ಟಿಕೆಟ್ ನೀಡಿದೆ. ಟಿಕೆಟ್ ಹಂಚಿಕೆ ವಿರೋಧಿಸಿ ಕಾಂಗ್ರೆಸ್ ನಾಯಕ ಮತ್ತು ವಿಪ್ರ ಕಲ್ಯಾಣ ಮಂಡಳಿಯ ಅಧ್ಯಕ್ಷ ಮಹೇಶ್ ಶರ್ಮಾ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಮಾಳವೀಯ ನಗರ ಕ್ಷೇತ್ರ ಬಿಜೆಪಿಯ ಭದ್ರಕೋಟೆ. ಬಿಜೆಪಿ ನಾಯಕ, ಮಾಜಿ ಸಚಿವ ಕಾಳಿಚರಣ್ ಸರಾಫ್ 2008, 2013 ಮತ್ತು 2018ರಲ್ಲಿ ಇಲ್ಲಿಂದ ಆಯ್ಕೆಯಾಗಿದ್ದಾರೆ.

'2013ರಲ್ಲಿ ನಾನು ಸೋತಿರುವುದು ನಿಜ. ಆದರೆ, ಆಗ ನರೇಂದ್ರ ಮೋದಿ ಅವರ ಅಲೆಯ ಕಾರಣ ಬಹುತೇಕ ಅಭ್ಯರ್ಥಿಗಳು ಸೋಲು ಕಂಡಿದ್ದರು. ಕಾಳಿಚರಣ್ ಅವರು 48,718 ಮತಗಳ ಅಂತರದಿಂದ ಗೆದ್ದಿದ್ದರು. ಆದರೆ 2018ರಲ್ಲಿ ನಾನು 70,000 ಮತಗಳನ್ನು ಪಡೆದಿದ್ದೆ, ಕೇವಲ 1704 ಮತಗಳ ಅಂತರದಿಂದ ಸೋತೆ. ಆದರೂ ಇಲ್ಲಿಗೆ ₹ 14 ಲಕ್ಷ ಮೊತ್ತದ ಕಾಮಗಾರಿ ಮಂಜೂರು ಮಾಡಿಸಿದ್ದೇನೆ. ಅನೇಕ ಸಮೀಕ್ಷೆಗಳು ನಡೆದಿದ್ದು, ಇವೆಲ್ಲಾ ನನ್ನ ಪರವಾಗಿಯೇ ಇವೆ' ಎಂದು ಅರ್ಚನಾ ಶರ್ಮಾ 'ಪ್ರಜಾವಾಣಿ'ಗೆ ತಿಳಿಸಿದರು.

ಕಾಂಗ್ರೆಸ್ ಬಂಡಾಯ ಎದುರಿಸುತ್ತಿರುವ ಮತ್ತೊಂದು ಕ್ಷೇತ್ರ ಬಿಕಾನೆರ್ ಪಶ್ಚಿಮ. ಇಲ್ಲಿ 2018ರಲ್ಲಿ ಜಯ ಗಳಿಸಿ ಸಚಿವರೂ ಆಗಿರುವ ಬಿ.ಡಿ. ಕಲ್ಲಾ ಅವರಿಗೆ ಟಿಕೆಟ್ ನೀಡಲಾಗಿದೆ. ಇದನ್ನು ಪ್ರತಿಭಟಿಸಿ ಕಾಂಗ್ರೆಸ್ ನಾಯಕ ರಾಜ್‌ಕುಮಾರ್ ಕಿರಾಡು ಅವರು ವಿಪ್ರ ಕಲ್ಯಾಣ ಮಂಡಳಿಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ. ಅನೇಕ ವರ್ಷಗಳಿಂದ ಒಬ್ಬರೇ ವ್ಯಕ್ತಿಗೆ ಟಿಕೆಟ್ ನೀಡಲಾಗುತ್ತಿದೆ. ನಿಷ್ಠ ಕಾರ್ಯಕರ್ತರಿಗೆ ಟಿಕೆಟ್ ಲಭಿಸುವುದು ಯಾವಾಗ ಎಂದು ಅವರು ಪ್ರಶ್ನಿಸಿದ್ದಾರೆ.

ಕಾಂಗ್ರೆಸ್‌ನ ಭದ್ರಕೋಟೆಯಾಗಿರುವ ಡೂಂಗರ್‌ಪುರದಲ್ಲಿ ಕೂಡ ಬಂಡಾಯದ ಧ್ವನಿ ಕೇಳಿಬಂದಿದೆ. ಶಾಸಕ ಗಣೇಶ್ ಘೋಗ್ರ ಅವರಿಗೆ ಟಿಕೆಟ್ ನೀಡಿದ್ದು ಹಲವರ ಅಸಮಾಧಾನಕ್ಕೆ ಕಾರಣವಾಗಿದೆ. ಆಂತರಿಕ ಭಿನ್ನಾಭಿಪ್ರಾಯಗಳು ಕಾಂಗ್ರೆಸ್ ಮತಬ್ಯಾಂಕಿನ ಮೇಲೆ ಪರಿಣಾಮ ಬೀರಬಹುದು ಎಂಬುದು ಚುನಾವಣಾ ವಿಶ್ಲೇಷಕರ ಅಭಿಪ್ರಾಯ.



ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ಅವರು ಬೆಂಬಲಿಗರು ಮತ್ತು ಟಿಕೆಟ್ ಆಕಾಂಕ್ಷಿಗಳೊಂದಿಗೆ ನವದೆಹಲಿಯಲ್ಲಿ ಗುರುವಾರ ಎಐಸಿಸಿ ಕೇಂದ್ರ ಕಚೇರಿಯಲ್ಲಿ ಸಮಾಲೋಚನೆ ನಡೆಸಿದರು ಪಿಟಿಐ ಚಿತ್ರ

> **ಮಾಳವೀಯ ನಗರ ಬಿಜೆಪಿ ಭದ್ರಕೋಟೆ. ಕಳೆದ ಸಲ ಕಡಿಮೆ ಅಂತರದಲ್ಲಿ ಸೋತಿದ್ದೆ. ನನ್ನನ್ನು ಕಣಕ್ಕೆ ಇಳಿಸಿದರೆ ವಿರೋಧವೇಕೆ? ಇಲ್ಲಿ ಕಷ್ಟಪಟ್ಟು ದುಡಿದಿದ್ದೇನೆ**
> **ಅರ್ಚನಾ ಶರ್ಮಾ** ಕಾಂಗ್ರೆಸ್ ಅಭ್ಯರ್ಥಿ

> **ಪಕ್ಷವು ಪೂರ್ಣ ಪ್ರಮಾಣದಲ್ಲಿ ಪಟ್ಟಿ ಪ್ರಕಟಿಸುವುದನ್ನು ಕಾಯುತ್ತಿದ್ದೇನೆ. ನಾನು ಚುನಾವಣೆಯಲ್ಲಿ ಗೆಲ್ಲಬಲ್ಲೆ ಎಂಬ ವಿಶ್ವಾಸ ನನಗಿದೆ.**
> **ಚಂದ್ರಭಾನ್ ಆಕ್ಯ** ಚಿತ್ತೋಢಗಡದ ಶಾಸಕ

ಬಿಕಾನೆರ್ ರಾಜಮನೆತನದ ಸಿದ್ಧಿ ಕುಮಾರಿ ಅವರಿಗೆ ಬಿಕಾನೆರ್ ಪೂರ್ವ ಕ್ಷೇತ್ರದ ಟಿಕೆಟ್ ಅನ್ನು ಬಿಜೆಪಿ ನೀಡಿದ ಬಳಿಕ ಪಕ್ಷದ ನಾಯಕ ಮಹಾವೀರ್ ರಂಕಾ ವಿರೋಧ ವ್ಯಕ್ತಪಡಿಸಿದ್ದಾರೆ.

3ನೇ ಪಟ್ಟಿ ಬಿಡುಗಡೆ: ಈ ಮಧ್ಯೆ ಕಾಂಗ್ರೆಸ್ ಗುರುವಾರ ಅಭ್ಯರ್ಥಿಗಳ ಮೂರನೇ ಪಟ್ಟಿ ಬಿಡುಗಡೆ ಮಾಡಿದೆ. ಈ ಪಟ್ಟಿಯಲ್ಲಿ 13 ಶಾಸಕರು ಸೇರಿದಂತೆ 19 ಮಂದಿಗೆ ಟಿಕೆಟ್ ನೀಡಲಾಗಿದೆ.

ಒಟ್ಟು 200 ಸ್ಥಾನಗಳ ಪೈಕಿ 95 ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಗಿದೆ. ಈವರೆಗೆ 77 ಹಾಲಿ ಶಾಸಕರ ಮರು ಆಯ್ಕೆಗೆ ಅವಕಾಶ ಮಾಡಿಕೊಟ್ಟಿದೆ.

ರಾಜಸ್ಥಾನದಲ್ಲಿ ನವೆಂಬರ್ 25ರಂದು ಚುನಾವಣೆ ನಡೆಯಲಿದ್ದು ಮುಂದಿನ ಸೋಮವಾರ ನಾಮಪತ್ರ ಸಲ್ಲಿಕೆ ಆರಂಭವಾಗಲಿದೆ.

ಬಿಜೆಪಿಯಲ್ಲಿ ಹೆಚ್ಚು ವಿರೋಧ

ಕಾಂಗ್ರೆಸ್‌ಗಿಂತ ಬಿಜೆಪಿಯಲ್ಲಿ ವಿರೋಧ ಹೆಚ್ಚಾಗಿದೆ. ಬಿಜೆಪಿಯ ಮೊದಲ ಪಟ್ಟಿಯಲ್ಲಿ ಏಳು ಮಂದಿ ಸಂಸದರ ಹೆಸರಿದ್ದರೂ ಎರಡನೇ ಪಟ್ಟಿಯಲ್ಲಿ ಯಾವ ಸಂಸದರೂ ಇರಲಿಲ್ಲ. ಕಾರ್ಯಕರ್ತರಲ್ಲಿನ ಅಸಮಾಧಾನವನ್ನು ಗಮನಕ್ಕೆ ತೆಗೆದುಕೊಂಡು ಹೀಗೆ ಮಾಡಿರಬಹುದು ಎನ್ನಲಾಗಿದೆ.

ಮಾಜಿ ಉಪಾಧ್ಯಕ್ಷ ಭೈರಾನ್ ಸಿಂಗ್ ಶೆಖಾವತ್ ಅವರ ಅಳಿಯ ನರಪತ್ ಸಿಂಗ್ ರಾಜವೀ ಅವರಿಗೆ ಚಿತ್ತೋಡಗಢದ ಟಿಕೆಟ್ ನೀಡಲಾಗಿದೆ. ಇವರು ಈ ಹಿಂದೆ ಜೈಪುರದ ವಿದ್ಯಾಧರ್ ನಗರದಿಂದ ಆಯ್ಕೆ ಯಾಗಿದ್ದರು. ರಾಜಸ್‌ಮಂದ್ ಸಂಸದೆ ದಿಯಾ ಕುಮಾರಿ ಅವರಲ್ಲಿ ಬಿಜೆಪಿ ಅತೀವ ವಿಶ್ವಾಸವಿಟ್ಟ ಬಳಿಕ, ರಾಜವೀ ಅವರು ಅಸಮಾಧಾನಗೊಂಡಿದ್ದು ಚಿತ್ತೋಡಗಢ ಟಿಕೆಟ್ ಅನ್ನು ಕೂಡ ನಿರಾಕರಿಸಿದ್ದರು.

ಚಿತ್ತೋಢಗಡದ ಶಾಸಕ ಚಂದ್ರಭಾನ್ ಆಕ್ಯ ಈಗ ಕೋಪಗೊಂಡಿದ್ದು, 'ಈ ಪ್ರದೇಶದಲ್ಲಿ ನಾನು ಕೆಲಸ ಮಾಡಿದ್ದೇನೆ. ಪಕ್ಷದ ಮೇಲೆ ನನಗೆ ನಂಬಿಕೆ ಇದೆ' ಎಂದು 'ಪ್ರಜಾವಾಣಿ'ಗೆ ತಿಳಿಸಿದರು. ಆಕ್ಯ ಅವರು ಸ್ವತಂತ್ರವಾಗಿ ಸ್ಪರ್ಧಿಸಲು ನಿರ್ಧರಿಸಿದರೆ ಬಿಜೆಪಿಗೆ ನಷ್ಟವಾಗಲಿದೆ ಎಂದು ವಿಶ್ಲೇಷಕರು ಹೇಳುತ್ತಾರೆ.

ಜೈಪುರದ ಝೋಟ್‌ವಾಡಾದಲ್ಲಿ ಮಾಜಿ ಶಾಸಕ ರಾಜ್‌ಪಾಲ್ ಸಿಂಗ್ ಶೆಖಾವತ್ ಅವರು ಬೆಂಬಲಿಗರು ಸಮಸ್ಯೆ ಒಡ್ಡಬಹುದು. ಶೆಖಾವತ್ ಅವರು 2008, 2013ರಲ್ಲಿ ಗೆದ್ದಿದ್ದರು. 2018ರಲ್ಲಿ ಸೋತಿದ್ದರು. ಆದರೆ 1.16 ಲಕ್ಷ ಮತಗಳನ್ನು ಗಳಿಸಿದ್ದರು. ಈ ಸಲ ಅವರ ಬದಲು ಜೈಪುರ (ಗ್ರಾಮೀಣ) ಸಂಸದ ರಾಜ್ಯವರ್ಧನ ಸಿಂಗ್ ರಾಠೋಡ್ ಅವರಿಗೆ ಟಿಕೆಟ್ ನೀಡಲಾಗಿದೆ. ಶೆಖಾವತ್ ಅವರು ರಾಜೇ ಅವರಿಗೆ ನಿಷ್ಠರಾಗಿದ್ದಾರೆ. ಜೈಪುರದ ಸಾಂಗಾನೆರ್‌ನಲ್ಲಿ ರಾಜೇ ಅವರ ಮತ್ತೊಬ್ಬ ಬೆಂಬಲಿಗ ಮತ್ತು ಶಾಸಕ ಅಶೋಕ್ ಲಾಹೋಟಿ ಅವರನ್ನು ಕೈಬಿಡಲಾಗಿದೆ. 2018ರಲ್ಲಿ ಅವರು 35,000 ಮತಗಳ ಅಂತರದಿಂದ ಜಯ ಗಳಿಸಿದ್ದರು. ಅವರ ಬೆಂಬಲಿಗರು ಬಿಜೆಪಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ್ದರು. ಇದು ಬಿಜೆಪಿಯ ಭದ್ರಕೋಟೆ. ಬಿಜೆಪಿಯ ಅತ್ಯಂತ ಹಿರಿಯ ಶಾಸಕಿ, ಸೂರ್‌ಸಾಗರ್ ಕ್ಷೇತ್ರದ ಸೂರ್ಯಕಾಂತಾ ವ್ಯಾಸ್ ಅವರನ್ನು ಕೈಬಿಟ್ಟು ಅವರ ಬದಲು ನಗರ ಘಟಕದ ಮಾಜಿ ಅಧ್ಯಕ್ಷ ದೇವೇಂದ್ರ ಜೋಶಿ ಅವರನ್ನು ಕಣಕ್ಕಿಳಿಸಲಾಗಿದೆ. ಪುಷ್ಕರಣಾ ಸಮಾಜದ ಕುಲದೇವಿ ದೇವಾಲಯದ ಪುನಶ್ಚೇತನಕ್ಕೆ ₹ 4.75 ಕೋಟಿ ಮಂಜೂರು ಮಾಡಿದ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರನ್ನು ಸೂರ್ಯಕಾಂತಾ ಶ್ಲಾಘಿಸಿದ್ದರು.

ಚುನಾವಣಾ ಕಣದಲ್ಲಿ...

ಎಂಜಿನಿಯರ್, ಡಾಕ್ಟರ್ ನಡುವೆ ಸ್ಪರ್ಧೆ

ಇಂದೋರ್, ಮಧ್ಯಪ್ರದೇಶ (ಪಿಟಿಐ): ಪರಿಶಿಷ್ಟ ಪಂಗಡ ಅಭ್ಯರ್ಥಿಗೆ ಮೀಸಲಾಗಿರುವ ಮಧ್ಯಪ್ರದೇಶದ ಮನಾವರ್ ಕ್ಷೇತ್ರದಿಂದ 27 ವರ್ಷದ ಎಂಜಿನಿಯರ್ ಬಿಜೆಪಿಯ ಶಿವರಾಮ್ ಕನೌಜ್ ಕಣಕ್ಕೆ ಇಳಿದಿದ್ದು ಕಾಂಗ್ರೆಸ್ ಶಾಸಕ ಡಾ. ಹೀರಾಲಾಲ್ ಅಲಾವಾ ಅವರನ್ನು ಎದುರಿಸಲಿದ್ದಾರೆ.

ಇಲ್ಲಿ ಮಾಜಿ ಸಚಿವೆ ರಂಜನಾ ಬಘೆಲ್ ಅವರಿಗೆ ಬಿಜೆಪಿ ಟಿಕೆಟ್ ನಿರಾಕರಿಸಿದ್ದರಿಂದ ಅವರು ಬಂಡೆದ್ದಿರುವುದು ಆಡಳಿತ ಪಕ್ಷಕ್ಕೆ ತಲೆನೋವಾಗಿದೆ. ಆದರೆ ರಂಜನಾ ಅವರು ತಮ್ಮನ್ನು ಬೆಂಬಲಿಸುವರೆಂಬ ವಿಶ್ವಾಸವನ್ನು ಕನೌಜ್ ವ್ಯಕ್ತಪಡಿಸಿದ್ದಾರೆ. ಇವರು ಭೋಪಾಲ್‌ನಲ್ಲಿ ಬಿ.ಟೆಕ್ (ಎಲೆಕ್ಟ್ರಾನಿಕ್ಸ್) ಪೂರ್ಣಗೊಳಿಸಿದ್ದಾರೆ.

ಅಲಾವಾ ಅವರು ನವದೆಹಲಿಯ ಏಮ್ಸ್‌ನಲ್ಲಿ ಸಹಾಯಕ ಪ್ರಾಧ್ಯಾಪಕ ಹುದ್ದೆ ತ್ಯಜಿಸಿದ ಬಳಿಕ 2018ರ ವಿಧಾನಸಭೆ ಚುನಾವಣೆಯಲ್ಲಿ ರಾಜಕೀಯ ಪ್ರವೇಶಿಸಿದ್ದರು. ಮನಾವರ್‌ನಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಗೆದ್ದಿದ್ದರು.

ಶಿವರಾಮ್ ಕನೌಜ್ ಅವರ ತಂದೆ ಗೋಪಾಲ್ ಕನೌಜ್ ಅವರು ಬಿಜೆಪಿ ನಾಯಕರಾಗಿದ್ದು 2021ರಲ್ಲಿ ಅಸುನೀಗಿದ್ದರು. ಆ ಬಳಿಕ ರಾಜಕೀಯ ಪ್ರವೇಶಿಸಿದ ಕನೌಜ್ ಅವರು ಧಾರ್ ಜಿಲ್ಲಾ ಪಂಚಾಯತ್ ಸದಸ್ಯರಾಗಿ ಆಯ್ಕೆಯಾಗಿದ್ದರು. ಈಗ ಮೊದಲ ಬಾರಿಗೆ ವಿಧಾನಸಭೆ ಕಣಕ್ಕಿಳಿದಿದ್ದಾರೆ.

ಶಾ–ಪವನ್ ಕಲ್ಯಾಣ್ ಭೇಟಿ

ಹೈದರಾಬಾದ್ (ಪಿಟಿಐ): ಜನಸೇನಾ ಸಂಸ್ಥಾಪಕ, ನಟ ಪವನ್ ಕಲ್ಯಾಣ್ ಅವರು ದೆಹಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ.

ನವೆಂಬರ್ 30ರಂದು ನಡೆಯಲಿರುವ ವಿಧಾನಸಭೆ ಚುನಾವಣೆಗಾಗಿ ಮೈತ್ರಿ ಮಾಡಿಕೊಳ್ಳುವ ಸಂಬಂಧ ಈ ಇಬ್ಬರು ನಾಯಕರು ಚರ್ಚಿಸಿದರು. ಹೈದರಾಬಾದ್‌ಗೆ ತಾವು ಭೇಟಿ ನೀಡುವ ಮೊದಲು ಒಂದು ನಿರ್ಧಾರಕ್ಕೆ ಬರುವಂತೆ ಪವನ್ ಕಲ್ಯಾಣ್ ಮತ್ತು ತೆಲಂಗಾಣ ಬಿಜೆಪಿ ಘಟಕದ ಅಧ್ಯಕ್ಷರಿಗೆ ಶಾ ಸೂಚಿಸಿದ್ದಾರೆ ಎಂದು ಜನಸೇನಾದ ಮೂಲಗಳು ಹೇಳಿವೆ. ಅಮಿತ್ ಶಾ ಶುಕ್ರವಾರ 27ರಂದು ಹೈದರಾಬಾದ್‌ಗೆ ಭೇಟಿ ನೀಡಿ ಐಪಿಎಸ್ ಪ್ರೊಬೆಶನರ್‌ಗಳ 75ನೇ ತಂಡದ ನಿರ್ಗಮನ ಪಥಸಂಚಲನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ಜೆಸಿಸಿ(ಜೆ)ಗೆ ಕಿಸ್ಮತ್ ಲಾಲ್

ರಾಯಪುರ (ಛತ್ತೀಸಗಢ): ಕಾಂಗ್ರೆಸ್ ಪಕ್ಷ ಟಿಕೆಟ್ ನಿರಾಕರಿಸಿದ್ದರಿಂದ ಛತ್ತೀಸಗಢ ಶಾಸಕ ಕಿಸ್ಮತ್ ಲಾಲ್ ನಂದ್ ಅವರು ಮಾಜಿ ಮುಖ್ಯಮಂತ್ರಿ ದಿ.ಅಜಿತ್ ಜೋಗಿ ಸ್ಥಾಪಿಸಿದ್ದ ಜನತಾ ಕಾಂಗ್ರೆಸ್ ಛತ್ತೀಸ್‌ಗಢ (ಜೆ)– ಜೆಸಿಸಿ (ಜೆ)ಗೆ ಸೇರ್ಪಡೆಗೊಂಡಿದ್ದಾರೆ.

ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಸರಾಯ್‌ಪಾಲಿ ಕ್ಷೇತ್ರದಿಂದ ನಂದ್ ಅವರನ್ನು ಕಣಕ್ಕಿಳಿಸಲಾಗಿದೆ. ಕಾಂಗ್ರೆಸ್‌ನ ಚತುರಿ ನಂದ್ ಅವರು ಎದುರಾಳಿಯಾಗಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ಹಲವರು ಬಂಡಾಯ ಎದ್ದಿದ್ದಾರೆ.

ಕಾಂಗ್ರೆಸ್ ಶಾಸಕ ಅನುಪ್ ನಾಗ್ ಅವರು ಅಂತಗಢ ಕ್ಷೇತ್ರದಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದಾರೆ. ಮುಂಗೇಲಿ ಜಿಲ್ಲಾ ಕಾಂಗ್ರೆಸ್ ಘಟಕದ ಅಧ್ಯಕ್ಷ ಸಾಗರ್ ಸಿಂಗ್ ಮತ್ತು ಮಹಾಸುಮುಂದ್ ನಗರ ಪಾಲಿಕೆಯ ಅಧ್ಯಕ್ಷರಾದ ರಾಶಿ ಮಹಿಲಾಂಗ್ ಅವರು ಪಕ್ಷವನ್ನು ತೊರೆದು ಜೆಸಿಸಿ (ಜೆ) ಸೇರಿದ್ದಾರೆ. ಮಹಾಸುಮುಂದ್‌ನಿಂದ ಮಹಿಲಾಂಗ್ ಮತ್ತು ಲೊರ್ಮಿಯಿಂದ ಸಾಗರ್ ಸಿಂಗ್ ಅವರನ್ನು ಕಣಕ್ಕಿಳಿಸಲಾಗಿದೆ.

ಮುಂದಿನ ಪ್ರಧಾನಿ: ಕಾಂಗ್ರೆಸ್, ಎಸ್‌ಪಿ ಪೋಸ್ಟರ್ ಸಮರ

ಲಖನೌ (ಪಿಟಿಐ): ಲೋಕಸಭಾ ಚುನಾವಣೆಗೂ ಮುನ್ನವೇ ವಿರೋಧ ಪಕ್ಷಗಳ ಮೈತ್ರಿಕೂಟ 'ಇಂಡಿಯಾ'ದಲ್ಲಿ ಪ್ರಧಾನಿ ಪಟ್ಟಕ್ಕೆ ಪೈಪೋಟಿ ಶುರುವಾಗಿದೆ.

ಇಂಡಿಯಾ ಮೈತ್ರಿಕೂಟದ ಭಾಗವಾಗಿರುವ ಸಮಾಜವಾದಿ ಪಕ್ಷ, ಅಖಿಲೇಶ್ ಯಾದವ್ ಅವರನ್ನು ದೇಶದ 'ಭವಿಷ್ಯದ ಪ್ರಧಾನಿ' ಎಂಬ ಪೋಸ್ಟರ್ ಹಾಕಿದ ಬೆನ್ನಲ್ಲೇ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು '2024ರ ಪ್ರಧಾನಿ' ಎಂದು ಬಣ್ಣಿಸುವ ಪೋಸ್ಟರ್ ಗುರುವಾರ ಕಾಂಗ್ರೆಸ್ ಕಚೇರಿ ಹೊರಗೆ ರಾರಾಜಿಸುತ್ತಿದೆ.

ಉತ್ತರಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಅಜಯ್ ರೈ ಅವರನ್ನು 2027ರ ಮುಖ್ಯಮಂತ್ರಿ ಎಂದೂ ಪಕ್ಷ ತನ್ನ ಬ್ಯಾನರ್‌ನಲ್ಲಿ ಬಿಂಬಿಸಿದೆ.

ಈ ಬೆಳವಣಿಗೆ ಕುರಿತು ಪ್ರತಿಕ್ರಿಯಿಸಿರುವ ಎಸ್‌ಪಿ ರಾಜ್ಯ ವಕ್ತಾರ ಫಖ್ರುಲ್ ಹಸನ್, 'ತಮ್ಮ ಪಕ್ಷವು ಹಿಂದುಳಿದವರು, ದಲಿತರು ಮತ್ತು ಅಲ್ಪಸಂಖ್ಯಾತರ ವಿರುದ್ಧ ಹೋರಾಡುತ್ತಿದೆ. ಆದ್ದರಿಂದ ಜನರು ಯಾದವ್ ಅವರನ್ನು ಪ್ರಧಾನಿಯಾಗಿ ನೋಡಲು ಬಯಸುತ್ತಿದ್ದಾರೆ. ಕಾಂಗ್ರೆಸ್ ಎಷ್ಟು ಪೋಸ್ಟರ್‌ಗಳನ್ನು ಹಾಕಿದೆ ಎಂಬುದು ಮುಖ್ಯವಲ್ಲ' ಎಂದು ಹೇಳಿದರು.

ಅಖಿಲೇಶ್ ಅವರನ್ನು 'ಭವಿಷ್ಯದ ಪ್ರಧಾನಿ' ಎಂದು ಬಣ್ಣಿಸುವ ಬ್ಯಾನರ್ ಅನ್ನು ಪಕ್ಷದ ಕಚೇರಿ ಎದುರು ಸೋಮವಾರ ಹಾಕಲಾಗಿತ್ತು. ಇದು ರಾಜಕೀಯ ವಲಯದಲ್ಲಿ ಸಂಚಲನ ಸೃಷ್ಟಿಸಿದೆ.

ಆಡಳಿತಾರೂಢ ಬಿಜೆಪಿ ಇದನ್ನು 'ತಿರುಕನ ಕನಸು' ಎಂದು ಲೇವಡಿ ಮಾಡಿದೆ ಹಾಗೂ ಇಂಡಿಯಾ ಮೈತ್ರಿಕೂಟದ ಇತರ ಸದಸ್ಯರ ಮೇಲೆ ಒತ್ತಡ ಹೇರುವ ಪ್ರಯತ್ನವಾಗಿದೆ ಎಂದು ಟೀಕಿಸಿದೆ.

ಬ್ಯಾನರ್ ಹಾಕಿರುವ ಕಾಂಗ್ರೆಸ್‌ನ ನಿತಾಂತ್ ಸಿಂಗ್ ನಿತಿನ್, 'ಇದು ಪಕ್ಷದ ಕಾರ್ಯಕರ್ತರ ಭಾವನೆ. ಸಾಮಾನ್ಯ ಜನರು ಮುಂಬರುವ ದಿನಗಳಲ್ಲಿ ಕಾಂಗ್ರೆಸ್ ಜೊತೆ ಬರಲು ಬಯಸುತ್ತಾರೆ. ಮುಂಬರುವ ದಿನಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನೇರ ಸ್ಪರ್ಧೆ ನಡೆಯಲಿದ್ದು, ರಾಹುಲ್ ಪ್ರಧಾನಿಯಾಗಲಿದ್ದಾರೆ ಮತ್ತು ಅಜಯ್ ರೈ ರಾಜ್ಯದ ಮುಖ್ಯಮಂತ್ರಿ ಆಗಲಿದ್ದಾರೆ' ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಲೋಕಸಭೆ ಚುನಾವಣೆಗೆ ಮುನ್ನ 'ಚಡ್ಡಿ ಗ್ಯಾಂಗ್': ಟೀಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ತೆಲಂಗಾಣದ ವಿಧಾನಸಭೆ ಚುನಾವಣೆಯಲ್ಲಿ ಬಿಆರ್‌ಎಸ್, ಎಐಎಂಐಎಂ ಮತ್ತ ಬಿಜೆಪಿ ಪ್ರತ್ಯೇಕವಾಗಿ ಚುನಾವಣೆ ಎದುರಿಸುತ್ತಿರಬಹುದು. ಆದರೆ ಲೋಕಸಭೆ ಚುನಾವಣೆಗೆ ಮೊದಲು 'ಚಡ್ಡಿ ಗ್ಯಾಂಗ್' ಒಗ್ಗೂಡಿ ಮೈತ್ರಿ ಮಾಡಿಕೊಳ್ಳಲಿವೆ ಎಂದು ತೆಲಂಗಾಣ ಕಾಂಗ್ರೆಸ್ ಅಧ್ಯಕ್ಷ ಎ. ರೇವಂತ್ ರೆಡ್ಡಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಆರ್‌ಎಸ್, ಬಿಜೆಪಿ ಮತ್ತು ಎಐಎಂಐಎಂ ಈ ಮೂರು 'ಚಡ್ಡಿ ಗ್ಯಾಂಗ್' ಆಗಿವೆ. ವಿಧಾನಸಭೆ ಚುನಾವಣೆ ಬಳಿಕ ಮುಂದಿನ ಜನವರಿ– ಫೆಬ್ರುವರಿಯಲ್ಲಿ ಒಗ್ಗೂಡಲಿವೆ. 'ಕರ್ನಾಟಕದಲ್ಲಿ ನೀವು ಇದನ್ನು ನೋಡಿದ್ದೀರಿ. ಅಲ್ಲಿ ಜೆಡಿ(ಎಸ್) ಮತ್ತು ಬಿಜೆಪಿ ವಿಧಾನಸಭೆ ಚುನಾವಣೆ ಬಳಿಕ ಮೈತ್ರಿ ಮಾಡಿಕೊಂಡಿವೆ. ತೆಲಂಗಾಣದಲ್ಲೂ ಹೀಗೆಯೇ ಆಗಲಿದೆ' ಎಂದರು.

ಬಿಜೆಪಿಯ ಬಿ–ಟೀಮ್ ಜೆಡಿ (ಎಸ್). ತೆಲಂಗಾಣದಲ್ಲಿ ಎಐಎಂಐಎಂ ಜತೆಗೆ ಬಿಆರ್‌ಎಸ್ ಕೂಡ ಬಿಜೆಪಿಯ ಬಿ–ಟೀಮ್‌ನಂತೆ ವರ್ತಿಸುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಅತಂತ್ರ ವಿಧಾನಸಭೆಯ ಸಂದರ್ಭದಲ್ಲಿ ಎಐಎಂಐಎಂ ಜತೆಗೆ ಮೈತ್ರಿಗೆ ಕಾಂಗ್ರೆಸ್ ಮುಕ್ತವಾಗಲಿದೆಯೇ ಎಂದು ಕೇಳಿದ್ದಕ್ಕೆ, 2014ರ ಬಳಿಕ ಆಂಧ್ರಪ್ರದೇಶ ಅಥವಾ ತೆಲಂಗಾಣದಲ್ಲಿ ಅತಂತ್ರ ವಿಧಾನಸಭೆ ಆಗಿಲ್ಲ ಎಂದರು.

'ತೆಲುಗು ಭಾಷಿಕರು ಯಾವಾಗಲೂ ಭಾರಿ ಬಹುಮತವನ್ನೇ ನೀಡಿದ್ದಾರೆ. ಈ ಸಲ ಬಹುಮತದೊಂದಿಗೆ ಅಧಿಕಾರಕ್ಕೆ ಬರುತ್ತೇವೆ. ಎಐಎಂಐಎಂ ಜತೆ ಮೈತ್ರಿಯ ಪ್ರಶ್ನೆಯೇ ಇರುವುದಿಲ್ಲ' ಎಂದರು.

'5 ರಾಜ್ಯಗಳಲ್ಲಿ ಯಾತ್ರೆ ಬೇಡ'

ನವದೆಹಲಿ (ಪಿಟಿಐ): ಚುನಾವಣೆ ನಡೆಯುವ ಐದು ರಾಜ್ಯಗಳಲ್ಲಿ ವಿಕಸಿತ ಭಾರತ ಸಂಕಲ್ಪ ಯಾತ್ರೆಯನ್ನು ಡಿಸೆಂಬರ್ 5ರವರೆಗೆ ನಡೆಸದಂತೆ ಚುನಾವಣಾ ಆಯೋಗವು ಗುರುವಾರ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ವಿಧಾನಸಭೆ ಚುನಾವಣೆ ನಡೆಯುವ ಐದು ರಾಜ್ಯಗಳಲ್ಲಿ ಮತ್ತು ಉಪಚುನಾವಣೆ ನಡೆಯಲಿರುವ ನಾಗಲ್ಯಾಂಡ್‌ನ ತಾಪೀ ಕ್ಷೇತ್ರದಲ್ಲಿ 'ಜಿಲ್ಲಾ ರಥ ಪ್ರಭಾರಿಗಳನ್ನು' ನೇಮಕ ಮಾಡಬಾರದು ಎಂದು ಸಂಪುಟ ಕಾರ್ಯದರ್ಶಿ ರಾಜೀವ್ ಗೌಬಾ ಅವರಿಗೆ ಚುನಾವಣಾ ಆಯೋಗ ಸೂಚಿಸಿದೆ.

ನವೆಂಬರ್20ಕ್ಕೆ ಆರಂಭವಾಗುವ ಯಾತ್ರೆಗಾಗಿ 'ಜಿಲ್ಲಾ ರಥ ಪ್ರಭಾರಿ'ಗಳಾಗಿ ಹಿರಿಯ ಅಧಿಕಾರಿಗಳನ್ನು ನೇಮಿಸುವಂತೆ ಸಚಿವಾಲಯಗಳಿಗೆ ಪತ್ರ ಬಂದಿದೆ ಎಂಬುದು ಆಯೋಗದ ಗಮನಕ್ಕೆ ಬಂದಿದೆ ಎಂದು ಹೇಳಿದೆ.

'ಹಮಾಸ್ ದಾಳಿಗೆ ಭಾರತವನ್ನು ಒಳಗೊಂಡ ಕಾರಿಡಾರ್ ಕಾರಣ'

ಒಂದನೇ ಪುಟದಿಂದ

ಹಮಾಸ್ ದಾಳಿಯ ನಂತರದಲ್ಲಿ ಇಸ್ರೇಲ್ ಭಾರಿ ಪ್ರಮಾಣದಲ್ಲಿ ಪ್ರತಿದಾಳಿ ನಡೆಸುತ್ತಿದೆ. ಅಮೆರಿಕಕ್ಕೆ ಬಂದಿರುವ ಆಸ್ಟ್ರೇಲಿಯಾ ಪ್ರಧಾನಿ ಆ್ಯಂಟನಿ ಆಲ್ಬನೀಸ್ ಅವರ ಜೊತೆ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬೈಡನ್ ಅವರು, ಈ ಮಾತಿಗೆ ಪೂರಕವಾಗಿ ತಮ್ಮ ಬಳಿ ಆಧಾರ ಇಲ್ಲದಿದ್ದರೂ ತಮಗೆ ಬಲವಾಗಿ ಅನಿಸಿರುವುದನ್ನು ಹೇಳುತ್ತಿರುವುದಾಗಿ ತಿಳಿಸಿದ್ದಾರೆ.

'ಇಸ್ರೇಲ್ ಅನ್ನು ಆ ಪ್ರದೇಶದೊಂದಿಗೆ ಬೆಸೆಯುವ ಹಾಗೂ ಒಟ್ಟಾರೆಯಾಗಿ ಇಡೀ ಪ್ರದೇಶವನ್ನು ಬೆಸೆಯುವ ದಿಕ್ಕಿನಲ್ಲಿ ನಾವು ಸಾಧಿಸಿದ ಪ್ರಗತಿಯು ಈ ದಾಳಿಗೆ ಕಾರಣ ಎಂದು ನನಗೆ ಅನಿಸಿದೆ. ಆದರೆ, ಈ ಕೆಲಸವನ್ನು ನಾವು ಹಿಂದೆ ಬಿಡಲಾಗದು' ಎಂದು ಬೈಡನ್ ಅವರು ಹೇಳಿದ್ದಾರೆ.

ಹಮಾಸ್ ಬಂಡುಕೋರರು ನಡೆಸಿರುವ ಭಯೋತ್ಪಾದಕ ದಾಳಿಗೆ ಭಾರತ–ಮಧ್ಯಪ್ರಾಚ್ಯ–ಯುರೋಪ್ ಆರ್ಥಿಕ ಕಾರಿಡಾರ್ (ಐಎಂಇಇಸಿ) ಒಂದು ಕಾರಣವಾಗಿರಬಹುದು ಎಂದು ಬೈಡನ್ ಅವರು ಒಂದು ವಾರದ ಅವಧಿಯಲ್ಲಿ ಎರಡನೆಯ ಬಾರಿ ಹೇಳಿದ್ದಾರೆ.

ಈ ಆರ್ಥಿಕ ಕಾರಿಡಾರ್ ಯೋಜನೆಯನ್ನು ಹಲವರು ಚೀನಾದ ಬೆಲ್ಟ್ ಆ್ಯಂಡ್ ರೋಡ್ ಯೋಜನೆಗೆ ಪರ್ಯಾಯ ಎಂದು ಭಾವಿಸಿದ್ದಾರೆ. ಈ ಯೋಜನೆಯನ್ನು ಅಮೆರಿಕ, ಭಾರತ, ಸೌದಿ ಅರೇಬಿಯಾ, ಯುಎಇ, ಫ್ರಾನ್ಸ್, ಜರ್ಮನಿ, ಇಟಲಿ ಮತ್ತು ಐರೋಪ್ಯ ಒಕ್ಕೂಟದ ನಾಯಕರು ಸೆಪ್ಟೆಂಬರ್‌ನಲ್ಲಿ ಜಂಟಿಯಾಗಿ ಘೋಷಿಸಿದ್ದಾರೆ.

ಭಾರತವನ್ನು ಕೊಲ್ಲಿ ಪ್ರದೇಶದೊಂದಿಗೆ ಜೋಡಿಸುವ ಪೂರ್ವ ಕಾರಿಡಾರ್ ಹಾಗೂ ಕೊಲ್ಲಿ ಪ್ರದೇಶವನ್ನು ಯುರೋಪ್ ಜೊತೆಗೆ ಬೆಸೆಯುವ ಉತ್ತರ ಕಾರಿಡಾ ರ್ಈ ಯೋಜನೆಯ ಭಾಗ.

50 ಮಂದಿ ಒತ್ತೆಯಾಳುಗಳ ಸಾವು: ಹಮಾಸ್

ಗಾಜಾ ಪಟ್ಟಿ (ಎಎಫ್‌ಪಿ): ಒತ್ತೆಯಾಳುಗಳ ಪೈಕಿ ಸುಮಾರು 50 ಮಂದಿ ಇಸ್ರೇಲ್ ನಡೆಸಿದ ವಾಯು ದಾಳಿಯಲ್ಲಿ ಮೃತಪಟ್ಟಿದ್ದಾರೆ ಎಂದು ಹಮಾಸ್ ಬಂಡುಕೋರರು ಹೇಳಿದ್ದಾರೆ.

ಅಕ್ಟೋಬರ್ 7ರಿಂದ ಇಸ್ರೇಲ್ ಗಾಜಾ ಪಟ್ಟಿಯ ಮೇಲೆ ವಾಯು ದಾಳಿ ನಡೆಸುತ್ತಿದೆ. ಹಮಾಸ್ ಬಂಡುಕೋರರು ಇಸ್ರೇಲ್ ಹಾಗೂ ವಿವಿಧ ದೇಶಗಳ 200ಕ್ಕೂ ಹೆಚ್ಚು ಜನರನ್ನು ಒತ್ತೆಯಾಳುಗಳನ್ನಾಗಿ ಇರಿಸಿಕೊಂಡಿದ್ದಾರೆ.

ಇಷ್ಟು ಮಂದಿ ಒತ್ತೆಯಾಳುಗಳು ಮೃತಪಟ್ಟಿದ್ದಾರೆ ಎಂಬ ವಿಚಾರವನ್ನು ಬಂಡುಕೋರರು ತಮ್ಮ ಟೆಲಿಗ್ರಾಮ್ ಚಾನೆಲ್ ಮೂಲಕ ತಿಳಿಸಿದ್ದಾರೆ. ಆದರೆ ಅವರ ಹೇಳಿಕೆಯನ್ನು ಸ್ವತಂತ್ರವಾಗಿ ಪರಿಶೀಲಿಸಲು ಎಎಫ್‌ಪಿ ಸುದ್ದಿಸಂಸ್ಥೆಗೆ ತಕ್ಷಣಕ್ಕೆ ಸಾಧ್ಯವಾಗಿಲ್ಲ.

ಇಸ್ರೇಲ್ ಮೇಲೆ ನಡೆಸಿದ ದಾಳಿಯ ಸಂದರ್ಭದಲ್ಲಿ ಬಂಡುಕೋರರು 1,400 ಜನರನ್ನು ಹತ್ಯೆ ಮಾಡಿದ್ದಾರೆ, 224 ಮಂದಿಯನ್ನು ಒತ್ತೆಯಾಳುಗಳನ್ನಾಗಿ ಒಯ್ದಿದ್ದಾರೆ ಎಂದು ಇಸ್ರೇಲ್ ಸೇನೆ ಹೇಳಿದೆ. ಒತ್ತೆಯಾಳುಗಳ ಪೈಕಿ ನಾಲ್ಕು ಮಂದಿಯನ್ನು ಇದುವರೆಗೆ ಬಿಡುಗಡೆ ಮಾಡಲಾಗಿದೆ.

ಇಸ್ರೇಲ್ ನಡೆಸಿದ ಪ್ರತಿದಾಳಿಗೆ ಏಳು ಸಾವಿರ ಜನರು ಮೃತಪಟ್ಟಿದ್ದಾರೆ ಎಂದು ಹಮಾಸ್ ಆರೋಗ್ಯ ಸಚಿವಾಲಯ ತಿಳಿಸಿದೆ. ಗಡಿಯುದ್ದಕ್ಕೂ ಇಸ್ರೇಲ್‌ನ ಸೇನಾ ಪಡೆ ಜಮಾಯಿಸಿದರೆ ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚಾಗುವ ನಿರೀಕ್ಷೆಯಿದೆ ಎಂದು ಹೇಳಿದೆ.

ಗಾಜಾದ ಉತ್ತರ ಭಾಗದಲ್ಲಿ ಬಂಡುಕೋರರ ನೆಲೆ ಗುರಿಯಾಗಿಸಿಕೊಂಡು ಕಾರ್ಯಾಚರಣೆ

ಇಸ್ರೇಲ್‌ನಿಂದ ಸೀಮಿತ ಭೂದಾಳಿ

ರಫಾ (ಪಿಟಿಐ): ಇಸ್ರೇಲ್ ಪಡೆಗಳು ಮತ್ತು ಯುದ್ಧ ಟ್ಯಾಂಕ್‌ಗಳು ಗಾಜಾದ ಉತ್ತರ ಭಾಗದಲ್ಲಿ ಗುರುವಾರ ಕೆಲವು ಗಂಟೆಗಳವರೆಗೆ ಸೀಮಿತ ಭೂದಾಳಿ ನಡೆಸಿವೆ. ಈ ದಾಳಿಯಲ್ಲಿ ಬಂಡುಕೋರರ ನೆಲೆಯನ್ನು ಗುರಿಯಾಗಿಸಿಕೊಳ್ಳಲಾಗಿತ್ತು ಎಂದು ಇಸ್ರೇಲ್ ಮಿಲಿಟರಿ ಹೇಳಿದೆ.

ಗಾಜಾ ಮೇಲೆ ಇಸ್ರೇಲ್ ಪೂರ್ಣ ಪ್ರಮಾಣದಲ್ಲಿ ಭೂದಾಳಿ ನಡೆಸುವ ನಿರೀಕ್ಷೆ ಇದ್ದು, ಅದಕ್ಕೆ ಪೂರ್ವಭಾವಿಯಾಗಿ ಕದನ ಕಣವನ್ನು ಸಜ್ಜುಗೊಳಿಸಲು ಗುರುವಾರದ ದಾಳಿ ನಡೆದಿದೆ ಎನ್ನಲಾಗಿದೆ.

ಗಾಜಾ ಪಟ್ಟಿಯಲ್ಲಿ ಇಂಧನ ಖಾಲಿಯಾಗಲಿದೆ, ಪರಿಹಾರ ಕಾರ್ಯಗಳನ್ನು ಬಹಳ ಕಡಿಮೆ ಮಾಡುವ ಸ್ಥಿತಿ ಎದುರಾಗಲಿದೆ ಎಂದು ವಿಶ್ವಸಂಸ್ಥೆಯು ಎಚ್ಚರಿಕೆ ನೀಡಿದ ನಂತರದಲ್ಲಿ ಇಸ್ರೇಲ್ ಈ ದಾಳಿ ನಡೆಸಿದೆ.


ಬುಧವಾರದ ವಾಯುದಾಳಿಯಲ್ಲಿ ಗಾಜಾದಲ್ಲಿ ಅಲ್–ಜಝೀರಾ ಸುದ್ದಿವಾಹಿನಿಯ ಹಿರಿಯ ಬಾತ್ಮೀದಾರ ವಾಯೆಲ್ ದಾಹ್‌ದೂಹ್ ಅವರ ಪತ್ನಿ, ಮಗ ಮತ್ತು ಮಗಳು ಮೃತಪಟ್ಟಿದ್ದಾರೆ. ಮಗ ಮತ್ತು ಮಗಳು ಸಾವಿಗೆ ಕೆಲವು ದಿನಗಳ ಮೊದಲು, ಗಾಜಾದ ಪರಿಸ್ಥಿತಿ ಬಗ್ಗೆ ವಿವರಿಸಿ, ತಮ್ಮನ್ನು ರಕ್ಷಿಸಿ ಎಂದು ಕೋರಿ ವಿಡಿಯೊ ಒಂದನ್ನು ಸಿದ್ಧಪಡಿಸಿದ್ದರು.

ದಾಳಿಯ ಸಂದರ್ಭದಲ್ಲಿ ಹಮಾಸ್ ಬಂಡುಕೋರರನ್ನು ಹತ್ಯೆ ಮಾಡಲಾಗಿದೆ, ಕ್ಷಿಪಣೆ ಉಡಾವಣೆಗೆ ಬಳಸುತ್ತಿದ್ದ ಸ್ಥಳವನ್ನು ನಾಶ ಮಾಡಲಾಗಿದೆ ಎಂದು ಇಸ್ರೇಲ್ ಹೇಳಿದೆ. 'ಯುದ್ಧದ ಮುಂದಿನ ಹಂತದ ಸಿದ್ಧತೆಗಾಗಿ ಸೀಮಿತ ಪ್ರಮಾಣದ ಭೂದಾಳಿ ನಡೆಸಲಾಗಿದೆ' ಎಂದು ಇಸ್ರೇಲ್ ಮಿಲಿಟರಿ ವಕ್ತಾರ ಡೇನಿಯಲ್ ಹಗರಿ ತಿಳಿಸಿದ್ದಾರೆ.

24 ಗಂಟೆಗಳ ಅವಧಿಯಲ್ಲಿ 250 ವೈಮಾನಿಕ ದಾಳಿಗಳನ್ನು ನಡೆಸಲಾಗಿದೆ ಎಂದು ಇಸ್ರೇಲ್ ಹೇಳಿದೆ. ಖಾನ್ ಯೂನಿಸ್ ಪ್ರದೇಶದ ವಸತಿ ಕಟ್ಟಡವೊಂದರ ಮೇಲೆಯೂ ದಾಳಿ ಆಗಿದೆ. ಈ ಕಟ್ಟಡದಲ್ಲಿ 75 ಮಂದಿ ಇದ್ದರು ಎಂದು ಸ್ಥಳೀಯರು ತಿಳಿಸಿದ್ದಾರೆ.

ವಿಶ್ವಸಂಸ್ಥೆಯ ನೆರವು ಸಂಸ್ಥೆಯು ತನ್ನಲ್ಲಿನ ಇಂಧನವನ್ನು ಗಾಜಾ ಪಟ್ಟಿಯಲ್ಲಿ ಹಂಚಿಕೊಳ್ಳುತ್ತಿದೆ. ಬೇಕರಿಗಳಿಗೆ ಆಹಾರವಸ್ತು ಸಿದ್ಧಪಡಿಸಲು, ಉಪ್ಪು ನೀರನ್ನು ಕುಡಿಯುವ ನೀರನ್ನಾಗಿ ಪರಿವರ್ತಿಸಲು, ಆಸ್ಪತ್ರೆಗಳಲ್ಲಿ ಇನ್‌ಕ್ಯುಬೇಟರ್‌ಗಳನ್ನು ಮತ್ತು ಇತರ ಜೀವರಕ್ಷಕ ಉಪಕರಣಗಳನ್ನು ನಡೆಸಲು ಇದನ್ನು ಬಳಸಲಾಗುತ್ತಿದೆ. ಆದರೆ ಸಂಸ್ಥೆಯ ಬಳಿ ಇರುವ ಇಂಧನವು ಗುರುವಾರಕ್ಕೆ ಖಾಲಿಯಾಗಲಿದೆ ಎಂದು ಅಂದಾಜಿಸಲಾಗಿದೆ.

ಔಷಧ ಹಾಗೂ ಶುದ್ಧ ನೀರು ಇಲ್ಲದ ಕಾರಣದಿಂದಾಗಿ ಗಾಜಾದ ಅಲ್–ಶಿಫಾ ಆಸ್ಪತ್ರೆಯಲ್ಲಿ ಸೋಂಕು ಹರಡುವ ಪ್ರಮಾಣವು ಹೆಚ್ಚಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ. ಗಾಯಾಳುಗಳಲ್ಲಿ ಸೋಂಕು ವ್ಯಾಪಿಸುವುದನ್ನು ತಡೆಯಲು ದೇಹದ ಕೆಲವು ಭಾಗಗಳನ್ನು ಕತ್ತರಿಸಬೇಕಾಗಿದೆ ಎಂದು ಅವರು ಹೇಳಿದ್ದಾರೆ.



ಗಾಜಾ ಪಟ್ಟಿಯ ಖಾನ್ ಯೂನಿಸ್ ಪ್ರದೇಶದಲ್ಲಿ ಇಸ್ರೇಲ್ ವಾಯುದಾಳಿಯಲ್ಲಿ ಧ್ವಂಸಗೊಂಡಿರುವ ಕಟ್ಟಡಗಳ ಅವಶೇಷಗಳ ಅಡಿಯಲ್ಲಿ ಬದುಕುಳಿದವರಿಗೆ ಹಾಗೂ ಮೃತದೇಹಗಳಿಗೆ ಹುಡುಕಾಟ ನಡೆಸುತ್ತಿರುವ ಸಂಬಂಧಿಗಳು. (ಎಎಫ್‌ಪಿ ಚಿತ್ರ)



> **ನಮಗೆ ಆದ ಹಿನ್ನಡೆಯನ್ನು ತನಿಖೆಗೆ ಒಳಪಡಿಸಲಾಗುತ್ತದೆ. ಎಲ್ಲರೂ ಉತ್ತರ ನೀಡಬೇಕಾಗುತ್ತದೆ. ನಾನು ಕೂಡ ಉತ್ತರ ಕೊಡಬೇಕಾಗುತ್ತದೆ.**
> **ಬೆಂಜಮಿನ್ ನೆತನ್ಯಾಹು,** ಇಸ್ರೇಲ್ ಪ್ರಧಾನಿ

ನೌಕಾಪಡೆಯ 8 ಮಾಜಿ ಸಿಬ್ಬಂದಿಗೆ ಮರಣದಂಡನೆ

ಒಂದನೇ ಪುಟದಿಂದ

ಈ ಪ್ರಕರಣಕ್ಕೆ ಬಹಳ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿದೆ. ಎಲ್ಲ ಬಗೆಯ ಕಾನೂನು ಆಯ್ಕೆಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ತಿಳಿಸಿದೆ.

'ನಮಗೆ ಈ ಎಂಟು ಜನರಿಗೆ ವಿಧಿಸಿರುವ ಶಿಕ್ಷೆಯ ವಿಚಾರವಾಗಿ ಪ್ರಾಥಮಿಕ ಮಾಹಿತಿ ಸಿಕ್ಕಿದೆ.

ಮರಣದಂಡನೆ ವಿಧಿಸಲಾಗಿದೆ ಎಂಬುದನ್ನು ತಿಳಿದು ತೀವ್ರ ಆಘಾತವಾಗಿದೆ. ಇವರ ಕುಟುಂಬದ ಸದಸ್ಯರ ಜೊತೆ ಮತ್ತು ಕಾನೂನು ತಂಡದ ಜೊತೆ ಸಂಪರ್ಕದಲ್ಲಿದ್ದೇವೆ' ಎಂದು ಸಚಿವಾಲಯ ತಿಳಿಸಿದೆ.

ಭಾರತೀಯರಿಗೆ ಎಲ್ಲ ಬಗೆಯ ರಾಜತಾಂತ್ರಿಕ ನೆರವು ಹಾಗೂ ಕಾನೂನು ನೆರವನ್ನು ನೀಡಲಾಗುತ್ತದೆ. ಆದೇಶದ ಬಗ್ಗೆ ಕತಾರ್ ಅಧಿಕಾರಿಗಳ ಜೊತೆ ಮಾತುಕತೆ ನಡೆಸಲಾಗುವುದು ಎಂದು ಭರವಸೆ ನೀಡಿದೆ.

'ಈ ಪ್ರಕರಣದ ಗೋಪ್ಯತೆಯ ಕಾರಣದಿಂದಾಗಿ ಈ ಹಂತದಲ್ಲಿ ಇನ್ನೂ ಹೆಚ್ಚು ಮಾತನಾಡುವುದು ಸರಿಯಾಗಲಿಕ್ಕಿಲ್ಲ' ಎಂದು ಸಚಿವಾಲಯ ಹೇಳಿದೆ.

ಕತಾರ್‌ನಲ್ಲಿರುವ ಭಾರತದ ರಾಯಭಾರಿಯು ಈ ಎಂಟು ಮಂದಿಯನ್ನು ಅಕ್ಟೋಬರ್ 1ರಂದು ಜೈಲಿನಲ್ಲಿ ಭೇಟಿ ಮಾಡಿದ್ದರು.

ಇಸ್ರೇಲ್ ಪರ ಬೇಹುಗಾರಿಕೆ ನಡೆಸಿದ ಆರೋಪದ ಅಡಿಯಲ್ಲಿ ಈ ಎಂಟು ಮಂದಿಯ ಬಂಧನ ಆಗಿ ಒಂದು ವರ್ಷ ಕಳೆದಿದೆ.

ಇಸ್ರೇಲ್ ಮೇಲೆ ಹಮಾಸ್ ದಾಳಿ ನಡೆಸಿದ ನಂತರ ಮಧ್ಯಪ್ರಾಚ್ಯದಲ್ಲಿ ಬಿಕ್ಕಟ್ಟು ತೀವ್ರಗೊಂಡಿರುವ ಹೊತ್ತಿನಲ್ಲಿ ಕತಾರ್ ಇವರಿಗೆ ಮರಣದಂಡನೆ ವಿಧಿಸಿದೆ.

ಹಮಾಸ್ ನಡೆಸಿದ ದಾಳಿಯನ್ನು ಭಾರತವು ಖಂಡಿಸಿತ್ತು, ಇಸ್ರೇಲ್ ಜೊತೆ ಇರುವುದಾಗಿ ಹೇಳಿತ್ತು.

ಪ್ಯಾಲೆಸ್ಟೀನ್ ನಾಗರಿಕರಿಗೆ ಮಾನವೀಯ ನೆಲೆಯಲ್ಲಿ ನೆರವು ವಸ್ತುಗಳನ್ನು ಕೂಡ ಭಾರತ ರವಾನಿಸಿದೆ.

ಆತ್ಮಹತ್ಯೆಗೆ ಪ್ರಚೋದನೆ: ಅತ್ತೆ, ಮಾವಗೆ ಸಜೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೋಷಾರೋಪ ನಿಗದಿಯಲ್ಲಿ ಲೋಪಗಳು ಆಗಿದ್ದರೂ ಅಪರಾಧ ಸಾಬೀತು ಮಾಡುವಂತಹ ಸಾಕ್ಷಿ ಆಧಾರಗಳು ಇದ್ದರೆ ಶಿಕ್ಷೆ ವಿಧಿಸುವುದಕ್ಕೆ ನಿರ್ಬಂಧ ಇಲ್ಲ ಎಂದು ಸುಪ್ರೀಂ ಕೋರ್ಟ್ ಈಚೆಗೆ ಹೇಳಿದೆ.

ಸೊಸೆಯನ್ನು ಆತ್ಮಹತ್ಯೆಗೆ ಪ್ರೇರೇಪಿಸಿದ ಆರೋಪದಲ್ಲಿ ಪರನಗೌಡ ಮತ್ತು ಅವರ ಪತ್ನಿಗೆ ಐಪಿಸಿ ಸೆಕ್ಷನ್ 306ರ ಅಡಿ ಶಿಕ್ಷೆ ವಿಧಿಸಿ ನ್ಯಾಯಮೂರ್ತಿಗಳಾದ ಎಸ್.ರವೀಂದ್ರ ಭಟ್ ಮತ್ತು ಅರವಿಂದ್ ಕುಮಾರ್ ಅವರ ಪೀಠ ತೀರ್ಪು ನೀಡಿದೆ. ಆದರೆ, ಅವರ ವಿರುದ್ಧ ದೋಷಾರೋಪ ನಿಗದಿಯಾಗಿರಲಿಲ್ಲ.

ಯಾವುದೇ ಆರೋಪವನ್ನು ಹೊರಿಸದ ಅಪರಾಧಕ್ಕಾಗಿ ಆರೋಪಿಗಳನ್ನು ಶಿಕ್ಷೆಗೆ ಗುರಿಪಡಿಸಬಹುದೇ ಎಂದು ಹೈಕೋರ್ಟ್ ಪರಿಶೀಲಿಸಬೇಕಾಗಿತ್ತು ಎಂದು ಪೀಠ ಹೇಳಿದೆ.

ಮೃತಳು ಸಾವಿಗೆ ಮೊದಲು ನೀಡಿದ ಹೇಳಿಕೆಯು, ಆಕೆ ಮಾನಸಿಕವಾಗಿ ಆಘಾತಕ್ಕೊಳಗಾಗಿದ್ದರು ಮತ್ತು ಆರೋಪಿ ನೀಡಿದ ಚಿತ್ರಹಿಂಸೆ ಮತ್ತು ಕಿರುಕುಳ ಸಹಿಸಲು ಸಾಧ್ಯವಾಗದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದು ಸ್ಪಷ್ಟವಾಗಿದೆ ಎಂದು ಪೀಠ ಅಭಿಪ್ರಾಯಪಟ್ಟಿದೆ.

ಸಂತ್ರಸ್ತೆ ಸಾಯುವ ಮೊದಲು ಕ್ರೌರ್ಯಕ್ಕೆ ಒಳಗಾಗಿದ್ದಾಳೆ ಎಂದು ಸಾಬೀತುಪಡಿಸಲು ಪ್ರಾಸಿಕ್ಯೂಷನ್ ವಿಫಲವಾದ ಕಾರಣ, ಐಪಿಸಿ ಸೆಕ್ಷನ್ 304 ಬಿ ಮತ್ತು ವರದಕ್ಷಿಣೆ ನಿಷೇಧ ಕಾಯ್ದೆಯ ಸೆಕ್ಷನ್ 3 ಮತ್ತು 4 ರ ಅಡಿ ಶಿಕ್ಷಾರ್ಹ ಅಪರಾಧಗಳಿಂದ ನ್ಯಾಯಾಲಯವು ಆರೋಪಿಗಳನ್ನು ಮುಕ್ತಗೊಳಿಸಿತು.

ಐಪಿಸಿ ಸೆಕ್ಷನ್ 306 ಮತ್ತು ಸೆಕ್ಷನ್ 498ಎ ಮತ್ತು ಸೆಕ್ಷನ್ 34 ರ ಅಡಿ ಅಪರಾಧಕ್ಕಾಗಿ ನ್ಯಾಯಪೀಠವು ಅವರನ್ನು ತಪ್ಪಿತಸ್ಥರೆಂದು ಘೋಷಿಸಿದೆ.

ರೈತರ ನಿರ್ಲಕ್ಷಿಸಿದ್ದ ಶರದ್ ಪವಾರ್: ಮೋದಿ

ಪ್ರಜಾವಾಣಿ ವಾರ್ತೆ

ಮುಂಬೈ: ಪ್ರಧಾನಿ ನರೇಂದ್ರ ಮೋದಿ ಅವರು 'ಇಂಡಿಯಾ' ಮೈತ್ರಿಕೂಟದ ನಾಯಕರನ್ನು ಗುರಿಯಾಗಿಸಿ ವಾಗ್ದಾಳಿ ಮುಂದುವರಿಸಿದ್ದು, ಎನ್‌ಸಿಪಿ ವರಿಷ್ಠ ಶರದ್ ಪವಾರ್ ವಿರುದ್ಧ ಗುರುವಾರ ಇಲ್ಲಿ ಟೀಕಾ ಪ್ರಹಾರ ನಡೆಸಿದರು.

ಶರದ್ ಪವಾರ್ ಹೆಸರನ್ನು ನೇರವಾಗಿ ಉಲ್ಲೇಖಿಸದೆ ವಾಗ್ದಾಳಿ ನಡೆಸಿದ ಮೋದಿ ಅವರು, ಮನಮೋಹನ್ ಸಿಂಗ್ ಅವರ ನೇತೃತ್ವದ ಯುಪಿಎ ಸರ್ಕಾರದಲ್ಲಿ ಕೃಷಿ ಸಚಿವರಾಗಿದ್ದಾಗ ರೈತರ ಬೇಡಿಕೆಗಳನ್ನು ನಿರ್ಲಕ್ಷಿಸಿದ್ದರು ಎಂದು ದೂರಿದರು.

'ಏಳು ವರ್ಷಗಳಲ್ಲಿ ₹13.5 ಲಕ್ಷ ಕೋಟಿ ಮೌಲ್ಯದ ಆಹಾರಧಾನ್ಯಗಳನ್ನು ಕನಿಷ್ಠ ಬೆಂಬಲ ಬೆಲೆ(ಎಂಎಸ್‌ಪಿ) ಅಡಿಯಲ್ಲಿ ಖರೀದಿಸಲಾಗಿದೆ. ಆದರೆ, ಹಿಂದಿನ ಸರ್ಕಾರದಲ್ಲಿ ಕೃಷಿ ಸಚಿವರಾಗಿದ್ದ ಹಿರಿಯ ನಾಯಕರ ಅವಧಿಯಲ್ಲಿ ಕೇವಲ ₹3.5 ಲಕ್ಷ ಕೋಟಿಯ ಆಹಾರ ಧಾನ್ಯ ಖರೀದಿಯಾಗಿತ್ತು. ವೈಯಕ್ತಿಕವಾಗಿ ನನಗೆ ಅವರ ಬಗ್ಗೆ ಗೌರವವಿದೆ' ಎಂದು ಮೋದಿ ಹೇಳಿದರು.

ಅಹಮದ್‌ನಗರ ಜಿಲ್ಲೆಯ ಶಿರಡಿಯಲ್ಲಿರುವ ಶ್ರೀ ಸಾಯಿಬಾಬಾ ಸಮಾಧಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ₹ 7,500 ಕೋಟಿಯ ವಿವಿಧ ಯೋಜನೆಗಳ ಉದ್ಘಾಟನೆ ಮತ್ತು ಲೋಕಾರ್ಪಣೆ ಮಾಡಿದ ನಂತರ ಮಾತನಾಡಿದ ಅವರು, 'ಈ ಹಿಂದೆ ₹ 500 ಕೋಟಿಯಿಂದ ₹ 600 ಕೋಟಿ ಮೌಲ್ಯದ ಎಂಎಸ್‌ಪಿ ಖರೀದಿಗೆ ಹೋಲಿಸಿದರೆ, 2014ರ ನಂತರ ₹1.15 ಲಕ್ಷ ಕೋಟಿ ಮೌಲ್ಯದ ಎಣ್ಣೆಬೀಜ ಮತ್ತು ಬೇಳೆಕಾಳುಗಳನ್ನು ಖರೀದಿಸಲಾಗಿದೆ. ಭ್ರಷ್ಟಾಚಾರ ಮತ್ತು ಸೋರಿಕೆ ತಡೆಗಟ್ಟಿ, ನೇರ ಲಾಭವನ್ನು ರೈತರ ಖಾತೆಗೆ ವರ್ಗಾವಣೆ ಮಾಡಲಾಗಿದೆ. ನಮ್ಮ ಸರ್ಕಾರವು ರೈತರ ಸಬಲೀಕರಣಕ್ಕೆ ಬದ್ಧವಾಗಿದೆ' ಎಂದು ಮೋದಿ ಹೇಳಿದರು.




ಹಿಂಗಾರು ಬೆಳೆಗಳಿಗೆ ಎಂಎಸ್‌ಪಿ ಹೆಚ್ಚಿಸುವ ಇತ್ತೀಚಿನ ಕ್ಯಾಬಿನೆಟ್ ನಿರ್ಧಾರಗಳ ಬಗ್ಗೆಯೂ ಮಾತನಾಡಿದ ಮೋದಿ, 'ಎಂಎಸ್‌ಪಿಯನ್ನು ಕಡಲೆಗೆ ₹105, ಗೋಧಿ ಮತ್ತು ಕುಸುಬೆಗೆ ₹150 ಹಾಗೂ ಕಬ್ಬು ಕ್ವಿಂಟಲ್‌ಗೆ ₹315ಕ್ಕೆ ಹೆಚ್ಚಿಸಲಾಗಿದೆ' ಎಂದು ತಿಳಿಸಿದರು.

'ಕಳೆದ 9 ವರ್ಷಗಳಲ್ಲಿ ಸುಮಾರು ₹70 ಸಾವಿರ ಕೋಟಿ ಮೌಲ್ಯದ ಇಥೆನಾಲ್ ಖರೀದಿಸಲಾಗಿದೆ. ಕಬ್ಬು ಬೆಳೆಗಾರರಿಗೆ ಈ ಹಣ ತಲುಪಿದೆ. ಕಬ್ಬು ಬೆಳೆಗಾರರಿಗೆ ಸಕಾಲದಲ್ಲಿ ಹಣ ಪಾವತಿಸಲು ಸಕ್ಕರೆ ಕಾರ್ಖಾನೆಗಳು ಮತ್ತು ಸಹಕಾರ ಸಂಘಗಳಿಗೆ ಸಾವಿರಾರು ಕೋಟಿ ನೆರವು ಒದಗಿಸಲಾಗಿದೆ' ಎಂದು ತಿಳಿಸಿದರು.

ಷೇರುಪೇಟೆ ವಹಿವಾಟು

901



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,122
ಇಂದಿನ ಅಂತ್ಯ	18,857
▼	265
ದಿನದ ಕನಿಷ್ಠ	18,837

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹565
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹570

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1530 (1540)
ಸೋಯಾ (ರಿಫೈನ್ಡ್)	₹920 (905)
ಸೂರ್ಯಕಾಂತಿ (ರಿಫೈನ್ಡ್)	₹915 (905)
ಪಾಮೋಲಿನ್	₹822 (810)

ವಿನಿಮಯ ದರ

$ ಡಾಲರ್	83.25
£ ಪೌಂಡ್	100.60
€ ಯುರೊ	87.75
¥ ಯೆನ್ (100ಕ್ಕೆ)	55

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಕೆ.ಆರ್.ಪೇಟೆ	₹8151-8209
ಪುತ್ತೂರು	₹4500-7300
ತಿಪಟೂರು	₹8000-9000
ತುರುವೇಕೆರೆ	₹8700-8700

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹10900
ಎಸಿ	₹6440
ಆರ್‌ಪಿ	₹10000
ಆರ್‌ಸಿ	₹6095

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148.50
ಆರ್‌ಎಸ್‌ಎಸ್-5	₹143
ಗುಡ್ ಲಾಟ್	₹132

₹3,200 ಕೋಟಿ ಸಂಗ್ರಹಿಸಿದ ಓಲಾ ಎಲೆಕ್ಟ್ರಿಕ್

ನವದೆಹಲಿ (ಪಿಟಿಐ): ಹೂಡಿಕೆದಾರರಿಂದ ₹3,200 ಕೋಟಿ ಬಂಡವಾಳ ಸಂಗ್ರಹ ಮಾಡಿರುವುದಾಗಿ ಓಲಾ ಎಲೆಕ್ಟ್ರಿಕ್ ಕಂಪನಿಯು ಗುರುವಾರ ತಿಳಿಸಿದೆ.

ಟೀಮ್‌ಸೆಕ್ ನೇತೃತ್ವದ ಹೂಡಿಕೆದಾರರು ಮತ್ತು ಎಸ್‌ಬಿಐನಿಂದ ಇಷ್ಟು ಬಂಡವಾಳ ಸಂಗ್ರಹ ಮಾಡಿರುವುದಾಗಿ ಹೇಳಿದೆ. ವಿದ್ಯುತ್ ಚಾಲಿತ ವಾಹನಗಳ ವಹಿವಾಟು ವಿಸ್ತರಣೆ ಮತ್ತು ತಮಿಳುನಾಡಿನ ಕೃಷ್ಣಗಿರಿಯಲ್ಲಿ ಲೀಥಿಯಂ ಅಯಾನ್ ಸೆಲ್ ತಯಾರಿಕಾ ಘಟಕ ಸ್ಥಾಪನೆಗೆ ಈ ಬಂಡವಾಳವನ್ನು ಬಳಸಿಕೊಳ್ಳುವುದಾಗಿ ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

26-10-2023

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1550)
ಒಂದು ವಾರದ ಡೆಲಿವರಿ	1535 (1545)
ಸೋಯಾ ಕಚ್ಚಾ	870 (860)
ಪಾಮ್ ವಾರದ ಡೆಲಿವರಿ	820 (808)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (840)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

60,650 (60,450)

ಬೆಳ್ಳಿ ಕೆ.ಜಿ 71,450 (71,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸೆನ್ಸೆಕ್ಸ್ 901 ಅಂಶ ಕುಸಿತ • ನಾಲ್ಕು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡ ನಿಫ್ಟಿ

ಪೇಟೆಯಲ್ಲಿ ಕರಡಿ ಕುಣಿತ ಜೋರು

ಮುಂಬೈ (ಪಿಟಿಐ/ರಾಯಿಟರ್ಸ್): ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ಎದುರಾಗಿರುವ ಉದ್ವಿಗ್ನ ಪರಿಸ್ಥಿತಿಯು ದೇಶದ ಷೇರುಪೇಟೆಗಳಲ್ಲಿ ಗುರುವಾರ ಕರಡಿ ಕುಣಿತ ಜೋರಾಗಲು ಕಾರಣವಾಯಿತು. ಸತತ ಆರನೇ ದಿನವೂ ನಕಾರಾತ್ಮಕವಾಗಿ ವಹಿವಾಟು ಅಂತ್ಯಗೊಂಡಿತು.

ಇಸ್ರೇಲ್–ಹಮಾಸ್ ಸಮರವು ದಿನೇ ದಿನೇ ತೀವ್ರಗೊಳ್ಳುತ್ತಿದೆ. ಇದರಿಂದಾಗಿ ಜಾಗತಿಕ ಮಾರುಕಟ್ಟೆಗಳು ಮಾರಾಟದ ಒತ್ತಡಕ್ಕೆ ಒಳಗಾಗಿ ಕುಸಿಯುತ್ತಿವೆ. ಪರಿಣಾಮವಾಗಿ ಭಾರತದ ಷೇರುಪೇಟೆಗಳಲ್ಲಿಯೂ ಸೂಚ್ಯಂಕಗಳು ಇಳಿಕೆ ಕಾಣುತ್ತಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಗುರುವಾರದ ವಹಿವಾಟಿನಲ್ಲಿ 901 ಅಂಶ ಕುಸಿತ ಕಂಡು, 64 ಸಾವಿರದ ಮಟ್ಟಕ್ಕಿಂತಲೂ



ಕೆಳಗಿಳಿಯಿತು. 63,148 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 265 ಅಂಶ ಇಳಿಕೆಯಾಗಿ 18,857 ಅಂಶಗಳಿಗೆ ತಲುಪಿತು.

ವಾಹನ, ಹಣಕಾಸು ಮತ್ತು ಇಂಧನ ವಲಯದ ಷೇರುಗಳು ನಷ್ಟ ಕಂಡಿದ್ದು, ವಿದೇಶಿ ಬಂಡವಾಳ ಹೊರಹರಿವು ಮುಂದುವರಿಕೆಯೂ ಸೂಚ್ಯಂಕಗಳ ಇಳಿಕೆಗೆ ಕಾರಣವಾಗಿವೆ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಯ ಇಳಿಮುಖ ವಹಿವಾಟಿನ ಜೊತೆಗೆ ಅಕ್ಟೋಬರ್ ತಿಂಗಳ ವಾಯಿದಾ ವಹಿವಾಟು ಮುಕ್ತಾಯ ಆಗಲಿರುವುದು ಬ್ಯಾಂಕಿಂಗ್, ಆಟೊಮೊಬೈಲ್ ಮತ್ತು ಐ.ಟಿ. ಷೇರುಗಳಲ್ಲಿ ಮಾರಾಟದ ಒತ್ತಡ ಸೃಷ್ಟಿಸಿತು. ಇದರಿಂದಾಗಿ ನಿಫ್ಟಿಯು 19 ಸಾವಿರಕ್ಕಿಂತ ಕೆಳಕ್ಕೆ ಇಳಿಯುವಂತೆ ಆಯಿತು ಎಂದು ಕೋಟಕ್ ಸೆಕ್ಯುರಿಟೀಸ್ ಲಿಮಿಟೆಡ್‌ನ ಈಕ್ವಿಟಿಯ ಸಂಶೋಧನಾ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

ಜಾಗತಿಕ ರಾಜಕೀಯ ಬಿಕ್ಕಟ್ಟು ಮತ್ತು ಅಮೆರಿಕದ ಬಾಂಡ್‌ಗಳಿಕೆ ಪ್ರಮಾಣ ಹೆಚ್ಚಾಗುತ್ತಿರುವ ಕಾರಣಗಳಿಂದಾಗಿ ಮಾರುಕಟ್ಟೆಗಳಲ್ಲಿ ಸೂಚ್ಯಂಕ ಕುಸಿತ ಕಾಣುತ್ತಿದೆ ಎಂದು ಎಕ್ಸಿಸ್ ಸೆಕ್ಯುರಿಟೀಸ್ ಪಿಎಂಎಸ್‌ನ ಮುಖ್ಯ ಹೂಡಿಕೆ ಅಧಿಕಾರಿ ನವೀನ್ ಕುಲಕರ್ಣಿ ತಿಳಿಸಿದ್ದಾರೆ.

ಬಿಎಸ್‌ಇ ಮಿಡ್‌ಕ್ಯಾಪ್ ಶೇ 1.06 ಮತ್ತು ಸ್ಮಾಲ್‌ಕ್ಯಾಪ್ ಶೇ 0.32ರಷ್ಟು ಇಳಿಕೆ ಕಂಡಿತು. ಬ್ರೆಂಟ್ ಕಚ್ಚಾ ತೈಲ ದರ ಶೇ 0.65ರಷ್ಟು ಇಳಿಕೆ ಕಂಡು ಬ್ಯಾರಲ್‌ಗೆ 89.54 ಡಾಲರ್‌ಗೆ ತಲುಪಿತು.

6 ದಿನಗಳಲ್ಲಿ ಸೂಚ್ಯಂಕಗಳ ಇಳಿಕೆ

3,280 ಅಂಶ
ಬಿಎಸ್‌ಇ ಸೆನ್ಸೆಕ್ಸ್

954 ಅಂಶ
ಎನ್‌ಎಸ್‌ಇ ನಿಫ್ಟಿ

6 ದಿನದಲ್ಲಿ ₹17.77 ಲಕ್ಷ ಕೋಟಿ ನಷ್ಟ

ಸತತ ಆರು ದಿನಗಳಲ್ಲಿ ನಡೆದ ನಕಾರಾತ್ಮಕ ವಹಿವಾಟಿನ ಪರಿಣಾಮವಾಗಿ ಮುಂಬೈ ಷೇರುಪೇಟೆಯಲ್ಲಿ ಹೂಡಿಕೆದಾರರ ಸಂಪತ್ತು ಮೌಲ್ಯ ₹17.77 ಲಕ್ಷ ಕೋಟಿಯಷ್ಟು ಕರಗಿದೆ. ಗುರುವಾರ ಒಂದೇ ದಿನ ₹3.17 ಲಕ್ಷ ಕೋಟಿಯಷ್ಟು ನಷ್ಟವಾಗಿದೆ.

ಮುಂಬೈ ಷೇರುಪೇಟೆಯ ಮಾರುಕಟ್ಟೆ ಬಂಡವಾಳ ಮೌಲ್ಯವು ಗುರುವಾರದ ವಹಿವಾಟಿನ ಅಂತ್ಯದ ವೇಳೆಗೆ ₹306 ಲಕ್ಷ ಕೋಟಿಗೆ ಇಳಿಕೆ ಕಂಡಿತು.

ಜಾಗತಿಕ ಆರ್ಥಿಕತೆಯ ಮಂದಗತಿಯ ಬೆಳವಣಿಗೆ ಮತ್ತು ಬಡ್ಡಿದರ ಗರಿಷ್ಠ ಮಟ್ಟದಲ್ಲಿ ಇರುವ ಕಾರಣಗಳು ಸಹ ಹೂಡಿಕೆದಾರರನ್ನು ಷೇರುಪೇಟೆಗಳಿಂದ ದೂರ ಉಳಿಯುವಂತೆ ಮಾಡುತ್ತಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.


ಸುದ್ದಿ 2 ನಿಮಿಷ

ಬಾಸ್ಮತಿ ಅಕ್ಕಿ ರಫ್ತು ದರ ಟನ್‌ಗೆ ₹78,850ಕ್ಕೆ ಇಳಿಕೆ: ಕೇಂದ್ರ ಸರ್ಕಾರ

ನವದೆಹಲಿ (ಪಿಟಿಐ): ಬಾಸ್ಮತಿ ಅಕ್ಕಿಯ ಕನಿಷ್ಠ ರಫ್ತು ದರ (ಎಂಇಪಿ) ಟನ್‌ಗೆ ₹99,600 ಇದ್ದಿದ್ದನ್ನು ₹78,850ಕ್ಕೆ ಇಳಿಕೆ ಮಾಡಲಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.

ಪ್ರೀಮಿಯಂ ಬಾಸ್ಮತಿ ಅಕ್ಕಿ ಬದಲಾಗಿ ಬಾಸ್ಮತಿ ಅಲ್ಲದ ಅಕ್ಕಿಯನ್ನು ಅಕ್ರಮವಾಗಿ ರಫ್ತು ಮಾಡುವ ಸಾಧ್ಯತೆಯನ್ನು ತಡೆಯಲು ಕೇಂದ್ರ ಸರ್ಕಾರವು ಆಗಸ್ಟ್ 27ರಂದು ಪ್ರತಿ ಟನ್‌ಗೆ ₹99,600 ರಫ್ತು ದರ ನಿಗದಿಪಡಿಸಿತ್ತು. ಆದರೆ, ಗರಿಷ್ಠ ರಫ್ತು ದರಕ್ಕೆ ರಫ್ತುದಾರರು ಅಸಮಾಧಾನ ವ್ಯಕ್ತಪಡಿಸಿದ್ದರು. ಎಂಇಪಿ ತಗ್ಗಿಸಬೇಕು ಎನ್ನುವ ಉದ್ಯಮದ ಬೇಡಿಕೆಯನ್ನು ಸರ್ಕಾರ ಪರಿಶೀಲನೆ ನಡೆಸುತ್ತಿದೆ ಎಂದು ಆಹಾರ ಸಚಿವಾಲಯವು ಈಚೆಗಷ್ಟೇ ಹೇಳಿತ್ತು.

ಹೊಸ ಬೆಳೆ ಬಂದಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿ ಬಾಸ್ಮತಿ ಅಕ್ಕಿ ದರ ಇಳಿಕೆ ಕಂಡಿದೆ. ಆದರೆ, ರಫ್ತು ದರ ಗರಿಷ್ಠ ಮಟ್ಟದಲ್ಲಿ ಇರುವುದರಿಂದ ರಫ್ತುದಾರರು ರೈತರಿಂದ ಅಕ್ಕಿ ಖರೀದಿಸುವುದನ್ನು ನಿಲ್ಲಿಸಿದ್ದಾರೆ. ಇದರಿಂದಾಗಿ ರೈತರು ಮತ್ತು ರಫ್ತುದಾರರು ಇಬ್ಬರಿಗೂ ನಷ್ಟವಾಗುತ್ತಿದೆ ಎಂದು ಭಾರತೀಯ ಅಕ್ಕಿ ರಫ್ತುದಾರರ ಒಕ್ಕೂಟವು ಈಚೆಗಷ್ಟೇ ಸರ್ಕಾರಕ್ಕೆ ತಿಳಿಸಿತ್ತು.



2022–23ರಲ್ಲಿ ಭಾರತವು 45.6 ಲಕ್ಷ ಟನ್‌ನಷ್ಟು ಬಾಸ್ಮತಿ ಅಕ್ಕಿಯನ್ನು ರಫ್ತು ಮಾಡಿದೆ. ಉದ್ಯಮಗಳ ಪ್ರಕಾರ, 2021 ಮತ್ತು 2022ರಲ್ಲಿ ಸರಾಸರಿ ರಫ್ತು ದರವು ಟನ್‌ಗೆ ₹70,550 ರಿಂದ ₹74,700ರವರೆಗೆ ಇತ್ತು.

ಎಸಿಸಿ: ₹388 ಕೋಟಿ ಲಾಭ

ನವದೆಹಲಿ (ಪಿಟಿಐ): ಸಿಮೆಂಟ್ ತಯಾರಿಕಾ ಕಂಪನಿ ಎಸಿಸಿ ಲಿಮಿಟೆಡ್, ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹388 ಕೋಟಿ ನಿವ್ವಳ ಲಾಭ ಗಳಿಸಿದೆ.

ಈಗ ಅದಾನಿ ಸಿಮೆಂಟ್ಸ್‌ನ ಭಾಗವಾಗಿರುವ ಈ ಕಂಪನಿಯು ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹87 ಕೋಟಿಯಷ್ಟು ನಷ್ಟ ಅನುಭವಿಸಿತ್ತು.

ಕಾರ್ಯಾಚರಣಾ ವರಮಾನ ಶೇ 11ರಷ್ಟು ಹೆಚ್ಚಾಗಿ ₹4,434 ಕೋಟಿಗೆ ತಲುಪಿದೆ. ಮಾರಾಟದಲ್ಲಿ ಹೆಚ್ಚಳ, ಪ್ರೀಮಿಯಂ ಉತ್ಪನ್ನಗಳಿಗೆ ಉತ್ತಮ ಬೇಡಿಕೆ ಮತ್ತು ಕಾರ್ಯಾಚರಣೆಯಲ್ಲಿ ದಕ್ಷತೆ ಹೆಚ್ಚಾಗಿರುವುದರಿಂದ ಲಾಭ ಗಳಿಸಲು ಸಾಧ್ಯವಾಗಿದೆ ಎಂದು ಕಂಪನಿಯು ತಿಳಿಸಿದೆ.

ಕರಡು ನಿಯಮ ಸಿದ್ಧಪಡಿಸಿರುವ ರಿಸರ್ವ್ ಬ್ಯಾಂಕ್

ಸಾಲ ವಸೂಲಿ: ಏಜೆಂಟ್‌ಗಳಿಗೆ ಬರಲಿದೆ ಬಿಗಿ ನಿಯಮ

ಮುಂಬೈ (ಪಿಟಿಐ): ಸಾಲ ವಸೂಲಿ ಮಾಡಲು ಬೆಳಿಗ್ಗೆ 8 ಗಂಟೆಗೂ ಮುನ್ನ ಹಾಗೂ ರಾತ್ರಿ 7 ಗಂಟೆಯ ನಂತರ ಸಾಲಪಡೆದವರಿಗೆ ದೂರವಾಣಿ ಕರೆ ಮಾಡುವುದನ್ನು ತಡೆಯಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮುಂದಾಗಿದೆ. ಈ ಸಂಬಂಧ ಕರಡು ನಿಯಮಗಳನ್ನು ಆರ್‌ಬಿಐ ಸಿದ್ಧಪಡಿಸಿದೆ.

ಬ್ಯಾಂಕ್‌ಗಳು ಮತ್ತು ಎನ್‌ಬಿಎಫ್‌ಸಿಗಳು ಬ್ಯಾಂಕ್‌ನ ಪ್ರಮುಖ ಕೆಲಸಗಳನ್ನು ಹೊರಗುತ್ತಿಗೆ ನೀಡುವಂತಿಲ್ಲ. ನೀತಿ ರೂಪಿಸುವುದು, ಕೆವೈಸಿ ನಿಯಮಗಳ ಅನುಸರಣೆ, ಸಾಲ ಮಂಜೂರು ಸೇರಿದಂತೆ ಇನ್ನೂ ಕೆಲವು ಪ್ರಮುಖ ಕೆಲಸಗಳನ್ನು ಹೊರಗುತ್ತಿಗೆ ನೀಡಬಾರದು ಎನ್ನುವುದನ್ನು ಸುತ್ತೋಲೆಯೊಂದನ್ನು ತಿಳಿಸಿದೆ. ಈ ಕುರಿತು ನವೆಂಬರ್ 28ರ ಒಳಗಾಗಿ ಸಲಹೆಗಳನ್ನು, ಪ್ರತಿಕ್ರಿಯೆಗಳನ್ನು ಆಹ್ವಾನಿಸಿದೆ.

ಹಣಕಾಸು ಸಂಸ್ಥೆಗಳು ಮತ್ತು ಏಜೆಂಟ್‌ಗಳು ಸಾಲ ವಸೂಲಿ ಮಾಡುವ ಪ್ರಕ್ರಿಯೆಯಲ್ಲಿ ಯಾವುದೇ ರೀತಿಯಲ್ಲಿಯೂ ಸಾಲಗಾರರ ಗೌರವಕ್ಕೆ ಚ್ಯುತಿ ಬರುವಂತೆ ನಡೆದುಕೊಳ್ಳಬಾರದು. ಸಾರ್ವಜನಿಕವಾಗಿ ಅವಹೇಳನ ಮಾಡಬಾರದು. ಸಾಲಗಾರರು/ಖಾತರಿದಾರರ ಕುಟುಂಬದ ಸದಸ್ಯರಿಗೂ ಅವಹೇಳನ ಮಾಡಬಾರದು ಎಂದು ತಿಳಿಸಿದೆ.

ಸಾಲಗಾರರಿಗೆ ಮೊಬೈಲ್ ಮೂಲಕ ಅಥವಾ ಸಾಮಾಜಿಕ ಮಾಧ್ಯಮಗಳ ಮೂಲಕ ಅನುಚಿತವಾದ ಮೆಸೇಜ್ ಕಳುಹಿಸುವುದು, ಬೆದರಿಕೆ ಒಡ್ಡುವುದು, ಅನಾಮಧೇಯ ಕರೆ ಮಾಡಬಾರದು. ಸಾಲ ಪಡೆದವರಿಗೆ/ಖಾತರಿದಾರರಿಗೆ ಸತತವಾಗಿ ಕರೆ ಮಾಡುವಂತೆಯೂ ಇಲ್ಲ ಎಂದು ಹೇಳಿದೆ.

ಬ್ಯಾಂಕ್‌ನ ಆಡಳಿತ ಮಂಡಳಿಯು ಒಪ್ಪಿಗೆ ನೀಡುವ ನೀತಿ ಸಂಹಿತಿಯನ್ನು ಡೈರೆಕ್ಟ್ ಸೇಲ್ಸ್ ಏಜೆಂಟ್/ಡೈರೆಕ್ಟ್ ಮಾರ್ಕೆಟಿಂಗ್ ಏಜೆಂಟ್ಸ್/ರಿಕವರಿ ಏಜೆಂಟ್‌ಗಳಿಗೆ ನೀಡಬೇಕು ಎಂದು ಆರ್‌ಬಿಐ ತಿಳಿಸಿದೆ.

ಏಜೆಂಟ್‌ಗಳು ತಮ್ಮ ಹೊಣೆಗಾರಿಕೆಯನ್ನು ಎಚ್ಚರಿಕೆ ಮತ್ತು ಸೂಕ್ಷ್ಮವಾಗಿ ನಿಭಾಯಿಸಲು ಸೂಕ್ತವಾದ ತರಬೇತಿ ಹೊಂದಿದ್ದಾರೆ ಎನ್ನುವುದು ಹಣಕಾಸು ಸಂಸ್ಥೆಗಳು ಖಾತ್ರಿಪಡಿಸಬೇಕು. ಯಾವ ಹೊತ್ತಿಗೆ ಗ್ರಾಹಕರಿಗೆ ಕರೆ ಮಾಡಬೇಕು? ಗ್ರಾಹಕರ ವೈಯಕ್ತಿಕ ಮಾಹಿತಿಯ ರಕ್ಷಣೆ ,ಉತ್ಪನ್ನಕ್ಕೆ ಸಂಬಂಧಿಸಿದ ಸರಿಯಾದ ನೀತಿ ಮತ್ತು ಷರತ್ತುಗಳನ್ನು ಮನವರಿಕೆ ಮಾಡುವುದನ್ನು ಏಜೆಂಟ್‌ಗಳು ತಿಳಿದಿರಬೇಕು ಎಂದು ಹೇಳಿದೆ.

ಅವಧಿ ಠೇವಣಿ: ನಿಯಮ ಸಡಿಲ

ಮುಂಬೈ (ಪಿಟಿಐ): ₹1 ಕೋಟಿಯವರೆಗಿನ ಮೊತ್ತದ ಠೇವಣಿಗಳಿಗೆ ಅವಧಿ ಮುಗಿಯುವ ಮುನ್ನ ಹಣ ಪಡೆಯುವ ಅವಕಾಶವನ್ನು ನೀಡುವಂತೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಎಲ್ಲ ಬ್ಯಾಂಕ್‌ಗಳಿಗೆ ಗುರುವಾರ ಸೂಚನೆ ನೀಡಿದೆ.

ಸದ್ಯ, ₹15 ಲಕ್ಷದವರೆಗಿನ ಮೊತ್ತದ ಠೇವಣಿಗಳಿಗೆ ಅವಧಿ ಮುಗಿಯುವ ಮುನ್ನ ಹಣ ಪಡೆಯುವ ಅವಕಾಶ ಇದೆ. ತಕ್ಷಣದಿಂದ ಜಾರಿಗೆ ಬರುವಂತೆ ಎಲ್ಲ ವಾಣಿಜ್ಯ ಬ್ಯಾಂಕ್‌ಗಳು ಮತ್ತು ಸಹಕಾರ ಬ್ಯಾಂಕ್‌ಗಳಿಗೆ ಈ ಸೂಚನೆ ಅನ್ವಯಿಸುತ್ತದೆ ಎಂದು ಆರ್‌ಬಿಐ ಹೇಳಿದೆ.

ಸಾಲದ ಮಾಹಿತಿ ಪರಿಷ್ಕರಣೆ ವಿಳಂಬಕ್ಕೆ ಪರಿಹಾರ

ಗ್ರಾಹಕರ ಸಾಲಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಪರಿಷ್ಕರಿಸಲು ವಿಳಂಬ ಮಾಡಿದರೆ ಸಾಲದ ಮಾಹಿತಿ ಸಂಗ್ರಹಿಸುವ ಕಂಪನಿಗಳು (ಸಿಐಸಿ) ಮತ್ತು ಸಂಸ್ಥೆಗಳು (ಸಿಐ) ದಿನಕ್ಕೆ ₹100ರಂತೆ ಪರಿಹಾರವನ್ನು ನೀಡಬೇಕಾಗುತ್ತದೆ ಎಂದು ಆರ್‌ಬಿಐ ಹೇಳಿದೆ.

ಪರಿಹಾರ ನೀಡುವ ಸಂಬಂಧ ಆರು ತಿಂಗಳ ಒಳಗಾಗಿ ವ್ಯವಸ್ಥೆಯನ್ನು ರೂಪಿಸಿಕೊಳ್ಳುವಂತೆ ಕಂಪನಿಗಳಿಗೆ ಅವಕಾಶ ನೀಡಲಾಗಿದೆ. ಗ್ರಾಹಕರು ದೂರು ನೀಡಿದ 30 ದಿನದೊಳಗೆ ಪರಿಹಾರ ಆಗದೇ ಇದ್ದರೆ, ಆ ನಂತರ ದಿನಕ್ಕೆ ₹100ರಂತೆ ಪರಿಹಾರ ನೀಡಬೇಕು. ಪರಿಹಾರ ನೀಡಲು ನಿರಾಕರಿಸಿದರೆ ಆರ್‌ಬಿಐ ಓಂಬುಡ್ಸ್‌ಮನ್‌ಗೆ ದೂರು ನೀಡಬಹುದು ಎಂದು ತಿಳಿಸಿದೆ.

ಕರ್ನಾಟಕ ಬ್ಯಾಂಕ್: ₹800 ಕೋಟಿ ಸಂಗ್ರಹಿಸುವ ಪ್ರಸ್ತಾವಕ್ಕೆ ಒಪ್ಪಿಗೆ

ಮಂಗಳೂರು: ಆದ್ಯತಾ ಷೇರುಗಳ ವಿತರಣೆಯ ಮೂಲಕ ₹800 ಕೋಟಿ ಬಂಡವಾಳ ಸಂಗ್ರಹಿಸುವ ಪ್ರಸ್ತಾವಕ್ಕೆ ಕರ್ಣಾಟಕ ಬ್ಯಾಂಕ್‌ನ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಗುರುವಾರ ಅನುಮೋದನೆ ನೀಡಲಾಗಿದೆ.

ತಲಾ ₹10 ಮುಖಬೆಲೆಯ 3.34 ಕೋಟಿ ಷೇರುಗಳನ್ನು ತಲಾ ₹239.52 ಬೆಲೆಗೆ ಮಾರಾಟ ಮಾಡಲು ಉದ್ದೇಶಿಸಲಾಗಿದೆ. ಈ ಷೇರುಗಳನ್ನು ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಕಂಪನಿ, ಬಜಾಜ್ ಅಲಯನ್ಸ್ ಲೈಫ್ ಇನ್ಶೂರೆನ್ಸ್ ಕಂಪನಿ, ಕ್ವಾಂಟ್ ಮ್ಯೂಚುಯಲ್ ಫಂಡ್, ಭಾರತಿ ಆಕ್ಸಾ ಲೈಫ್ ಇನ್ಶೂರೆನ್ಸ್ ಕಂಪನಿ ಹಾಗೂ ಬಜಾಜ್ ಅಲಯನ್ಸ್ ಜನರಲ್ ಇನ್ಶೂರೆನ್ಸ್ ಕಂಪನಿಗಳಿಗೆ ಮಾರಾಟ ಮಾಡುವ ಪ್ರಸ್ತಾವದ ಪರವಾಗಿ ಷೇರುದಾರರಿಂದ ಶೇ 99.79ರಷ್ಟು ಮತಗಳು ಲಭಿಸಿವೆ ಎಂದು ಬ್ಯಾಂಕ್ ಪ್ರಕಟಣೆಯಲ್ಲಿ ತಿಳಿಸಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಬ್ಯಾಂಕ್‌ನ ಎಂಡಿ ಮತ್ತು ಸಿಇಒ ಶ್ರೀಕೃಷ್ಣ ಎಚ್., ‘ನಮ್ಮ ಎಲ್ಲಾ ಅಭಿವೃದ್ಧಿ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಬಂಡವಾಳ ಒದಗಿಸುವ ನಿಟ್ಟಿನಲ್ಲಿ ಇದು ಪ್ರಮುಖ ಹೆಜ್ಜೆಯಾಗಿದೆ’ ಎಂದರು.

ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕ ಶೇಖರ್ ರಾವ್ ಮಾತನಾಡಿ, ‘ಬ್ಯಾಂಕ್‌ನ ಅಭಿವೃದ್ಧಿಯ ಹಾದಿಯಲ್ಲಿ ಇದು ಪ್ರಮುಖ ಹೆಜ್ಜೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ನಮ್ಮ ಸ್ಥಾನವನ್ನು ಇದು ಇನ್ನಷ್ಟು ಗಟ್ಟಿಗೊಳಿಸಲಿದೆ’ ಎಂದರು.

ಕೆನರಾ ಬ್ಯಾಂಕ್ ಲಾಭ ಶೇ 43ರಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 43ರಷ್ಟು ಹೆಚ್ಚಾಗಿ ₹3,606 ಕೋಟಿಗೆ ಏರಿಕೆ ಕಂಡಿದೆ.



ಸತ್ಯನಾರಾಯಣ ರಾಜು

ಬಡ್ಡಿ ವರಮಾನ ಹೆಚ್ಚಾಗಿರುವುದು ಮತ್ತು ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತವು ಕಡಿಮೆ ಆಗಿರುವ ಕಾರಣಗಳಿಂದಾಗಿ ಲಾಭದಲ್ಲಿ ಈ ಪ್ರಮಾಣದ ಏರಿಕೆ ಕಂಡುಬಂದಿದೆ ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಕೆ. ಸತ್ಯನಾರಾಯಣ ರಾಜು ಅವರು ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾಹಿತಿ ನೀಡಿದರು.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ನಿವ್ವಳ ಲಾಭವು ₹2,525 ಕೋಟಿಯಷ್ಟು ಆಗಿತ್ತು. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ನಿವ್ವಳ ಬಡ್ಡಿ ವರಮಾನ ಶೇ 19.76ರಷ್ಟು ಹೆಚ್ಚಾಗಿ ₹8,903 ಕೋಟಿಗೆ ತಲುಪಿದೆ. ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತವು ₹3,637 ಕೋಟಿಯಿಂದ ₹2,608 ಕೋಟಿಗೆ ಇಳಿಕೆ ಕಂಡಿದೆ ಎಂದರು. ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಜಿಎನ್‌ಪಿಎ) ಶೇ 6.37 ರಿಂದ ಶೇ 4.76ಕ್ಕೆ ಇಳಿಕೆ ಕಂಡಿದೆ. ನಿವ್ವಳ ಎನ್‌ಪಿಎ ಶೇ 2.19 ರಿಂದ ಶೇ 1.41ಕ್ಕೆ ಇಳಿಕೆ ಆಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಕಾಶ್ಮೀರ: ಐವರು ಉಗ್ರರ ಹತ್ಯೆ

ಶ್ರೀನಗರ: ಉತ್ತರ ಕಾಶ್ಮೀರದ ಗಡಿ ಜಿಲ್ಲೆ ಕುಪ್ವಾರಾದ ಗಡಿ ನಿಯಂತ್ರಣ ರೇಖೆಯುದ್ದಕ್ಕೂ (ಎಲ್‌ಒಸಿ) ಜಮ್ಮು ಮತ್ತು ಕಾಶ್ಮೀರದ ಪೊಲೀಸರು ಹಾಗೂ ಸೇನೆ ಬುಧವಾರ ಬೃಹತ್ ಪ್ರಮಾಣದ ಒಳನುಸುಳುವಿಕೆ ಯತ್ನವನ್ನು ವಿಫಲಗೊಳಿಸಿದ್ದು, ಐವರು ಉಗ್ರರನ್ನು ಹತ್ಯೆ ಮಾಡಿದೆ.

‘ಖಚಿತ ಮಾಹಿತಿ ಆಧರಿಸಿ ಕುಪ್ವಾರಾದ ಮಚಿಲ್ ಸೆಕ್ಟರ್‌ನಲ್ಲಿ ಎನ್‌ಕೌಂಟರ್ ನಡೆಸಿ ಐವರು ಉಗ್ರರನ್ನು ಹತ್ಯೆ ಮಾಡಲಾಯಿತು’ ಎಂದು ಕಾಶ್ಮೀರ ವಲಯದ ಪೊಲೀಸರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.‘ಉಗ್ರರ ವಿರುದ್ಧ ಕಾರ್ಯಾಚರಣೆ ಮುಂದುವರೆದಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಕೋಕ	16299-32501	ಚಾಲಿ	37619-40339
ಕೋಕ	15000-27500	ಹಳೆಚಾಲಿ	39069-39069	ಕೋಕ	30699-34209
ಹಳತು	46000-48500	ಹೊಸಚಾಲಿ	36069-40099	ಕೆಂಪುಗೋಟು	33299-33399
ಚನ್ನಗಿರಿ		**ಪುತ್ತೂರು**		ರಾಶಿ	43809-46429
ರಾಶಿ	45599-48100	ಕೋಕ	11000-25000	ತಟ್ಟಿಬೆಟ್ಟೆ	36109-42669
ಚಿತ್ರದುರ್ಗ		ಹೊಸತು	34000-43000	**ಶಿರಸಿ**	
ಅಪಿ	45739-46099	**ಸಾಗರ**		ಬೆಟ್ಟೆ	39519-43109
ಬೆಟ್ಟೆ	36219-36679	ಬಿಳಿಗೋಟು	20899-34199	ಬಿಳಿಗೋಟು	27099-36969
ಕೆಂಪುಗೋಟು	30200-30600	ಚಾಲಿ	34699-38899	ಚಾಲಿ	37409-41478
		ಕೋಕ	18989-33989	ಕೆಂಪುಗೋಟು	28661-35399
ರಾಶಿ	45229-45669	ಕೆಂಪುಗೋಟು	22000-36669	ರಾಶಿ	45409-47649
ಹೊನ್ನಾವರ				**ಯಲ್ಲಾಪುರ**	
ಹಳೆಚಾಲಿ	37000-39000	ರಾಶಿ	37589-48429	ಅಪಿ	58395-60029
ಹೊಸಚಾಲಿ	25000-34000	ಸಿಪ್ಪೆಗೋಟು	13251-20910	ಬಿಳಿಗೋಟು	26899-35600
ಕಾರ್ಕಳ		**ಶಿವಮೊಗ್ಗ**		ಚಾಲಿ	36799-41000
ಹೊಸತು	25000-36500	ಹೊಸತು	45869-47269	ಕೋಕ	18899-29499
ಹಳತು	30000-48500	ರಾಶಿ	30109-48009	ಕೆಂಪುಗೋಟು	26699-36118
ಕುಮಟ		**ಸಿದ್ದಾಪುರ**		ರಾಶಿ	46799-54000
ಚಿಪ್ಪು	27170-33879	ಬಿಳಿಗೋಟು	32119-35000	ತಟ್ಟಿಬೆಟ್ಟೆ	37899-46099

10 ಲೀಟರ್ ಜಾರ್‌ನಲ್ಲಿ ಫ್ರೀಡಂ ರಿಫೈನ್ಡ್ ಸನ್ ಫ್ಲವರ್ ಆಯಿಲ್



ಜೆಇಎಫ್ ಇಂಡಿಯಾದ ಮಾರುಕಟ್ಟೆ ವಿಭಾಗದ ಹಿರಿಯ ಉಪಾಧ್ಯಕ್ಷ ಪಿ. ಚಂದ್ರಶೇಖರ ರೆಡ್ಡಿ ಮತ್ತು ನಟಿ ರಾಧಿಕಾ ಪಂಡಿತ್ ಅವರು ಫ್ರೀಡಂ ರಿಫೈನ್ಡ್ ಸನ್ ಫ್ಲವರ್ ಆಯಿಲ್‌ನ 10 ಲೀಟರ್ ಜಾರ್ ಬಿಡುಗಡೆ ಮಾಡಿದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಮಿನಿ ಎಡಿಬಿಲ್ಸ್ ಆ್ಯಂಡ್ ಫ್ಯಾಟ್ಸ್ ಇಂಡಿಯಾ ಲಿಮಿಟೆಡ್ (ಜಿಇಎಫ್), ಫ್ರೀಡಂ ರಿಫೈನ್ಡ್ ಸನ್ ಫ್ಲವರ್ ಆಯಿಲ್‌ನ 10 ಲೀಟರ್ ಜಾರ್ ಬಿಡುಗಡೆ ಮಾಡಿದೆ. ಮರುಬಳಕೆ ಮಾಡಬಹುದಾದ ಈ ಜಾರ್ ಅನ್ನು ನಟಿ ರಾಧಿಕಾ ಪಂಡಿತ್ ಮತ್ತು ಕಂಪನಿಯ ಭಾರತದ ಮಾರುಕಟ್ಟೆ ವಿಭಾಗದ ಹಿರಿಯ ಉಪಾಧ್ಯಕ್ಷ ಪಿ. ಚಂದ್ರಶೇಖರ ರೆಡ್ಡಿ ಅವರು ಗುರುವಾರ ಬಿಡುಗಡೆ ಮಾಡಿದರು.

ಗ್ರಾಹಕರ ಅಗತ್ಯಗಳಿಗೆ ಅನುಗುಣವಾಗಿ 10 ಲೀಟರ್‌ನ ಜಾರ್ ಪರಿಚಯಿಸಲಾಗಿದೆ. ಗ್ರಾಹಕರಿಗೆ ಹೆಚ್ಚಿನ ಅನುಕೂಲ ಮಾಡಿಕೊಡಲು ಮರುಬಳಕೆ ಮತ್ತು ಹಲವು ಉದ್ದೇಶಗಳಿಗೆ ಬಳಸಬಹುದಾದ ಜಾರ್ ಇದಾಗಿದೆ ಎಂದು ಚಂದ್ರಶೇಕರ ರೆಡ್ಡಿ ಅವರು ಪ್ರಕಟಣೆಯಲ್ಲಿ ತಿಳಿಸಿದರು.

ಜಿಇಎಫ್ ಇಂಡಿಯಾ ಈಗಾಗಲೇ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ಒಡಿಶಾ ಮತ್ತು ಛತ್ತೀಸಗಢದಲ್ಲಿ ಕಾರ್ಯಾಚರಣೆ ನಡೆಸುತ್ತಿದೆ. ತಮಿಳುನಾಡು ಮತ್ತು ಕೇರಳದಲ್ಲಿಯೂ ವಹಿವಾಟು ವಿಸ್ತರಣೆಗೆ ಮಾಡುತ್ತಿದೆ.

ಪಶ್ಚಿಮ ಬಂಗಾಳ: ಇ.ಡಿ ದಾಳಿ

ಕೋಲ್ಕತ್ತ(ಪಿಟಿಐ): ಪಶ್ಚಿಮ ಬಂಗಾಳದಲ್ಲಿ ನಡೆದಿದೆ ಎನ್ನಲಾದ ಬಹುಕೋಟಿ ಮೊತ್ತದ ಪಡಿತರ ಹಗರಣದ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯವು(ಇ.ಡಿ) ಗುರುವಾರ ಸಚಿವ ಜ್ಯೋತಿಪ್ರಿಯೊ ಮಲ್ಲಿಕ್ ಅವರ ನಿವಾಸದ ಮೇಲೆ ದಾಳಿ ನಡೆಸಿತು.

ಕೋಲ್ಕತ್ತದ ‘ಸಾಲ್ಟ್ ಲೇಕ್’ನಲ್ಲಿರುವ ಅರಣ್ಯ ಸಚಿವ ಮಲೀಕ್ ಅವರ ನಿವಾಸಕ್ಕೆ ಆಗಮಿಸಿದ ಇ.ಡಿ ಅಧಿಕಾರಿಗಳು ಪರಿಶೀಲನೆ ಆರಂಭಿಸಿದರು.

ಈ ದಾಳಿಯನ್ನು ದ್ವೇಷ ರಾಜಕೀಯದ ಭಾಗ ಎಂದು ಆಡಳಿತಾರೂಢ ಟಿಎಂಸಿ ಹೇಳಿದೆ.

ಮಲ್ಲಿಕ್ ಅವರು ಆಹಾರ ಸಚಿವರಾಗಿದ್ದಾಗ ಅವರ ಜತೆಗೆ ಕೆಲಸ ಮಾಡಿದ್ದ ಸಿಬ್ಬಂದಿ ನಿವಾಸ ಸೇರಿದಂತೆ ಇತರ 8 ಫ್ಲ್ಯಾಟ್‌ಗಳ ಮೇಲೂ ಅಧಿಕಾರಿಗಳು ದಾಳಿ ನಡೆಸಿದರು.

‘ಮಲ್ಲಿಕ್ ಅವರ ನಿವಾಸದಲ್ಲಿ ಎಂಟು ಅಧಿಕಾರಿಗಳು ಪರಿಶೀಲನೆ ನಡೆಸಿದರು‘ ಎಂದು ಇ.ಡಿ ಮಾಹಿತಿ ನೀಡಿದೆ.

ಹಗರಣಕ್ಕೆ ಸಂಬಂಧಿಸಿದಂತೆ ಟಿಸಿಎಂಸಿಯೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ವ್ಯಕ್ತಿಯೊಬ್ಬನನ್ನು ಇ.ಡಿ ಈ ಹಿಂದೆ ಬಂಧಿಸಿತ್ತು. ಈ ವ್ಯಕ್ತಿಯ ಜತೆಗೆ ಸಚಿವ ಮಲ್ಲಿಕ್ ಸಂಪರ್ಕ ಹೊಂದಿದ್ದಾರೆ ಎನ್ನಲಾಗಿದ್ದು, ಈ ನಿಟ್ಟಿನಲ್ಲಿ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ಸಚಿವರ ಬ್ಯಾಂಕ್ ಖಾತೆಗಳನ್ನೂ ಪರಿಶೀಲಿಸಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಗುಂಡಿನ ದಾಳಿ: 18 ಮಂದಿ ಸಾವು

ಲೆವಿಸ್ಟನ್ (ಅಮೆರಿಕ) (ಎಪಿ): ಅಮೆರಿಕದ ಮೈನೆ ರಾಜ್ಯದಲ್ಲಿನ ಲೆವಿಸ್ಟನ್ ನಗರದ ರೆಸ್ಟೋರೆಂಟ್ ಮತ್ತು ‘ಬೌಲಿಂಗ್ ಅಲ್ಲೆ’ ಕೇಂದ್ರದ ಮೇಲೆ ದಾಳಿ ನಡೆಸಿದ ಬಂದೂಕುಧಾರಿಯೊಬ್ಬ ಮನ ಬಂದಂತೆ ಗುಂಡುಗಳನ್ನು ಹಾರಿಸಿ, 18 ಜನರನ್ನು ಕೊಂದಿದ್ದಾನೆ. ಈ ವೇಳೆ ಹಲವರು ಗಾಯಗೊಂಡಿದ್ದಾರೆ.

ಬಂದೂಕುಧಾರಿಯ ಪತ್ತೆಗೆ ಪೊಲೀಸರು ಶೋಧ ಕೈಗೊಂಡಿದ್ದಾರೆ. ಬಂದೂಕುಧಾರಿಯನ್ನು ರಾಬರ್ಟ್ ಕಾರ್ಡ್ (40) ಎಂದು ಗುರುತಿಸಲಾಗಿದೆ. ಬುಧವಾರ ರಾತ್ರಿ 7 ಗಂಟೆ ಸುಮಾರಿನಲ್ಲಿ ಗುಂಡಿನ ದಾಳಿ ನಡೆಸಿದ್ದ. ರಾಬರ್ಟ್ ಅನ್ನು ಸೇನಾ ಮೀಸಲು ಪಡೆಯಲ್ಲಿರುವ ಬಂದೂಕು ತರಬೇತುದಾರ ಎಂದು ಪೊಲೀಸರು ತಿಳಿಸಿದ್ದಾರೆ. ರಾಬರ್ಟ್ ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ 2023ರ ಬೇಸಿಗೆಯಲ್ಲಿ ವಾರಗಳವರೆಗೆ ಚಿಕಿತ್ಸೆ ಪಡೆದುಕೊಂಡಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

रजिस्ट्री सं. डी.एल.- 33004/99 REGD. No. D. L.-33004/99

भारत का राजपत्र
The Gazette of India

सी.जी.-डी.एल.-अ.-14102023-249435
CG-DL-E-14102023-249435

असाधारण
EXTRAORDINARY

भाग II—खण्ड 3—उप-खण्ड (ii)
PART II—Section 3—Sub-section (ii)

प्राधिकार से प्रकाशित
PUBLISHED BY AUTHORITY

सं. 4255] नई दिल्ली, बुधवार, अक्तूबर 11, 2023/आश्विन 19, 1945
No. 4255] NEW DELHI, WEDNESDAY, OCTOBER 11, 2023/ASVINA 19, 1945

ಭಾರತ ಸರ್ಕಾರ

ವಿಶೇಷ ಭೂ–ಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ ರವರ ಕಾರ್ಯಾಲಯ

ರಾಷ್ಟ್ರೀಯ ಹೆದ್ದಾರಿಗಳು, ಕೆ.ಆರ್.ಸರ್ಕಲ್, ಬೆಂಗಳೂರು – 560 001.

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ, ನವದೆಹಲಿ

ಅಧಿಸೂಚನೆ

ನವದೆಹಲಿ, 10ನೇ ಅಕ್ಟೋಬರ್ 2023

ಎಸ್.ಓ.4426(ಇ).– ಕೇಂದ್ರ ಸರ್ಕಾರಕ್ಕೆ ಇದೀಗ ಸಾರ್ವಜನಿಕ ಉದ್ದೇಶಕ್ಕಾಗಿ ಇದರೊಂದಿಗೆ ಲಗತ್ತಿಸಿರುವ ಷೆಡ್ಯೂಲ್‌ನಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದಲ್ಲಿರುವ ಶಿವಮೊಗ್ಗ ಜಿಲ್ಲೆ ರಾಷ್ಟ್ರೀಯ ಹೆದ್ದಾರಿ 169 ರ ರಸ್ತೆ ವಿನ್ಯಾಸಗೊಳಿಸಿದ ಕಿ.ಮೀ 25.15 ರಿಂದ ಕಿ.ಮೀ 60.00 (ಸಿ.ಹೆಚ್ ಕಿ.ಮೀ 52.70 ರಿಂದ 53.50 ಹೊರತುಪಡಿಸಿ) (ನೆಲ್ಲಿಸರ ಕ್ಯಾಂಪ್ ರಿಂದ ತೀರ್ಥಹಳ್ಳಿ ಸೆಕ್ಷನ್ ವರೆಗಿನ ರಸ್ತೆ (ಅಗಲೀಕರಣ / ಎರಡು ಲೈನ್ ಮತ್ತು ಪೇವ್ಡ ಶೋಲ್ಡರ್‌ದೊಂದಿಗೆ/ನಾಲ್ಕು ಲೈನ್ ಇತ್ಯಾದಿ) ನಿರ್ಮಾಣಕ್ಕಾಗಿ ಸಂರಕ್ಷಣೆ, ಕಾರ್ಯನಿರ್ವಹಣೆ ಹಾಗೂ ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂ–ಸ್ವಾಧೀನಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆ ಎಂಬುವುದು ಕಂಡುಬಂದಿರುತ್ತದೆ. ಆದಕಾರಣ ಕೇಂದ್ರ ಸರಕಾರವು ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ–1956 (1956ರ 48)ರ ಪ್ರಕಾರ ಸೆಕ್ಷನ್ 3(A)ರ ಸಬ್ ಸೆಕ್ಷನ್(1) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಇದರೊಂದಿಗೆ ಲಗತ್ತಿಸಿರುವ ಅನುಸೂಚಿ(ಷೆಡ್ಯೂಲ್)ಯಂತೆ ವಿವರಿಸಿರುವ ಜಮೀನುಗಳನ್ನು ಭೂ–ಸ್ವಾಧೀನಪಡಿಸಿಕೊಳ್ಳಲು ಈ ಮೂಲಕ ಅಧಿಸೂಚನೆ ನೀಡಿದೆ.

ಸದರಿ ಜಮೀನುಗಳ ಬಗ್ಗೆ ಭೂ–ಮಾಲೀಕರು ಅಥವಾ ಯಾವುದೇ ರೀತಿಯ ಹಿತಾಸಕ್ತಿ ಉಳ್ಳವರು ಹಾಗೂ ಸಾರ್ವಜನಿಕ ಅವಗಾಹನೆಗಾಗಿ ಈ ಪ್ರಕಟಣೆ ಪ್ರಕಟಿಸಿದ ದಿನಾಂಕದಿಂದ 21 ದಿನಗಳೊಳಗಾಗಿ ಸದರಿ ಕಾಯ್ದೆಯ ಸೆಕ್ಷನ್ 3ಸಿ ರ ಸಬ್ ಸೆಕ್ಷನ್(1)ರ ಅನ್ವಯ ತಮ್ಮಗಳ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು ಸಕ್ಷಮ ಪ್ರಾಧಿಕಾರಿ ಅಂದರೆ ವಿಶೇಷ ಭೂ–ಸ್ವಾಧೀನಾಧಿಕಾರಿ, ರಾಷ್ಟ್ರೀಯ ಹೆದ್ದಾರಿಗಳು, ಕೆ.ಆರ್.ಸರ್ಕಲ್, ಬೆಂಗಳೂರು–560001. ಇವರಿಗೆ ಲಿಖಿತ ರೂಪದಲ್ಲಿ ಸ–ಕಾರಣಗಳೊಂದಿಗೆ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲೀ ಅಥವಾ ಅವರ ಪರ ವಕೀಲರನ್ನಾಗಲಿ ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ ಈ ಬಗ್ಗೆ ಇತರೆ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ–1956 (1956ರ 48)ರ ಪ್ರಕಾರ ಸೆಕ್ಷನೆ 3ಸಿ ರ ಸಬ್ ಸೆಕ್ಷನ್(2)ರ ರಂತೆ ಸಕ್ಷಮ ಪ್ರಾಧಿಕಾರ ಮಾಡಿದ ಆದೇಶವು ಅಂತಿಮವಾಗಿರುತ್ತದೆ.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕಾಶೆಗಳು ಮತ್ತು ಮಾಹಿತಿಗಳು ಮೇಲೆ ಕಾಣಿಸಿದ ಸಕ್ಷಮ ಪ್ರಾಧಿಕಾರದಲ್ಲಿ ಲಭ್ಯವಿರುತ್ತದೆ. ಮತ್ತು ಈ ಜಮೀನುಗಳ ಬಗ್ಗೆ ಹಿತಾಸಕ್ತಿಯುಳ್ಳವರು ಸಕ್ಷಮ ಪ್ರಾಧಿಕಾರಿಯವರ ಕಛೇರಿಯಲ್ಲಿ ಪರಿಶೀಲಿಸಬಹುದಾಗಿರುತ್ತದೆ.

ಅನುಸೂಚಿ

ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ–169 ರಸ್ತೆ ವಿನ್ಯಾಸಗೊಳಿಸಿದ ಕಿ.ಮೀ 25.15 ರಿಂದ ಕಿ.ಮೀ 60.00 (ಸಿ.ಹೆಚ್ ಕಿ.ಮೀ 52.70 ರಿಂದ 53.50 ಹೊರತುಪಡಿಸಿ) (ನೆಲ್ಲಿಸರ ಕ್ಯಾಂಪ್ ರಿಂದ ತೀರ್ಥಹಳ್ಳಿ ಸೆಕ್ಷನ್ ವರೆಗಿನ ಅವಶ್ಯಕವಾಗಿರುವ ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ : ಕರ್ನಾಟಕ — ಜಿಲ್ಲೆಯ ಹೆಸರು: ಶಿವಮೊಗ್ಗ

ಕ್ರ.ಸಂ.	ಸರ್ವೆ ಸಂಖ್ಯೆ	ಜಮೀನಿನ ತರಹೆ	ಜಮೀನಿನ ವಿವರಣೆ	ವಿಸ್ತೀರ್ಣ (ಚದರ ಮೀಟರ್‌ಗಳಲ್ಲಿ)	ವಿಸ್ತೀರ್ಣ (ಹೆಕ್ಟರ್‌ಗಳಲ್ಲಿ)
ತಾಲ್ಲೂಕು : ತೀರ್ಥಹಳ್ಳಿ					
ಗ್ರಾಮ: ಬಾಂಡ್ಯ					
1	62	ಸಾಮಾನ್ಯ (ಸರ್ಕಾರಿ/ಖಾಸಗಿ)	ತರಿ	1879.32 (ಚದರ ಮೀಟರ್)	0.187932
ಗ್ರಾಮ : ಕಣಗಳಕೊಪ್ಪ					
2	80	ಸರ್ಕಾರಿ	ತರಿ	1282.09 (ಚದರ ಮೀಟರ್)	0.128209
ಗ್ರಾಮ : ಲಿಂಗಾಪುರ					
3	1	ಖಾಸಗಿ	ತರಿ	1113.65 (ಚದರ ಮೀಟರ್)	0.111365
4	100	ಸರ್ಕಾರಿ	ತರಿ	1223.98 (ಚದರ ಮೀಟರ್)	0.122398
5	101	ಖಾಸಗಿ	ತರಿ	1004.98 (ಚದರ ಮೀಟರ್)	0.100498
6	102	ಖಾಸಗಿ	ತರಿ	2296.08 (ಚದರ ಮೀಟರ್)	0.229608
7	108	ಖಾಸಗಿ	ತರಿ	2550.5 (ಚದರ ಮೀಟರ್)	0.25505
8	111	ಸಾಮಾನ್ಯ (ಸರ್ಕಾರಿ/ಖಾಸಗಿ)	ತರಿ	1760.53 (ಚದರ ಮೀಟರ್)	0.176053
9	112	ಸಾಮಾನ್ಯ (ಸರ್ಕಾರಿ/ಖಾಸಗಿ)	ತರಿ	4570.35 (ಚದರ ಮೀಟರ್)	0.457035
10	126	ಸಾಮಾನ್ಯ (ಸರ್ಕಾರಿ/ಖಾಸಗಿ)	ತರಿ	1539.39 (ಚದರ ಮೀಟರ್)	0.153939
11	128	ಖಾಸಗಿ	ತರಿ	274.49 (ಚದರ ಮೀಟರ್)	0.027449
12	129	ಖಾಸಗಿ	ತರಿ	2783.77 (ಚದರ ಮೀಟರ್)	0.278377
13	130	ಸರ್ಕಾರಿ	ತರಿ	191.39 (ಚದರ ಮೀಟರ್)	0.019139
14	132	ಸಾಮಾನ್ಯ (ಸರ್ಕಾರಿ/ಖಾಸಗಿ)	ಖುಷ್ಕಿ/ತರಿ	5729.86 (ಚದರ ಮೀಟರ್)	0.572986
15	134	ಸಾಮಾನ್ಯ (ಸರ್ಕಾರಿ/ಖಾಸಗಿ)	ತರಿ	731.38 (ಚದರ ಮೀಟರ್)	0.073138
16	2	ಸಾಮಾನ್ಯ (ಸರ್ಕಾರಿ/ಖಾಸಗಿ)	ತರಿ	2919.32 (ಚದರ ಮೀಟರ್)	0.291932
17	28	ಖಾಸಗಿ	ತರಿ	5845.77 (ಚದರ ಮೀಟರ್)	0.584577
18	3	ಖಾಸಗಿ	ಖುಷ್ಕಿ	964.24 (ಚದರ ಮೀಟರ್)	0.096424
19	56	ಸಾಮಾನ್ಯ (ಸರ್ಕಾರಿ/ಖಾಸಗಿ)	ತರಿ	492.32 (ಚದರ ಮೀಟರ್)	0.049232
20	67	ಸರ್ಕಾರಿ	ತರಿ	7760.59 (ಚದರ ಮೀಟರ್)	0.776059
21	68	ಖಾಸಗಿ	ತರಿ	982.25 (ಚದರ ಮೀಟರ್)	0.098225
22	69	ಖಾಸಗಿ	ತರಿ	121.84 (ಚದರ ಮೀಟರ್)	0.012184
23	7	ಖಾಸಗಿ	ತರಿ	210.12 (ಚದರ ಮೀಟರ್)	0.021012
24	70	ಖಾಸಗಿ	ತರಿ	670.07 (ಚದರ ಮೀಟರ್)	0.067007
25	74	ಸರ್ಕಾರಿ	ತರಿ	8684.13 (ಚದರ ಮೀಟರ್)	0.868413
26	76	ಖಾಸಗಿ	ಖುಷ್ಕಿ/ತರಿ	1420.75 (ಚದರ ಮೀಟರ್)	0.142075
27	77	ಖಾಸಗಿ	ತರಿ	1251 (ಚದರ ಮೀಟರ್)	0.1251
28	80	ಖಾಸಗಿ	ತರಿ	95.31 (ಚದರ ಮೀಟರ್)	0.009531
29	85	ಖಾಸಗಿ	ತರಿ	1604.09 (ಚದರ ಮೀಟರ್)	0.160409
30	90	ಸಾಮಾನ್ಯ (ಸರ್ಕಾರಿ/ಖಾಸಗಿ)	ತರಿ	1557.43 (ಚದರ ಮೀಟರ್)	0.155743
31	92	ಖಾಸಗಿ	ತರಿ	845.47 (ಚದರ ಮೀಟರ್)	0.084547
32	93	ಖಾಸಗಿ	ತರಿ	1894.9 (ಚದರ ಮೀಟರ್)	0.18949
33	94	ಖಾಸಗಿ	ತರಿ	1485.13 (ಚದರ ಮೀಟರ್)	0.148513
34	95	ಸಾಮಾನ್ಯ (ಸರ್ಕಾರಿ/ಖಾಸಗಿ)	ಭಾಗಾಯ್ತು/ತರಿ	2043.02 (ಚದರ ಮೀಟರ್)	0.204302
35	97	ಖಾಸಗಿ	ಖುಷ್ಕಿ/ತರಿ	5104.85 (ಚದರ ಮೀಟರ್)	0.510485
36	98	ಖಾಸಗಿ	ತರಿ	11 (ಚದರ ಮೀಟರ್)	0.0011
37	99	ಖಾಸಗಿ	ತರಿ	1831.79 (ಚದರ ಮೀಟರ್)	0.183179
38	ಮಜಾರೆ	ಸಾಮಾನ್ಯ (ಸರ್ಕಾರಿ/ಖಾಸಗಿ)	ತರಿ	5162.4 (ಚದರ ಮೀಟರ್)	0.51624
39	ಮಜಾರೆ	ಸಾಮಾನ್ಯ (ಸರ್ಕಾರಿ/ಖಾಸಗಿ)	ತರಿ	118.73 (ಚದರ ಮೀಟರ್)	0.011873
40	(ಸೆಟಲ್‌ಮೆಂಟ್) ಊರು	ಸಾಮಾನ್ಯ (ಸರ್ಕಾರಿ/ಖಾಸಗಿ)	ತರಿ	8231.21 (ಚದರ ಮೀಟರ್)	0.823121
41	(ಸೆಟಲ್‌ಮೆಂಟ್) ಊರು	ಸಾಮಾನ್ಯ (ಸರ್ಕಾರಿ/ಖಾಸಗಿ)	ತರಿ	13162.11 (ಚದರ ಮೀಟರ್)	1.31621
42	ಗ್ರಾಮ	ಸರ್ಕಾರಿ	ಭಾಗಾಯ್ತು	53.28 (ಚದರ ಮೀಟರ್)	0.005328
ಗ್ರಾಮ : ಭಾರತಿಪುರ					
43	140	ಖಾಸಗಿ	ಭಾಗಾಯ್ತು	505 (ಚದರ ಮೀಟರ್)	0.0505
44	147	ಖಾಸಗಿ	ಭಾಗಾಯ್ತು	1717 (ಚದರ ಮೀಟರ್)	0.1717
45	148	ಖಾಸಗಿ	ಭಾಗಾಯ್ತು	505 (ಚದರ ಮೀಟರ್)	0.0505
46	149	ಖಾಸಗಿ	ಭಾಗಾಯ್ತು	505 (ಚದರ ಮೀಟರ್)	0.0505
47	150	ಖಾಸಗಿ	ಭಾಗಾಯ್ತು	505 (ಚದರ ಮೀಟರ್)	0.0505
48	65	ಖಾಸಗಿ	ಭಾಗಾಯ್ತು	1616 (ಚದರ ಮೀಟರ್)	0.1616
ಗ್ರಾಮ : ಕಸಗರ					
49	76	ಖಾಸಗಿ	ತರಿ	1950.75 (ಚದರ ಮೀಟರ್)	0.195075
50	ಗ್ರಾಮ	ಸರ್ಕಾರಿ	ಭಾಗಾಯ್ತು	2504.57 (ಚದರ ಮೀಟರ್)	0.250457
ಗ್ರಾಮ : ಚಿಕ್ಕ ಕಂಚಿಗುಡ್ಡೆ					
51	87	ಸರ್ಕಾರಿ	ತರಿ	1300.91 (ಚದರ ಮೀಟರ್)	0.130091
				ಒಟ್ಟು	11.45641

[F. No. RW/NH/169/KNT/2022/3A]

ABHAY JAIN, Dy. Secy





ಐಟಿಎಫ್ ಟೆನಿಸ್ ಟೂರ್ನಿ: ಪ್ರಜ್ವಲ್‌ಗೆ ನಿರಾಸೆ; ಮಾಧ್ವಿನ್ ಮಿಂಚು

ಸಿಂಗಲ್ಸ್‌ನಲ್ಲಿ ಎಡವಿದ ಶ್ರೇಯಾಂಕಿತರು

● ಜಿ.ಶಿವಕುಮಾರ

ದಾವಣಗೆರೆ: ಐಟಿಎಫ್ ದಾವಣಗೆರೆ ಓಪನ್ ಟೆನಿಸ್ ಟೂರ್ನಿಯಲ್ಲಿ ಗುರುವಾರ ನಡೆದ ಸಿಂಗಲ್ಸ್ ವಿಭಾಗದ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಶ್ರೇಯಾಂಕ ಆಟಗಾರರು ಸೋಲು ಕಂಡರು. ದಿಗ್ವಿಜಯ್ ಪ್ರತಾಪ್ ಸಿಂಗ್, ಎಸ್.ಡಿ.ಪ್ರಜ್ವಲ್ ದೇವ್, ರಿಷಬ್ ಅಗರವಾಲ್ ಹಾಗೂ ಫ್ರಾನ್ಸ್‌ನ ಫ್ಲೋರೆಂಟ್ ಬ್ಯಾಕ್ ನಿರೀಕ್ಷೆ ಹುಸಿಗೊಳಿಸಿದರು.

ಟೂರ್ನಿಯಲ್ಲಿ ಆರನೇ ಶ್ರೇಯಾಂಕ ಹೊಂದಿದ್ದ ಕನ್ನಡಿಗ ಪ್ರಜ್ವಲ್ ದೇವ್ 1-6, 4-6ರಿಂದ ಕರಣ್ ಸಿಂಗ್ ಅವರಿಗೆ ಶರಣಾದರು. ಮೊದಲ ಸೆಟ್‌ನ ಶುರುವಿನಲ್ಲೇ ಸರ್ವ್ ಕಳೆದುಕೊಂಡ ಪ್ರಜ್ವಲ್ 0-3 ಹಿನ್ನಡೆ ಅನುಭವಿಸಿದರು. ನಂತರವೂ ಹಲವು ತಪ್ಪುಗಳನ್ನು ಮಾಡಿ 30 ನಿಮಿಷಗಳಲ್ಲೇ ಸೆಟ್ ಕೈಚೆಲ್ಲಿದರು. ಎರಡನೇ ಸೆಟ್‌ನ ಮೂರು ಹಾಗೂ ಐದನೇ ಗೇಮ್‌ಗಳಲ್ಲೂ ಸರ್ವ್ ಕಾಪಾಡಿಕೊಳ್ಳಲಾಗದೆ 2-4ರಿಂದ ಹಿನ್ನಡೆ ಕಂಡರು. ಎದುರಾಳಿ ಆಟಗಾರನ ಮಿಂಚಿನ ಗತಿಯ 'ಏಸ್'ಗಳು ಹಾಗೂ 'ಬ್ಯಾಕ್ ಹ್ಯಾಂಡ್' ಹೊಡೆತಗಳಿಂದ ತಬ್ಬಿಬ್ಬಾದಂತೆ ಕಂಡ ಅವರು ಸುಲಭವಾಗಿ ಸೋಲೊಪ್ಪಿಕೊಂಡರು.

ಕ್ರೀಡಾಂಗಣದ ಮೂರನೇ ಅಂಗಳದಲ್ಲಿ ನಡೆದ 'ಮ್ಯಾರಥಾನ್' ಹೋರಾಟದಲ್ಲಿ (3 ಗಂಟೆ 13 ನಿಮಿಷ) ಭಾರತದ ಮಾಧ್ವಿನ್ ಕಾಮತ್ 7-6, 6-7, 6-4ರಿಂದ ನಾಲ್ಕನೇ ಶ್ರೇಯಾಂಕದ ಫ್ಲೋರೆಂಟ್ ಬ್ಯಾಕ್ ಅವರಿಗೆ ಸೋಲಿನ ರುಚಿ ತೋರಿಸಿದರು.



ಪ್ರಜ್ವಲ್ ದೇವ್ ವಿರುದ್ಧದ ಸಿಂಗಲ್ಸ್ ಪಂದ್ಯದಲ್ಲಿ ಗೆದ್ದ ಕರಣ್ ಸಿಂಗ್ ಚೆಂಡನ್ನು ಹಿಂತಿರುಗಿಸಲು ಪ್ರಯತ್ನಿಸಿದರು –ಪ್ರಜಾವಾಣಿ ಚಿತ್ರ /ಸತೀಶ ಬಡಿಗೇರ್

21 ವರ್ಷದ ಮಾಧ್ವಿನ್, 'ಟೈ ಬ್ರೇಕರ್'ನಲ್ಲಿ ಮೊದಲ ಸೆಟ್ ಗೆದ್ದರು. ಎರಡನೇ ಸೆಟ್ ಕೂಡಾ 'ಟೈ ಬ್ರೇಕರ್'ಗೆ ಸಾಗಿದಾಗ ನೆಟ್‌ನ ಸಮೀಪ ಚೆಂಡನ್ನು ಡ್ರಾಪ್ ಮಾಡುವ ತಂತ್ರ ಅನುಸರಿಸಿದ ಫ್ಲೋರೆಂಟ್ ಜಯಿಸುವಲ್ಲಿ ಯಶಸ್ವಿಯಾದರು. ಮೂರನೇ ಸೆಟ್‌ನಲ್ಲಿ ಕೆಚ್ಚೆದೆಯ ಆಟ ಆಡಿದ ಮಾಧ್ವಿನ್, ಗೆಲುವಿನ ಸಿಹಿ ಸವಿದರು. ಮೂಲತಃ ಕನ್ಯಾಕುಮಾರಿಯ ಮಾಧ್ವಿನ್ ಗುಜರಾತ್‌ನಲ್ಲಿ ನೆಲೆಸಿದ್ದಾರೆ.

ಮೂರನೇ ಶ್ರೇಯಾಂಕಿತ ದಿಗ್ವಿಜಯ್ 6-7, 6-7ರಿಂದ ಮನೀಶ್ ಸುರೇಶ್‌ಕುಮಾರ್ ಎದುರು ಪರಾಭವಗೊಂಡರು. ಕಾಲಿಗೆ ಗಾಯವಾಗಿದ್ದರೂ ಕಣಕ್ಕಿಳಿದಿದ್ದ ದಿಗ್ವಿಜಯ್, ಸೋತರೂ ಎಲ್ಲರ ಮನಗೆದ್ದರು.

7ನೇ ಶ್ರೇಯಾಂಕದ ರಿಷಬ್ ಅಗರವಾಲ್ 0-6, 3-6ರಿಂದ ರಾಮಕುಮಾರ್ ರಾಮನಾಥನ್ ಎದುರು ಮಣಿದರು.

ನಿಕಿ ಪೂಣಚ್ಚ 7-6, 7-6ರಿಂದ ವಿಷ್ಣುವರ್ಧನ್ ಎದುರು, ಅಮೆರಿಕದ ನಿಕ್ ಚಾಪೆಲ್ 6-4, 6-4ರಿಂದ ದೇವ್ ಜಾವಿಯಾ ಎದುರು, ರಷ್ಯಾದ ಬೊಗ್ದಾನ್ ಬೊಬ್ರೊವ್ 6-4, 7-6ರಿಂದ ಮಲೇಷ್ಯಾದ ಮಿತ್ಸುಕಿ ವೀ ಕಾಂಗ್ ಲಿಯೊಂಗ್ ಎದುರು, ಸಿದ್ಧಾರ್ಥ್ ರಾವತ್ 6-2, 6-3ರಿಂದ ಆದಿಲ್ ಕಲ್ಯಾಣ್‌ಪುರ್ ಎದುರು ಗೆದ್ದು ಕ್ವಾರ್ಟರ್ ಫೈನಲ್‌ಗೆ ಕಾಲಿಟ್ಟರು.

ಸೆಮಿಗೆ ರಾಮ್–ಪೂರವ್

ಡಬಲ್ಸ್ ವಿಭಾಗದಲ್ಲಿ ಅಗ್ರ ಶ್ರೇಯಾಂಕ ಹೊಂದಿರುವ ರಾಮಕುಮಾರ್ ರಾಮನಾಥನ್ ಹಾಗೂ ಪೂರವ್ ರಾಜಾ 6-4, 6-0ರಿಂದ 'ವೈಲ್ಡ್ ಕಾರ್ಡ್' ಅರ್ಹತೆ ಗಳಿಸಿದ್ದ ಬಿ.ಜಸ್ ತೇಜಾ ಜಯಪ್ರಕಾಶ್ ಮತ್ತು ಮಾಧ್ವಿನ್ ಕಾಮತ್ ಎದುರು ಗೆದ್ದು ಸೆಮಿಫೈನಲ್ ಪ್ರವೇಶಿಸಿದರು.

ಮತ್ತೊಂದು ಕ್ವಾರ್ಟರ್ ಫೈನಲ್‌ನಲ್ಲಿ ವಿಷ್ಣುವರ್ಧನ್ ಹಾಗೂ ಸಿದ್ಧಾಂತ್ ಬಂಥಿಯಾ 6-3, 6-4ರಲ್ಲಿ ಮನೀಶ್ ಗಣೇಶ್ ಹಾಗೂ ಸೂರಜ್ ಆರ್.ಪ್ರಬೋಧ್ ಅವರನ್ನು ಸೋಲಿಸಿದರು. ಬೊಗ್ದಾನ್ ಹಾಗೂ ನಿಕ್ ಚಾಪೆಲ್ 6-3, 7-6ರಲ್ಲಿ ಐಸಾಕ್ ಇಕ್ಬಾಲ್ ಮತ್ತು ಫೈಸಲ್ ಕ್ವಾಮರ್ ಎದುರು, ಸಾಯಿ ಕಾರ್ತಿಕ್ ಹಾಗೂ ಮನೀಶ್ ಸುರೇಶ್‌ಕುಮಾರ್ 6-3, 6-4ರಿಂದ ರಾಘವ್ ಜೈಸಿಂಘಾನಿ ಮತ್ತು ರಿಷಿ ರೆಡ್ಡಿ ವಿರುದ್ಧವು ಗೆದ್ದರು.

ಬ್ಯಾಸ್ಕೆಟ್‌ಬಾಲ್: 'ಕ್ರೈಸ್ಟ್' ಶುಭಾರಂಭ

ಮೈಸೂರು: ಬೆಂಗಳೂರಿನ ಕ್ರೈಸ್ಟ್ ವಿಶ್ವವಿದ್ಯಾಲಯ ತಂಡವು ಇಲ್ಲಿನ ಮೈಸೂರು ವಿಶ್ವವಿದ್ಯಾಲಯದ ಬ್ಯಾಸ್ಕೆಟ್‌ಬಾಲ್ ಅಂಗಳದಲ್ಲಿ ಗುರುವಾರ ಆರಂಭವಾದ 'ಚಾಲೆಂಜರ್ಸ್ ಕಪ್' ಅಂತರರಾಜ್ಯ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಕ್ರೈಸ್ಟ್ ವಿಶ್ವವಿದ್ಯಾಲಯ ತಂಡವು 78-70ರಿಂದ ತಮಿಳುನಾಡಿನ ಕೊಯಮತ್ತೂರಿನ ಪಿಎಸ್‌ಜಿ ಕಾಲೇಜು ತಂಡವನ್ನು ಮಣಿಸಿತು.

ತಿರುಚಿರಾಪಳ್ಳಿಯ ಸೇಂಟ್ ಜೋಸೆಫ್ ತಂಡ 78-44ರಿಂದ ಬೆಂಗಳೂರಿನ ಸಿಂಧಿ ಕಾಲೇಜು ತಂಡವನ್ನು ಮಣಿಸಿದರೆ, ಚೆನ್ನೈನ ಸತ್ಯಭಾಮ ವಿಶ್ವವಿದ್ಯಾಲಯ ತಂಡ 57-53ರಿಂದ ಮೈಸೂರಿನ ಮೈಕಾ ಕಾಲೇಜು ತಂಡದ ವಿರುದ್ಧ ಜಯ ಸಾಧಿಸಿತು.

ಚೆಸ್: ಪ್ರಜ್ಞಾನಂದ ಜೊತೆ 'ಡ್ರಾ' ಮಾಡಿದ ಆರ್ಯನ್

ಐಲ್ ಆಫ್ ಮ್ಯಾನ್ (ಪಿಟಿಐ): ವಿಶ್ವಕಪ್ ಬೆಳ್ಳಿ ವಿಜೇತ ಆರ್.ಪ್ರಜ್ಞಾನಂದ ಅವರು ಗುರುವಾರ ಆರಂಭವಾದ ಫಿಡೆ ಗ್ರ್ಯಾಂಡ್ ಸ್ವಿಸ್ ಟೂರ್ನಿಯ ಮೊದಲ ಸುತ್ತಿನಲ್ಲಿ ಸ್ವದೇಶದ ಗ್ರ್ಯಾಂಡ್‌ಮಾಸ್ಟರ್ ಆರ್ಯನ್ ಚೋಪ್ರಾ ಜೊತೆ 'ಡ್ರಾ'ಕ್ಕೆ ಒಪ್ಪಿಕೊಳ್ಳಬೇಕಾಯಿತು. ಪ್ರತಿಭಾನ್ವಿತ ಆಟಗಾರ ರೌನಕ್ ಸಾಧ್ವಾನಿ, 4ನೇ ಶ್ರೇಯಾಂಕದ ಅನೀಶ್ ಗಿರಿ ಜೊತೆ ಪಾಯಿಂಟ್ ಹಂಚಿಕೊಂಡಿದ್ದು ಕೂಡ ದಿನದ ಅನಿರೀಕ್ಷಿತಗಳಲ್ಲಿ ಒಂದೆನಿಸಿತು.

ಡಿ.ಗುಕೇಶ್ ಕೂಡ ಮೊದಲ ಪಂದ್ಯದಲ್ಲಿ ಅಜರ್‌ಬೈಜಾನ್‌ನ ರವೂಫ್ ಮೆಮೆಡೊವ್ ಜೊತೆ ಒಪ್ಪಂದಕ್ಕೆ ಸಹಿ ಹಾಕಿದರು. ಅರ್ಜುನ್ ಇರಿಗೇಶಿ, ಅರವಿಂದ ಚಿದಂಬರಮ್ ಮತ್ತು ಎಸ್.ಎಲ್.ನಾರಾಯಣನ್ ಗೆಲುವಿನೊಡನೆ ಅಭಿಯಾನ ಆರಂಭಿಸಿದರು. ಅವರು ಕ್ರಮವಾಗಿ ಫ್ರೆಡೆರಿಕ್ ಸ್ವೇನ್ (ಜರ್ಮನಿ), ವು ಲಿ (ಐಲ್ ಆಫ್ ಮ್ಯಾನ್) ಮತ್ತು ಶಾನ್ ರೊಡ್ರಿಕ್ ಲಿಮಿಕ್ಸ್ (ಕೆನಡಾ) ವಿರುದ್ಧ ಜಯಪಡೆದರು.

ಆದರೆ, ಭಾರತದ ಮತ್ತೊಬ್ಬ ಆಟಗಾರ ವಿದಿತ್ ಗುಜರಾತಿ, ನೆದರ್ಲೆಂಡ್ಸ್‌ನ ಇರ್ವಿನ್ ಲಾಮಿ ಅವರಿಗೆ ಮಣಿದರು. ಈ ಪಂದ್ಯದಲ್ಲಿ ಮೇಲುಗೈ ಸಾಧಿಸಿದ್ದ ಗುಜರಾತಿ ಕೊನೆಗಳಿಗೆಯಲ್ಲಿ ತಪ್ಪೆಸಗಿ ಹಿಡಿತ ಕಳೆದುಕೊಂಡರು. 'ರೂಕ್', 'ನೈಟ್' ಕಳೆದುಕೊಂಡು 65 ನಡೆಗಳಲ್ಲಿ ಸೋಲಬೇಕಾಯಿತು.

ದೆಹಲಿಯ ಆರ್ಯನ್ ಚೋಪ್ರಾ, ಸ್ಲಾವ್ ಡಿಫೆನ್ಸ್ ಅನುಸರಿಸಿ ಪ್ರಬಲ ಎದುರಾಳಿ ಪ್ರಜ್ಞಾನಂದ ಅವರಿಂದ ಅರ್ಧಪಾಯಿಂಟ್ ಕಸಿದುಕೊಂಡರು. ಪ್ರಜ್ಞಾನಂದ ತಂತ್ರಗಾರಿಕೆಯಿಂದ ಇಬ್ಬರ ಕ್ವೀನ್‌ಗಳು ಬೋರ್ಡ್‌ನಿಂದ ಬೇಗ ಕಳೆಗಿಳಿದವು. ಆರ್ಯನ್ ಅವರ ಕಾಲಾಳು ಸಂರಚನೆ ಕೂಡ ಕೆಲಮಟ್ಟಿಗೆ ಹಾನಿಗೊಂಡಿತು. ಆದರೆ ಅವರು ವೀರೋಚಿತ ಹೋರಾಟ ನೀಡಿದರು. ಕೆಲವು ಪಡೆಗಳನ್ನು ಇಬ್ಬರೂ ಕಳೆದುಕೊಂಡರು. ಅಂತಿಮವಾಗಿ ರಾಜ ಮತ್ತು ವಿರುದ್ಧ ಬಣ್ಣದ ಬಿಷಪ್‌ಗಳು ಉಳಿದ ಕಾರಣ 33ನೇ ನಡೆಯಲ್ಲಿ ಇಬ್ಬರೂ 'ಕದನ ವಿರಾಮ'ಕ್ಕೆ ಸಹಿಹಾಕಿದರು.

ಗುಕೇಶ್ 23 ನಡೆಗಳ ನಂತರ ಮೆಮೆಡೊವ್ ಜೊತೆ ಡ್ರಾಕ್ಕೆ ಒಪ್ಪಿಕೊಂಡರು. ಅಗ್ರ ಶ್ರೇಯಾಂಕದ ಫ್ಯಾಬಿಯಾನೊ ಕರುವಾನಾ, ಇವಾನ್ ಸರಿಕ್ (ಕ್ರೊವೇಷ್ಯಾ) ಮೇಲೆ ಜಯಗಳಿಸಿದರು.

ಶೂಟಿಂಗ್: ಭಾರತ ಮಹಿಳಾ ಜೂ. ತಂಡಕ್ಕೆ ಚಿನ್ನ

ನವದೆಹಲಿ (ಪಿಟಿಐ): ಸೋನಮ್ ಉತ್ತಮ್, ಗೌತಮಿ ಭಾನೋತ್ ಮತ್ತು ಜಾಸ್ಮಿನ್ ಕೌರ್ ಅವರನ್ನೊಳಗೊಂಡ ಭಾರತದ 10 ಮೀ. ಏರ್ ರೈಫಲ್ ಜೂನಿಯರ್ ತಂಡ, ಕೊರಿಯಾದ ಚಾಂಗ್ವಾನ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ ಕೂಟ ದಾಖಲೆಯೊಡನೆ ಚಿನ್ನದ ಪದಕ ಗೆದ್ದುಕೊಂಡಿತು.

ತಂಡ 1891.6 ಪಾಯಿಂಟ್ಸ್ ಕಲೆಹಾಕಿತು. ಈ ಹಿಂದಿನ ದಾಖಲೆಯನ್ನು (1883.3) ಮೆಹುಲಿ ಘೋಷ್, ಇಳವನಿಲ್ ವಳರಿವನ್ ಮತ್ತು ಶ್ರೇಯಾ ಅಗರವಾಲ್ ಅವರಿದ್ದ ತಂಡ 2019ರಲ್ಲಿ ಸ್ಥಾಪಿಸಿತ್ತು. ಗೌತಮಿ 251.3 ಪಾಯಿಂಟ್‌ಗಳೊಡನೆ ವೈಯಕ್ತಿಕ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದುಕೊಂಡರು.

10 ಮೀ. ಏರ್ ರೈಫಲ್ ಯುವ ವಿಭಾಗದಲ್ಲಿ ಅಭಿನವ್ ಚೌಧರಿ 241.8 ಪಾಯಿಂಟ್ಸ್ ಕಲೆಹಾಕಿ ಸ್ವರ್ಣಪದಕ ಗೆದ್ದುಕೊಂಡರು.

ಅನರ್ಹ: ಪುರುಷರ ಜೂನಿಯರ್ 10 ಮೀ. ಏರ್‌ರೈಫಲ್ ತಂಡ ಸ್ಪರ್ಧೆಯಲ್ಲಿ ಭಾರತ ತಂಡವನ್ನು ಅನರ್ಹಗೊಳಿಸಲಾಯಿತು. ತಂಡದ ಸದಸ್ಯರಲ್ಲಿ ಒಬ್ಬರಾದ ಧನುಶ್ ಶ್ರೀಕಾಂತ್ ಅವರು ಧರಿಸಿದ ಟ್ರೌಸರ್ ಐಎಸ್‌ಎಸ್‌ಎಫ್ ನಿಯಮಗಳಿಗೆ ಅನುಗುಣವಾಗಿಲ್ಲ ಎಂಬುದು ಇದಕ್ಕೆ ಕಾರಣ. ಧನುಷ್, ಅಭಿನವ್ ಶಾ, ಉಮಾಮಹೇಶ್ ಮದ್ದಿನೇನಿ ಅವರಿದ್ದ ತಂಡ ಚಿನ್ನ ಗೆಲ್ಲುವ ಮತ್ತು ಏಷ್ಯನ್ ಜೂನಿಯರ್ ದಾಖಲೆ ಸ್ಥಾಪಿಸುವ ಹಾದಿಯಲ್ಲಿದ್ದಾಗ ತಂಡಕ್ಕೆ ನಿರಾಸೆಯ ಸುದ್ದಿ ಎರಗಿತು.

10 ಮೀ. ಏರ್ ಪಿಸ್ತೂಲ್ ಮಹಿಳೆಯರ ಯುವ ಫೈನಲ್‌ನಲ್ಲಿ ಉರ್ವಾ ಚೌಧರಿ (218.5 ಅಂಕ) ಕಂಚಿನ ಪದಕ ಪಡೆದರು. ಪುರುಷರ ವಿಭಾಗದ 50 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ ರವೀಂದರ್ ಸಿಂಗ್ (556) ಬೆಳ್ಳಿಯ ಪದಕ ಗೆದ್ದುಕೊಂಡರು. ರವೀಂದರ್, ಅನಿಕೇತ್ ವಿನಾಯಕ್, ರಾಮ್ ಬಾಬು ಅವರಿದ್ದ ತಂಡ ಒಟ್ಟು 1620 ಪಾಯಿಂಟ್ಸ್ ಸಂಗ್ರಹಿಸಿ ಕಂಚಿನ ಪದಕ ಗಳಿಸಿತು.

ಸಾತ್ವಿಕ್– ಚಿರಾಗ್ ಜೋಡಿಗೆ ನಿರಾಸೆ

ರೆನ್, ಫ್ರಾನ್ಸ್ (ಪಿಟಿಐ): ಫ್ರೆಂಚ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲು ಗುರುವಾರ ಅಂತ್ಯಗೊಂಡಿದೆ. ಮಹಿಳೆಯರ ಸಿಂಗಲ್ಸ್‌ನಲ್ಲಿ ಪಿ.ವಿ. ಸಿಂಧು ಹಾಗೂ ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಎರಡನೇ ಸುತ್ತಿನಲ್ಲಿ ನಿರ್ಗಮಿಸಿದರು.

ಮೊಣಕಾಲಿನ ಗಾಯದಿಂದಾಗಿ ಪಿ.ವಿ. ಸಿಂಧು ಅವರು ಥಾಯ್ಲೆಂಡ್‌ನ ಸುಪಾನಿಡಾ ಕಟೆಥಾಂಗ್ ಅವರಿಗೆ ಪಂದ್ಯವನ್ನು ಬಿಟ್ಟುಕೊಟ್ಟರು. ಮೊದಲ ಗೇಮ್‌ನಲ್ಲಿ 21-18ರಿಂದ ಮೇಲುಗೈ ಸಾಧಿಸಿದ್ದ ಸಿಂಧು, ಎರಡನೇ ಗೇಮ್‌ನಲ್ಲಿ 1-1 ಅಂತರವಿದ್ದಾಗ ಹಿಂದೆ ಸರಿದರು.

ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ವಿಜೇತ ಸಾತ್ವಿಕ್ ಮತ್ತು ಚಿರಾಗ್ ಜೋಡಿಯು 23-25, 21-19, 19-21 ರಿಂದ ಇಂಡೊನೇಷ್ಯಾದ ಮೊಹಮ್ಮದ್ ಅಹ್ಸಾನ್ ಮತ್ತು ಹೆಂಡ್ರಾ ಸೆಟಿಯಾವಾನ್ ವಿರುದ್ಧ ಆಘಾತ ಅನುಭವಿಸಿತು.

ಏಷ್ಯನ್ ಚಾಂಪಿಯನ್ಸ್ ಟ್ರೋಫಿ: ಭಾರತಕ್ಕೆ ಥಾಯ್ಲೆಂಡ್ ಸವಾಲು

ರಾಂಚಿ (ಪಿಟಿಐ): ಹಾಂಗ್‌ಝೌನಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದಲ್ಲಿ ಕಂಚಿನ ಪದಕಕ್ಕೆ ತೃಪ್ತಿಪಟ್ಟುಕೊಂಡ ಭಾರತ ಮಹಿಳೆಯರ ಹಾಕಿ ತಂಡವು ಶುಕ್ರವಾರ ಇಲ್ಲಿ ಆರಂಭವಾಗುವ ಏಷ್ಯನ್ ಚಾಂಪಿಯನ್ಸ್ ಟ್ರೋಫಿ (ಎಸಿಟಿ) ಟೂರ್ನಿಯ ಮೊದಲ ಪಂದ್ಯದಲ್ಲಿ ಥಾಯ್ಲೆಂಡ್ ತಂಡದ ವಿರುದ್ಧ ಅಭಿಯಾನ ಆರಂಭಿಸಲಿದೆ.



ಸವಿತಾ ಪೂನಿಯಾ

ಸವಿತಾ ಪೂನಿಯಾ ನೇತೃತ್ವದ ಭಾರತ ತಂಡವು ಈ ಟೂರ್ನಿಯಲ್ಲಿ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದೆ. ಏಷ್ಯನ್ ಕ್ರೀಡಾಕೂಟದಲ್ಲಿ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗೆದ್ದ ಚೀನಾ ಮತ್ತು ಕೊರಿಯಾ ತಂಡಗಳ ವಿರುದ್ಧ ಪರಾಕ್ರಮ ಮೆರೆಯಲು ಇಲ್ಲಿ ವೇದಿಕೆ ಸಿಗಲಿದೆ.

ಭಾರತ ತಂಡದ ಮುಖ್ಯ ಕೋಚ್ ಯಾನೆಕ್ ಶೋಪ್‌ಮನ್ ಮಾರ್ಗದರ್ಶನದಲ್ಲಿ ತಂಡ ಕಣಕ್ಕೆ ಇಳಿಯಲಿದೆ. ಗಾಯದ ಕಾರಣಕ್ಕಾಗಿ ಅನುಭವಿ ಮಿಡ್‌ಫೀಲ್ಡರ್ ಸುಶೀಲಾ ಚಾನು ಅವರಿಗೆ ವಿಶ್ರಾಂತಿ ನೀಡಲಾಗಿದೆ. ಅವರ ಸ್ಥಾನವನ್ನು ಬಲ್ಜೀತ್ ಕೌರ್ ತುಂಬಲಿದ್ದಾರೆ. ಏಷ್ಯನ್ ಕ್ರೀಡಾಕೂಟದಲ್ಲಿ ತಂಡದಲ್ಲಿದ್ದ ವೈಷ್ಣವಿ ವಿಠಲ್ ಫಾಲ್ಕೆ ಅವರನ್ನು ಶರ್ಮಿಳಾ ದೇವಿ ಜೊತೆಗೆ ಬದಲಿ ಆಟಗಾರ್ತಿಯರಾಗಿ ಹೆಸರಿಸಲಾಗಿದೆ.

ಆತಿಥೇಯ ಭಾರತ, ಹಾಲಿ ಚಾಂಪಿಯನ್ ಜಪಾನ್, ಚೀನಾ, ಕೊರಿಯಾ, ಮಲೇಷ್ಯಾ ಮತ್ತು ಥಾಯ್ಲೆಂಡ್ ತಂಡಗಳು ಟೂರ್ನಿಯಲ್ಲಿ ಪಾಲ್ಗೊಳ್ಳಲಿವೆ.

ಭಾರತ ತಂಡವು ಅ.28ರಂದು ಮಲೇಷ್ಯಾ ವಿರುದ್ಧ, ಅ.30ರಂದು ಚೀನಾ ವಿರುದ್ಧ, ಅ.31ರಂದು ಜಪಾನ್ ವಿರುದ್ಧ, ನ.2ರಂದು ಕೊರಿಯಾ ವಿರುದ್ಧ ಸೆಣಸಲಿದೆ. ನ.4 ಮತ್ತು 5ರಂದು ಕ್ರಮವಾಗಿ ಸೆಮಿಫೈನಲ್ ಮತ್ತು ಫೈನಲ್ ನಡೆಯಲಿವೆ.

ಜೊಹೊರ್ ಕಪ್: ಭಾರತಕ್ಕೆ ಮೊದಲ ಎದುರಾಳಿ ಪಾಕ್

ಜೊಹೊರ್ (ಮಲೇಷ್ಯಾ), (ಪಿಟಿಐ): ವರ್ಷದ ಮಧ್ಯದಲ್ಲಿ ಜೂನಿಯರ್ ಏಷ್ಯಾ ಕಪ್ ಗೆದ್ದುಕೊಂಡ ಭಾರತ ಕಿರಿಯರ ಹಾಕಿ ತಂಡ, ಶುಕ್ರವಾರ ಆರಂಭವಾಗುವ ಸುಲ್ತಾನ್ ಆಫ್ ಜೊಹೊರ್ ಕಪ್ ಹಾಕಿ ಟೂರ್ನಿಯಲ್ಲೂ ಯಶಸ್ಸಿನ ಓಟ ಮುಂದುವರಿಸುವ ವಿಶ್ವಾಸದಲ್ಲಿದ್ದು, ಮೊದಲ ಪಂದ್ಯದಲ್ಲಿ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ತಂಡವನ್ನು ಎದುರಿಸಲಿದೆ.

21 ವರ್ಷದೊಳಗಿನವರ ಈ ಟೂರ್ನಿಯಲ್ಲಿ ಭಾರತ ತಂಡವು, ಆತಿಥೇಯ ಮಲೇಷ್ಯಾ, ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ತಂಡಗಳ ಜೊತೆ 'ಬಿ' ಗುಂಪಿನಲ್ಲಿದೆ. ಜರ್ಮನಿ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ಮತ್ತು ಬ್ರಿಟನ್ ತಂಡಗಳು 'ಎ' ಗುಂಪಿನಲ್ಲಿವೆ.

ಹಾಲಿ ಚಾಂಪಿಯನ್ ಆಗಿರುವ ಭಾರತ, ಜೂನ್‌ನಲ್ಲಿ ನಡೆದ ಜೂನಿಯರ್ ಏಷ್ಯಾ ಕಪ್‌ನಲ್ಲಿ ಪಾಕ್ ತಂಡವನ್ನು ಎದುರಿಸಿದ್ದು, 2-1 ಗೋಲುಗಳಿಂದ ಜಯಗಳಿಸಿತ್ತು.

ಭಾರತ, ಮುಂದಿನ ಪಂದ್ಯಗಳಲ್ಲಿ ಮಲೇಷ್ಯಾ ಮತ್ತು ನ್ಯೂಜಿಲೆಂಡ್ ತಂಡಗಳನ್ನು ಕ್ರಮವಾಗಿ ಅ. 28 ಮತ್ತು 30ರಂದು ಎದುರಿಸಲಿದೆ. ಗುಂಪಿನಲ್ಲಿ ಮೊದಲ ಎರಡು ಸ್ಥಾನ ಗಳಿಸುವ ತಂಡಗಳು ಸೆಮಿಗೆ ಮುನ್ನಡೆಯಲಿವೆ.

'ಪಾಕ್ ವಿರುದ್ಧ ಜಯಗಳಿಸಿ ಟೂರ್ನಿಯಲ್ಲಿ ಉತ್ತಮ ಆರಂಭ ಪಡೆಯುವ ಗುರಿ ಹೊದಿದ್ದೇವೆ. ಫೈನಲ್‌ವರೆಗೂ ಪ್ರದರ್ಶನದಲ್ಲಿ ಸ್ಥಿರತೆ ಕಾಪಾಡುವ ಗುರಿಯೂ ನಮ್ಮ ಮುಂದಿದೆ' ಎಂದು ನಾಯಕ ಉತ್ತಮ್ ಸಿಂಗ್ ಹೇಳಿದ್ದಾರೆ.

ಯಶವಂತ್‌ಗೆ ಕಂಚು

ಬೆಂಗಳೂರು: ಪಿ. ಯಶವಂತ್ ಅವರು ತಿರುವನಂತಪುರದಲ್ಲಿ ನಡೆದ ಅಖಿಲ ಭಾರತ ಯುಟಿಟಿ ರಾಷ್ಟ್ರೀಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದಿದ್ದಾರೆ.

ಸೆಮಿಫೈನಲ್ ಪಂದ್ಯದಲ್ಲಿ ಪಶ್ಚಿಮ ಬಂಗಾಲದ ಅಂಕುರ್ ಭಟ್ಟಾಚಾರ್ಯ ವಿರುದ್ಧ 11-8, 6-11, 6-11, 13-11, 11-13 ರಿಂದ ಸೋತ ಯಶವಂತ್ ಕಂಚಿಗೆ ತೃಪ್ತಿಪಟ್ಟುಕೊಂಡರು.



ಲಾಹೀರು, ಮ್ಯಾಥ್ಯೂಸ್ ನಿಖರ ದಾಳಿ • ನಿಸಾಂಕ–ಸದೀರ ಜೊತೆಯಾಟ • ಮೆಂಡಿಸ್ ಬಳಗದ ಸೆಮಿ ಆಸೆ ಜೀವಂತ

ಇಂಗ್ಲೆಂಡ್ ಕನಸಿಗೆ ಕೊಳ್ಳಿಯಿಟ್ಟ ಲಂಕಾ

• ಗಿರೀಶ ದೊಡ್ಡಮನಿ

ಬೆಂಗಳೂರು: ಶ್ರೀಲಂಕಾದ ಪಥುಮ್ ನಿಸಾಂಕ ಗುರುವಾರ ರಾತ್ರಿ ಹೊಡೆದ ಸಿಕ್ಸರ್‌ಗೆ ಮೈದಾನದ ಆಚೆ ಹೋಗಿ ಬಿದ್ದ ಚೆಂಡಿನೊಂದಿಗೇ ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡದ ಸೆಮಿಫೈನಲ್ ಪ್ರವೇಶದ ಅವಕಾಶವೂ ದೂರವಾಯಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ವಿಶ್ವಕಪ್ ಕ್ರಿಕೆಟ್ ಪಂದ್ಯದಲ್ಲಿ ಕಳಪೆ ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ 8 ವಿಕೆಟ್‌ಗಳಿಂದ ಲಂಕಾ ಎದುರು ಮಂಡಿಯೂರಿತು. ಆಗ ಇನಿಂಗ್ಸ್‌ನಲ್ಲಿ ಇನ್ನೂ 148 ಎಸೆತಗಳು ಬಾಕಿ ಇದ್ದವು. ಗ್ಯಾಲರಿಯಲ್ಲಿದ್ದ ಇಂಗ್ಲೆಂಡ್ ಅಭಿಮಾನಿಗಳ ಕಂಗಳು ಹನಿಗೂಡಿದ್ದವು.

ಟೂರ್ನಿಯಲ್ಲಿ ಆಡಿರುವ ಒಟ್ಟು ಐದು ಪಂದ್ಯಗಳಲ್ಲಿ ಒಂದು ಮಾತ್ರ ಜಯಿಸಿರುವ ಬಟ್ಲರ್ ಬಳಗವು ಅಂಕ-ಪಟ್ಟಿಯಲ್ಲಿ ಒಂಬತ್ತನೇ ಸ್ಥಾನದಲ್ಲಿದೆ. ಸೆಮಿಫೈನಲ್ ಪ್ರವೇಶಿಸುವ ಹಾದಿ ಕಡುಕಠಿಣವಾಗಿದೆ. ಏಕೆಂದರೆ; ತನ್ನ ಪಾಲಿಗೆ ಉಳಿದ ಇನ್ನೂ ನಾಲ್ಕು ಪಂದ್ಯಗಳಲ್ಲಿ ದೊಡ್ಡ ರನ್ ರೇಟ್‌ನೊಂದಿಗೆ ಜಯಿಸಬೇಕು.

ಆದರೆ ಬಲಾಢ್ಯ ತಂಡಗಳಾದ ಭಾರತ, ಆಸ್ಟ್ರೇಲಿಯಾ ಮತ್ತು ಪಾಕಿಸ್ತಾನ ಎದುರು ಆಡಬೇಕಿದೆ. ಇನ್ನೊಂದು ಪಂದ್ಯದಲ್ಲಿ ನೆದರ್ಲೆಂಡ್ಸ್ ವಿರುದ್ಧ ಆಡಬೇಕು. ಈಚೆಗೆ ಅಫ್ಗಾನಿಸ್ತಾನದಂತಹ ಸಾಧಾರಣ ತಂಡದ ಎದುರೂ ಸೋತಿರುವ ಇಂಗ್ಲೆಂಡ್ ಬಳಗಕ್ಕೆ ನೆದರ್ಲೆಂಡ್ಸ್ ಕೂಡ ಕಠಿಣ ಸವಾಲೊಡ್ಡಬಹುದು.

ಇಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ನಿರ್ಧಾರವೇ ಇಂಗ್ಲೆಂಡ್ ತಂಡಕ್ಕೆ ತಿರುಗುಬಾಣವಾಯಿತು. ಶ್ರೀಲಂಕಾದ ಮಧ್ಯಮವೇಗಿಗಳಾದ ಏಂಜೆಲೊ ಮ್ಯಾಥ್ಯೂಸ್ (14ಕ್ಕೆ2) ಮತ್ತು ಲಾಹಿರು ಕುಮಾರ (35ಕ್ಕೆ3) ಅವರು ಜೊಸ್ ಬಟ್ಲರ್ ಬಳಗವನ್ನು 156 ರನ್‌ಗಳಿಗೆ ನಿಯಂತ್ರಿಸಿದರು. ಈ ಜಯದೊಂದಿಗೆ ಶ್ರೀಲಂಕಾ ನಾಲ್ಕರ ಘಟ್ಟ ಪ್ರವೇಶದ ಕನಸನ್ನು ಜೀವಂತವಾಗಿಟ್ಟುಕೊಂಡಿತು.

ಆರಂಭಿಕ ಬ್ಯಾಟರ್ ನಿಸಾಂಕ (ಅಜೇಯ 77; 83ಎ, 4X7, 6X2) ಮತ್ತು ಸದೀರ ಸಮರವಿಕ್ರಮ (ಅಜೇಯ 65; 54ಎ, 4X7, 6X1) ಮುರಿಯದ ಮೂರನೇ ವಿಕೆಟ್ ಜೊತೆಯಾಟದಲ್ಲಿ 137 ರನ್ ಸೇರಿಸಿದರು.

ಉತ್ತಮ ಆರಂಭ- ಮ್ಯಾಥ್ಯೂಸ್ ಮಿಂಚು: ಇಂಗ್ಲೆಂಡ್ ತಂಡಕ್ಕೆ ಜಾನಿ ಬೆಸ್ಟೊ ಮತ್ತು ಡೇವಿಡ್ ಮಲಾನ್ ಉತ್ತಮ ಆರಂಭ ನೀಡಿದರು. ಮೊದಲ ಆರು ಓವರ್‌ಗಳಲ್ಲಿ 45 ರನ್ ಗಳಿಸಿದರು. ಆದರೆ 35 ವರ್ಷದ ಏಂಜೆಲೊ ಮ್ಯಾಥ್ಯೂಸ್ ಇಂಗ್ಲೆಂಡ್ ಬ್ಯಾಟಿಂಗ್ ಬುಡವನ್ನು ಅಲುಗಾಡಿಸಿದರು. ಮಥೀಷ ಪಥಿರಾಣ ಗಾಯಗೊಂಡಿದ್ದರಿಂದ ಮ್ಯಾಥ್ಯೂಸ್ ಸ್ಥಾನ ಪಡೆದಿದ್ದರು. ಡೇವಿಡ್ ಮಲಾನ್ ವಿಕೆಟ್ ಪಡೆದು ಜೊತೆಯಾಟ ಮುರಿದರು. ಮೋಯಿನ್ ಅಲಿ ವಿಕೆಟ್ ಕೂಡ ಅವರ ಪಾಲಾಯಿತು. ಜೋ ರೂಟ್ ರನೌಟ್ ಆಗಲೂ ಕಾರಣರಾದರು.

ಇನ್ನೊಂದು ಬದಿಯಿಂದ ಲಾಹಿರು ಅವರು 48 ರನ್ ಗಳಿಸಿದ್ದ ಬೆನ್ ಸ್ಟೋಕ್ಸ್, ಜೋಸ್ ಬಟ್ಲರ್ ಮತ್ತು ಲಿಯಾಮ್ ಲಿವಿಂಗ್‌ಸ್ಟೋನ್ ವಿಕೆಟ್ ಗಳಿಸಿದರು. ಈ ಹೊಡೆತದಿಂದ ಮೇಲೆಳಲು ಇಂಗ್ಲೆಂಡ್‌ಗೆ ಸಾಧ್ಯವಾಗಲಿಲ್ಲ.

ಗುರಿ ಬೆನ್ನಟ್ಟಿದ ಶ್ರೀಲಂಕಾ ತಂಡಕ್ಕೆ ಡೇವಿಡ್ ವಿಲ್ಲಿ ಎರಡು ವಿಕೆಟ್ ಕಿತ್ತು ಪೆಟ್ಟು ಕೊಟ್ಟರು. ಆಗ ಲಂಕಾ ತಂಡದ ಮೊತ್ತ 23 ಆಗಿತ್ತಷ್ಟೇ. ಇದರಿಂದಾಗಿ ಸಾಧಾರಣ ಮೊತ್ತದ ಪಂದ್ಯವು ರೋಚಕತೆಯತ್ತ ಹೊರಳುವ ಲಕ್ಷಣ ತೋರಿತ್ತು. ಆದರೆ ನಿಸಾಂಕ ಮತ್ತು ಸದೀರ ಗೆಲುವಿನ ಹಾದಿ ಸುಲಭಗೊಳಿಸಿದರು. ಇಂಗ್ಲೆಂಡ್ ಬೌಲರ್‌ಗಳ ಯಾವುದೇ ಅಸ್ತ್ರವೂ ಫಲ ಕೊಡಲಿಲ್ಲ.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 33.2 ಓವರ್‌ಗಳಲ್ಲಿ 156 (ಜಾನಿ ಬೆಸ್ಟೊ 30, ಡೇವಿಡ್ ಮಲಾನ್ 28, ಬೆನ್ ಸ್ಟೋಕ್ಸ್ 43,ಮೋಯಿನ್ ಅಲಿ 15, ಡೇವಿಡ್ ವಿಲಿ ಔಟಾಗದೆ 14, ಮಹೀಷ ತೀಕ್ಷಣ 21ಕ್ಕೆ1, ಕಸುನ್ ರಜಿತಾ 36ಕ್ಕೆ2, ಏಂಜೆಲೊ ಮ್ಯಾಥ್ಯೂಸ್ 14ಕ್ಕೆ2, ಲಾಹಿರು ಕುಮಾರ 35ಕ್ಕೆ3) **ಶ್ರೀಲಂಕಾ:** 25.4 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 160 (ಪಥುಮ್ ನಿಸಾಂಕ ಔಟಾಗದೆ 77, ಕುಸಾಲ ಮೆಂಡಿಸ್ 11, ಸದೀರಾ ಸಮರವಿಕ್ರಮ ಔಟಾಗದೆ 65, ಡೇವಿಡ್ ವಿಲಿ 30ಕ್ಕೆ2) **ಫಲಿತಾಂಶ:** ಶ್ರೀಲಂಕಾ ತಂಡಕ್ಕೆ 8 ವಿಕೆಟ್‌ಗಳ ಜಯ ಮತ್ತು ಎರಡು ಅಂಕ. **ಪಂದ್ಯಶ್ರೇಷ್ಠ:** ಲಾಹಿರು ಕುಮಾರ.



ಇಂಗ್ಲೆಂಡ್ ತಂಡದ ವಿಕೆಟ್ ಗಳಿಸಿದ ಸಂಭ್ರಮದಲ್ಲಿ ಶ್ರೀಲಂಕಾ ತಂಡದ ಆಟಗಾರರು –ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಇಂಗ್ಲೆಂಡ್ ಇನಿಂಗ್ಸ್: ಒಂದೇ ಸಿಕ್ಸರ್

ಇಂಗ್ಲೆಂಡ್ ತಂಡದ ಇನಿಂಗ್ಸ್‌ನಲ್ಲಿ ಕೇವಲ ಒಂದು ಸಿಕ್ಸರ್ ದಾಖಲಾಯಿತು. ಹೋದ ವಾರ ಇಲ್ಲಿ ನಡೆದಿದ್ದ ಆಸ್ಟ್ರೇಲಿಯಾ ಮತ್ತು ಪಾಕಿಸ್ತಾನ ನಡುವಣ ಪಂದ್ಯದಲ್ಲಿ ಒಟ್ಟು 25 ಸಿಕ್ಸರ್‌ಗಳು ದಾಖಲಾಗಿದ್ದವು.

ಆದರೆ ಇಂಗ್ಲೆಂಡ್ ತಂಡದ ಪ್ರಮುಖ ಬ್ಯಾಟರ್‌ಗಳು ಸಿಕ್ಸರ್ ಗಳಿಸುವಲ್ಲಿ ವಿಫಲರಾದರು. ಡೇವಿಡ್ ವಿಲಿ 31ನೇ ಓವರ್‌ನಲ್ಲಿ ಲಾಹಿರು ಕುಮಾರ ಎಸೆತವನ್ನು ಸ್ಕ್ವೇರ್ ಲೆಗ್ ಫೀಲ್ಡರ್ ತಲೆಯ ಮೇಲಿಂದ ಸಿಕ್ಸರ್ ಗೆ ಕಳಿಸಿದರು. ಶ್ರೀಲಂಕಾ ಇನಿಂಗ್ಸ್‌ನಲ್ಲಿ ಮೂರು ಸಿಕ್ಸರ್‌ಗಳು ದಾಖಲಾದವು.

ಲಂಕಾ ಎದುರು ಮೊದಲು ಬ್ಯಾಟ್ ಇಂಗ್ಲೆಂಡ್ ಕಡಿಮೆ ಮೊತ್ತ

ಮೊತ್ತ	ಸ್ಥಳ	ವರ್ಷ
88	ದಂಬುಲಾ	2003
143	ದಂಬುಲಾ	2001
156	ಬೆಂಗಳೂರು	2023
180	ಮೊರಾಟುವಾ	1993

ಇಂಗ್ಲೆಂಡ್–ಶ್ರೀಲಂಕಾ ಕಳೆದ ಐದು ಪಂದ್ಯಗಳು (ವಿಶ್ವಕಪ್)

ವರ್ಷ	ಫಲಿತಾಂಶ
2007	ಶ್ರೀಲಂಕಾಗೆ 2 ರನ್ ಜಯ
2011	ಶ್ರೀಲಂಕಾಗೆ 10 ವಿಕೆಟ್‌ಗಳ ಗೆಲುವು
2015	ಶ್ರೀಲಂಕಾ 9 ವಿಕೆಟ್ ಜಯ
2019	ಶ್ರೀಲಂಕಾಗೆ 20 ರನ್‌ಗಳ ಜಯ
2023	ಶ್ರೀಲಂಕಾಗೆ 8 ವಿಕೆಟ್‌ಗಳ ಗೆಲುವು

ಪ್ರಮುಖ ಅಂಶಗಳು

- 1996ರ ನಂತರದಲ್ಲಿ ನಡೆದ ವಿಶ್ವಕಪ್ ಟೂರ್ನಿಗಳಲ್ಲಿ ಇದೇ ಮೊದಲ ಬಾರಿ ಇಂಗ್ಲೆಂಡ್ ತಂಡವು ಸತತ ಮೂರು ಪಂದ್ಯಗಳಲ್ಲಿ ಸೋತಿದೆ.
- 2007ರಿಂದ ಇಲ್ಲಿಯವರೆಗೆ ಶ್ರೀಲಂಕಾ ಸತತವಾಗಿ ಐದನೇ ಬಾರಿ ಇಂಗ್ಲೆಂಡ್ ಎದುರು ವಿಶ್ವಕಪ್ ಪಂದ್ಯಗಳಲ್ಲಿ ಜಯಿಸಿದೆ.
- 2019ರಲ್ಲಿ ಇಂಗ್ಲೆಂಡ್ ಏಕದಿನ ಕ್ರಿಕೆಟ್ ವಿಶ್ವ ಚಾಂಪಿಯನ್ ಆಗಿತ್ತು.
- ಈ ಬಾರಿ ಇಂಗ್ಲೆಂಡ್ ತಂಡವು ಅನುಭವಿಸಿದ ಸತತ ಮೂರನೇ ಸೋಲು ಇದಾಗಿದೆ. ಒಟ್ಟು ಐದು ಪಂದ್ಯಗಳನ್ನು ಆಡಿರುವ ಜೋಸ್ ಬಟ್ಲರ್ ಬಳಗವು ಗೆದ್ದಿರುವುದು ಒಂದೇ ಪಂದ್ಯ.

ಸತತ ಸೋಲುಗಳು ಆಘಾತ ತಂದಿವೆ ನಿಜ. ಆದರೆ ಪುಟಿದೇಳುವ ಸಾಮರ್ಥ್ಯ ಇದೆ. ನಾಲ್ಕರ ಘಟ್ಟ ಪ್ರವೇಶಕ್ಕೆ ಇರುವ ಸಣ್ಣ ಅವಕಾಶವನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತೇವೆ.

ಜೋಸ್ ಬಟ್ಲರ್, ಇಂಗ್ಲೆಂಡ್ ನಾಯಕ



ಅರ್ಧಶತಕ ಗಳಿಸಿದ ಶ್ರೀಲಂಕಾ ತಂಡದ ಪಥುಮ್ ನಿಸಾಂಕ ಅವರನ್ನು ಅಭಿನಂದಿಸಿದ ಸದೀರ ಸಮರವಿಕ್ರಮ –ಪ್ರಜಾವಾಣಿ ಚಿತ್ರ

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ಭಾರತ	5	5	0	0	10	1.353
ದಕ್ಷಿಣ ಆಫ್ರಿಕಾ	5	4	1	0	8	2.370
ನ್ಯೂಜಿಲೆಂಡ್	5	4	1	0	8	1.481
ಆಸ್ಟ್ರೇಲಿಯಾ	5	3	2	0	6	1.142
ಶ್ರೀಲಂಕಾ	5	2	3	0	4	-0.205
ಪಾಕಿಸ್ತಾನ	5	2	3	0	4	-0.400
ಅಫ್ಗಾನಿಸ್ತಾನ	5	2	3	0	4	-0.969
ಬಾಂಗ್ಲಾದೇಶ	5	1	4	0	2	-1.253
ಇಂಗ್ಲೆಂಡ್	5	1	4	0	2	-1.634
ನೆದರ್ಲೆಂಡ್ಸ್	5	1	4	0	2	-1.902



ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವು ಈಚೆಗೆ ಧರ್ಮಶಾಲಾದಲ್ಲಿ ನ್ಯೂಜಿಲೆಂಡ್ ವಿರುದ್ಧ ಗೆದ್ದ ನಂತರ ಆಟಗಾರರು ನದಿಯೊಂದರಲ್ಲಿ ಈಜಾಡಿ ಮೋಜು ಮಾಡಿದರು. ಹಾರ್ದಿಕ್ ಪಾಂಡ್ಯ, ಕೋಚ್ ರಾಹುಲ್ ದ್ರಾವಿಡ್ ಅವರೊಂದಿಗೆ ತಾವೂ ಇರುವ ಚಿತ್ರವನ್ನು ಕೆ.ಎಲ್. ರಾಹುಲ್ 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ

ಚೆನ್ನೈನಲ್ಲಿ ಪ್ರಬಲ ದಕ್ಷಿಣ ಆಫ್ರಿಕಾ ವಿರುದ್ಧ ಸೆಣಸಾಟ ಇಂದು

ಪಾಕ್‌ಗೆ ಮಾಡು ಇಲ್ಲವೇ ಮಡಿ ಪಂದ್ಯ

ಚೆನ್ನೈ (ಪಿಟಿಐ): ಹ್ಯಾಟ್ರಿಕ್ ಸೋಲುಗಳ ನಂತರ ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ ಅವರ ಪಟ್ಟ ಅಲುಗಾಡಲು ಆರಂಭವಾಗಿದೆ. ಪ್ರಬಲ ದಕ್ಷಿಣ ಆಫ್ರಿಕಾ ತಂಡದ ವಿರುದ್ಧ ಶುಕ್ರವಾರ ನಡೆಯಲಿರುವ ಏಕದಿನ ವಿಶ್ವಕಪ್ ಪಂದ್ಯ ಪಾಕ್ ಪಾಲಿಗೆ ಮಾಡು ಇಲ್ಲವೇ ಮಡಿ ಎಂಬಂತೆ ಇದೆ. ಬಾಬರ್ ಅವರು ಗೆಲುವೊಂದರ ಮೂಲಕ ತಂಡಕ್ಕೆ ಸ್ಫೂರ್ತಿ ತುಂಬುವ ಸವಾಲನ್ನು ಎದುರಿಸುತ್ತಿದ್ದಾರೆ.

ಇನ್ನೊಂದು ಸೋಲು ತಂಡವನ್ನುಹೊರದೂಡಲಿದ್ದು ಅವರ ನಾಯಕತ್ವಕ್ಕೂ ಕುತ್ತು ತರಲಿದೆ. ಈ ಹಿಂದಿನ ವಿಶ್ವಕಪ್‌ಗಳಲ್ಲಿ ಪಾಕ್ ತಂಡ ಟೂರ್ನಿಯಿಂದ ಹೊರಬೀಳುವ ಹಂತದಲ್ಲಿರುವಾಗಲೇ ಪುನರಾಗಮನ ಮಾಡಿದ ನಿದರ್ಶನಗಳಿವೆ. ಅಂಥ ಮ್ಯಾಜಿಕ್ ಒಂದನ್ನು ಬಾಬರ್ ನಿರೀಕ್ಷಿಸುತ್ತಿದ್ದಾರೆ. ಈ ಪಂದ್ಯದ ನಂತರ ಪಾಕಿಸ್ತಾನಕ್ಕೆ ಮೂರು ಪಂದ್ಯಗಳಷ್ಟೇ ಆಡಲು ಉಳಿಯಲಿದ್ದು ಎಲ್ಲವೂ ನಿರ್ಣಾಯಕವೇ.

ಯಾವ ನಿರ್ದಿಷ್ಟ ದಿನ ಪಾಕ್ ತಂಡ ಪುಟಿದೇಳಲಿದೆ ಎನ್ನುವುದು ಹೇಳಲಸಾಧ್ಯ ಎಂಬ ಮಾತು ವಿಶ್ವ ಕ್ರಿಕೆಟ್‌ನಲ್ಲಿದೆ. ಯಾರಾದರೊಬ್ಬರು ಕೆಚ್ಚೆದೆಯ ಆಟವಾಡಿ ತಂಡಕ್ಕೆ ಸ್ಫೂರ್ತಿ ತುಂಬಿದ ಉದಾಹರಣೆಗಳು ಇವೆ. ಬಾಬರ್ ಈಗ ಅಂಥದ್ದೇ ಆಶಾವಾದದಲ್ಲಿದ್ದಾರೆ.

ನೆದರ್ಲೆಂಡ್ಸ್ ವಿರುದ್ಧ ಧರ್ಮಶಾಲಾದಲ್ಲಿ ಒಂದು ಆಘಾತಕಾರಿ ಸೋಲು ಬಿಟ್ಟರೆ, ಉಳಿದಂತೆ ದಕ್ಷಿಣ ಆಫ್ರಿಕಾ ಈ ಬಾರಿ ಎದುರಾಳಿ ತಂಡಗಳನ್ನು ಸದೆಬಡಿದಿದೆ. ಹೀಗಾಗಿ ದಕ್ಷಿಣ ಆಫ್ರಿಕಾ ಮತ್ತು ಪಾಕಿಸ್ತಾನ ತಂಡಗಳ ಪ್ರದರ್ಶನದ ಮಟ್ಟದಲ್ಲಿ ದೊಡ್ಡ ಕಂದರವಿದೆ.

ಕ್ವಿಂಟನ್ ಡಿಕಾಕ್ ಮತ್ತು ಹೆನ್ರಿಚ್ ಕ್ಲಾಸೆನ್ ಅವರು ಸರಾಗವಾಗಿ ರನ್ ಗಳಿಸುತ್ತಿದ್ದಾರೆ. ಕ್ವಿಂಟನ್ ಈಗಾಗಲೇ ಮೂರು ಶತಕಗಳನ್ನು ಹೊಡೆದಿದ್ದು, ಟೂರ್ನಿಯ ಯಶಸ್ವಿ ಬ್ಯಾಟರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ಜೊತೆಗೆ ಏಡನ್ ಮರ್ಕರಂ, ಡೇವಿಡ್ ಮಿಲ್ಲರ್ ಮೊದಲಾದವರಿಂದ ಸಕಾಲಿಕ ನೆರವೂ ಸಿಗುತ್ತಿದೆ.

ಈ ಟೂರ್ನಿ ಅರ್ಧಭಾಗದಷ್ಟು ಕಳೆದಿದ್ದರೂ, ಗತಕಾಲದ ಬ್ಯಾಟಿಂಗ್ ಶೈಲಿ ಪಾಕ್ ತಂಡವನ್ನು ಇಕ್ಕಟ್ಟಿಗೆ ತಳ್ಳಿದೆ. ಆಕ್ರಮಣದ ಆಟ ಆ ತಂಡದಿಂದ ಬರುತ್ತಿಲ್ಲ. ಐದು ಪಂದ್ಯಗಳಿಂದ ದಕ್ಷಿಣ ಆಫ್ರಿಕಾದ ಬ್ಯಾಟರ್‌ಗಳಿಂದ 59 ಸಿಕ್ಸರ್, 155 ಬೌಂಡರಿಗಳು ಬಂದರೆ, ಪಾಕಿಸ್ತಾನದ ಆಟಗಾರರಿಂದ 24 ಸಿಕ್ಸರ್, 136 ಬೌಂಡರಿಗಳು ಬಂದಿವೆ. ಪಾಕ್ ತಂಡಕ್ಕೆ ಹೋಲಿಸಿದರೆ, ಸ್ಟ್ರೈಕ್ ರೇಟ್‌ಲ್ಲೂ ದಕ್ಷಿಣ ಆಫ್ರಿಕಾ ಬ್ಯಾಟರ್‌ಗಳು ಬಹಳ ಮುಂದಿದ್ದಾರೆ.

ಒಂದೆರಡು ಬಾರಿ ಬಿಟ್ಟರೆ ಶಾಹಿನ್ ಶಾ ಅಫ್ರಿದಿ ಭರವಸೆಗೆ ತಕ್ಕಂತೆ ಬೌಲಿಂಗ್ ಪ್ರದರ್ಶಿಸಿಲ್ಲ. ಹ್ಯಾರಿಸ್ ರವೂಫ್ ಏಕದಿನ ಮಾದರಿಯಲ್ಲಿ ಅಷ್ಟೇನೂ ಪರಿಣಾಮಕಾರಿ ಎನಿಸಿಲ್ಲ. ಹೊಸ ಚೆಂಡು ಹಂಚಿಕೊಳ್ಳುತ್ತಿದ್ದ ವೇಗಿ ನಸೀಮ್ ಶಾ ಗೈರು ಎದ್ದುಕಾಣುತ್ತಿದೆ. ಹೀಗಾಗಿ ಜಮಾನ್ ಖಾನ್ ಅಥವಾ ಮುಹಮ್ಮದ್ ವಾಸಿಂ ಜೂನಿಯರ್ ಅವರನ್ನು ತಂಡಕ್ಕೆ ಸೇರ್ಪಡೆ ಮಾಡಿಕೊಂಡರೂ ಅಚ್ಚರಿಯಿಲ್ಲ.

ಗುಣಮಟ್ಟದ ಸ್ಪಿನ್ನರ್ ಇಲ್ಲದಿರುವುದು ಚಿಪಾಕ್‌ನಲ್ಲಿ ಪಾಕ್ ತಂಡವನ್ನು ಕಾಡಬಹುದು. ಲೆಗ್ ಸ್ಪಿನ್ನರ್ ಉಸಾಮ ಮೀರ್ ಎರಡು ಪಂದ್ಯಗಳಲ್ಲಿ ದಂಡನೆಗೆ ಒಳಗಾಗಿದ್ದಾರೆ. ಶಾದಾಬ್ ಖಾನ್ ಕೂಡ ಪರಿಣಾಮಕಾರಿ ಎನಿಸಿಲ್ಲ. ಎಡಗೈ ಸ್ಪಿನ್ನರ್ ಮೊಹಮ್ಮದ್ ನವಾಜ್ ಕೂಡ ಪಾಕ್ ತಂಡದ ಸಮಸ್ಯೆಗೆ ಪರಿಹಾರವಾಗಿಲ್ಲ.

ಇನ್ನೊಂದೆಡೆ, ದಕ್ಷಿಣ ಆಫ್ರಿಕಾದ ವೇಗಿಗಳಾದ ಕಗಿಸೊ ರಬಾಡ, ಜಾನ್ಸನ್ ಮತ್ತು ಜೆರಾಲ್ಡ್ ಕೊಯೆಟ್ಜಿ ಎದುರಾಳಿಗಳನ್ನು ಕಾಡಿದ್ದಾರೆ. ಮಧ್ಯಮ ಹಂತದಲ್ಲಿ ಸ್ಪಿನ್ನರ್ ಕೇಶವ ಮಹಾರಾಜ್ ಕೂಡ ಎದುರಾಳಿ ಬ್ಯಾಟರ್‌ಗಳಿಗೆ ಅಂಕುಶ ಹಾಕುವಲ್ಲಿ ಯಶಸ್ವಿ ಆಗಿದ್ದಾರೆ. ಹೀಗಾಗಿ ಮೇಲ್ನೋಟಕ್ಕೆ ದಕ್ಷಿಣ ಆಫ್ರಿಕಾ ಸುಸ್ಥಿತಿಯಲ್ಲಿದೆ. ತಂಡ ಜಯಶಾಲಿಯಾದರೆ ಸೆಮಿಫೈನಲ್ ಹಾದಿ ಇನ್ನಷ್ಟು ಸುಗಮವಾಗಲಿದೆ.



ದಕ್ಷಿಣ ಆಫ್ರಿಕಾ ತಂಡದ ಕ್ಲಿಂಟನ್ ಡಿ ಕಾಕ್



ಚೆನ್ನೈನಲ್ಲಿ ಅಭ್ಯಾಸ ನಡೆಸಿದ ಪಾಕಿಸ್ತಾನ ತಂಡದ ಆಟಗಾರರು –ಎಎಫ್‌ಪಿ ಚಿತ್ರ

ಮುಖಾಮುಖಿ

ಒಟ್ಟು ಪಂದ್ಯಗಳು	82
ಪಾಕಿಸ್ತಾನ ಗೆಲುವು	30
ದಕ್ಷಿಣ ಆಫ್ರಿಕಾ ಗೆಲುವು	51
ಫಲಿತಾಂಶ ಇಲ್ಲ	1

2017ರ ಜೂನ್ 7 ರಿಂದ ಈ ಎರಡು ತಂಡಗಳ ಕೊನೆಯ 10 ಮುಖಾಮುಖಿ ಪಂದ್ಯದಲ್ಲಿ ಪಾಕಿಸ್ತಾನ ಆರು ಬಾರಿ, ದಕ್ಷಿಣ ಆಫ್ರಿಕಾ ನಾಲ್ಕು ಬಾರಿ ಜಯಗಳಿಸಿವೆ.

(ಮಾಹಿತಿ ಎಎಫ್‌ಪಿ)

ಪಂದ್ಯ ಆರಂಭ: ಮಧ್ಯಾಹ್ನ 2

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಆಸ್ಟ್ರೇಲಿಯಾ ವಿರುದ್ಧ ಟಿ–20 ಸರಣಿ: ಲಕ್ಷ್ಮಣ್‌ಗೆ ಹೊಣೆ?



ನವದೆಹಲಿ (ಪಿಟಿಐ): ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಮುಖ್ಯಸ್ಥ ವಿ.ವಿ.ಎಸ್. ಲಕ್ಷ್ಮಣ್ ಅವರು, ಏಕದಿನ ವಿಶ್ವಕಪ್ ನಂತರ ನಡೆಯಲಿರುವ ಆಸ್ಟ್ರೇಲಿಯಾ ವಿರುದ್ಧದ ಐದು ಟಿ–20 ಪಂದ್ಯಗಳ ಸರಣಿಗೆ ಭಾರತ ತಂಡದ ತರಬೇತುದಾರನಾಗಿ ಕಾರ್ಯನಿರ್ವಹಿಸುವ ಸಾಧ್ಯತೆಯಿದೆ. ವಿಶ್ವಕಪ್ ಮುಗಿದ ಒಂದೇ ವಾರದಲ್ಲಿ ಈ ಸರಣಿ ಆರಂಭವಾಗಲಿದೆ.

ಈಗ ತಂಡದ ಮುಖ್ಯ ಕೋಚ್ ಆಗಿರುವ ರಾಹುಲ್ ದ್ರಾವಿಡ್ ಅವರ ಒಪ್ಪಂದ ವಿಶ್ವಕಪ್ ವರೆಗೆ ಇರಲಿದೆ. ಅವರಿಗೆ ಮತ್ತೆ ಅರ್ಜಿ ಸಲ್ಲಿಸುವಂತೆ ಮನವಿ ಮಾಡುವ ಆಯ್ಕೆ ಬಿಸಿಸಿಐ ಮುಂದಿದೆ. ನಿಯಮಗಳ ಪ್ರಕಾರ ಕೋಚ್ ಹುದ್ದೆಗೆ ಮಂಡಳಿಯು ಅರ್ಜಿಗಳನ್ನು ಆಹ್ವಾನಿಸಬೇಕಾಗುತ್ತದೆ.

51 ವರ್ಷದ ದ್ರಾವಿಡ್ ಹುದ್ದೆಯಲ್ಲಿ ಮುಂದುವರಿಯಲು ಆಸಕ್ತಿ ತೋರುತ್ತಾರೆಯೇ ಎಂಬುದು ಕುತೂಹಲಕರ. ಆದರೆ, ಸೂರ್ಯಕುಮಾರ್ ಯಾದವ್ ಅವರನ್ನುಳಿದು ದ್ರಾವಿಡ್ ಸೇರಿದಂತೆ ಬಹುತೇಕ ಆಟಗಾರರಿಗೆ ವಿಶ್ರಾಂತಿ ನೀಡಬಹುದು ಎನ್ನಲಾಗುತ್ತಿದೆ.

ಬಾಂಗ್ಲಾ ತಂಡ ಸೇರಿಕೊಂಡ ಶಕಿಬ್

ಕೋಲ್ಕತ್ತ (ಪಿಟಿಐ): ತಾಂತ್ರಿಕ ವಿಷಯಕ್ಕೆ ಸಂಬಂಧಿಸಿ ಬಾಲ್ಯದ ಕೋಚ್ ನಜ್ಮುಲ್ ಅಬೆದಿನ್ ಫಾಹೀಂ ಅವರಿಂದ ಸಲಹೆ ಪಡೆಯಲು ಢಾಕಾಕ್ಕೆ ತೆರಳಿದ್ದ ಬಾಂಗ್ಲಾದೇಶ ತಂಡದ ನಾಯಕ ಶಕಿಬ್ ಅಲ್ ಹಸನ್ ಅವರು ಗುರುವಾರ ಮರಳಿ ತಂಡವನ್ನು ಸೇರಿಕೊಂಡಿದ್ದಾರೆ.

ಸತತ ನಾಲ್ಕು ಸೋಲುಗಳ ನಂತರ ಬಾಂಗ್ಲಾದೇಶ ತಂಡದ ಸೆಮಿಫೈನಲ್ ಅವಕಾಶ ಕ್ಷೀಣವಾಗಿದೆ. ನೆದರ್ಲೆಂಡ್ಸ್ ವಿರುದ್ಧ ಶನಿವಾರ ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ ಆಡಲಿದೆ.

ಗೂಗಲ್ ಸರ್ಚ್ ಮೊದಲ ಐದು ಆಟಗಾರರಲ್ಲಿ ವಿರಾಟ್ ಕೊಹ್ಲಿ



ಬೆಂಗಳೂರು: ಗೂಗಲ್ ಸರ್ಚ್ ಎಂಜಿನ್‌ನಲ್ಲಿ ಅಭಿಮಾನಿಗಳು ಅತಿ ಹೆಚ್ಚು ಹುಡುಕಾಟ ನಡೆಸಿದ ವಿಶ್ವದ ಐವರು ಆಟಗಾರರಲ್ಲಿ ಭಾರತದ ಕ್ರಿಕೆಟಿಗ ವಿರಾಟ್ ಕೊಹ್ಲಿ ಅವರಿದ್ದಾರೆ.

2023ರಲ್ಲಿ ಇಲ್ಲಿಯವರೆಗೆ ಕೊಹ್ಲಿ ಕುರಿತ ಮಾಹಿತಿಗಳಿಗಾಗಿ ಗೂಗಲ್ ಮೂಲಕ 6.8 ಕೋಟಿ ಜನರು ಹುಡುಕಾಟ ನಡೆಸಿದ್ದಾರೆ. ಮೊದಲ ಸ್ಥಾನದಲ್ಲಿ ಪೋರ್ಚುಗಲ್ ಫುಟ್‌ಬಾಲ್ ತಾರೆ ಕ್ರಿಸ್ಟಿಯಾನೊ ರೊನಾಲ್ಡೊ (19.94 ಕೋಟಿ) ಅವರಿದ್ದಾರೆ.

ಬ್ರೆಜಿಲ್ ಫುಟ್‌ಬಾಲ್ ತಾರೆ ನೇಮರ್ (14.09 ಕೋಟಿ), ಅರ್ಜೆಂಟಿನಾದ ಫುಟ್‌ಬಾಲ್ ಆಟಗಾರ ಲಯೊನೆಲ್ ಮೆಸ್ಸಿ (10.44 ಕೋಟಿ) ಹಾಗೂ ಬ್ಯಾಸ್ಕೆಟ್‌ಬಾಲ್ ಆಟಗಾರ ಲಿಬ್ರಾನ್ ಜೇಮ್ಸ್ (7.21 ಕೋಟಿ) ಅವರು ಕ್ರಮವಾಗಿ ಎರಡು, ಮೂರು ಮತ್ತು ನಾಲ್ಕನೇ ಸ್ಥಾನಗಳಲ್ಲಿದ್ದಾರೆಂದು 'ಲೈವ್ ಮಿಂಟ್' ವೆಬ್‌ಸೈಟ್ ವರದಿ ಮಾಡಿದೆ.



ಗೋವಾದಲ್ಲಿ ಗುರುವಾರ ನಡೆದ ರಾಷ್ಟ್ರೀಯ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಭಾಗವಹಿಸಿದ್ದರು –ಪಿಟಿಐ ಚಿತ್ರ

2036ರ ಒಲಿಂಪಿಕ್ಸ್ ಆಯೋಜನೆಗೆ ಭಾರತ ಸಿದ್ಧ: ಪ್ರಧಾನಿ ಮೋದಿ

ಪಣಜಿ (ಪಿಟಿಐ): ದೇಶದ ಆಯವ್ಯಯದಲ್ಲಿ ಕ್ರೀಡೆಗೆ ಮೀಸಲಿಟ್ಟ ಹಣ 9 ವರ್ಷ ಹಿಂದಿನ ಮೊತ್ತಕ್ಕೆ ಹೋಲಿಸಿದರೆ ಮೂರು ಪಟ್ಟು ಹೆಚ್ಚಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ಮಡಗಾಂವ್‌ನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ 37ನೇ ರಾಷ್ಟ್ರೀಯ ಕ್ರೀಡೆಗಳನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

ಭಾರತ 2036ರ ಒಲಿಂಪಿಕ್ಸ್ ಆತಿಥ್ಯ ವಹಿಸಲು ಸಿದ್ಧವಾಗಿದೆ ಎಂದು ಪುನರುಚ್ಚರಿಸಿದ ಮೋದಿ, 'ಟಾಪ್ಸ್ (ಟಾರ್ಗೆಟ್ ಒಲಿಂಪಿಕ್ ಪೋಡಿಯಂ) ಕಾರ್ಯಕ್ರಮದ ಮೂಲಕ ಅಥ್ಲೀಟುಗಳಿಗೆ ಅತ್ಯುತ್ತಮ ತರಬೇತಿ ಸೌಲಭ್ಯ ಸಿಗುವಂತೆ ನೋಡಿಕೊಳ್ಳಲಾಗಿದೆ. ಭಾರತ 2030ರ ವಿಶ್ವ ಯೂತ್ ಒಲಿಂಪಿಕ್ಸ್ ಹಾಗೂ 2036ರ ಒಲಿಂಪಿಕ್ಸ್ ಆಯೋಜಿಸಲು ಸಜ್ಜಾಗಿದೆ' ಎಂದರು.

ಇತ್ತೀಚಿನ ವರ್ಷಗಳಲ್ಲಿ ಭಾರತ ಕ್ರೀಡಾಕ್ಷೇತ್ರದಲ್ಲಿ ಸಾಧಿಸುತ್ತಿರುವ ಯಶಸ್ಸು ಯುವ ಮನಸ್ಸುಗಳಿಗೆ ಪ್ರೇರಣಾದಾಯಿಯಾಗಿದೆ ಎಂದು ಹೇಳಿದರು. ಏಷ್ಯನ್ ಗೇಮ್ಸ್‌ನಲ್ಲಿ ಭಾರತ 107 ಪದಕಗಳನ್ನು ಗೆದ್ದು ದಾಖಲೆ ಸ್ಥಾಪಿಸಿದ್ದನ್ನು ಅವರು ಪ್ರಸ್ತಾಪಿಸಿದರು.

2014ರ ನಂತರ ಭಾರತದಲ್ಲಿ ಹಲವು ಕ್ರೀಡಾ ಮೂಲ ಸೌಕರ್ಯಗಳನ್ನು ನಿರ್ಮಿಸಲಾಗಿದೆ. ಆಯ್ಕೆ ಪ್ರಕ್ರಿಯೆ ಪಾರದರ್ಶಕವಾಗಿದೆ. ಅಥ್ಲೀಟುಗಳಿಗೆ ನೀಡುವ ಪ್ರೋತ್ಸಾಹಧನದ ಮೊತ್ತದಲ್ಲಿ ಏರಿಕೆಯಾಗಿದೆ ಎಂದು ವಿವರ ನೀಡಿದರು.

43 ವಿವಿಧ ಕ್ರೀಡೆಗಳಲ್ಲಿ ದೇಶದ ವಿವಿಧ ರಾಜ್ಯಗಳ 10,000ಕ್ಕೂ ಹೆಚ್ಚು ಅಥ್ಲೀಟುಗಳು ಪಾಲ್ಗೊಳ್ಳಲಿದ್ದಾರೆ. ಉದ್ಘಾಟನಾ ಸಮಾರಂಭದಲ್ಲಿ ಕ್ರೀಡಾ ಸಚಿವ ಅನುರಾಗ್ ಠಾಕೂರ್, ಗೋವಾ ರಾಜ್ಯಪಾಲ ಪಿ.ಎಸ್.ಶ್ರೀಧರನ್ ಪಿಳ್ಳೈ, ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ಕೇಂದ್ರ ಸಚಿವ ಶ್ರೀಪಾದ್ ನಾಯಕ್, ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷೆ ಪಿ.ಟಿ.ಉಷಾ ಮೊದಲಾದವರು ಭಾಗವಹಿಸಿದ್ದರು.

ಭವಾನಿ ದೇವಿಗೆ ಚಿನ್ನ: ಒಲಿಂಪಿಯನ್ ಭವಾನಿ ದೇವಿ ಅವರು ಫೆನ್ಸಿಂಗ್ (ಸೇಬರ್ ವಿಭಾಗ) ಸ್ಪರ್ಧೆಯಲ್ಲಿ ಕೇರಳದ ಎಸ್.ಸೌಮ್ಯಾ ಅವರನ್ನು 15-5ರಿಂದ ಸೋಲಿಸಿ ಚಿನ್ನ ಗೆದ್ದರು. 2022ರ ಕೂಟದಲ್ಲೂ ಅವರು ಇದೇ ಸಾಧನೆ ಮಾಡಿದ್ದರು.

ಸಂಕ್ಷಿಪ್ತ ಸುದ್ದಿ

ಕಿಕ್‌ಸ್ಟಾರ್ಟ್ ತಂಡ ಜಯಭೇರಿ

ಬೆಂಗಳೂರು: ಕಿಕ್‌ಸ್ಟಾರ್ಟ್ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 4–2ರಿಂದ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವನ್ನು ಮಣಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ತಂಡದ ಜೆನಿಶ್‌ಸಿನ್ಹ್ ರಾಣಾ , ಬೆಂಜಮಿನ್ ಲುಫೆಂಗ್, ಶರತ್ ರಾಜ್‌ಕುಮಾರ್, ಅಭಿಷೇಕ್ ಶಂಕರ್ ಪವಾರ್ ಅವರು ತಲಾ ಒಂದು ಗೋಲು ಗಳಿಸಿದರು. ಪ್ರತೀಕ್ ಸ್ವಾಮಿ ಎಂಎಫ್‌ಎಆರ್ ತಂಡದ ಪರ ಎರಡು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಮತ್ತೊಂದು ಪಂದ್ಯದಲ್ಲಿ ಯಂಗ್ ಚಾಲೆಂಜರ್ಸ್ ಎಫ್‌ಸಿ ತಂಡವು ಎಫ್‌ಸಿ ಡೆಕ್ಕನ್ ಜತೆ 1–1ರಿಂದ ಡ್ರಾ ಸಾಧಿಸಿತು.

ಚಾಲೆಂಜರ್ಸ್ ತಂಡದ ಲಾಲ್ಹಾನಿಮಾ, ಡೆಕ್ಕನ್ ತಂಡದ ಎನ್. ರಾಕೇಶ್ ಸಿಂಗ್ ತಲಾ ಒಂದು ಗೋಲು ತಂದಿತ್ತರು.

ಕರ್ನಾಟಕಕ್ಕೆ ಜಯ

ಬೆಂಗಳೂರು: ವೃಂದಾ ದಿನೇಶ್ ಅವರ ಅರ್ಧಶತಕ ಹಾಗೂ ಬೌಲರ್‌ಗಳ ಅಮೋಘ ದಾಳಿಯ ನೆರವಿನಿಂದ ಕರ್ನಾಟಕ ತಂಡವು ಬಿಸಿಸಿಐ ಮಹಿಳೆಯರ ಟಿ20 ಟ್ರೋಫಿ ಟೂರ್ನಿಯಲ್ಲಿ 115 ರನ್‌ಗಳಿಂದ ಪಾಂಡಿಚೇರಿ ತಂಡವನ್ನು ಮಣಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗೆ 173 ರನ್ ಗಳಿಸಿತು. ವೃಂದಾ (67, 34ಎ) ಮತ್ತು ಜಿ.ಆರ್. ಪ್ರೇರಣಾ (34) ಉಪಯುಕ್ತ ಕಾಣಿಕೆ ನೀಡಿದರು. ಸವಾಲಿನ ರನ್ ಬೆನ್ನತ್ತಿದ ಪಾಂಡಿಚೇರಿ ತಂಡವು 13.2 ಓವರ್‌ಗಳಲ್ಲಿ 58 ರನ್‌ಗೆ ಕುಸಿಯಿತು. ಪಿ. ರೋಹಿತಾ ಚೌಧರಿ, ಶ್ರೇಯಾಂಕಾ ಆರ್. ಪಾಟೀಲ ಮತ್ತು ಪ್ರತ್ಯೂಷಾ ತಲಾ ಎರಡು ವಿಕೆಟ್ ಪಡೆದು ಮಿಂಚಿದರು.

ಪ್ಯಾರಾ ಏಷ್ಯನ್ ಗೇಮ್ಸ್: ಶಾಟ್‌ಪಟ್‌ನಲ್ಲಿ ಸಚಿನ್ ಖಿಲಾರಿಗೆ ಚಿನ್ನ

82 ಪದಕ ಗೆದ್ದು ಭಾರತ ದಾಖಲೆ

ಹಾಂಗ್‌ಝೌ (ಪಿಟಿಐ): ಭಾರತದ ಅಥ್ಲೀಟುಗಳು, ಪ್ಯಾರಾ ಏಷ್ಯನ್ ಗೇಮ್ಸ್ ಇತಿಹಾಸದಲ್ಲೇ ದೇಶಕ್ಕೆ ಅತ್ಯಧಿಕ ಪದಕಗಳನ್ನು ಗೆಲ್ಲುವ ಮೂಲಕ ದಾಖಲೆ ಸ್ಥಾಪಿಸಿದರು. ಕೂಟದ ನಾಲ್ಕನೇ ದಿನವಾದ ಗುರುವಾರದ ಕೊನೆಗೆ ಭಾರತ 18 ಚಿನ್ನ ಸೇರಿದಂತೆ 82 ಪದಕಗಳನ್ನು ಗೆದ್ದುಕೊಂಡಿದೆ.

2018ರ ಜಕಾರ್ತಾ ಕೂಟದಲ್ಲಿ ಭಾರತದ ಅಥ್ಲೀಟುಗಳು 72 ಪದಕಗಳನ್ನು (15 ಚಿನ್ನ-24 ಬೆಳ್ಳಿ-33 ಕಂಚು) ಗೆದ್ದುಕೊಂಡಿದ್ದು ಇದುವರೆಗಿನ ದಾಖಲೆ ಆಗಿತ್ತು. ಗುರುವಾರ ಒಂದೇ ದಿನ ಮೂರು ಚಿನ್ನ ಸೇರಿದಂತೆ 18 ಪದಕಗಳನ್ನು ಭಾರತದ ಅಥ್ಲೀಟುಗಳು ಕೊರಳಿಗೆ ಹಾಕಿಕೊಂಡರು. ಭಾರತ ಒಟ್ಟಾರೆ 18 ಚಿನ್ನ, 23 ಬೆಳ್ಳಿ, 41 ಕಂಚಿನ ಪದಕಗಳನ್ನು ಗಳಿಸಿದೆ.

ಆದರೆ ಪದಕ ಪಟ್ಟಿಯಲ್ಲಿ ಭಾರತ, ಎರಡು ಸ್ಥಾನಗಳಷ್ಟು ಕುಸಿದಿದ್ದು ಎಂಟನೇ ಸ್ಥಾನಕ್ಕೆ ಸರಿಯಿತು. ಗುರುವಾರ ಹಲವು ಚಿನ್ನದ ಪದಕಗಳು ಪಣಕ್ಕಿದ್ದುದು ಇದಕ್ಕೆ ಒಂದು ಕಾರಣ. ಇನ್ನೂ ಎರಡು ದಿನ ಈ ಕೂಟ ನಡೆಯಲಿದ್ದು, ಭಾರತ ನೂರರ ಗಡಿಯನ್ನು ದಾಟುವ ಹಾದಿಯಲ್ಲಿ ದಿಟ್ಟ ಹೆಜ್ಜೆಯಿಟ್ಟಿದೆ.



ಪುರುಷರ ಎಫ್46 ಶಾಟ್‌ಪಟ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದ ಸಚಿನ್ ಸರ್ಜೆರಾವ್ ಖಿಲಾರಿ

ದಕ್ಷಿಣ ಕೊರಿಯಾ ಮತ್ತು ಇಂಡೊನೇಷ್ಯಾ ಭಾರತಕ್ಕಿಂತ ಮೇಲಿನ ಸ್ಥಾನ ಪಡೆದವು. ಸಿಂಹಪಾಲು ಪದಕ ಗೆದ್ದಿರುವ ಆತಿಥೇಯ ಚೀನಾ ಅಗ್ರಸ್ಥಾನದಲ್ಲೇ ಮುಂದುವರಿದಿದೆ. ಈ ತಂಡದ ಕ್ರೀಡಾಪಟುಗಳು 156 ಚಿನ್ನ, 128 ಬೆಳ್ಳಿ, 108 ಕಂಚಿನ ಪದಕಗಳನ್ನು ಗೆದ್ದುಕೊಂಡಿದ್ದಾರೆ.

ಅಥ್ಲೆಟಿಕ್ಸ್‌ನಲ್ಲಿ ಒಂದು ಚಿನ್ನ ಸೇರಿದಂತೆ ಎಂಟು ಪದಕಗಳನ್ನು ಭಾರತೀಯ ಕ್ರೀಡಾಪಟುಗಳು ಗೆದ್ದರು. ಭಾರತದ 82 ಪದಕಗಳಲ್ಲಿ ಅಥ್ಲೆಟಿಕ್ಸ್‌ನ ಕೊಡುಗೆ 45 ಪದಕಗಳು. 18ರಲ್ಲಿ 14 ಚಿನ್ನದ ಪದಕಗಳನ್ನು ಅಥ್ಲೀಟುಗಳೇ ಗೆದ್ದಿದ್ದಾರೆ.

ಸಚಿನ್ ಸರ್ಜೆರಾವ್ ಖಿಲಾರಿ ಅವರು ಪುರುಷರ ಎಫ್46 ಶಾಟ್‌ಪಟ್ ಸ್ಪರ್ಧೆಯಲ್ಲಿ 14.56 ಮೀ. ಸಾಧನೆಯೊಡನೆ ಕೂಟದಾಖಲೆಯೊಡನೆ ಚಿನ್ನ ಗೆದ್ದರು. ಇನ್ನೊಂದು ಚಿನ್ನವನ್ನು ಪ್ಯಾರಾ ಶೂಟರ್ ಸಿದ್ಧಾರ್ಥ ಬಾಬು ಆರ್6 50 ಮೀ. ಏರ್ ರೈಫಲ್ ವಿಭಾಗದಲ್ಲಿ ಚಿನ್ನ ಗೆದ್ದರು.

ಕಾಂಪೌಂಡ್ ಮಿಶ್ರ ತಂಡ ವಿಭಾಗದಲ್ಲಿ (ಶೀತಲ್ ದೇವಿ ಮತ್ತು ರಾಕೇಶ್ ಕುಮಾರ್) ಅವರು ಚೀನಾದ ಜೋಡಿಯನ್ನು 151–149 ರಿಂದ ಸೋಲಿಸಿ ಚಿನ್ನ ಗೆದ್ದರು.

ಚೆಸ್‌ನಲ್ಲಿ ಭವೇಶಕುಮಾರ್ ಹಿಮಾನ್ಶಿ ಮಹಿಳೆಯರ ವೈಯಕ್ತಿಕ ವಿ1–ಬಿ1 ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡರು.